# ಶ್ರೀ ಗೋಪಾಲ ವಿಠ್ಠಲ
# ಶ್ರೀ ಮೋಹನ ವಿಠ್ಠಲ
# ಶ್ರೀ ವೇಣುಗೋಪಾಲ ವಿಠ್ಠಲ
# ಶ್ರೀ ಹಯವದನ ವಿಠ್ಠಲ

## ರಚಿಸಿರುವ ೯೦ ಸುಳಾದಿಗಳು



ಸಂಚಾಲಕರು – ಹನುಮಂತರಾವ್ ಗೊರಾಬಾಳ

ಶ್ರೀ ವರದೇಂದ್ರ ಸಾಹಿತ್ಯ ಮಂಡಲ, ಲಿಂಗಸೂರು

॥ ಹರಿ : ಓಂ ॥

ಶ್ರೀ ವಿಜಯದಾಸರ ಪರಮ ಮುಖ್ಯ ಶಿಷ್ಯರೂ

ಅಪರೋಕ್ಷ ಜ್ಞಾನಿಗಳೂ ದೇವಾಂಶರೂ ಆದ

# ಶ್ರೀ ಗೋಪಾಲ ವಿಟ್ಠಲ

ಶ್ರೀ ಮೋಹನ ವಿಟ್ಠಲ, ಶ್ರೀ ವೇಣುಗೋಪಾಲ ವಿಟ್ಠಲ,

ಶ್ರೀ ಹಯವದನ ವಿಟ್ಠಲರ

ಪ್ರಕಟನೆ  ೩೦

# ಸುಳಾದಿಗಳು [೯೦]

ಪ್ರಕಾಶಕರು— ಶ್ರೀ ವರದೇಂದ್ರ ಸಾಹಿತ್ಯ ಮಂಡಲ ಲಿಂಗಸೂಗೂರ.

ಸಂಚಾಲಕ :— ಹನುಮಂತರಾವ ಗೊರಾಬಾಳ.

ಮೊದಲನೇ ಆವೃತ್ತಿ (೧೦೦೦) ಪ್ರತಿಗಳು.

ಶಾ. ಶಕೆ ೧೮೮೭ ಮಾಘ ವದಿ ೩೦

ಶ್ರೀಗುರು ಪ್ರಾಣೇಶ ವಿಟ್ಠಲರ ಪುಣ್ಯದಿನ.

ಪುಟಗಳು [೩೬೦] ಬೆಲೆ ೩—೮—೦

ಮು. ಪ್ರಕರು— ಪಿ. ಎಸ್. ಹೊಂಬಾಳಿ, ನ್ಯೂ ಗದಗ ಪ್ರಿಂಟರ್ಸ, ಗದಗ.

# ಚಂದಾದಾರರಿಗೆ ವಿನಂತಿ

ಈ ಪುಸ್ತಕ ಅಕ್ಟೋಬರ ಕೊನೆಗೆ ಪ್ರಕಟವಾಗುವದೆಂದು ವಿನಂತಿ ಮಾಡಲಾಗಿತ್ತು. ಅನೇಕ ತೊಂದರೆಗಳು ಬಂದವು ಕಾರಣ ೫ ತಿಂಗಳು ತಡವಾಯಿತು.

೧. ೫೨ ಜನ ಚಂದಾದಾರರಿಂದ ಮತ್ತು ೭ ಜನ ಪೋಷಕರಿಂದ ಹಣ ವಸೂಲಾಗದೆ. ಹಣಕಾಸಿನ ಅಡಚಣೆ.

೨. ನನ್ನ ಮತ್ತು ನನ್ನ ಮನೆಯವರ ದೇಹ ಅನಾರೋಗ್ಯ.

೩. ಶ್ರೀ ಟೀಕಾಕೃತ್ಪಾದರಥದ ತಯಾರಿ ಕೆಲಸದಲ್ಲಿ ತೊಡಗಿದ್ದು.

೪. ಚಂದಾವಸೂಲಿದೆಸೆಯಿಂದ ತಿರುಗಾಡಿದರೂ ಚಂದಾವಸೂಲಾಗದೆ ೨ ತಿಂಗಳ ಕಾಲ ವ್ಯರ್ಥಕಳೆದದ್ದು.

ಇವೆಲ್ಲ ಅನಿವಾರ್ಯ ಕಾರಣಗಳಿಂದ ಕ್ಷಮಿಸಲು ಪ್ರಾರ್ಥನೆ. ಈ ಮೂವತ್ತನೆ ಪ್ರಕಟನೆಗೆ ಪ್ರಿಂಟಿನ ಚಾರ್ಜ ೯೨೫ ರೂ. ಸುಮಾರು ಪ್ರೂಫ ರೀಡಿಂಗ ಪ್ರವಾಸ ಖರ್ಚು ಟಪಾಲ ವಗೈರೆ ೩೨೫ ಹೀಗೆ ೧೨೫೦ ರೂ ದಲ್ಲಿ ೨೫೦ ರೂ. ಸರಕಾರ ಗ್ರ್ಯಾಂಟ ಮಾತ್ರ ಪ್ರೆಸ್ಸಿಗೆ ಮತ್ತು ಅನಿವಾರ್ಯದಿಂದ ೩೩೦ ರೂ. ಸಾಲ ಮಾಡಿ ಪ್ರೆಸ್ಸು ಇತರ ಖರ್ಚಿನಲ್ಲಿ ವೆಚ್ಚಮಾಡಿದೆ. ಇನ್ನೂ ೪೨೫ ರೂ ಸುಮಾರು ಪ್ರೆಸ್ಸಿಗೆ ೩೩೦ ರೂ ಸಾಲ, ಕೈಗಡ ಒಟ್ಟಿಗೆ ೭೫೫ ರೂ. ಕೊಡುವದಾಗಿದೆ.

ಚಂದಾದಾರರಲ್ಲಿ ೧೦-೧೨ ಸಲ ಪತ್ರದ್ವಾರ ಬಿನ್ನೈಸಲೂ ೨-೩ ಸಲ ಸ್ವಂತ ಹೋಗಿ ವಿನಂತಿ ಮಾಡಿಕೊಂಡರೂ ಚಂದಾಕೊಟ್ಟಿಲ್ಲ. ಪುಸ್ತಕಗಳು ಮಾತ್ರ ಬಹು ಆತುರತೆ ಶ್ರದ್ಧೆಯಿಂದ ತರಿಸಿಕೊಂಡು ಈಪರಿ ಸಂಕಟಕ್ಕೊಳಪಡಿಸಿರುವರು. ಇದರಂತೆ ೭ ಜನ ಪೋಷಕರು ೫೦-೫೦ ರೂ. ಪುಸ್ತಕ ಸಂತೋಷದಿಂದ ತೆಗೆದುಕೊಂಡು ರೂ. ಕೊಡಲು ಮಾತ್ರ ೧॥ ವರ್ಷದಿಂದ ಗೋಳಾಡಿಸಿ ಕೆಲ ಜನರು ನಿಮ್ಮೂರ ಸಹ ಕಟ್ಟಿರುವರು. ದಾಸಸೇವೆಯಲ್ಲಿ ಸಹ ಈ ತೊಂದರೆ ಕಾರಣ ತ್ವ.ರಾ. ಬಾಕಿ ಇದ್ದವರು ರೂಪಾಯಿ ಕಳುಹಿಸಬೇಕಾಗಿ ವಿನಂತಿ.

**ಹ. ಗೊ.**

ಸಂಚಾಲಕ ಮಂಡಲ.

॥ ಹರಿಃ ಓಂ ॥

ಶ್ರೀ ಗುರು ರಾಜೋ ವಿಜಯತೇ ॥

# ಅರಿಕೆ -

ಆಗತಾದಿ ತ್ರಿಕಾಲಜ್ಞಂ । ಆಗಮಾರ್ಥ ವಿಶಾರದಂ ॥
ತ್ಯಾಗ ಭೋಗ ಸಮಾಯುಕ್ತಂ । ಭಾಗಣ್ಣಾರ್ಯ ಗುರುಂಭಜೆ ॥

ಪುಣ್ಯ ಭೂಮಿಯಾದ ಭಾರತ ವರುಷದಲ್ಲಿ ಅನೇಕ ಪುಣ್ಯತರವಾದ ದೇಶ, ಪುಣ್ಯತರವಾದ ನದಿಗಳು, ಪುಣ್ಯಕರರಾದ ಅನೇಕ ದೇವಾಂಶರ ಅವತಾರವೂ ಆಗಿ ಕಾಲಕಾಲಕ್ಕೆ ಸಜ್ಜನರನ್ನು ಉದ್ಧರಿಸಿದ್ದು ಅನುಭವ ವಾಗಿದೆ. ಅದರಲ್ಲಿ-

ಕೃಷ್ಣಾ, ತುಂಗಾನದಿಗಳ ಮಧ್ಯಪ್ರದೇಶವು ಅತಿಪುಣ್ಯತರವಾದುದರಿಂದಲೇ (ಹೈದರಾಬಾದಸ್ಟೇಟ) ರಾಯಚೂರಜಿಲ್ಹೆಯಲ್ಲಿ ದೇವಾಂಶರಾದ ಶ್ರೀ ವಿಜಯ ದಾಸರು, ಶ್ರೀ ಗೋಪಾಲ ದಾಸರು, ಶ್ರೀ ಮೋಹನ ದಾಸರು, ಶ್ರೀ ಜಗ ನ್ನಾಥ ದಾಸರೂ, ಶ್ರೀ ಪ್ರಾಣೇಶ ದಾಸಾರ್ಯರು ಅವತರಿಸಿ, ಅನೇಕ ಪದ ಸುಳಾದಿಗಳನ್ನು ರಚಿಸಿ, ಮಂದಮತಿಗಳನ್ನುದ್ಧರಿಸಿರುವರು. ಆ ಮಹ ನೀಯರ ಕರುಣೆಯಿಂದಲೇ ಈ ಮಹತ್ಕಾರ್ಯವಾದರೂ, ಅವರು ಅವತರಿ ಸಿದ ಈ ಪುಣ್ಯ ಭೂಮಿಯಲ್ಲಿ ಜರಗುತ್ತಿರುವವದೆಂಬುದೆ ಸಾಕ್ಷಿಯಾಗಿದೆ.

ಶ್ರೀ ವಿಜಯ ದಾಸರ ಸುಳಾದಿ, ಪದಗಳು, ಉಗಾಭೋಗಗಳೆಲ್ಲವೂ ೧ಳ ಪುಸ್ತಕದಲ್ಲಿ ಪ್ರಕಟಿಸಿದ್ದಾಯಿತು. ಮತ್ತು ಇಂದ್ರಾಂಶರಾದ ಶ್ರೀ ಮೊದಲಕಲ್ಲ ಶೇಷದಾಸರು, ಶ್ರೀ ವಿಜಯ ದಾಸರ ಅನುಗ್ರಹದಿಂದ ರಚಿಸಿದ ಕೃತಿಗಳೆಲ್ಲವೂ ಪ್ರಕಟಿಸಿದೆ.

ಶ್ರೀ ವಿಜಯ ದಾಸರ ಸಮಕಾಲೀನರೂ, ಸಾಕ್ಷಾತ್ ಶಿಷ್ಯರೂ, ಅಪರೋಕ್ಷ ಜ್ಞಾನಿಗಳೂ ದೇವಾಂಶರೂ ಆದ ಅನೇಕ ಶಿಷ್ಯರು. ಅದರಲ್ಲಿ

**ಭಕ್ತಿಯಲಿ ಭಾಗಣ್ಣ । ಯುಕ್ತಿಯಲಿ ಮೋಹನ್ನ ।**
**ಶಕ್ತಿಯಲಿ ತಿಮ್ಮಣ್ಣ । ಮುಕ್ತಿಯಲಿ ಆನನ್ನ** (ಆನಂದ)

ಎಂಬ ದಾಸರ ವಚನದಂತೆ ಭಾಗಣ್ಣ ಶ್ರೀಗೋಪಾಲ ದಾಸರು ಶ್ರೀಮೋಹನ ದಾಸರು, ಪಂಗನಾಮದ ತಿಮ್ಮಣ್ಣ ಆದವಾನಿ ದಿವಾನರಾದ ಶ್ರೀ ವೇಣು

ಗೋಪಾಲ ದಾಸರು, ಆನಂದದಾಸರು ಶ್ರೀ ಹಯವದನ ವಿಠಲರು ಶ್ರೀ ವಿಜಯ ದಾಸರ ಅನುಜರೂ ಶಿಷ್ಯರೂ, ಈ ನಾಲ್ಕು ಜನರು ಶ್ರೀ ವಿಜಯ ದಾಸರಿಗೆ ಮುಖ್ಯ ಶಿಷ್ಯರೂ ಅಪರೋಕ್ಷಜ್ಞಾನಿಗಳಿರುವರು ಕಾರಣ ಸದ್ಯ ದೊರೆತ—

| | | |
|---|---|---|
| ಶ್ರೀ ಗೋಪಾಲ ವಿಠಲರವು | ಸುಳಾದಿ | ೭೨ |
| ಶ್ರೀ ಮೋಹನ ವಿಠಲರವು | ,, | ೩ |
| ಶ್ರೀ ವೇಣು ಗೋಪಾಲ ವಿಠಲರವು | ,, | ೧೨ |
| ಶ್ರೀ ಹಯವದನ ವಿಠಲರವು | ,, | ೩ |

ಈ ವರೆಗೆ ದೊರೆತ (೯೦) ಸುಳಾದಿಗಳನ್ನು ಮಾತ್ರ ಇದರಲ್ಲಿ ಸಂಗ್ರಹಿಸಲಾಗಿದೆ. ಇವೆಲ್ಲವೂ ಅಪರೋಕ್ಷ ಜ್ಞಾನಿಗಳಿಂದ ರಚಿತವಾದ ಕಾರಣ ವೇದೋಪನಿಷತ್ ಪುರಾಣಗಳ ಅರ್ಥವೂ ಸ್ಫುಟವಾಗಿ ತೋರುವದಲ್ಲದೆ ಶ್ರೀ ವಿಜಯ ದಾಸರ ಕೆಲ ಪದ ಸುಳಾದಿಗಳಿಗೆ ಟೀಕಾ ರೂಪವಾಗಿ, ಸಜ್ಜನರ ಮನಸ್ಸಿನ ಮೇಲೆ ಒಳ್ಳೇ ಪರಿಣಾಮಕಾರವಾಗಿ ಕಲ್ಲಾದ ಮನವನ್ನು ಕರಗಿಸುತ್ತವೆ. ಇದೇ ಅಪರೋಕ್ಷ ಜ್ಞಾನಿಗಳ ವಚನಗಳಲ್ಲಿರುವ ಮಹಾತ್ಮೆ.

ಶ್ರೀ ಗೋಪಾಲ ವಿಠಲರ ಸುಳಾದಿಗಳಂತು ಬಹ್ವರ್ಥಗರ್ಭಿತ- ಮುಕ್ತಿಯೋಗ್ಯರ ಸಾಧನವಿಷಯ, ಮುಕ್ತಿಯಲ್ಲಿಯೂಸಹ ಶ್ರೀಹರಿಯ ಅಷ್ಟಕೃತ್ವತ್ವ ವಿವರಣೆ, ಭಗವದರ್ಚನೆ ಭಗವದುಪಾಸನೆ, ಭಾವಾಷ್ಟ ಪುಷ್ಪಗಳನ್ನರ್ಪಿಸುವ ಬಗೆ ಬಹು ಉಪನಿಷತ್ ರಹಸ್ಯದಿಂದ ಕೂಡಿವೆ. ಸಾಧನ ಭಾಗವಲ್ಲಿ ಮಡಿ ಮಾಡುವ ಬಗೆ, ವೈರಾಗ್ಯ ಮಾಡುವ ರೀತಿ ಮುಂತಾದವುಗಳು ಬಹಿರಂಗ ವ್ಯಾಪಾರಗಳನ್ನು ಮರೆಸಿ ಭಗವಂತನ ಪಾದಸ್ಮೃತಿ ಕೊಡುವವಾಗಿವೆ. ಮತ್ತು ಅನೇಕ ವಿಧವಾದ ಸ್ತೋತ್ರ ಸುಳಾದಿಗಳು, ಶ್ರೀ ಹರಿ ಸಾಕ್ಷಾತ್ಕಾರ, ಶ್ರೀಹರಿ ಮಾಡಿದ ಲೀಲೆ ತಮ್ಮ ಅನುಭವದಿಂದ ಮೈಮರೆದು ಬಣ್ಣಿಸಿರುವರೆಂಬುದಕ್ಕೆ ಇವರು ದೇವಾಂಶರೆಂದೇ ಶತಸಿದ್ಧ ಮತ್ತು ಪ್ರಮೇಯ ಭಾಗ ಶ್ರೀ ಹರಿಯ ಅಷ್ಟ ಕರ್ತೃತ್ವ, ಶ್ರೀ ಹರಿಯ ಸರ್ವ ಸ್ವಾತಂತ್ರ್ಯ ಜೀವನು ಸರ್ವಥಾ ಕರ್ತನಲ್ಲೆಂಬುದು ಅನೇಕಶ್ರುತ್ಯರ್ಥಗಳಿರುವವಲ್ಲದೆ, ಶ್ರೀ ವ್ಯಾಸ ಪ್ರಣೀತ ಸೂತ್ರಗಳಿಗೆ ಶ್ರೀ ಸರ್ವಜ್ಞರ ಭಾಷ್ಯ, ಶ್ರೀ ಟೀಕಾ ರಾಯರು, ಶ್ರೀ ಮಂತ್ರಾಲಯ ಪ್ರಭುಗಳ ಟೀಕಾ ಟಿಪ್ಪಣಿಗಳ

ಬಹು ಕಠಿಣತರವಾದ ಶಾಸ್ತ್ರವಿಚಾರಾರ್ಥಗಳನ್ನು ಕನ್ನಡದಲ್ಲಿ ವಿಶದೀಕರಿಸಿರುವರು. ಎಷ್ಟೋ ಜನ ಪಂಡಿತರು ಇವರ ಅನುಮಾನ ಯುಕ್ತಿ ಶಾಸ್ತ್ರಾರ್ಥವಿಚಾರ ಬಹು ಸಮಂಜಸವಾದುದೆಂದು ಸರಿಯಾಗಿ ತಿಳಿದುಕೊಂಡು ಆನಂದಬಡುತಲಿರುವರು. ಇನ್ನು ಶ್ರೀಹರಿಯ ಧ್ಯಾನೋಪಾಸನೆ ಕ್ರಮವು ಬಹು ಅಧ್ಯಾತ್ಮವಿಚಾರಗಳೊಂದಿಗೆ ಶಾಸ್ತ್ರ ಮರ್ಯಾದಾ ಮೀರದೇ ಶ್ರೀಹರಿಯೊಲಿದ ತಮ್ಮ ಅನುಭವವನ್ನೇ ತೋರಿಸಿ, ಸಜ್ಜನರಿಗೆ ಸನ್ಮಾರ್ಗತೋರಿದ ಮಹಾತ್ಮರು. ಈಗ ಸದ್ಯ ೭೨ ಸುಳಾದಿ ದೊರೆತಿರುವರು. ಇನ್ನು ಮುಂದೆ ಒಂದೆಡೆ ಕೆಲವು ಶಿಗುವ ಆಶೆ ಇದೆ. ದಾಸರ ಚರಿತ್ರೆ ಪದವನ್ನು ಶ್ರೀದಾಸರ ಋುಗರ ಆಜ್ಞೆಯಂತೆ ಕೊಟ್ಟಿದೆ.

ಇದರಂತೆ ಶ್ರೀ ಮೋಹನ ದಾಸರವು ಶ್ರೀ ವೇಣುಗೋಪಾಲ ವಿಠಲರವು ಶ್ರೀ ಹಯವದನ ವಿಠಲರವೂ ಸ್ವಲ್ಪೇ ಸುಳಾದಿಗಳು ಸಿಕ್ಕರೂ ಶ್ರೀಹರಿಯನ್ನೊಲಿಸಿದ ಜ್ಞಾನಿಗಳ ಒಂದೇ ವಾಕ್ಯವು ನಮ್ಮ ಉದ್ಧಾರಕ್ಕೆ ಸಾಕು. ಅನೇಕ ಪ್ರಮೇಯ ಅರ್ಥಗರ್ಭಿತವಾಗಿ ಮನಸ್ಸಿಗೆ ಬಹು ಆನಂದ ಕೊಡುವವಾಗಿವೆ. ಇಂತಹ ಸುಳಾದಿಗಳನ್ನು ಸರ್ವ ಸಜ್ಜನರು ಪಠಿಸಿ ಪಾರಾಯಣ ಮನನಾದಿಗಳನ್ನು ಮಾಡಿ ದಾಸರ ಅನುಗ್ರಹ ಪಡೆದು ಮುಕ್ತಿಯ ಸಾಧನ ನಿರತರಾಗುವರಾದರೆ ಈ ಸೇವೆ ಸಾರ್ಥಕ. ದಾಸವರ್ಯರಂತರ್ಯಾಮಿ ಶ್ರೀಹರಿ ವಾಯುಗಳು ತುಷ್ಟರೆಂದು ಪೂರ್ಣ ನಂಬಿಕೆಯಿದೆ.

ಭಾದ್ರಪದ ಮಾಸದಲ್ಲಿ ಈ ಪುಸ್ತಕದ ಅಚ್ಚಿನ ಕೆಲಸ ಪ್ರಾರಂಭವಾಗಿ ೧೦೪ ಪುಟಗಳು ಮಾತ್ರ ಅಚ್ಚಾದವು. ಏನೇನೋ ಕಾರಣದಿಂದ ಅನೇಕ ವಿಘ್ನಗಳು ಬಂದೊದಗಿ ಕೆಲಸವೇ ನಿಂತಿತು. ಜನೆವರಿ ತಿಂಗಳಿಂದ ಕೆಲಸ ಸಣ್ಣಾಗಿ ಪ್ರಾರಂಭವಾದೀತು. ಆದರೂ ಮತ್ತೆ ಹೆಚ್ಚಿನ ಸಂಕಟಗಳು ಬಂದವು. ದಾಸರ ಆಜ್ಞೆಯಂತೆ ಶ್ರೀ ಗೋಪಾಲ ವಿಟ್ಠಲರ ವಂಶಸ್ಥರಾದ ಶ್ರೀ ವೆಂಕೋಬದಾಸರಲ್ಲಿ ಹೋಗಿ ಅಲ್ಲಿ ಶ್ರೀವಿಜಯ ವಿಟ್ಠಲನ ಅನುಗ್ರಹ ಸಂಪಾದಿಸಿ ಆ ಫಲ ಮಂತ್ರಾಕ್ಷತೆಯ ಮಹತ್ಮೆಯಿಂದ ಈ ಕಾರ್ಯವು ೬ ತಿಂಗಳ ಮೇಲೆ ಇಂದು ಸಫಲವಾದಿತು. ಕಾರಣ ಶ್ರೀ ವೆಂಕೋಬ ದಾಸರೂ ಶ್ರೀ ಸುಬ್ಬಣ ದಾಸರಲ್ಲಿ ಅನೇಕ ವಂದನೆಗಳನ್ನರ್ಪಿಸಿ,

ಚಿರಋಣಿಯಾಗಿದ್ದೇನೆ ಮತ್ತು ಪ್ರೆಸ್ ಕಾಪಿಯನ್ನು ಹಿಂದೆ ಬರೆದುಕೊಟ್ಟ ಹಿರಿಯರಾದ ಪೂಜ್ಯ ಶೇಷಗಿರರಾವ ಬಾಗಲಕೋಟೆ ಮುಕ್ಕಾಂ ಕೆರೂರ ಇವರ ಮಹದುಪಕಾರ. ಮುಂಗಡ ರೊಕ್ಕದ ಆಶೆಯನ್ನು ಲೆಕ್ಕಿಸದೆ. ತಮ್ಮ ಅನಾನುಕೂಲತೆಯಲ್ಲಿಯೂ, ಸುಂದರವಾಗಿ ಅಚ್ಚುಕಟ್ಟಾಗಿ ಅಚ್ಚುಮಾಡಿ ಕೊಟ್ಟ ಶ್ರೀ ಪದ್ಮನಾಭಾಚಾರ್ಯ ಹೊಂಬಾಳಿ ನ್ಯೂ ಗದಗ ಪ್ರಿಂಟರಿ ಇವರ ಮಹದುಪಕಾರ ಸ್ಮರಿಸುತ್ತೇನೆ.

## ದಾಸರಲ್ಲಿ ಪ್ರಾರ್ಥನೆ.

ಪ್ರಚಾರ ಪ್ರಕಟನೆ ಕಾರ್ಯಗಳಲ್ಲಿ ಎನ್ನನುಪಯೋಗಿಸಿ ವಿಷಯಾದಿಗ ಳಿಂದದೂರಮಾಡಿ ಅನೇಕ ಲೌಕಿಕ ಕಾರ್ಯದಿಂದ ದೂರಗೈಸಿ ತಮ್ಮ ಸೇವೆಗೆ ಸೊಂಟಕಟ್ಟಿ ದುಡಿಸಿಕೊಳ್ಳುವವನಿಗೆ ಅನೇಕ ವಿಘ್ನ ತೊಡಕುಗಳ್ಯಾಕೆತಂದು ಕೊಡುವಿರಿ. ಸ್ವಾಮಿ ನಾನಜ್ಞನು ತಿಳಿಯೆ ತಮ್ಮ ಪ್ರೇರಣೆಯಂತೆ ಆಜನ್ಮ ಸೇವೆ ಮಾಡೆಂದು ತಾವು ಆಜ್ಞಾಪಿಸಿದದ್ದು ತಾವೇ ಮರೆತರೆ ಗತಿ ಏನು ? ಅಚ್ಚಿಗಾಗಿ ಕಾಸು ಬೇಕು. ಕಾಸಿಗಾಗಿ ಜನರಲ್ಲಿ ತಿರುಗಿ ತಿರುಗಿ ಬೇಸತ್ತರೂ ಕಾಸು ಕೊಡರು. ಕೆಲರು ಮೋಸವೇ ಮಾಡುವರು. ದಾಸರ ಕಾಲದಲ್ಲಿ ದಾಸರಿಗೆ ಮೋಸ ಮಾಡಿದ ಕೆಲರಿದ್ದ ಮೇಲೆ ಈ ಬಡ ದಾಸ ದಾಸದಾಸನಿಗೆ ಠಕ್ಕಿಸುವದು ವಿಶೇಷವೇನೂ ಅಲ್ಲ. ಇನ್ನು ಮುಂದೆ ಪರರನ್ನು ಬಾಯ್ದೆರಸದೆ ಮುಂದಿನ ಕಾರ್ಯ ಲೇಸಾಗಿ ಸಾಗಿಸಲು ಪ್ರಾರ್ಥಿಸುತ್ತ ದಾಸರನ್ನೇ ಮೊರೆ ಪೊಗುವೆ.

ದಾಸರೇ ಗತಿಯು ನಮಗೆ । ಕಾಸುವೀಸವು
ಬೇಡದಂಥ ಸಿರಿ ಪುರಂದರ । ದಾಸರೆ ಗತಿಯು ನಮಗೆ

ಲಿಂಗಸೂಗೂರ
ಶಕೆ ೧೮೭೭ ಮಾಘ
ವದ್ಯ ೩೦, ೧೨—೩—೫೬

ದಾಸರ ದಾಸ
ಹನಮಂತರಾವ ಗೊರಾಬಾಳ
ಸಂಚಾಲಕ ಮಂಡಲ.

# ಶ್ರೀ ಗೋಪಾಲ ವಿಟ್ಠಲರ ಸುಳಾದಿಗಳ
# ಪರಿವಿಡಿ

## ಶ್ರೀ ಮೋಹನ ವಿಠಲರ ಸುಳಾದಿಗಳು



## ಶ್ರೀ ವೇಣುಗೋಪಾಲ ವಿಠಲರ ಸುಳಾದಿಗಳು



## ಶ್ರೀ ಹಯವದನ ವಿಠಲರ ಸಳಾದಿಗಳು

ದೃಷ್ಟಿದೋಷದಿಂದ ಕೆಲ ಸಾಮಾನ್ಯ ತಪ್ಪು ಉಳಿದಿವೆ. ೧ ಗಂಟೆ ಶ್ರಮಪಟ್ಟು ತಿದ್ದಿ ಓದಲು ವಿನಂತಿ.

# ಶುದ್ಧಿ ಪತ್ರಿಕೆ

| ಪುಟ | ಪಂಕ್ತಿ | ಅಶುದ್ಧ | ಶುದ್ಧ |
|---|---|---|---|
| ೯ | ೧೩ | ಅಷ್ಟುಕತೃತ | ಅಷ್ಟಕರ್ತೃತ್ವ |
| ೧೦ | ೬ | ಮಾಂಧ್ಯವಿಲ್ಲಾ | ಮಾಂದ್ಯವಿಲ್ಲ |
| ೨೧ | ೧೬ | ಪುಷ್ಟವೆಂತೆಂದು | ಪುಷ್ಪವೆಂತೆಂದು |
| ೪೧ | ೨೦ | ಅಸ್ಯದೈವರ | ಅನ್ಯದೈವರ |
| ೪೫ | ೧೧ | ಆಸುಹುದಯ್ಯಾ | ಅನಹುದಯ್ಯಾ |
| ೪೬ | ೨೨ | ಬನ್ನಬಿಡಿಸಾ | ಬನ್ನಬಡಿಸಾ |
| ೪೯ | ೧೩ | ಭಯಪುಟ್ಟಿಸಿ | ಭಯ ಪುಟ್ಟಿಸಿ |
| ೫೩ | ೬ | ಸಾಹಸವು | ಸಾಹಸ್ರವು |
| ೬೨ | ೧೪ | ಹರಿ | ಹರ |
| ೬೪ | ೨೫ | ಕುತೋತ್ಪನ್ನ | ಕುಲೋತ್ಪನ |
| ೭೧ | ೨೭ | ಭಕುತರಲ್ಲವೆ | ಭಕುತರಲ್ಲೇ |
| ೭೭ | ೧೯ | ಪ್ರಾಕೃತವೆಂಬೆರಿ | ಪ್ರಾಕೃತವೆಂಬಿರಿ |
| ೭೮ | ೨೦ | ಲಯ ನು | ಲಯವನು |
| ೯೪ | ೪ | ಕಾಯಾದಿಗಳು | ಕಾಮಾದಿಗಳು |
| ೯೫ | ೧೬ | ತನ್ನವರಿಯ | ತನ್ನ ಮರಿಯ |
| ೯೭ | ೨೨ | ಕಾಲು | ಶಾಲು |
| ೧೦೪ | ೨೨ | ಕೊಂದೆನಲಲ್ಲ | ಕೊಂದೆನಲಿಲ್ಲ |
| ೧೦೫ | ೧೨ | ಪಾದಡಿಯ ಲಿ | ಪಾದದಡಿಯಲಿ |
| ೧೦೭ | ೫ | ಭಗರೋಗವ | ಭವರೋಗವ |
| ೧೦೭ | ,, | ಸಕಮಾರ್ಗ | ಸುಕಮಾರ್ಗ |
| ೧೪೧ | ೧೨ | ಕದಿರಾಜ | ಕರಿರಾಜ |

| ಪುಟ | ಪಂಕ್ತಿ | ಅಶುದ್ಧ | ಶುದ್ಧ |
|---|---|---|---|
| ೧೪೪ | ೯ | ವೈರಾಗ್ಗ | ವೈರಾಗ್ಯ |
| ೧೪೫ | ೧೮ | ನಡುವೆ | ನುಡಿವೆ |
| ೧೫೪ | ೧೮ | ವಾಚಾವನ | ವಾಚಾಮನ |
| ೧೭೪ | ೨೪ | ಮೀರದದತೀವೆ | ಮೀರದಲೇವೆ |
| ೧೭೬ | ೧೬ | ಗುಣನಿದಿ | ಗುಣನಿಧಿ |
| ೨೦೫ | ೧೫ | ಫಲರಾದಿತ್ಯ | ಫಲರಾಹಿತ್ಯ |
| ೨೧೩ | ೧೬ | ಭೃತಪಾಲಕನೆ | ಭೃತ್ಯಪಾಲಕನೆ |
| ೨೪೦ | ೧೯ | ಆರಣ್ಯಾವಾಸರಿನ್ನು | ಆರಣ್ಯವಾಸದಿನ್ನು |
| ೩೦೭ | ೨೦ | ಉಡುವದೆಲಿ | ಉಡುವದೆಲ್ಲ |

॥ ಶ್ರೀ ಗುರು ರಾಜೋ ವಿಜಯತೇ ॥

ಶ್ರೀ ಗೋಪಾಲ ವಿಠಲರ ತಮ್ಮಂದಿರೂ, ಶಿಷ್ಯರೂ, ಅಪರೋಕ್ಷ ಜ್ಞಾನಿಗಳೂ
ಆದ ರಂಗಪ್ಪ ದಾಸರು ತಂದೆ ಗೋಪಾಲ ವಿಠಲ ವಿರಚಿತ.

# ಶ್ರೀ ಗೋಪಾಲ ವಿಠಲರ ಚರಿತ್ರೆ ಪದ.

ಪದ ರಾಗ ರೂಪಕತಾಳ

ಭಜಿಸಿ ಬದುಕಿರೊ ಆಜನ ಪ್ರಿತ ಶ್ರೀ ವಿಜಯ ವಿಟ್ಠಲ ರಾಯನಾ ।
ಭಜನಿ ಮಾಡುವ ವಿಜಯರಾಯರೆ ನಿಜಗುರುಗಳೆಂದಿನಿಪನ ॥ ಪ ॥

ಮೂಲ ಪೇಳುವೆ ವಿಶಾಲ ಮಹಿಮ ಸು । ಶೀಲ ವಿಜಯರಾಯರಾ ॥
ಕಾಲ ಕಾಲಕೆ ಸ್ಮರಿಪ ಶ್ರೀ ಗೋ । ಪಾಲದಾಸ ರಾಯರಾ ॥ ॥ ೧ ॥

ಧದಿ ಪಾಷಾಣ ದಧಿಪ ನೆನಿಸುವ । ಮುದಗಲಾಖ್ಯ ಪುತ್ರನಾ ॥
ಉದರದಲಿ ಉದು ಭವಿಸಿದರು ನಾಲ್ವ । ರದರೊಳಗೆ ಬುಧವರ್ಯನಾ ॥ ೨ ॥

ಪುಟ್ಟಿದಾಗಲೆ ಪಿತ ಮುರಾರಿಯ । ಶಿಷ್ಟ ಶಿಶುವೆಂದೆನುತಲಿ ॥
ಇಟ್ಟ ಈ ವಸುಧಿಯೊಳು ಪೆಸರನು । ಧಿಟ್ಟಭಾಗಣ್ಣನೆನುತಲಿ ॥ ೩ ॥

ಪಂಚ ವತ್ಸರ ಬರಲು ಮನೆಯೊಳು । ಸಂಚಿತ ಸಂಪತ್ತನು ॥
ಪಂಚ ಬಾಣನ ಪಿತನ ಆಜ್ಞದಿ । ಕೊಂಚವಾಗೆ(ವಾಗಲೆಂ)ವೆಂಕಮ್ಮನು ॥ ೪ ॥

ವೆಂಕಟ ರಮಣನ್ನ ಸ್ಮರಿಸುತ । ಮಂಕುಮಗುಗಳ ಸಹಿತದಿ ॥
ಸಂಕಟಾ ಬಡುತಲ್ಲೆ ನಿಂತರಾ । ಸುಂಕ ಪುರದಾ ಸ್ಥಳದಲಿ ॥ ೫ ॥

ಉದರಗೋಸುಗವಾಗಿ ಮತ್ತೆ । ಸದನಗಳು ಬಲು ತಿರುಗುತಾ ॥
ವಿಧಿಲಿಖಿತ ತಪ್ಪದುಯೆನುತ ಕೃಷಿ । ಆದರ ವ್ಯಾಪಾರ ನಡಿಸುತಾ ॥ ೬ ॥

ಏಳು ವರ್ಷವು ಸಾಗಿಸಿ ಶ್ರಮ । ತಾಳದಲೆ ವಟ ವೃಕ್ಷದಾ ।
ಮೂಲದಲಿ ಮಲಗಿರಲು ದೇಹದ । ವ್ಯಾಲೆ ಸರ್ಪನಂದದಿ ॥ ೭ ॥

ಆಡುತಿರಲದು ಕಂಡು ಮಕ್ಕಳು । ಓಡಿ ಪೇಳ್ದರು ಜನನಿಗೆ ॥
ನೋಡ ಬಂದರು ಜನನಿ ಜನರು ಕೊಂ । ಡಾಡಿದರು ಈ ಮಹಿಮಿಗೆ ॥ ೮ ॥

ವೃಕ್ಷವೇರಲು ಸರ್ಪ ಚಿಂತಿಸಿ । ರಕ್ಷಕತ್ವವು ಇವರಿಗೆ ॥
ಲಕ್ಷ್ಮಿ ರಮಣನೆ ರಕ್ಷಿಸುವನೆಂ । ದೀಕ್ಷಿಸೀ ಉತ್ತನೂರಿಗೆ ॥ ೯ ॥

ಬಂದು ದೇವರ ಗುಡಿ ಪ್ರವೇಶಿಸಿ । ನಿಂದು ನಲಿನಲಿದಾಡುತಾ ॥
ಮಂದಿಗಳ ನೋಡಲ್ಕೆ ಮೌನದಿ । ಮಂದಮತಿಯಂತೆ ತೋರುತಾ ॥ ೧೦ ॥

ನಿರುತ ಸೇವೆಯ ಮಾಡೆ ಪುರಜನ। ಹರಿಯ ಮಂದಿರ ದ್ವಾರವ ॥
ಭರದಿ ಬಂಧಿಸಿ ತೆರಳಾಕ್ಷಣ । ಕರವ ಧಾರಿಸಿ(ಜೋಡಿಸಿ) ತುತಿಸುವ ॥ ೧೧ ॥
ವೇಣು ಗಾಯನ ಪ್ರಿಯನು ಎದುರಿಲಿ। ಕುಣಿವನೂಪುರ ಶಬ್ದವು ॥
ಮುನಿಗಳಲ್ಲಿಹ ಮನುಜರಾಲಿಸೆ। ಮನಕೆ ಕೇವಲ ಮೋದವು ॥ ೧೨ ॥
ಮೌನ ವ್ರತವನು ಮಾಡುತಲಿರೆ ಇದೆ। ಮನುಜನಾ ಮಾತಾಳ್ವೆನೊ ॥
ಏನಿದಚ್ಚರವೆನುತ ಬಾಧಿಸೆ। ನಾನ ಕ್ಲೇಶವ ಬಟ್ಟನು ॥ ೧೩ ॥
ಶೈವ ಪಣವನು ಮಾಡಿ ಕೇಳುತ। ಇವರ ಜಯ ಪತ್ರ ಕೇಳಿದಾ ॥
ತವ ಲಿಖಿಸಿ ಕೊಡೆನಲು ಪ್ರಾರ್ಥಿಸೆ। ಕವನ ಪೇಳಲು ತೆರಳಿದಾ ॥ ೧೪ ॥
ಸುತರ ಸೃಷ್ಟಿಯ ಗೋಸುಗದಿ ಭೂ। ಪತಿಯು ಸೇವೆಯೊಳಿಟ್ಟಿರೆ ॥
ಚತುರ (ಗ) ದಶ ಚೋಗತ್ವ ಕಲ್ಪಿಸಿ। ಅತಿ ದುರುಳ ಬಾಧಿಸುತಿರೆ ॥ ೧೫ ॥
ಹರಿಯ ಧ್ಯಾನದೊಳಿರಲು ತರುಳರ। ಘೋರ ಬಾಧೆಯ ತಿಳಿದನು ॥
ಭರದಿ ಇಲ್ಲಿಂದ ತುಳಮುಹಿಮೆಯ। ತೋರಲವರನು ಬಿಟ್ಟನು ॥ ೧೬ ॥
ಅಂದು ವೇಗದಿ ಮಂದಿರಕೆ ಬಂದು। ನಿಂದು ಮಾತೆಯು ಕರೆಯಲು ॥
ಮಂದ ಹಾಸದಿ ಅನುಜರೀರ್ವರು। ಬಂದ ಸ್ಥಿತಿಯನು ಪೇಳಲು ॥ ೧೭ ॥
ಇತಿತು ಪರಿದ್ವಯ ವತ್ಸರದೊಳು। ಜನನಿ ಪುರುಷವ ತೋರಿದಾ ॥
ವನಜನಾಭನ ಕೃಪೆಯು ಇಂದಿನ। ದಿನ ಪ್ರವೇಶೆಂದು ಪೇಳಿದಾ ॥ ೧೮ ॥
ಹರಿಯ ಕರುಣವು ಉಣಲಿ ಇಲ್ಲವು। ನಿರುತ ಭಿಕ್ಷವ ಬೇಡಲು ॥
ಎರಡು ವತ್ಸರ ಮೌನ ಪ್ರೋಹಿಸಿ। ಸರಸ ವಚನಗಳಾಡಲು ॥ ೧೯ ॥
ಇಂದಿರೇಶನ ಕರುಣದಿಂದಲಿ। ಬಂದ ಸಾಮಗ್ರಿ ನೋಡುತಾ ॥
ಒಂದು ನಾಳಿಗೆ ಬೇಡ ವೆನ್ನಲು[ವೆನೆ]। ಸುಂದರಾಂಗಿಯು ಲೋಭದಿ ॥ ೨೦ ॥
ಗಡಿಗಿ ಏಳನು ತುಂಬಿ ಭೂಮಿಯೊ। ಳಡಗಿಸೆರಡನೆ ದಿನದಲಿ [ಮಧ್ಯಾಹ್ನದಿ] ॥
ನೋಡಿ ಕ್ರಿಮಿರಾಶಿಯನು ಇವರ। ಬೇಡಿಕೊಂಡಳು ಕರುಣದಿ ॥ ೨೧ ॥
ಮಂದಹಾಸದಿ ಮೂರು ವ್ಯಾಲಕೆ। ತಂದು ವಿಪ್ರರಿಗುಣಿಸಿದ ॥
ಅಂದವಾದೀ [ಛಂದದಿಂದಲಿ] ನಾಲ್ಕುಘಟಗಳು। ಮುಂದಕಿರಲೆಂದು ಪೇಳಿದಾ
ಧಾನು ಉದಯದಲೆದ್ದು ಶ್ರೀಹರಿ। ಧ್ಯಾನದಲ್ಲಿರೆ ಜನರಿಗೆ [ಬಂದವರಿಗೆ] ॥
ಶ್ರೀನಿವಾಸನ ಕೃಪೆಯ ಪೇಳಿದ। ನಾನಾಬಗೆ ಕೇಳ್ವವರಿಗೆ ॥ ೨೨ ॥
ಈ ಮಹತ್ಮರರಕೂಡ ವಿಪ್ರನು। ಪ್ರೇಮಗವಚನಳಾಡುತಾ ॥

ಯಾಮರಾತ್ರಿಯುಗಮಿಸಿ ಪೋಗಲು। ತಾಮನದಿ ಚಿಂತೆಯುಮಾಡುತಾ॥೨೪॥
ಮರಳೆ ಸಂಧ್ಯಾವಂದನೆಯ ಮಾಡಿ । ಕರದಿಂದರ್ಘ್ಯವ ಕೊಡುತಿರೆ ॥
ತರುಣಿಯನು ಆಸ್ತಾದ್ರಿಯಲಿ ಕಂಡು ಪರಮ ಹರುಷವ ಬಡುತಿರೆ ॥ ೨೫ ॥
ಪರಿ ಪರಿ ಚರ್ಯ ಕಂಡು ರಾಜನು । ದರ್ಶನಾದೀತೆಂದನು ॥
ಹರಿಯ ಸನ್ನಿಧಿ ಕ್ಲಪ್ತ ದ್ರವ್ಯವು । ಕರಿಯ ಕುದುರಿಯ ಕೊಡುವನು ॥ ೨೬ ॥
ಈಪರಿಂದಲಿ ಪೇಳಿ ಹವಿ [ಲಿ]ಕನ । ಭೂಪತಾಕಂಡಾಕ್ಷಣ ॥
ಈ ಪೃಥ್ವಿಪದ ನಿನಗೆ ತಪ್ಪದೆಂದು । ತಾ ಪೇಳಿದನು ಸುಲಕ್ಷಣ ॥ ೨೭ ॥
ಧಾತ್ರಿಯೊಳು ಯಾದವಗಿರಿಯ ಸ । ತ್ಪಾತ್ರ ತಿಮ್ಮಣ್ಣನೆಂಬನಾ ॥
ತೀರ್ಥಯಾತ್ರೆಯ ನೆವನದಿಂದಾ । ಕ್ಷೇತ್ರದಲಿ ವಾಸವಮಾಡ್ದನಾ ॥ ೨೮ ॥
ದೇಶ ದೇಶದ ಜನರುಗಳು ಬಂದು । ವಾಸವಾಗಿ ಇಪ್ಪರೊ ॥
ಶ್ರೀಶನಾಜ್ಞದಿ ಅವರವರ ಮನೋಭಿ । ಲಾಷೆ ಪೂರ್ತಿಸುತಿಪ್ಪರೊ ॥ ೨೯ ॥
ವೆಂಕಟ ಕೃಷ್ಣೆಂದು ಪದಗಳ । ಗಂಕಿತವು ನೀಡುತಲಿರೆ ॥
ವೆಂಕಟೇಶನ ದಾಸವರ್ಯರು । ನೋಂಕಿ ವಿಜಯದಿಂಬರುತಿರೆ ॥ ೩೦ ॥
ದಾಸವರ್ಯರು ಕಂಡು ಇವರಿಗುಪ । ದೇಶವನು ಕೊಡ[illegible]ಕ್ಷಣಾ ॥
ಏಸುಜನ್ಮದ ಸುಕೃತವೆನುತಲಿ । ಲೇಸು ಲೇಸೆಂದು ಮೊರದನಾ ॥ ೩೧ ॥
ಉಡುಪಿ ಕೃಷ್ಣನ ದರುಶನಕೆ ಆಜ್ಞಾ । ಕೊಡಬೇಕೆನುತಲಿ ಕೇಳ್ದನು ॥
ತಡವ್ಯಾಕೆನುತಲಿ ಹರಿಸ್ತುತಿಯ ಮಾಡಿ।ಕೊಡುತ ಪೋಗಿಬಾರೆಂದನು ॥೩೨॥
ಮಂಡಗದ್ದಿಯ ಭೀಮನೆಂಬುವ । ಕಂಡು ಪೂಜಿಸಿ ಕಳುಹಿದಾ ॥
ಗಂಡಿತ್ರಯದಲ್ಲಿ ಸುಲಿ(ಳಿ)ಯೆ ತಿಗದಿರೆ । ದಂಡನಮಿಸಲುದ್ಧರಿಸಿದ ॥ ೩೩ ॥
ಗೋಪ ಬಾಲಕನಾದ ಕೃಷ್ಣನ । ವ್ಯಾಪಾರಗಳ ಸ್ಮರಿಸಿದಾ ॥
ತಾಪುರಕೆಬರು (ಬಂದೊ)ತೋರ್ವ ಮನುಜಗ।ಪಾರಭಾಗ್ಯವತೋರಿದಾ॥೩೪॥
ಉದರ ಶೂಲಿಯು ಬಾಧಿಸಲು ಶ್ರೀ । ಪದುಮನಾಭನ ಷಡ್ರಸಾ ॥
ಐದು ತಾಸಿಗೆ ಭುಂಜಿಸುದೆನೆ । ಮುದದಿ ನಡೆಸಿದ ಮಾನಿಸಾ ॥ ೩೫ ॥
ವಿಜಯರಾಯರ ಪಾದನಿರುತದಿ । ತ್ಯಜಿಸದಲೆ ಭಜಿಸುವರೊ ॥
ವಿಜಯ ವಿಟ್ಠಲ ಪ್ರತಿಮೆಯನು ಕೊಡೆ । ಭಜಿಸಿ ಪೂಜಿಸಿ ನಲಿವರೊ ॥ ೩೬ ॥
ರಾಜವಳಿಯ ಗ್ರಾಮದಲಿ ಹರಿ । ಪೂಜಿ ಮಾಡುತ ಗಿರಿಯಲಿ ॥
ಮೂಜಗತ್ಪತಿರಥದೊಳಿಹನೆಂದು । ನೈಜದಲಿ ಪೇಳುತ್ತಲಿ ॥ ೩೭ ॥

ಕ್ಷಾಮಪರಿಹರಮಾಳ್ಪದೆನುತಲಿ । ಗ್ರಾಮಿಕರು ಕರಮುಗಿಯಲು ॥
ಆಮಹಾಮೂಷಮನುಜನಿಂದಲಿ । ಕ್ಷೇಮವಾಗೆ ಕೊಂಡಾಡಲು ॥ ೩೮ ॥
ಇವರ ಸ್ತುತಿಸಲುಸೂತಶಾಖದಿ । ಲವಣವಧಿಕಮಾಡಲು ॥
ಲವಣವಾನಿಜನಾರ್ದನಗರ್ಪಿಸಿ । ಸವಿದುಭುಂಜಿಸಿಮೊಗಳಲು ॥ ೩೯ ॥
ವೀರಗರ್ವಿಲಿ ಘೊರೆಯುಗಳು । ಘೋರಿಸಲುತನ್ನನುಜರಾ ॥
ವಾರಿಸೋಟದಿನೋಡಿ ಪ್ರಾರ್ಥಿಸೆ । ಸೇರಿದರು ಸ್ವಪುರವನಾ ॥ ೪೦ ॥
ಪುನಹ ಕೃಷ್ಣನ ದರುಶನಕೆ । ತಮ್ಮನುಜರಿಂದಲಿ ನಡೆದರು ॥
ಜನನ ರಹಿತನು ವನುತೆ ಗರ್ಭದಿ । ಜನಿಸೆ ದೃಶ್ಯನಾದನು ॥ ೪೧ ॥
ಕ್ಷಿತಿಯೊಳಗೆ ತನಗಾದ ಅನುಭವ । ಅತಿಶಯವನು ಪೇಳುತಾ ॥
ರತಿ ಪತಿ ಪಿತರನ್ನು ತನ್ನಯ । ಸುತನತೆರದಲಿ ಸೆಳವುತಾ ॥ ೪೨ ॥
ಕ್ಷಿತಿಯೊಳಗೆ ಶ್ರೀರಂಗರಾಜನ । ಅತಿವಿಭವ ನೋಡುವರೊ ॥
ಕೃತಿ(ಕ್ಷಿತಿ)ಪತಿನಿಂದಾಸ್ತುತಿಯ ಮಾಡು । ತತಿಮುದವ ಬಡುತಿಹರೊ ॥೪೩॥
ಭೂಸುರರು ನದಿಯಲ್ಲಿ ಬರುತಿರೆ । ಲೇಸುಭೋಜನ ಬಯಸಲೂ ॥
ದಾಸವರ್ಯರು ಆವರ ಮನೋಆಭಿ । ಲಾಷೆಯಂತಲಿಸಲಿಸಲು ॥ ೪೪ ॥
ವಸುಧಿಪತಿ ಕಂಚೀವರದ ರಾಜನ । ವಸನಕೆ ದೀಪ ಸೋಂಕಲೂ ॥
ಮುಸುಕು ತೊರದು ತುಂಗ ನದಿಯೊಳು । ನಸುನಗುತ ಕರನೊರಸಲು॥೪೫॥
ಆರೆ ಮಾತುಗಳಾಡುತಲಿ ಹಯ । ವೇರಿ ಬಂದನು ಬಳಿಯಲಿ ॥
ಸೂರಿಜನ ಸಂಪ್ರಿಯನೆಂದು । (ತೋರಿ) ಸಾರಿದನು ಸಜ್ಜನರಲಿ ॥ ೪೬ ॥
ತರುಣಿ ಕ್ಷೀರವು ತಂದು ಕೊಡುತಿರೆ । ಭರದಿ ಮರಳೊಳಗೆರದನು ॥
ಮರಳಿ ಗುಡಿಯೊಳು ಕಂಡು ಬರುತಿರೆ। ಕರುಣ ನಿಧಿಯನು ತೋರ್ವನು ॥೪೭॥
ಕುಂಡಲಾಗಿರಿಯಲ್ಲಿ ವಿಪ್ರನು । ಕಂಡು ವಿಜಯ ರಾಯರಾ ॥
ಪಂಡಸಮನಸ ಮಾಡಿ ಕೇಳ್ದನು । ದ್ದಂಡ ಕ್ಷಯರೋಗಕಳಿತ್ವರಾ ॥೪೮॥
ಹರುಷದಿಂದುತ್ತು ನೂರು ಸೇರಲು । ಪರಿಹರಾಗುವದೆಂದನೂ ॥
ಬರಲು ಭಕ್ರಿಯುಪ್ರೊಳಗೆ ನಾಲ್ವ । ತ್ತೊರುಷ ಆಯುವನಿತ್ತನು ॥೪೯॥
ಸುಧಸುಪಾತ್ರದಿ ಪಿಡಿದ ಹರಿಯನು । ಮುದದಿ ಸ್ಮರಿಸುತ ಕೊಟ್ಟನು ॥
ಪದುಮನಾಭನು ಕೋಪದಿಂದಿರೆ । ಶ್ರೀದಬಾರೆಂದು ಕರೆದನು ॥೫೦॥
ಕರವೀರ ಪುರನಿಲಯ ಲಕುಮಿಯ । ಪರನು ಹರುಷದಿ ತುತಿಸಿದಾ ॥

ಶರಣರಿಗೆ ಆಪದವನೊದಗಲು । ಗುರುದಯದಿ ಪರಿಹರಿಸಿದಾ ॥೫೧॥
ಮಂದಹಾಸದಿ ರಾಘವೇಂದ್ರರ । ವೃಂದಾವನಕಭಿನಮಿಸಿದಾ ॥
ಮುಂದೆ ನಡೆವ ವಿಚಿತ್ರ ಚರ್ಯಾ । ನಂದದಲಿ ಸಂಸ್ತುತಿಸಿದಾ ॥೫೨॥
ಅನುಜಹರಿಯನು ಕಾಣದಲೆ ತನ । ಮನದಿ ಸ್ಮರಿಸುತ ನಿಲ್ಲಲು ॥
ಕನಕಗಿರೀಶನ ಪ್ರಾರ್ಥಿಸುತ ಶ್ರೀ । ವನಿತೆಯುರಸನತೋರಲು ॥೫೩॥
ತೇರಿನುತ್ಸಹ ನೋಡಿ ಹರುಷದಿ। ಬಾರೊ ಮನ(ಮನೆಗೆ) ಕೆಂದುಸ್ತುತಿಸಿದ ॥
ಪುರಕೆ ಬರುವ ಕಾಲದಲಿ ಹರಿ । ಕರುಣವಿರಲೆಂದು ಪೇಳಿದಾ ॥ ೫೪ ॥
ಪ್ರಾಣಸಖಗಪಮೃತ್ಯು ಪೊದಗಿರೆ । ವೇಣುಗೋಪಾಲ ಕೃಷ್ಣನಾ ॥
ನಾನಪರಿಯಲಿ ಪ್ರಾರ್ಥಿಸಿನ್ನು । ಹಾನಿ ಹಿಂದಕ್ಕೆ ಮಾಡ್ದನಾ ॥ ೫೫ ॥
ದುರುಳ ಮಾಯ್ಗಳ ಪುರಕೆ ಪೋಗಿ । ಹರಿಯೆ ಪರನೆಂದು ಪೊಗಳುವ ॥
ಭರದಿ ಬಂದವರೆಲ್ಲ ವಾದಿಸೆ । ಹರುಷದಿಂದಲೆ ಜೈಸುವಾ ॥ ೫೬ ॥
ದ್ವಿಜನು ವಿಜಯ ರಾಯನರು ತನ್ನ । ನಿಜ ಸ್ವರೂಪವ ಕೇಳ್ದನು ।
ಸುಜನ ಶಿರೋಮಣಿ ಮುಕ್ತಿಯಲಿ ಕಾಕ। ನಿಜವೆನುತ ಸ್ತುತಿಮಾಡ್ದನು॥೫೭॥
ನುಡಿದ ವಚನವ ಕೇಳಿ ವಿಪ್ರನು । ಮಿಡುಕಿದನು ಬಲು ಮನದಲಿ ॥
ಸಹಗರದಿ ಗುರು ವಿಜಯರಾಯರು । ದೃಢ ಪೇಳಿದ ನಿಜವೆನುತಲಿ ॥ ೫೮ ॥
ಭವ ವಿಮೋಚನ ಮಾಳ್ಪನದಿಯೊಳು । ಅವಗಹನ ಸ್ನಾನ ಮಾಡುತಾ ।
ಪವನ ಪಿತ ಅಹೋಬಲ ನೃಸಿಂಹನ । ಕವನರೂಪದಿ ಸ್ಮರಿಸುತ ॥ ೫೯ ॥
ಹರುಷದಲಿ ಸತ್ಯ ಬೋಧರಾಯರ । ದರುಶನಕೆ ಪೋಗಿ ನಿಲ್ಲಲು ॥
ತ್ವರದಿ ನೂರವರು ಸ್ತುತಿಯ ಮಾಡೆನೆ । ಸರಸದಿಂದಲಿ ಪಾಡಲು ॥ ೬೦ ॥
ಭರದಿ ವೆಂಕಟ ನೃಸಿಂಹಾರ್ಯರು । ಬರಲು ಚರಣಕೆ ನಮಿಸುತಾ ।
ಅರಸಿ ಆಜ್ಞವೆ ಮುಖ್ಯ ನಿಮಗೆಂದು । ಸರಸ ವಚನಗಳಾಡುತಾ ॥ ೬೧ ॥
ಬಂದ ಬಗಿಯನು ತಿಳಿದು ನಿಮಗಿ । ಷ್ಟೊಂದು ಚಿಂತೆಯಾತಕೆ ಎಂದನು ।
ಮುಂದೆ ತರುಳನು ಮಾಳ್ಪ ಚರಿತೆಯ । ಮಂದಹಾಸದಿ ಪೇಳ್ದನು ॥ ೬೨ ॥
ಮಂಗಳಪ್ರದವಾದ ನಿವೃತ್ತಿ । ಸಂಗಮದಿ ಸ್ನಾನವ ಮಾಡಿದ ।
ಗಂಗೆ ಮೊದಲಾದಖಿಳ ನದಿ ಗು । ತ್ತುಂಗ ಸ್ಥಳಯೆಂದು ಪೇಳಿದ ॥ ೬೩ ॥
ಮೋದದಲಿ ತತ್ವಸಾರ ಪದ ಸು । ಳಾದಿಗಳು ಉಗ ಭೋಗವಾ ॥
ಬೋಧಪೂರ್ಣರ ಶಾಸ್ತ್ರಸಮ್ಮತ ವಾದಕವನವ ಪೇಳುವಾ ॥ ೬೪ ॥

ತನಯ ಅನುಜರ ಧನದ ಗೋಸುಗ । ವಿನಯದಿಂದಲಿ ಕಳುಹಿದಾ ॥
ಅನುಜನೋರ್ವಗೆ ಮುಂದಿನಾ ಸ್ಥಿತಿ । ಕನಸಿನಿಂದದಿ ಪೇಳಿದಾ ॥ ೧೫ ॥
ಸಣ್ಣವರದ ಸಕಾಗಿ ಶ್ರೀ ಹರಿ । ಯನ್ನು ಬಿನ್ನೈಸೀದನೂ ॥
ಎನ್ನ ಸ್ವಾಮಿಯ ಮಹಿಮೆ ಧರೆಯೊಳ । ಗಿನ್ನೂ [ನೂ]ರೊರುಷೆಂದು ಪೇಳ್ದನು ॥ ೧೬ ॥
ಹಿಂದೆ ಅನುಭವ ಜನ್ಮ ಚತುರ್ದಶ । ಇಂದು ಈ ಜನುಮೆಂದನು ॥
ಮುಂದೆರಡು ಜನ್ಮದ ಸುಚರಿಯಾ । ನಂದದಲಿ ಕೇಳೆಂದನು ॥ ೧೭ ॥
ಕ್ಷಿತಿಯೊಳಗೆ ಗುರು ವ್ಯಾಸ ತತ್ವಜ್ಞರ । ಸುತನೆನಿಸಿ ಸಚ್ಛಾಸ್ತ್ರವಾ ॥
ಪ್ರತಿದಿನದ ಪ್ರವಚನ ಮಾಡುತ । ಹುತ ಭುಜನ ಮುದಬಡಿಸುವಾ ॥ ೧೮ ॥
ಎನ್ನ ಸ್ಥಾನಕೆ ನೇರುವಿಯೋ ನೀ । ನಿನ್ನ ವಂಶಾ ಎನ್ನದು ॥
ನಿನ್ನ ವಂಶದಿ ಘನ್ನನೆನಿಸುವೆ । ಇನ್ನು ಸಂಶಯ ಸಲ್ಲದು ॥ ೧೯ ॥
ಅನುಜ ಕೇಳ್ ಪಾಚಕನು ಜಲಧರ । ಗಣಿಕಜ್ಞಾನಿ ಚಿಕಿತ್ಸಕಾ ॥
ಮುನಿಯಪ್ರಮುಖರುನಿನ್ನ ವಂಶದಿ( ಉದರದಿ) ಜನಿಸಲುಘನಬಾಲಕಾ ॥ ೨೦ ॥
ಮಾತೃಗರ್ಭದೊಳಿರಲು ಪ್ರಾಣ್ಯಾಯು । ಪಾತ್ರಿಯಲಿ ಜಲಪಾನವಾ ॥
ಧಾತ್ರಿಯೊಳು( ದಾತ್ರಿಯೊಳು)ಇಚ್ಛೈಸನವಳ । ಪುತ್ರ ಭಾವವನೈದುವಾ ॥ ೨೧ ॥
ಪುಟ್ಟಿದಾದ್ವಾದಶ ವತ್ಸರದೊಳು । ತ್ರ್ಯಷ್ಟಮಹದಾರಿದ್ರವಾ ॥
ಅಟ್ಟುಳಿಗೆ ಬಾಯ್ ಬಿಡುವ ಜನಕನ । ಕಷ್ಟಪರಿಹರಮಾಡುವಾ ॥ ೨೨ ॥
ಊರ್ವಿಯೊಳು ನಾನಿಟ್ಟುನಾಲಕು । ಉರ್ವರಿತ ಭಾಂಡಗಳನು ॥
ಗುರ್ವನುಗ್ರಹದಿಂದ ತೆಗೆದು । ಸರ್ವರಿಗೆ ಸುಖಕೊಡುವನು ॥ ೨೩ ॥
ಅವನೆ ಧನ್ಯ ( ಘನ್ನ) ನು ಎನ್ನ ಧನತೆಗ । ದವನೆ ವೆಚ್ಚಾಮಾಳ್ಪನು ॥
ಅವನೆ ಎನ್ನ ಸ್ಥಿತಿಗಳನೊಯಿದು । ದೇವನದಿಗರ್ಪಿಸುವನು ॥ ೨೪ ॥
ಎಷ್ಟು ಪೇಳಲಿ ಎನ್ನ ವಂಶದಿ । ಪುಟ್ಟಿದವರಿಗೆ ಪೇಳ್ವದು ॥
ಧಿಟ್ಟಗುರುಗಳು ಕೊಟ್ಟ ಅಂಕಿತ । ವಿಟ್ಟುಪದಗಳ ಮಾಳ್ಪದು ॥ ೨೫ ॥
ಭಕ್ತಿಯಲಿ ಇವಗ್ಯಾರು ಸರಿಯೆಂಬ । ಉಕ್ತಿಗುರುಗಳ ವಾಕ್ಯವು ॥
ಮುಕ್ತಿಸುಖ ವಿಚಿತ್ರ ಪೇಳುವೆ ವಿ । ರಕ್ತರಾಯುಕ್ತಿದ್ವಾರವು ॥ ೨೬ ॥
ಮಂದಮತಿನಾನಿವರ ಗುಣಗಳು । ಒಂದನಾದರು ಅರಿಯೆನು ॥
ಇಂದಿರೇಶನು ನುಡಿಸಿದದು ಆ । ನಂದದಲಿ ಸಂಸ್ತುಪೆನು ॥ ೨೭ ॥

ಭಾ ಎನಲು ಭಕುತಿಯನು ಪುಟ್ಟಿಸಿ । ಕಾಯಕ್ಲೇಶವಕಳವನೂ ॥
ಗಾ[ಗ]ಎನಲು ಭವದೂರ ಮಾಳ್ಪನು।ಣ್ಣಾ ಎನಲು ಮುಕ್ತಿ ಕೊಡುವನು॥೭೮॥

ಇವರ ನಾಮ ಓಂಕಾರಪೂರ್ವಕ । ಸ್ತವನ ಮಾಡಲು ಪವನನು ॥
ತ್ರಿವಿಧ ಲಿಂಗವ ವಿರಜೆಯಲಿ ಕಳೆ । ದವರ ಮುಕ್ತರೊಳಿಡುವನು ॥ ೭೯ ॥

ಉದಯಕಾಲದಿ ಪದವ ಪಠಿಸಲು । ಮುದಡಗಾದರು ಜ್ಞಾನವ ॥
ಒದಗುವದು ಸಂದೇಹ ವಿಲ್ಲದು । ಪದುಮನಾಭನ ಕರುಣವಾ ॥ ೮೦ ॥

**ಏಕದಂತನೆ ಅಂಶದಲಿ ಭೂ** । ಲೋಕದಲಿ ಅವತರಿಸಿದಾ ॥
ತಾಕಳೇವರವ ಧರಿಸಿ ಶ್ರೀ । ಕಳತ್ರನ ತುತಿಸಿದಾ ॥ ೮೧ ॥

ಎರಡು ವಿಂಶತಿ ವರುಷಕೆ ಈ । ಪರಿಚರಿಯವ ಮಾಡಿದಾ ॥
ಪರಮ ಹರುಷದಿ ಶ್ವಾಸ ಬಂಧಿಸಿ । ಕರಣ ಮಾರ್ಗದಿ ತೆರಳಿದಾ
[ ಶಿರವ ಬೇಧಿಸಿ ತೆರಳಿದಾ ] ॥ ೮೨ ॥

ಸೃಷ್ಟಿಯೊಳು ಚಿತ್ರಭಾನು ಪುಷ್ಯ ಕೃ । ಷ್ಣಾಷ್ಟಮಿರವಿವಾರದಿ ॥
ಬಿಟ್ಟು ದೇಹವ ತಂದೆ ಗೋಪಾಲ । ವಿಟ್ಠಲನ ಪದಧ್ಯಾನದಿ ॥ ೮೩ ॥

॥ ಶ್ರೀ ಗುರುಮಧ್ವೇಶ ಶ್ರೀ ಕೃಷ್ಣಾರ್ಪಣಮಸ್ತು ॥




*

ಹರಿಃ ಓಂ

॥ ಶ್ರೀ ಲಕ್ಷ್ಮೀ ನೃಸಿಂಹಾತ್ಮಕ ಶ್ರೀ ಲಕ್ಷ್ಮೀವೆಂಕಟೇಶ ಪ್ರಸನ್ನ ॥

ಶ್ರೀಗುರು ರಾಜೋವಿಜಯತೇ



## ಶ್ರೀ ವಿಜಯದಾಸರ ಸಾಕ್ಷಾತ್ ಶಿಷ್ಯರು ೪ ಜನ-ಅಪರೋಕ್ಷ ಜ್ಞಾನಿಗಳ ಸುಳಾದಿಗಳು

# ೧. ಶ್ರೀಗೋಪಾಲ ವಿಠ್ಠಲರ ಸುಳಾದಿಗಳು

ಗೋಪಾಲ ವಿಠ್ಠಲ

**ಸುಳಾದಿ ೧.**

ಮುಕುತಿ ಯೋಗ್ಯರಾದ ಭಕ್ತರ ಸಾಧನ ವಿವರ

ರಾಗ- ಭೈರವಿ, ತಾಳ- ಧ್ರುವ

ಮುಕುತಿಯು ಬೇಕು ಎಂಬಾಸಕತಿವುಳ್ಳವರೆಲ್ಲ ।
ಯುಕುತಿಯ ಕೇಳಿ ಎನ್ನ ಶಕುತಿದ್ದಷ್ಟು ಪೇಳುವೆ ।
ಸಕಲ ಧರ್ಮವು ನೋಡಾ ಪ್ರಕಟಾಗೆ ಬಂದವೆರಡು ।
ಭಕುತಿ ಜ್ಞಾನವು ಪುಷ್ಟಿ ತಿಳಿಯಬೇಕು ।
ಸುಖತೀರ್ಥರ ಶಾಸ್ತ್ರದ ಉಕುತಿಯ ಅನುಸರಿಸಿ ।
ಕಕುಲಾತಿ ಹರಿಯಲ್ಲಿ ಮುಕುರಿ ಬಿದ್ದಿರಬೇಕು ।

ಲಕುಮಿ ಮೊದಲು ಮಾಡಿ ಪುಷ್ಕರ ಪರಿಯಂತ ।
ಭಕುತರ ತಾರತಮ್ಯ ಯುಕುತಿಯಿಂದ ಅರಿಯಬೇಕು ।
ಭಕುತರೊಳು ತನ್ನಿಂದಧಿಕರನ್ನು ಕಂಡರಲ್ಲಿ ।
ಭಕುತಿಯನಿಟ್ಟು ಅವರ ಕೃಪೆಯ ಪಡಿಯಬೇಕು ।
ಭಕುತರೊಳು ತನ್ನಿಂದ ಸುಖಿಸುತ್ತಲಿರಬೇಕು ಅ ।
ಶಕತರ ಕಂಡರೆ ಭಕುತಿ ಪುಟ್ಟುವಂತೆ ಕರುಣಾ
ಮಿಗಲಾಗಿ ಮಾಡಬೇಕು ।
ಸಕಲ ಪ್ರಾಣಿಗಳೆಲ್ಲ ಸುಖದಲ್ಲಿರಲಿ ಎಂದು ।
ವಿಕಸಿತವಾಗಿ ಮುಖ ಪ್ರಕಾಶಿಸುತ್ತಿರಬೇಕು ।
ಭಕುತರೊಳಗೆ ಸಮಾನಿಕರಲ್ಲ್ಯಾದರು ತನಗೆ ।
ಸಖತ್ವವಾಗಿ ಸತತ ಸಕಲ ಇಂದ್ರಿಯಗಳೆಲ್ಲ ।
ಪ್ರಕಟಿಸದೆ ಬಂಧಿಸಿ ಬಕನಂತೆ ಭಕುತಿಯುಕ್ಕು ।
ಯುಕುತಿಬಿಟ್ಟು ಮುಕುತಿದಾಯಕ ಚಲ್ವಗೋಪಾಲ ವಿಠಲನ್ನ ।
ನಖಸಿಖ ಪರಿಯಂತ ನಿತ್ಯ ಧ್ಯಾನವ ಮಾಡು ॥೧॥

ಮಟ್ಟತಾಳ

ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ ।
ನೇಮದಿ ಬಿಡಬೇಕು ನೇಮದಲ್ಲಿಡಬೇಕು ।
ಸ್ವಾಮಿಯ ಬಿಟ್ಟು ಅನ್ಯ ವಿಷಯ ಕೇಳುವಂಥ ।
ಕಾಮವನು ಹಿಡಿದು ಖಂಡ್ರಿಸಲಿಬೇಕು ।
ಸ್ವಾಮಿಯ ದ್ರೋಹಿಗಳ ಕಂಡರವರ ಮೇಲೆ ।
ಕ್ಷೇಮ ಚಿಂತಿಸದಲ್ಲಿ ಕ್ರೋಧ ಮಾಡಲಿಬೇಕು ।
ಸ್ವಾಮಿ ವಿಷಯದಲ್ಲಿ ತತ್ವ ಧರ್ಮದ ಮಾರ್ಗ ।
ನೇಮವು ಬಲ್ಲಾತನಾಗಿದ್ದರು ಸರಿಯೆ ।
ತಾಮಸ ಜೀವನು ಬಂದು ಕೇಳಿದರೆ ।
ಪಾಮರ ಗರುವದಲೊಶ ಮಾಡಲಿಬೇಕು ।
ತಾಮಸ ಜೀವನ್ನ ತಾ ಮತ್ತೆ ಕಂಡರೆ ।
ತಮಸಿಗೆ ಹೋಗುವಂತೆ ಮೋಹ ಪುಟ್ಟಿಸಬೇಕು ।

ಸ್ವಾಮಿಯ ಧ್ಯಾನಾನಂದ ಭರಿತನಾಗಿ |
ಪಾಮರನೆದುರಿಗೆ ಮದದಿ ತಿರುಗಬೇಕು |
ಸ್ವಾಮಿ ಸರ್ವೋತ್ತಮತ್ವ ಬಿಟ್ಟು ಪೇಳುವಂಥ |
ತಾಮಸನ್ನ ಕಂಡು ಮತ್ಸರಿಸಲಿಬೇಕು |
ಸ್ವಾಮಿಯ ಸೇವೆಯು ಬೇಕು ಯೆಂಬುವಂಥ |
ಕಾಮವು ಸರ್ವದ ಕಕುಲಾತಿಯು ಬೇಕು |
ಸ್ವಾಮಿಯ ದಾಸರ ಕಂಡರಾಯಿತೆ ಇನ್ನು |
ಪ್ರೇಮದಿಂದಲಿ ಇನ್ನು ಮೋಹ ಮಾಡಲಿಬೇಕು |
ಸಾಮಜ ವರದ ಶ್ರೀ ಗೋಪಾಲ ವಿಠ್ಠಲನೆ |
ಕಾಮ ಕ್ರೋಧಂಗಳಿಗೆ ನಿಯಾಮಕನೆನಬೇಕು ||೨||

ರೂಪಕ ತಾಳ

ಆಡಲಿ ಬೇಕಿನ್ನು ಸರ್ವ ಮಾತುಗಳು |
ಆಡಿಸುವ ಬೇರೆ (ಬ್ಯಾರೆ) ಯೆಂದು ತಿಳಿಯಬೇಕು |
ನೋಡಲಿ ಬೇಕು ಎಲ್ಲ ಜೀವರು ಮಾಡುವ ಕರ್ಮ |
ಮಾಡಿಸುವ ಬೇರೆ ಯೆಂದು ತಿಳಿಯಲಿ ಬೇಕು |
ಮಾಡಬೇಕು ಜಡಗಳಿಂದ ಹರಿಯ ಪೂಜೆ |
ನೋಡಿ ಚಿಂತಿಸಬೇಕು ಅಲ್ಲಿಪ್ಪ ಮೂರ್ತಿಗಳ |
ಆಡಿಸುವ ಮೂರ್ತಿ ಬೇಡಿಸುವ ಮೂರ್ತಿ |
ನೋಡಿಸುವ ಮೂರ್ತಿ ಕೂಡಿ ಚಿಂತಿಸಿ ತನ್ನ |
ಗೂಡಿನಲ್ಲಿ ನಿತ್ಯ ಮಾಡಬೇಕು ಧ್ಯಾನ |
ರೂಢಿಗೊಡೆಯ ರಂಗ ಗೋಪಾಲ ವಿಠ್ಠಲಂಗೆ |
ಈಡಿಲ್ಲವೆಂದು ಕೂಗ್ಯಾಡಬೇಕು ನಿತ್ಯ ||೩||

ಝಂಪೆತಾಳ

ಆರು ಪರಿಯ ಭೇದ ತಾರತಮ್ಯವಾಗಿ ತಿಳಿದಿರಲಿಬೇಕು |
ಕಾರಣ ಅಕಾರಣರ ದಾರಿ ವಿಚಾರಿಸುತ್ತ |
ಇರಲಿಬೇಕು ಸೋಪಾನಗಳನು ನಾರಾಯಣಗೆ |
ನಾರಾಯಣನ ರಾಣಿಗೆ ಭೇದ ನಾರಾಯಣಗೆ ಜೀವನಕೆ ಭೇದ|

ಆರಾರು ಜೀವರು ತಮ್ಮೊಳು ತಮಗೆ ಭೇದ ।
ನಾರಾಯಣಗೆ ಜಡಕೆ ನಿತ್ಯ ಭೇದ ।
ಕಾರಣವಾಗಿಪ್ಪ ಜೀವ ಜಡಕೆ ಭೇದ ।
ಆರಿಸುವದು ಜಡಜಡಕೆ ಭೇದ ।
ನಾರಿಯರಿಗೆ ಭೇದ ಪುರುಷರಿಗೆ ಭೇದ ।
ನಾರಾಯಣ ಲಕುಮಿ ಇವರೆ ಎಂದು ।
ತಾರತಮ್ಯವು ನಿತ್ಯ ಮೂರೆರಡು ಭೇದ ನಿತ್ಯ ।
ಸಾರು ತಿಪ್ಪವು ಶ್ರುತಿ ಸ್ಮೃತಿ ವಾಕ್ಯವು ।
ಆರು ಮೂರು ಭಕುತಿಯಿಂದ ಶ್ರೀ ಹರಿಯನ್ನು ।
ಆರಾಧಿಸುವಂಥ ಭಕುತರಿಗೆ ।
ತೋರುತಿಪ್ಪ ತನ್ನ ಮೂರ್ತಿಯಿಷ್ಟರೊಳಗೆ ।
ಸೂರಿಯ ನಂದದಿ ಪೊಳೆವುತಲಿ ।
ಕಾರುಣ್ಯಸಾಗರ ಗೋಪಾಲ ವಿಠ್ಠಲ ।
ಈ ರೀತಿ ಆರಿದವಗೆ ಪೊರೆಯದೆ ಬಿಡನು ॥೪॥

### ತ್ರಿಪುಡಿ ತಾಳ

ಭಕುತಿಯು ಮಾಡಿರಿ ಸಕಲವೆಲ್ಲವು ಬಿಟ್ಟು ।
ಮುಕುತಿಗೆ ಸೋಪಾನ ಇದೆ ಇದೆ ಎಂದು ।
ಭಕುತರೆಂಬವರಿಗೆ ಲಕುಮಿಪತಿಯೆ ಭಾಗ್ಯ ।
ಲಕುಮಿ ಪತಿಗೆ ಭಕುತರೇವೆ ಭಾಗ್ಯ ।
ಲಕುಮಿಯನು ಬಿಡುವೆ ಭಕುತರ ಬಿಡೆನೆಂದು ।
ಉಕುತಿ ಶ್ರೀಹರಿ ತಾನು ಶಪಥ ಮಾಡಿಹನು ।
ಸಕಲ ಸತಿಸುತರು ಮಿಕಿಲಾದ ದ್ರವ್ಯ ದೇಹ ।
ಸಕಲವೆಲ್ಲವು ನೋಡಾ ಸ್ನೇಹವು ಅಧಿಕವಾಗಿ ।
ಮುಕುರಾತಿ ಹರಿಯಲ್ಲಿ ಕಕುಲಾತಿ ಇರಬೇಕು ।
ಸಕಲ ಗುಣಪೂರ್ಣ ಗೋಪಾಲ ವಿಠ್ಠಲ ।
ಮಕ್ಕಳ ತಾಯಿ ಆಲಿಸಿದಂತಾಲಿಸುವಾ ॥೫॥

ಅಟ್ಟತಾಳ

ನಿನಗೆ ನಿಜವಸ್ತು ನೀನು ಅರಿತು ನೋಡು ।
ನಿನಗೆ ಆವದು ಎಂದು ಖೂನವು ಪಿಡಿಯಿನ್ನು ।
ವನಿತೆ ಸುತರು ನಿನ್ನ ಅನುವಿಗೆ ಬಾರರು ।
ತನು ಸಂಬಂಧಿಗರೆಲ್ಲ ತತ್ಕಾಲದವರೆಲ್ಲ ।
ನೆನಸದಿರಿವರಿಂದ ನಿನಗೆ ಆಗುವ ಸುಖ ।
ಕನಸಿನೊಳಾದರು ಕಾಣದಿರೆಲೊ ನೀನು ।
ನಿನಗೆ ಸುಖ ದುಃಖ ಕ್ಷಣ ಕ್ಷಣಕೆ ಇನ್ನು ।
ಅನುದಿನ ಬಿಡದಲೆ ಉಣಿಸುವ ಬೇರುಂಟು ।
ಘನ ಮಹಿಮ ನಮ್ಮ ಗೋಪಾಲ ವಿಠ್ಠಲನ್ನ ।
ನೆನವಂಗೆ ಈ ಸುಖ ಅನುಭವವಾಗುವದು ॥೬॥

ಆದಿತಾಳ

ಸುಲಭವಾಹುದು ಅಗಾಧವಾಹುದು ।
ಗೆಲವು ಆಹುದು ತಿಳಿಯಬಾರದು ।
ನಿಲಕ ಆಹುದು ನೆಲಿಯ ದೋರದು ।
ಒಲಿದ ಬಳಿಕ ಚಲಿಸನೆಂದಿಗು ।
ತಲೆಯು ಕೆಳಗೆ ಮಾಡಿ ಹಲುಬಿದರು ।
ಹಲವು ಕಾಲ ನೆಲೆಯು ದೋರನವಗೆ ತನ್ನ ತಳ ।
ತಿಳಿಯದಂಥ ಮನುಜನಿಗೆ ।
ಅಳಿದು ವಿಷಯಂಗಳನು ಎಲ್ಲ ।
ಮಲವು ತೊಳಿದು ತಿಳಿದು ತನ್ನ ।
ತನ್ನ ಕೆಳಗೆ ಬಿದ್ದೆನೆಂದ ಬಳಿಕ ।
ತಿಳಿಯಗೊಟ್ಟು ಪೊರೆವ ನಾಗ ।
ಕಳೆವ ನಾನಾ ದೋಷರಾಶಿ ।
ಗಳನು ಯೆಲ್ಲನೊ ಕತ್ತಲೆಲ್ಲ ।
ಬೆಳಕು ಮಾಡುವನು ತನ್ನ ।
ಎಳಿಯ ಕರುಣ ನೋಟದಿಂದ ।

ಸುಲಭ ಭಕ್ತವತ್ಸಲ ಗೋ ।
ಪಾಲ ವಿಠ್ಠಲರೇಯ ತನ್ನ ।
ತಿಳಿದ ಹಾಗೆಲ್ಲ ನಾವು ।
ತಿಳಿಸಿ ಕೊಡುವ ತನ್ನನೂ ॥೭॥

ಜತೆ

ನಂಬಿರೊ ನಂಬಿರೊ ಇಂಬು ಬೇಕೆಂಬೊರು ।
ಡಂಭವ ಬಿಟ್ಟು ಗೋಪಾಲ ವಿಠ್ಠಲನ್ನ ॥೮॥

## ಸುಳಾದಿ ೨.

ದೇಹದಂಡನೆ ವ್ಯರ್ಥ, ದೇಹದಲ್ಲಿಪ್ಪ ಕ್ಷೇತ್ರಜ್ಞನನ್ನ ತಿಳಿ. ಜ್ಞಾನದಿಂದ, ಗುರುಗತನಾದ ಬಿಂಬನ ಉಪಾಸನಾ ಮಾಡು ಅಧ್ಯಾತ್ಮ ಅಧಿಷ್ಠಾನ ವಿವರ

ರಾಗ ಭೈರವಿ ಧ್ರುವತಾಳ

ವೃತ್ತಿಕೆ ದೇಹವಿನ್ನು ವ್ಯರ್ಥ ಯಾತಕೆ ದಣಿಪೆ ।
ಆರ್ತುಕೊ ಇದೆ ವ್ಯಾಳ್ಯ ಗುರ್ತ ಕೊಡದೆ ।
ತೀರ್ಥ ಪಾದನ ಪಾದ ಕೀರ್ತನೆ ಮಾಡು ಮನದಿ ।
ಸ್ಫೂರ್ತಿಯು ಮಾಡುವನು ಸಾರ್ಥಕಾಗಿ ।
ರಾತ್ರಿ ಹಗಲು ನೀ ಶ್ರೀಮೂರ್ತಿಯು ಮರಿಯದೆ ।
ಗಾತ್ರ ಉಪಯೋಗದ ಚಿಂತೆ ತೊರೆದು ।
ಅರ್ಥ ನಿನಗೆ ಮುಖ್ಯ ಆರ್ತುಕೊ ಆವದೆಂದು ।
ವಾರ್ತಿಯು ಬಿಡು ಪೊಲಿಸಬೇಡ ಅನ್ಯ ।
ಶ್ರೋತ್ರ ಜಿಹ್ವೆ ನಾಶಿಕ ಮಾತ್ರದಿ ವಿಷಯದಲ್ಲಿ
ಆರ್ತು ಸ್ವಾದಿಸು ಎಲ್ಲ ಶ್ರೀಹರಿಯೆ ಮರತರೆ(ರ್ತ)ಮರಿಯದೆ
ಆರ್ತರೆ ಅರಿದರೆಂಬೊ ಸ್ಫೂರ್ತಿ ಬರುತಿರಲೊ ।
ಆರ್ತನಾಗಿ ಶಾಸ್ತ್ರ ಪ್ರತಿಪಾದ್ಯವೆ ಮೂರುತಿ ತಿಳಿದು ಮನದಿ ।
ಸ್ತೋತ್ರವ ಮಾಡು ನೀ ಸತ್ಪಾತ್ರದಿಂದ ।
ಯಾತ್ರಿಯು ತೀರ್ಥಗಳು ಎಲ್ಲ ಇದರೊಳುಂಟು ।

ಮರ್ತು ಬಿಡಬೇಡವೊ ಶ್ರೀ ಹರಿಯು ।
ಕ್ಷೇತ್ರಜ್ಞ ನಮ್ಮ ಸಿರಿ ಗೋಪಾಲ ವಿಠ್ಠಲ ।
ಮೂರ್ತಿಮಂತ ನಾಗಿಪ್ಪನೊ ಎಲ್ಲ ಸ್ಥಳದಿ ॥೧॥

ಮಟ್ಟತಾಳ

ಧನವು ಧನವು ಎನ್ನು ಧನದೊಳಗಿಪ್ಪನ್ನ ।
ನೆನೆದು ತೆಗೆದುಕೋ ಶೋಧನವು ಮಾಡಿನೋಡಿ ।
ತನುವಿಗೆ ಕೆಲಸ ವೀಡು ತನು ಬಂಧಿಗಳ ನೋಡು ।
ಎಣಿಕೆ ತಟ್ಟು ಭಾಗವನುಮಾಡು ನಾಲ್ಕು ।
ಎಣಿಸುತ ಅಲ್ಲಲ್ಲಿ ಇರು ಎಲ್ಲ ಸ್ಥಳದಿ ।
ಗುಣ ಹರಿಯದೆಂದು ಗುಪ್ತನಾಗಿಯಿನ್ನು ।
ಅಣು ಘನ ಪರಿಪೂರ್ಣ ಗೋಪಾಲ ವಿಠ್ಠಲ ।
ಅನಿಮಿತ್ಯ ಬಂಧೆಂಬೋ (ಬಂಧುಎಂಬೋ) ಗುಣವುಳ್ಳವನಾಗೊ ॥೨॥

ರೂಪಕ ತಾಳ

ಒಂದು ಅರ್ಥವು ನಿನಗೆ ದೊರಕಿದರಾಯಿತೆ ।
ಚಂದಾದಿ ಚಿಂತಿಸು ಅನಂತ ಪರಿಯಲ್ಲಿ ।
ಒಂದು ಭಾಗ ದೇವ ಸಮುದಾಯಕ್ಕೆ ಕೊಡು ।
ಒಂದು ಭಾಗ ಪಿತರುಗಳಿಗೆ ಯಿನ್ನುಮಾಡು ।
ಒಂದು ಭಾಗ ಪರಿವಾರ ಬಂಧುಗಳಿಗೆ ।
ಚಂದಾದಿ ಕೊಟ್ಟು ಆನಂದವವುಣುಕಂಡ್ಯಾ ।
ನಂದ ಗೋಪಿಯು ಕಂದ ಗೋಪಾಲ ವಿಠ್ಠಲನ್ನ ।
ಚಂದಾದಿ ನಿನ್ನಮನ ಮಂದಿರದೊಳು ತಿಳಿ ॥೩॥

ಝಂಪೆ ತಾಳ

ಜ್ಞಾನವೆ ಮುಖ್ಯ ಸಾಧನ ನಿನಗೆ ನೋಡು ।
ಏನು ಧನದಿಂದಾಗೆ ಕರ್ಮ ಆದರೊಳುಗುಂಟು ।
ಪ್ರಾಣ ಹಿಂಸ ರಹಿತ ಕರ್ಮಮಾಡು ನಿತ್ಯ ।
ಶ್ರೀನಿವಾಸ ಆದಕೆ ಮೆಚ್ಚುವನು ।

ಜ್ಞಾನಮಯ ಕಾಯ ಗೋಪಾಲ ವಿಠ್ಠಲರೇಯ ।
ಕಾಣಿಸುವ ನಿನಗೆ ಕರುಣವು ಮಾಡಿನಿರುತಾ ||೪||

ತ್ರಿವಿಡಿ ತಾಳ.

ತನುವು ಮಂಟಪ ಮಾಡು ಮನವೇ ಪೀಠವಯಿಡು ।
ನೆನೆದು ಕುಳ್ಳಿಸು ನಿನ್ನವೊಳಗಿದ್ದ ಮೂರ್ತಿಯಾ ।
ಧ್ಯಾನ ಆವಾಹನಾದಿಗಳ ನೆನೆದು ಅಲ್ಲೆಯಿಪ್ಪ ।
ಅಣು ಮಹಾ ಮೂರ್ತಿಗೆ ಅಭಿಷೇಕವ ಮಾಡಿಸು ।
ಗುಣ ಮೂರರೊಳಗಿದ್ದಾ ಯೆನಿತಾವಾಹಿಸಿ ನೆನೆದು ।
ಜಿನಸು ವಸನಾಭರಣಾ ಧೂಪ ದೀಪವುಮಾಡು ।
ನೆನಸು ಗಂಧ ಪುಷ್ಪವನು ಮಿಕ್ಕಾದದ್ದೆಲ್ಲ ।
ಗುಣ ಮೂರರಿಂದಾಗ ಪದಾರ್ಥಗಳನ್ನೆಲ್ಲ ।
ನಿನಗೆ ಒಂದು ಉದಕ ಮಾತ್ರ ದೊರಕಿದರೆ ।
ಇನಿತುಪರಿಯು ಎಲ್ಲ ಆದರಿಂದ ಚಿಂತಿಸೋ ।
ಧನದ ಪೂಜಿಗೆ ಅತ್ಯಾಯಾಸ ಮಾಡಲಿಬೇಡ ।
ಘನ ದೈವಾ ನಮ್ಮ ಗೋಪಾಲ ವಿಠ್ಠಲರೇಯ ।
ನಿನಗೆಷ್ಟು ಪರಿಯಲ್ಲಿ ಪೊರೆವ ಆವನ ತಿಳಿ ||೫||

ಅಟ್ಟತಾಳ

ಒಳಗೆ ಬಂದರೆ ನಿನ್ನ ವೊಳಗೆ ಇರುತಲಿಪ್ಪೆ (ಪ್ಪ) ।
ಸುಳುವು (ತಿಪ್ಪೆ) ತಿಪ್ಪ ನಿನ್ನ ಸುತ್ತು ಬಿಡದೆ ಇನ್ನು ।
ಹಲವು ಪರಿ ಕರ್ಮ ನಿನಗಾಗಿ ಮಾಡುತ ।
ಚಲುವ ನಿರ್ಲಿಪ್ತನ ತಿಳಿಯದೆ ಕೆಡುವಿಯಾಕೆ ।
ಸುಲಭವಾಗಿ ಕರತಳದೊಳಗಿದ್ದಂಥ ।
ಫಲವ ನೀ ಕಾಣದೆ ಬಲು ದಣಿವದೇನೊ ।
ಗೆಳೆಯನಾಗಿ ಪಾರ್ಥಗೊಲಿದ ನಮ್ಮ ಸ್ವಾಮಿ ।
ಚಲುವ ಗೋಪಾಲ ವಿಠ್ಠಲರೇಯನ ನೀನು ।
ಘಳಿಗೆ ಮರಿಯಬೇಡ ಬಲುಪ್ರಿಯಾ ಬಲುಪ್ರಿಯಾ ||೬||

ಆದಿತಾಳ

ಈವಾಗ ಆವಾಗ ಎಂಬೋದು ಬೇಡವೊ ।
ದೇವನ ಸ್ಮರಣೆಯು ಭಾವದೆ ಕಾಲವು ।
ಪಾವನ ಜಲದಲ್ಲಿ ಆವಾಯು ವಿಪ್ರರು ।
ಆವ ಸೂರ್ಯ ಅಧಿಷ್ಠಾನದಲಿದ್ದು ।
ದೇವನ ಸ್ಮರಣೆಯು ಬರುತ ಇರಲಿ ಕಂಡ್ಯಾ ।
ಕಾವನು ಬಿಡದಿನ್ನು ಗೋಪಾಲ ವಿಠ್ಠಲಾ ॥೭॥

ಜತೆ

ಗ್ರಹಮೇಧಿ ಮಾಡಿ ನಿನ್ನ ಗೃಹದೊಳು ಯಿಪ್ಪಂಥ ।
ಶ್ರೀಹರಿ ಗೋಪಾಲ ವಿಠ್ಠಲನ್ನ ನೆನಿಕಂಡ್ಯಾ ॥೮॥

## ಸುಳಾದಿ ೩

ಪ್ರಮೇಯ ಮುಕ್ತರ ಪ್ರಕರಣ, ಮುಕ್ತಾವಸ್ಥಾ ವಿವರ-ಪೂರ್ವಕ, ಸಂತತ ಮುಕ್ತರು ಹರಿಯಾಧೀನ ಮುಕ್ತಿಯಲ್ಲಿ. ಶ್ರೀಹರಿಯ ಅಷ್ಟಕತ್ರೃತ ವರ್ಣನೆ.

ರಾಗ ಭೈರವಿ ತಾಳ ದಿತ

ಮುಕ್ತರ ಸ್ಥಿತಿಯನು ವರ್ನಿಸಿದೆ ಪೇಳುವದಕ್ಕೆ ।
ಶಕ್ತರಾರಿನ್ನು ಎನ್ನ ಶಕ್ತ್ಯಾನುಸಾರ ಪೇಳ್ವೆ ।
ಉತ್ತಮ ಮಧ್ಯಮ ಅಧಮ ತರತಮ್ಯದಿಂದ ಜೀವ ।
ಮುಕ್ತಿಲಿ ಇಪ್ಪವರು ಬಿಡದೆಂದೆಂದು ।
ಮತ್ತೆ ತ್ರಿಗುಣಾತ್ಮಕ ಲಿಂಗ ರಹಿತರಾಗಿ ।
ಚಿತ್ಸ್ವರೂಪದಿಂದಲೇ ಸಂಚರಿಸುತ್ತ ।
ಮತ್ತೆ ಸಾಕಾರ ಸರ್ವ ಅಂಗಾಭರಣ ಭೂಷಿತ ।
ವಸ್ತ್ರ ಮಾಲಿಕೆ ಗಂಧ ಪರಿಮಳದಿ ।
ಎತ್ತಿ ಪಿಡಿದ ಶಂಖ ಚಕ್ರ ಆಯುಧ ಧರಿಸಿ ।
ನಿತ್ಯ ಆನಂದ ಆನಂದ ಅನುಭೋಗಿಸುತ್ತ ।
ಅತ್ಯಂತಾ ಭೇದ ಎಲ್ಲ ಸ್ವರೂಪ ಭೂತವಿನ್ನು ।
ಎತ್ತಲಾದರ ನಿತ್ಯವೆಂಬುದಿಲ್ಲ ।

ನಿತ್ಯ ಸೇವಿಯುತ್ತ ಮಗಿಂದುದುತ್ತಮರಾದವರಿಗೆ।
ಛತ್ರ ಚಾಮರ ನಾನಾ ಮುಂತಾದದು ।
ಭೃತ್ಯ ಕೆಲಸಕಿನ್ನು ಕೈಜೋಡಿಸಿಕೊಂಡು ।
ಜತ್ತಾಗಿ ನಿಂತಿಪ್ಪರು ಕೆಡಕ್ಕಿಲ್ಲದೆ ।
ಚಿತ್ತ ಶುದ್ಧರೆ ಎಲ್ಲ ಚಂಚಲೀರಿಷಗಳಿಲ್ಲ ।
ಮತ್ತೆ ಕವಲ ಬುದ್ಧಿ ಮಾಂಧ್ಯವಿಲ್ಲಾ ।
ಪತ್ನಿವುಳ್ಳವರು ಕೆಲರು ಪತ್ನಿರಹಿತರು ಕೆಲರು ।
ಅತ್ಯಂತ ಸುಖಿಗಳನ್ಯ್ಯಪೇಕ್ಷವಿಲ್ಲ ।
ಪತ್ನಿವುಳ್ಳವರು ತಮ್ಮ ಸತಿಯರಿಂದಲಿ ಕ್ರೀಡಿ ।
ನಿತ್ಯ ಮಾಳ್ಪರು ನೀತವಾಗಿ ಇನ್ನು ।
ಪತ್ನಿ ರಹಿತರಾದವರು ಅತ್ಯಂತ ಸ್ವರೂಪ ।
ಚಿತ್ತಿನಿಂದೆವೇ ತಜ್ಯನ್ಯಸುಖ ।
ಮತ್ತೆ ಆಗದು ರೇತೋಸ್ಖಲನೆ ।
ಮುಕ್ತರಿಗೆ ಅಭಿವ್ಯಕ್ತ ತಜ್ಯನ್ಯಾನಂದಾ ।
ಚಿತ್ತಿನೊಳಗೆ ನಿತ್ಯವೊದಗಿಸುವಾನಂದ ಗೋಪಾಲ ವಿಠ್ಠಲ ।
ಉತ್ತಮ ಪುರುಷ ಬಿಂಬನಾಗಿ ಯಿದ್ದು ॥೧॥

ಮಟ್ಟತಾಳ

ಉದರ ಹಸಿವಿಯಿಲ್ಲ ಮೆದುವರು ಫಲಗಳು ।
ಒದಗೊದು ತಜ್ಯನ್ಯ ಆನಂದವು ವಳಗೆ ।
ಮಧು ಫಲಾದಿಗಳು ಮೆದುವ ಮನಸಿಲ್ಲಾ ।
ಮುದದಿ ತಾವಿದ್ದಲ್ಲಿ ಬಂದು ಸೇರುವವು ।
ಉದಕ ಕುಡುವರಿಗೆ ಒಂದೆಂಡೆನಸಲ್ಲಾ ।
ಕ್ಷುಧೆ ಪಿಪಾಸ ನಿದ್ರಿ ದಶ ಇಂದ್ರಿಯಗಳಿಂದ ।
ಒದಗಿ ಬಾಹುವ ಸುಖ ಯೆಲ್ಲ ಆನಂದವು ।
ವಿಧಿಸೆ ಜೀವನಿಗೆ ಸ್ವರೂಪದೊಳಗೆ ।
ಒದಗಿ ಇಪ್ಪುವದೆಲ್ಲ ಎಲ್ಲ ಅಭೇದವಾಗಿ ।
ವಿಧಿಸಿ ಹೀಗೆ ಒಂದೇ ಜೀವಕ್ಕೆ ಎನಸಲ್ಲಾ ।

ವಿಧಿ ಆದಿ ತೃಣ ಅಂತ್ಯ ಎಲ್ಲ ಜೀವನಕೆ ಹೀಗೆ ।
ಮದನ ನಯ್ಯಾ ಚಲುವ ಗೋಪಾಲ ವಿಠ್ಠಲ ।
ಒವಗಿಸುವಾನಂದ ತರತಮ್ಯದಿಂದ ॥೩॥

ರೂಪಕ ತಾಳ

ಚಿತ್ತಿನಿಂದಲಿ ಹೀಗೆ ಭೋಗ ಬಡುವರು ಸತತ ।
ಮತ್ತೆ ಶುದ್ಧ ಸತ್ವದಿಂದ ಕ್ರೀಡೆ ।
ನಿತ್ಯ ತಮ್ಮಿಂದಲಿ ಭಿನ್ನವಾದದರಿಂದ ।
ಅರ್ಥಿ ಬಡುವರು ನಾನಾ ರೂಪವ ತೆಗೆದುಕೊಂಡು ।
ಹಸ್ತಿ ತುರಗ ನಾನಾ ವಸ್ತ್ರವಾಹನಗಳು ।
ಮತ್ತೆ ಆಗುವರು ಮಹಾಮಹಾ ವಿಚಿತ್ರ ।
ವರ್ತಮಾನವು ಕೇಳಿ ಇದರೊಳಗಿನ್ನು ವಿ ।
ಚಿತ್ರ ವಾಗುವದುಂಟು ಜೀವರ ಸ್ಥಿತಿಗಳು ।
ಉತ್ತಮ ಸಾಂಶ ಜೀವರುಯಿಲ್ಲಿ ।
ಮತ್ತೇಕ ಕಾಲದಿ ತಮ್ಮ ಅಂಶಗಳಿಂದ ।
ಸತ್ವ ಪ್ರಕೃತಿಗೊಂಡು ಚಿತ್ತಬಂದಂತೆ ತಾವು ।
ಹತ್ತೆಂಟು ಇಪ್ಪತ್ತು ನೂರಾರು ಸಾಸಿರ ।
ಮತ್ತೆ ನಾನಾ ರೂಪ ಛತ್ರಚಾ್ಯಮರ ಸರ್ವ ।
ವಸ್ತ್ರಾಭರಣ ಫಲ ಪುಷ್ಪ ಗಂಧ ಮಾಲೆ ।
ಹತ್ತೆಂಟು ಪರಿ ವಾಹನರಾಗಿ ತಮಗಿಂದಲು ।
ಉತ್ತಮರಾದವರ ಹೊತ್ತಾಡುವರು ಕ್ರೀಡಾ ।
ಮತ್ತೆ ಈಪರಿ ಹರಿಯು ಸೇವಿಸಿ ಪುನಹ ।
ಮತ್ತೆ ತಮ್ಮ ಸ್ವರೂಪ ಚಿತ್ತಿನೊಳು ಕೂಡುವರು ।
ಆತ್ಯಾಯಾಸವು ಸಲ್ಲ ಎಲ್ಲ ಸುಲಭವು ನೋಡಿ ।
ಬತ್ತಿ ಗಿಂದಲಿ ಜ್ಯೋತಿ ಬತ್ತಿಗ್ಹಚ್ಚಿದಂತೆ ।
ವ್ಯಕ್ತವೆಲ್ಲವು ಅವರ ಸಾಧನಗಳು ।
ಇತ್ತ ಕೇಳಿನ್ನು ನಿರಂಶ ಜೀವರ ಗತಿಯು ।
ಪ್ರತ್ಯೇಕ ಒಂದೊಂದು ಅಂಶದಿಂದ ।

ಸತ್ವ ಪ್ರಕೃತಿಗೊಂಡು ಒಂದೊಂದೆ ರೂಪದಿ ।
ಮತ್ತೆ ಸೇವಿಸುವರು ಸಿರಿ ಹರಿಯು ।
ಎತ್ತ ನೋಡಿದರು ಬಲು ರೂಪವಾಗುವ ಶಕ್ತಿ ।
ಮತ್ತಿಲ್ಲಾ ನಿರಂಶ ಜೀವರಿಗೆ ।
ಮುಕ್ತರೊಳಗಿರುತಿಪ್ಪ ಗೋಪಾಲ ವಿಠ್ಠಲನ್ನ ।
ಭಕ್ತರಾನಂದ ಬಲ್ಲವರು ಯಾರೊ ॥೩॥

ಝಂಪೆತಾಳ

ಜ್ಞಾನ ಭಕ್ತಿ ವಿರಕ್ತಿ ಮೂರು ಮುಕುತರರಿಗೆ ।
ನ್ಯೂನವಿಲ್ಲವು ನೋಡು ಒಂದು ಕ್ಷಣವಾದರೂ ।
ಜ್ಞಾನಕೆ ಎಲ್ಲವು ಕಾಣಿಸುವದೆ ಫಲವು ।
ಏನು ಬೇಡಿದ್ದು ಒದಗುವದೆ ಭಕ್ತಿಯು ಫಲ ।
ಕಾಣದೆ ಆಧಿಕ್ಯ ಇಚ್ಛೈಸದಿಪ್ಪುವದೆ ।
ತಾನು ವಿರಕ್ತಿ ಎಂಬುದೆ ಇದುವೇ ।
ಆನಂದ ಮಯವೆಲ್ಲ ಆಡುವ ವಚನಗಳು ।
ಯೋನಿ ಎಂಭತ್ತುನಾಲ್ಕು ಲಕ್ಷ ಜೀವರಗಳು ।
ಗೇಣು ಮೊಳವುಯಿಲ್ಲ ಎಲ್ಲ ಅಣುರೂಪವು ।
ತಾನು ಕಿರಿದು ಯೆಂಬ ಕ್ಲೇಶವಿಲ್ಲಾ ।
ನಾನಾ ಜೀವರು ಪರಸ್ಪರ ವಿರೋಧಿಗಳಿಲ್ಲಾ ।
ಆನಿ ಸಿಂಹಗೆ ಅಲ್ಲಿ ವೈರವಿಲ್ಲಾ ।
ಹೇನು ವೃಶ್ಚಿಕಗಳು ಮೇಲೆ ಓಡಾಡಿದರು ।
ಆನಂದ ಮಯವೆಲ್ಲ ಅವುಗಳಿನ್ನು ।
ಕಾಣರೆಂಬದು ಯಿಲ್ಲ ಹರಿಯನ್ನು ಸರ್ವರು ।
ತಾನು ಸಂದಳಿ ಎಂಬ ಚಿಂತೆಯಿಲ್ಲಾ ।
ಕಾಣಿಸುವ ಹರಿ ತಾನು ಅವರ ಯೋಗ್ಯತೆ ।
ಯಾನುಸಾರವಾಗಿ ತೋರುತಲಿಯಿನ್ನು ।
ಧ್ಯಾನವೆಂಬದು ಇಲ್ಲ ತಮ್ಮ ಸ್ವರೂಪದಿ ।
ಧೇನಿಪರು ತಮಗಿಂತ ಉತ್ತಮರ ಅನೇಕವಾಗಿ ।

ಧ್ಯಾನವ ಮಾಳ್ಪವರು ಹರಿಯು ।
ತಾನು ದಿನ ದಿನ ನೂತನನಾಗಿ ಇನ್ನು ।
ಆನಂದಮಯ ಮೂರ್ತಿ ಗೋಪಾಲ ವಿಠ್ಠಲನ್ನ ।
ಕಾಣುವರು ಪ್ರತಿಕ್ಷಣದಿ ಕೆಡಕ್ಕಿಲ್ಲದೆ ॥೪॥

ತ್ರಿವಿಡಿ ತಾಳ

ಸೃಷ್ಟ್ಯಾದಿ ಅಷ್ಟ ಕರ್ತೃತ್ವವು ಜೀವನ ಸ್ವರೂಪಕ್ಕೆ ।
ಘಟ್ಟಿಯಾಗಿಪ್ಪವು ಎಂದೆಂದಿಗು ಬಿಡದೆ ।
ಪುಷ್ಟಿಸಿಕೊಡುವ ಪ್ರತಿಕ್ಷಣಕೆ ಆನಂದ ಹರಿ ।
ಸ್ಪಷ್ಟದಿ ಅಭಿವ್ಯಕ್ತಿ ಸೃಷ್ಟಿ ನೋಡು ।
ಬಿಟ್ಟು ಜೀವ ನಾನೆಂದು ಪೋಗದೆ ಇಪ್ಪುವದೆ ।
ಘಟ್ಯಾಗಿ ಇದೆ ಪಾಲಣೆಯೊ ।
ನಷ್ಟ ಮಾಡಿ ಜಗವ ಮುಕ್ತ ಅಮುಕ್ತ ಜೀವ ।
ಪೊಟ್ಟೆಯೊಳಗೆ ಇಪ್ಪುವದೆ ಲಯವು ನೋಡು ।
ಅಷ್ಟು ಕಾರ್ಯಕ್ಕೆ ಜೀವವೆ ದುಡಿವದಿನ್ನು ।
ಘಟ್ಟಿಯಾಗಿದೆ ಹರಿ ನೇಮನ ಕಾಣೊ ।
ನಷ್ಟವಾಗದೆ ಜೀವ ನಿಜವಾಗಿ ಇಪ್ಪುವದೆ ।
ಘಟ್ಯಾಗಿ ಜ್ಞಾನ ಹರಿ ಕೊಟ್ಟದೆನ್ನಿ ।
ಸ್ಪಷ್ಟಾದಿ ತನಗಿಂದ ಉತ್ತಮರ ಗುಣಗಳು ।
ಘಟ್ಯಾಗಿ ತಿಳಿಯದೆ ಅಜ್ಞಾನವೊ ।
ಕಟ್ಟುಮಾಡಿ ಅಧಿಕ ಆನಂದ ಕೊಡದಿಚ್ಛಾ ।
ವರ್ಕ ಮಾಡಿಪ್ಪುದೆ ಬಂಧ ಕಾಣೊ ।
ಪುಟ್ಟಲೀ ಸೊ(ಸ)ದೆ ಪುನಃ ಸಂಸಾರ ಬಿಡಿಸಿದೆ ।
ಘಟ್ಟಿಯಾಗಿ ಇದೆ ಮೋಕ್ಷ ಕಾಣೊ ।
ಅಷ್ಟ ಕರ್ತೃತ್ವವು ಸ್ವರೂಪದೊಳಗಾಗಿ ।
ಘಟ್ಯಾಗಿ ನಿಂತು ಮಾಡಿಸಲು ।
ಇಷ್ಟರಿಂದ ಜೀವ. ಮುಕ್ತರುಗಳಾನಂದಾ ।
ಸ್ಪಷ್ಟದಿ ಹರಿಯು ಅಭಿವ್ಯಕ್ತಿ ಮಾಳ್ಪಾ ।

ಇಷ್ಟ ಮೂರುತಿ ರಂಗ ಗೋಪಾಲ ವಿಠ್ಠಲನು ।
ಘಟ್ಟಿಯಾಗಿ ಮುಕ್ತರೊಡನಾಡುವಾ ॥೫॥

ಅಟ್ಟತಾಳ

ವರಣಾಶ್ರಮಗಳುಂಟು ವರಣ ಬಾಹ್ಯರು ಉಂಟು ।
ಪರಿ ಪರಿ ಸ್ಥಾವರ ಜೀವರುಗಳು ಉಂಟು ।
ಇರುವರು ಇದ್ದಲ್ಲೆ ಸ್ಥಾವರ ಜೀವರು ।
ತಿರಿಗಿ ಆಡುವರಲ್ಲ ಇದ್ದಲ್ಲೆ ಆನಂದ ।
ಹರುಷ ಬಡುವರಿನ್ನು ಸ್ವರೂಪದಿಂದಲೀ ।
ತರತಮ ಜೀವರು ಅಲ್ಲಿ ಉಂಟು ।
ಪರಿ ಪರಿ ಶುದ್ಧ ಸತ್ವಗಳನೆ ಕೊಂಡು ।
ಮರಗಳು ನಾನಾಕುಲತೆಯು ರೂಪವಾಗಿ ।
ಪರಿವಾರ ಸುರರಿಂದ ಬೆರೆದು ಹರಿಯು ತಾನು ।
ಹೊರಗೆ ಪೊರಟು ತಾನು ಸಂಚರಿಸುತ್ತ ।
ಸಿರಿಯಿಂದ ಸುರರುಗಳಿಂದಾಡೊ ಪರಿ ಕ್ರೀಡಿಗನುಕೂಲ ।
ಪರಿ ಪರಿ ಪುಷ್ಪ ಫಲವು ರಸ ಗಂಧವು ।
ಹರಿಯು ಕ್ರೀಡಿಗೆ ಅನುಕೂಲರಾಗಿ ನಾನಾ ಕುಸುಮ ।
ಸಿರಿ ತುಲಸಿ ಮುಂತಾದ ಮರಗಳು ಆಗಿ ।
ಹರಿಯು ಸೇವಿಸಿ ಪುನಃ ಇರುವರು ಇದ್ದಲ್ಲೆ ।
ಸಿರಿ ಶಂಖ ಚಕ್ರಧಾರಿಗಳು ಮತ್ತಿವರಲ್ಲ ।
ಮರಗಳು ನಿರುತ ತದಾಕಾರರು ।
ಎರಡು ವಿಧರು ಉಂಟು ಸಾಂಶ ನಿರಂಶ ।
ಇರುತಿಪ್ಪರು ಸ್ಥಾವರರು ಜೀವಿಗಳಿನ್ನು ।
ಹರಿಯು ಸೇವಿಸುತಲಿ ತಮ್ಮ ಶಕ್ತ್ಯಾನುಸಾರ ।
ಪರಿಪರಿ ಆನಂದ ಅನುಭೋಗಿಸುತಲಿ ।
ಸಿರಿ ಮಹಾರಾಜ ಗೋಪಾಲ ವಿಠ್ಠಲರೀಯ ।
ಪರಿ ಪರಿ ರೂಪನಾಗ್ಯೆವರ ಪಾಲಿಸುವ ॥೬॥

ಆದಿತಾಳ

ಬಿಂಬನಾಗಿ ಪ್ರತಿಬಿಂಬಗಳಂತೆ ರೂಪ ।
ಎಂಭತ್ತುನಾಲ್ಕುಲಕ್ಷ ಯೋನಿ ಜೀವರಾಶಿ(ಗಳಿ)ಗೆ ।
ಬಿಂಬನಾಗಿ ಶ್ರಿಹರಿ ಇಂಬಾಗಿ ತದಾಕಾರ ।
ಬಿಂಬನಾಗಿ ವೊಳಗೆ ಯಿದ್ದು ಅವರು ಏನು ।
ಹಂಬಲಿಪರಾನಂದ ಸಂಭ್ರಮ (ದೊ) ಒದಗಿಪ್ಪ ।
ಗಂಭೀರ ಗುಣಭಕ್ತರ ಹೊರವ ಕು ।
ಟುಂಬಿ ಎನಿಪಾನಂದಾಂಬುಧಿಯು ।
ಡಂಬ ಜೀವರ ಗತಿ ಸಂಭ್ರಮವು ।
ಉಂಬೊ ಅಪಾರ ಸುಖಜ್ಞಾನ ಮುಕ್ತರಿಗುಂಟು ।
ಬಿಂಬನಾದ ಶ್ರೀಹರಿ ತಿಳಿಸಿಕೊಡುವ ।
ಕಾಂಬೋದೆ ಮಾತ್ರ ಭೋಗವೆಂಬನುಭಾವರಲ್ಲಾ ।
ತುಂಬಿದಾನಂದಾ ಪೂರ್ಣರಿವರು ನೋಡು ।
ಹೊಂಬಣ್ಣಾ ವಸ್ತ್ರ ಕಂಬಳಿ ಕಟ್ಟಿದ ಕ್ಷಣ ।
ಕಂಬಳಿಯು ಬಣ್ಣಾವು ಹೊಂಬಣ್ಣಾ ಸೇರುವದೆ ।
ಕುಂಭಿಣಿಯಲ್ಲಿ ವೃತ್ತಿ ಸುಖ ದುಃಖ ಅ ।
ನುಭವ ವೆಂಬ ಜ್ಞಾನವುಂಟು ಭೋಗವು ಯಿಲ್ಲ ।
ಬಿಂಬ ಹರಿಗಿಲ್ಲ ಎಂಬೊದೇನಾಶ್ಚರ್ಯ ।
ಸಂಭ್ರಮ ಪದ ಮೂರ್ತಿ ಗೋಪಾಲ ವಿಠ್ಠಲ ।
ಅಂಬುಜನಾಭನ ಪಾದಕ್ಕೆ ನಮೊ ನಮೊ ॥೭॥

ಜತೆ

ಚಿತ್ರವಿಚಿತ್ರ ಮುಕ್ತರ (ಕ್ರೀಡಿಸನು ಬಲು)ಕ್ರೀಡ್ಯಾವನು ಬಲ್ಲ ।
ಮುಕ್ತಿದಾಯಕ ಗೋಪಾಲ ವಿಠ್ಠಲ ಬಲ್ಲ ॥೮॥

## ಸುಳಾದಿ ೪.

ಶ್ರೀ ಹರಿಯು ಅಷ್ಟ ಕರ್ತೃತ್ವ, ಪ್ರಳಯಾದಿ ಸೃಷ್ಟಿ, ಸ್ಥಿತಿ, ಸಂಕ್ಷಿಪ್ತವರ್ಣನಾ, ಸೃಷ್ಟಿಗೆ ತಂದ ಮೇಲೆ ಜೀವರಿಗೆ ವಿಷಯಾದಿಗಳಲ್ಲಿ ಸಹ ಹರಿಯುಚಿಂತನಾ ಕೊಡಲು ಪ್ರಾರ್ಥನೆ.

ರಾಗ ಭೈರವಿ, ಧ್ರುವತಾಳ

ಎಲೊ ಎಲೊ ಸರ್ವಜ್ಞ ಸರ್ವೋತ್ತಮ ಶ್ರೀಹರಿ ।
ಚಲುವ ಸಾಕಾರ ಸಚ್ಚಿದಾನಂದ ಸಗುಣ ರಹಿತಾ ।
ಇಳಿಯು ನೆಲ್ಲವ ನುಂಗಿ ಇನಿತು ಈಡಾದೆ ನಿನ್ನ ।
ಬಲು ಉದರದಿ ಎಲ್ಲರನು ಅಡಿಗಿಸಿ ।
ಲಲನೆ ಲಕುಮಿ ತಾನೆ ಮೂರು ಬಗೆಯು ಆಗಿ ।
ಚಲುವಾ ನಿನ್ನ ಸೇವಿಪಳಾಕಾಲದಿ ।
ಪ್ರಳಯೋದಕ ಸಿರಿ ವಟಪೆಲೆಯು ಭೂರೂಪಳಾಗಿ ।
ಬೆಳಕು ತೋರದೆ ದುರ್ಗೆ ತಮರೂಪಳಾಗೆ ಇನ್ನು ।
ಸುಲಭ ರೂಪದಿ ನೀನು ಎಲಿಯು ವಟದ ಮೇಲೆ ।
ಮಲಗಿ ಬಾಲಕನಾಗಿ ಮತ್ತೆ ಎಲ್ಲವ ಬಿಟ್ಟು ।
ಕಿಲಿ ಕಿಲಿ ನಗುತಲಿ ಕಾಲ್ಬೆರಳು ಬಾಯೊಳಗಿಟ್ಟು ।
ನಲಿದು ಚಪ್ಪರಿಸುವೆ ತಿಳಿದು ತಿಳಿದು ಇನ್ನು ।
ಕಲಕಾಲವು ಭಕ್ತರು ಮಾಡಿದ ಸತ್ಕರ್ಮಂಗಳು ।
ಹಲವು ಪರಿ ಭಕ್ತಿಯು ಮಾಡಿ ಅರ್ಪಿಸಿದದೆಲ್ಲ ।
ಕೊಳುತ ಅವರ ರುಚಿಗಳನು ಎಲ್ಲವು ನೋಡಿ ।
ನಿಲಿಸುವಿ ಅವರವರ ನಿಜಪದವಿಯಲ್ಲಿ ಸ್ವಾಮಿ ।
ಭಳಿರೆ ಭಕ್ತವತ್ಸಲ ಗೋಪಾಲ ವಿಠ್ಠಲ ।
ನಿಲಿಸಿ ಎನ್ನಲ್ಲಿ ನಿರುತ ಲೀಲೆ ತೋರಿಸು ಧೊರಿಯೆ ॥೧॥

ಮಟ್ಟತಾಳ

ಏಕಾಂತದಿ ಯಿಪ್ಪ ಲೋಕನೆಲ್ಲವ ನಿನ್ನ ।
ಆ ಕುಕ್ಷಿಯೋಳಿಟ್ಟು ಸಾಕುತ್ತ ಸರ್ವರ ।
ನೀ ಕರುಣಿಸಿ ಮುಖ್ಯ ಪ್ರಾಣನೊಬ್ಬಗಿನ್ನು ।

ಬೇಕಾದ ಎಚ್ಚರಿಕೆನಿತ್ತು ಸಕಲ ಜೀವ ।
ಜೋಕೆ ಮಾಡುವಿ ಇನ್ನು ಸ್ಪೃಜ್ಞ ಅಸ್ಪೃಜ್ಞರನು ।
ಸಾಕಲ್ಯ ಗುಣಪೂರ್ಣ ಗೋಪಾಲ ವಿಠ್ಠಲ ।
ನೀ ಕರುಣಿಸುವೆಮ್ಮ ನಿರ್ವ್ಯಾಜದಿ ನಿರುತ ॥೨॥

ರೂಪಕ ತಾಳ

ಅನಾದಿ ಜೀವಲಿಂಗ ಬದ್ಧರಗಳ ನುಂಗಿ ।
ತಾನಿಪ್ಪೆಪಾರು (ಪ್ಪಪಾರ) ಸುಪ್ತಾವಸ್ಥಿ ಯೋಪಾದಿ ।
ಜ್ಞಾನ ಅಜ್ಞಾನವು ಎರಡನ್ನು ಅರಿಯದೆ ।
ಜ್ಞಾನ ಸ್ವರೂಪವೆ ಆಚ್ಛಾದವಾಗಿರೆ ।
ಪ್ರಾಣಿಗಳನು ನಿನ್ನ ದೃಷ್ಟಿಯಿಂದಲಿ ।
ನೀ ನೆಚ್ಚಿಸಿನ್ನು ಉದ್ಧಾರ ಮಾಡುವೆನೆಂದು ।
ನಾನು ನನ್ನದು ಎಂಬೊ ಅಹಂಮತಿಯನೆ ಕೊಟ್ಟು ।
ನಾನಾ ಯೋನಿಗಳಲ್ಲಿ ತಂದ್ಹಾಕುವೆ ।
ಮಾನವ ಜನುಮದಿ ಮಹಾಸಾಧನವು ತೋರಿ ।
ಪ್ರಾಣಿಯು ನಿನ್ನ ತಿಳವಂತೆ ಮಾಳ್ಪೆ ।
ಜಾಣ ಚನ್ನಿಗರಾಯ ಗೋಪಾಲ ವಿಠ್ಠಲ ।
ಕಾಣಿಸದನಕ ಕಾಣರು ನಿನ್ನ ॥೩॥

ಝಂಪೆತಾಳ

ಅನಂತ ಜನುಮದಲ್ಲಿ ಅನಂತ ಕಲ್ಪದಲ್ಲಿ ।
ಇನ್ನು ಮಾಡಿದೆನಯ್ಯಾ ನಿನ್ನ ಪ್ರೇರಣೆಯಿಂದ ।
ಕಿನ್ನು ಮಾಡುವನಾಗಿ ಮತ್ತೆ ಇಪ್ಪೆವೆನಯ್ಯಾ ।
ಅನಂತ ಪಾಪಕ್ಕೆ ಅನಂತ ನಿನ್ನ ನಾಮಾ ।
ಎನ್ನ ಬಳಿಯಲ್ಲಿ ಈಗ ವಾಸವಾಗೆವೊ ಅಯ್ಯಾ ।
ಎನ್ನ ದೋಷಗಳೆಂಬೊ ಇನ್ನು ಅರಿಸಿ ಅರಿಸಿ ।
ನಿನ್ನದೊಂದು ಸಾಕು ನಾಮ ಅದರನು ಕೆಡಿಸು ।
ಇನ್ನು ಅವಕೆ ಅಂಜೆ ಈ ಶಕುತಿ ಎನಗಿರಲಿ ।

ಘನ್ನ ದಯಾನಿಧೆ ಗೋಪಾಲ ವಿಠ್ಠಲ ।
ನಿನ್ನ ಬಿಡೆ ನಿನ್ನ ಬಿಡೆ ನಿತ್ಯ ತೃಪ್ತ ॥೬॥

ತ್ರಿವಿಡಿತಾಳ

ಒಂದು ಶ್ರವಣದಿಂದ ಆವದಾಗುವ ದೆನಗೆ ।
ಛಂದದಿ ಪಾಲಿಸು ಆ ಶ್ರವಣವ ।
ಒಂದೆ ಸ್ನಾನದಲಿಂದ ಆವದು ಧರಿಪದು ।
ಛಂದದಿ ಮಾಡಿಸೊ ಅದೆ ಸ್ನಾನವ ।
ಒಂದೆ ಮಂತ್ರದಲಿಂದ ಆವ ಸಿದ್ಧಿಯೊ ಎನಗೆ ।
ಛಂದದಿಂದಲಿ ಪಾಲಿಸೊ ಅದೆ ಮಂತ್ರವ್ನೊ ।
ಒಂದೆ ಗುರುವಿನಿಂದ ಆವ ಉದ್ಧಾರವ್ನೋ ।
ತಂದು ತೋರಿಸು ಮತ್ತೆ ಅದೆಗುರುವಿನ ।
ಒಂದೆ ನಿನ ಮೂರುತಿ ಆವದೆನಗೆ ತಿಳಿಯೆ ।
ತಂದು ತೋರಿಸು ಎನ್ನ ಅನುಭವಕ್ಕೆ ।
ಒಂದೆ ಆರ್ಚನೆಯಿಂದ ಆವದೊ ನಿನ್ನ ಪೂಜೆ ।
ಛಂದದಿ ತೋರಿಸೊ ಅದೆ ಬಗಿಯ ।
ಒಂದೆ ಪರಿಯು ಮನಕೆ ಆವದು ನಿಲ್ಲೊದೊ ।
ಛಂದದಿ ಪಾಲಿಸು ಅದೆ ಜ್ಞಾನವು ।
ಸಂದೇಹದ ಕರ್ಮ ಸಾಸಿರ ಕೊಟ್ಟರು ।
ಮಂದ ಬುದ್ಧಿ ಯುವಕಡೆ ಬೀಳಿಸೋ ।
ಒಂದು ಕರ್ಮವು ಮಾಡೆ ಮತ್ತಾನಂತ ಕರ್ಮ ।
ಬಂದು ಒದಗುತಿವೆ ಸಂದೇಹ ಗೊಳಿಸುತ ।
ಬಂಧಕವೆ ಮತ್ತೆ ಬಲಿಕೆ ಮಾಡುತಲಿವೆ ।
ಎಂದಿಗೂ ಕಡೆ ಹಾಯುವದು ಅರಿಯದೆ ।
ಮಂದರಧರ ನಮ್ಮ ಗೋಪಾಲ ವಿಠ್ಠಲ ।
ತಂದೆ ಸಲಹೊ ನಿನ್ನ ಸಂದರುಶನ ಕೊಟ್ಟು ॥ ೩ ॥

ಅಟ್ಟತಾಳ

ಎಲ್ಲಿ ತನಕ ವಿಷಯ ವೆಗ್ಗಳಿಸುವಿ ಇನ್ನು ।
ಅಲ್ಲಿ ತನಕ ಮನ ನಿಲ್ಲದು ನಿನ್ನಲ್ಲಿ ।

ಜ್ವಲ್ಲಿಸುತ ಯಿಪ್ಪ ಬಲ್ಲಿದಗ್ನಿಯು ಮೇಲೆ ।
ಹುಲ್ಲು ಹಾಕುತ ಬರೆ ನಿಲ್ಲುವದೆ ತಾಪ ।
ಎಲ್ಲಿ ಕಾಲವು ವಿಷಯದಲ್ಲಿ ಮನಸು ಪೋಗಿ ।
ಸಲ್ಲಿ ಸಲ್ಲಿಸಿ ಸಾಕು ಎಂಬುವಂಥ ।
ಅಲಂ ಬುದ್ಧಿಯು ಇನ್ನು ಯುಳ್ಕಿಸಿತು ಇಲ್ಲಾ ।
ಕೊಲ್ಲುತದೆ ಕೊಂಡು ಪೈದು ವಿಷಯಂಗಳು ।
ಗೆಲ್ಲಿ ತನಕ ಹೀಗೆ ಎಳೆದರೆ ನಾನಿನ್ನ ।
ಗೆಲ್ಲುವ ತೆರನೆಂತು ಬಲ್ಲಿದ ಎಲೆದೇವ ।
ನಿಲ್ಲಿಸಿ ಈ ಪಾಪ ಸಂಚಿತ ಕೆಡಿಸಿನ್ನು ।
ಮೆಲ್ಲನೆ ಬಾಹೊ ಆಗಾಮಿಯಾ ಪ್ರಾಪ್ತಿನ್ನು ।
ಸಲ್ಲಿಸು ಪ್ರಾರಬ್ಧ ಇಲ್ಲಿಗೆ ಪಂತೆಂದು ।
ಎಲ್ಲ ಮನಕೆ ಆಯು ಅರಪಿಸಿ ಚನ್ನಾಗಿ ।
ನಿಲ್ಲದೆ ನೀ ಸ್ಮರಣೆಗೆ ಬರುತಲಿದ್ದು ।
ನಲ್ಲಾ ನೀ ಕಾಯ ಬೇಕಲ್ಲದೆ ಎನ್ನನು ।
ಮಲ್ಲ ಮರ್ದನ ಗೋಪಾಲ ವಿಠ್ಠಲ ।
ಕೊಲ್ಲೊ ಕಾಯೊ ಬಿಡೊ ನಿನ್ನ ನಂಬಿದೆನೊ ॥ ೬ ॥

ಆದಿತಾಳ

ವಿಷಯ ಬಂಧುಗಳಿನಗೆ ವಿಷಯರು ಆದರೆ ।
ವಶವಾಗಿ (ಗುಪಿ ಎಂತೊ) ವೆಂತೊ ಮುಖ್ಯ ವಿಷಯ ನೀನು ।
ಕೆಸರೊಳಗೆ ಬಿದ್ದು ಕೆಸರಿಂದ ತೊಳೆದರೆ ।
ಹಸನಾಗೊದೆಂತೊ ಅವು ಕುಶಲ ಮೂರ್ತಿ ।
ಕಸುಗಾಯಿ ಎಂಬುವಂಥ ಬಿಸಿಲಿಲಿ ಬಡಿಸಿಕೊಂಡು ।
ರಸ ಪಕ್ವ ವಾಗಿನ್ನು ದ್ರವಿಸುತ ಶ್ರೀಹರಿಯೆ ।
ವಿಷಯ ವಾಗಲೊ ಮುಖ್ಯ ನಿನಗೆ ನಿರುತ ।
ವಸುದೇವ ಸುತ ನಮ್ಮ ಗೋಪಾಲ ವಿಠ್ಠಲ ।
ಅಸಮ ದೈವವೆ ನಿನಗೆ ನಮೋ ನಮೋ ನಮೊ ಎಂಬೆ ॥ ೭ ॥

ಜತೆ

ಎಲ್ಲಿತನಕ ಮನಸು ಎರಗುತಿಪ್ಪದು ಎನಗೆ ।
ಅಲ್ಲಲ್ಲಿ ವಿಷಯನಾಗೊ ಗೋಪಾಲ ವಿಠ್ಠಲಾ ॥ ೮ ॥

## ಸುಳಾದಿ ೫

ಪ್ರಮೇಯ. ಸತ್ಯಾದಿ ಅಷ್ಟಪುಷ್ಪಗಳು ಜೀವನ ಧರ್ಮಗಳಲ್ಲ ಜೀವರನ್ನು ಎಂದೆಂದಿಗೂ ಆಗಲದಿಪ್ಪ ಶ್ರೀಹರಿಯ ಗುಣಕ್ರೀಯಾಗಳನ್ನು ತಿಳಿದು ಅಷ್ಟಪುಷ್ಪಗಳನ್ನು ಹರಿಗೆ ಅರ್ಪಿಸು—

ರಾಗನಾಟಿ ಧ್ರುವತಾಳ

ಭಾವಾಷ್ಟ ಪುಷ್ಪಂಗಳು ದೇವಗೆ ಅರ್ಪಿಸುವ ।
ಭಾವನೆಯನು ಕೇಳಿ ಭಕ್ತಜನರು ।
ಜೀವರಿಂದ ಈ ಧರ್ಮ ಎಂದಿಗೆ ಆದದಲ್ಲ ।
ದೇವನಲ್ಲೆವೇ ಇಂಥ ಗುಣಗಳುಂಟು ।
ಭಾವಾಷ್ಟಾ ಪುಷ್ಪಗುಣವ ದೇವನಲ್ಲಿಪ್ಪವೆಂದು ।
ಜೀವ ತಿಳಿದರೆ ಉದ್ಧರ ಉಂಟು ।
ಜೀವರೆಂಬುವರು ಕರ್ಮಬದ್ಧರು ಇನ್ನು ।
ದೇವನು ಕರ್ಮಣ ತ್ರಿಗುಣರಹಿತ ।
ಜೀವರಿಂದಲಿ ಅತ್ಯಂತ ಭೇದ ಸಾಕಾರಹರಿ ।
ಯಾವತ್ತರಾದಿ ವ್ಯಾಪ್ತ ಎಣೆಯಿಲ್ಲದ ಮೂರ್ತಿ ।
ಪಾವನಾಂಗ ಪಾಪನಾಶ ನಿತ್ಯತೃಪ್ತಾ ।
ಜೀವಜಡದಿ ಎಂದಿಗೆ ಆಗಲದೆ ಇಪ್ಪ ।
ಈ ವಿಧ ಶಕುತಿಯು ಈಶ ಗೋಪಾಲ ವಿಠಲ ।
ದೇವರಿಗುಂಟೆಂದು ಅರಿವ ಜೀವನೆ ಬಲುಧನ್ಯ ॥೧॥

ಮಟ್ಟತಾಳ

ಬೊಮ್ಮಾಂಡವ ಸೃಜಿಸಿ ಬೊಮ್ಮನೊಳಗೆ ನಿಂತು ।
ಸುಮ್ಮನಸರನೆಲ್ಲ ನಿರ್ಮಿಸಿ ಪಾಲಿಸಿ ।

ಬೊಮ್ಮಾಂಡ ಆಳಿಸಿ ಬೊಮ್ಮನ ಕೊಲ್ಲುವ ।
ಬೊಮ್ಮ ತಿದೋಷವು ಎಮ್ಮಯ್ಯಗಿಲ್ಲ ।
ಹಮ್ಮಿನ ಕಂಸ ಡಿಬಿಕರ ।
ನಿರ್ಮಳದಿ ಕೊಂದ ನಿರ್ಮತ್ಸರದಿಂದ ।
ಧರ್ಮಾದಿ ಪುಷ್ಟ ನಮ್ಮಯ್ಯಗೆಂದೂ ।
ಘಮ್ಮನೆ ಅರ್ಪಿಸು ಘನಭಕುತಿಯಲ್ಲಿ ।
ರಮ್ಮೆ ರಮಣನೆ ಗೋಪಾಲ ವಿಠ್ಠಲ ಪರ ।
ಬೊಮ್ಮ ಒಲಿವ ಹೀಗೆ ಧರ್ಮ ಅರಿದವರಿಗೆ ॥೨॥

ರೂಪಕತಾಳ

ಎರಡೆಂಟು ಸಾಸಿರ ಅರಸಿಯರಕೂಡ ।
ಪರಿಪರಿ ಕ್ರೀಡೆಯು ಮಾಡಿನೋಡಿ ಚಲ್ವ ।
ತರುಳತನದಿ ಹನ್ನೆರಡು ಸಾಸಿರ ಮಂದಿ ।
ತರುಳರಪಡೆದು ತಾ ಪರಿಕ್ಷಿತನಿಗೆ ಇನ್ನು ।
ಪರಿಣಾಮ ಮಾಡಿದವರ ಬ್ರಹ್ಮಚಾರಿ ಎಂದು ।
ಸರಿ ಹೋಗುವದೆ ಇಂಥ ಚರಿಯು ಮನುಜರಿಂದ ।
ಹರಿಗೆ ಇಂದ್ರಿಯ ನಿಗ್ರಹ ಸ್ಥಿರ ಪುಷ್ಯವೆಂತೆಂದು ।
ಅರಿದು ಅರ್ಪಿಸುವ ಜೀವರಿಗೆ ಲೇಪಿಸದು ।
ಪರಮ ದಯಾಳು ಗೋಪಾಲ ವಿಠಲ ತನ್ನ ।
ಅರಿದಂತೆ ಫಲವೀವಾ ಶರಣ ಜನಕೆ ॥೩॥

ಝಂಪಿ ತಾಳ

ಭೂತ ದಯಾ ಪುಷ್ಪ ಭೂತೇಶಗಲ್ಲದೆ ।
ಭೂತಾಧಾರದಿ ಇಪ್ಪ ಭೂತರಿಗೆ ಥರವೆ ।
ನೀತಿಲಿ ತ್ರಿವಿಧ ಜೀವರಿಗೆ ತಾ ತಪ್ಪದೆ ।
ಪ್ರೀತಿಲಿ ಉಣಿಸಿ ಅಜಾತನಾಗಿ ಇಪ್ಪ ।
ಮಾತು ಮಾತಿಗೆ ಅನಂತ ಕರ್ಮಂಗಳು ।
ಜ್ಞಾತವಿಲ್ಲದೆ ಮಾಳ್ಪ ಜೀವರಿಗೆ ಇದು ಸಲ್ಲ ।
ಭೂತರುಗಳ ಗತಿ ತಾ ತಿಳಿದು ತ್ರಿವಿಧರಿಗೆ ।

ನೋತ ಫಲ ವಿತ್ತು ಸಮನಾಗಿ ಇಪ್ಪವನೆಂದು ।
ಈ ತೆರದಿ ತಿಳಿದು ಸೀ ಭೂತ ದಯಾ ಪುಷ್ಪ ।
ಪ್ರೀತಿಯಲಿ ಅರ್ಪಿಸನ್ಯಥಾ ಚಿಂತಿಸದೆ ।
ದಾತ ನಮ್ಮ ಸ್ವಾಮಿ ಗೋಪಾಲ ವಿಠ್ಠಲ ।
ಸೋತೆನೆಂದ ಬಳಿಕ ಸಲಹದೆ ಬಿಡನು ॥೪॥

ತ್ರಿವಿಡಿ ತಾಳ

ಸರ್ವದಾ ಕ್ಷಮೆ ಪುಷ್ಪ ಸರ್ವೇಶಗಲ್ಲದೆ ।
ಗರ್ವ ತತ್ವಾದಿ ಬದ್ಧ ಜೀವರಿಗೆ ಸಲ್ಲ ।
ಶರ್ವಸಲ್ಯಾದ್ಯರು ಸಹಿಸಿಲ್ಲ ಈ ಕರ್ವ ।
ಪೂರ್ವದ ಆಖ್ಯಾನ ಇದಕೆ ಉಂಟು ।
ಸರ್ವ ಉತ್ತಮ ದೇವನಾರೆಂದು ಭೃಗುಮುನಿ ।
ಸರ್ವ ಪೂರ್ಣ ಹರಿಯ ಎದಿಯ ಒದ್ದ ।
ಪರ್ವತದೋಪಾದಿ ಇದ್ದ ಕಾರಣವಾಗಿ ।
ಸರ್ವೋತ್ತಮನೆಂದು ತುತಿಸಿ ನಲಿದಾ ।
ನಿರ್ವ್ಯಾಜದಿಂದಲಿ ನಿತ್ಯ ಕೋಪದಿ ಹೀನ ।
ಗರ್ವತತ್ವಾದಿ ಬದ್ಧ ಜನರಿಗೆ ಕೂಡದು ।
ಸರ್ವಾನಂದ ಪೂರ್ಣ ಗೋಪಾಲ ವಿಠಲ ।
ಸರ್ವೇಶಗೀ ಪುಷ್ಪ ಅರಿವ ಜೀವನೆ ಧನ್ಯ ॥೫॥

ಅಟ್ಟ ತಾಳ

ದಮ ಜ್ಞಾನ ಧ್ಯಾನವು ಸಮೀಚೀನ ಪುಷ್ಪವು ।
ರಮೆ ಈಶ ಗಲ್ಲದೆ ಶ್ರಮಿಸೋ ಜೀವರಿಗಿಲ್ಲ ।
ವಮನ ಕಂಡರೆ ಅಂಜೋ ಭ್ರಮಣ ಜೀವರಿಗೆ ।
ದಮ ಎಂಬ ಪುಷ್ಪವು ಎಂತು ದೊರೆಯುವದಯ್ಯ ।
ಸುಮತಿ ಜಡದಲ್ಲಿ ನಿಮಿಷ ಬಿಡದೆ ಇದ್ದ ।
ಹಸ್ಮೃತಿ ಜೀವನಿಗೆ ಜ್ಞಾನ ಪುಷ್ಪವು ಎಂತೋ ।
ಕ್ಷಣಿಸಿ ನೋಡಲು ಧ್ಯಾನ ಪುಷ್ಪವೆಂಬೊದು ಅಂತು ।
ನಿಮಿತ್ಯ ಮಾತ್ರವು ಇದು ನೀಚಜೀವರಿಗಿಲ್ಲ ।

ಸಮ್ಮತಿಸಿ ನೋಡಿವು ಸರ್ವೋತ್ತಮನಲ್ಲವೆ ।
ನಿಮಿಷಬಿಡದೆ ಯಿಪ್ಪನೆಂದು ಚಿಂತನೆಮಾಡೆ ।
ದಮ ಜ್ಞಾನ ಧ್ಯಾನವುಳ್ಳವನಾಗುವನಾಜೀವ ।
ಸುಮನಸರೊಡೆಯ ಗೋಪಾಲ ವಿಠಲನು ।
ನಮಿಸಿ ನೆಚ್ಚಿದಂಗೆ ನರಿಸುವಾನಿವರಃ ||೬||

ಆದಿತಾಳ

ಸತ್ಯವೆಂಬುವ ಪುಷ್ಪಸರ್ಪೇಶಗೆ ಇಡು ।
ಸಿತ್ಯ ಅನೃತ ನುಡಿವ ಜೀವಗೆಸಲ್ಲ ।
ಕತ್ತಲೆವೊಳಗಿದ್ದ ಮತ್ತೆ ಉದಯವೆಂಬೊ ।
ಮಿಥ್ಯವಚನವಾಡಿ ಸುತ್ತುವ ಸಂಸಾರ ।
ಮತ್ತೆ ಇವಗೀ ಪುಷ್ಪ ಎಂತು ದೊರುವದಯ್ಯಾ ।
ಸತ್ಯ ಸಂಕಲ್ಪ ನಮ್ಮ ಗೋಪಾಲ ವಿಠಲಗೆ ।
ಮತ್ತೆ ನೀ ಉಂಟೆಂದು ಮನಮುಟ್ಟಿತಿಳಿಯೋ ||೭||

ಜತೆ

ಭೇದವಿಲ್ಲದಿ ಪುಷ್ಪಇಪ್ಪವು ಹರಿಯಲ್ಲಿ ।
ಸಾಧಿಸರ್ಚಿಸು ಗೋಪಾಲ ವಿಠಲ ಪೊಲಿವಾ ||೮||

## ಸುಳಾದಿ ೬

ಶ್ರೀ ಹರಿಯ ಗುಣೋಪಸಂಹಾರ ಉಪಾಸನೆಯಿಂದ ಜೀವನು ಆಯಾ ದೋಷಗಳಿಂದ ಮುಕ್ತನಾಗುವನು. ಹರಿ ಸರ್ವೋತ್ತಮನೆಂದು ತಿಳಿದು ನಿಶ್ಚೈಸಿದ ಭಕ್ತನಿಗೆ ನಿರಯವಿಲ್ಲ ಇತ್ಯಾದಿ ಪ್ರಮೇಯ, ತ್ರಿವಿಧ ಬಿಂಬ, ವಿಚಾರ, ಮತ್ತು ಸಾಧನ ವಿಚಾರ.

ರಾಗ ಮನದಿಚ್ಚಿ ಧ್ರುವತಾಳ

ಎಲಲ್ಯಾ ದೋಷಂಗಳೆ ನಾನಿರ್ದೋಷಾನಾಶ್ರಿತನು ।
ಎಲೆಲೆ ದುರಿತವೆ ನಾನು ಬಲಪೂರ್ಣಾಶ್ರಿತನು ।
ಎಲೆಲೆ ಸುಖವೆ ನಾನು ಪೂರ್ಣಾನಂದನ ಆಳು ।
ಎಲೆಲ್ಯಾ ಅಜ್ಞಾನವೆ ನಾ ಜ್ಞಾನಪೂರ್ಣನಾಶ್ರಿತನು ।

ಎಲೆಲೆ ಕಾಮವೆ ನಾನು ಪೂರ್ಣ ಕಾಮನ ಆಳು ।
ಎಲೆಲಾ ಕ್ರೋಧವೆ ನಾನು ಅಚ್ಯುತ ಕರುಣಾಕರನಾಳು ।
ಎಲೆಲಾ ಮೋಹವೆ ನಾನು ವ್ಯಾಪ್ತ ವಿಷ್ಣುವಿನ ಆಳು ।
ಎಲೆಲಾ ಲೋಭವೆ ನಾನು ಸಾರ್ವಭೌಮನ ಆಳು ।
ಎಲೆಲಾ ಮದವೆ ನಾನು ನಿರಹಂಕಾರಿಯಾಶ್ರಿತನು ।
ಎಲೆಲಾ ಮತ್ಸರವೆ ನಾನು ಕುಟಿಲರಹಿತನ ಆಳು ।
ಎಲೆಲಾ ನಿದ್ರಿಯೆ ನಾನು ಅನಿದ್ರಿಯನಾಳು ।
ಎಲೆಲಾ ಹಸಿವೆ ತೃಷಿಗಳೆ ನಾ ನಿತ್ಯ ತೃಪ್ತನ ಆಳು ।
ಸುಳಿಯ ಬೇಡಿನ್ನು ನೀವು ಸುತ್ತಲಾದರು ಎನ್ನ ।
ಬಲವಂತನಾದ ಹರಿಯ ಬಿಂಬಾಶ್ರಿತ ।
ಸ್ಥಳ ವಿಲ್ಲಾ ನಿಮಗೆ ಸಿಲ್ಲಾ ಎನ್ನಲ್ಲಿ ನೋಡಲು ।
ತೊಲಗಿರಿ ತೊಲಗಿತ್ತೆ ಸುಳಿಯದಲೆ ।
ಮಲತ ಮಲ್ಲರ ಗಂಡ ಗೋಪಾಲ ವಿಠಲ ।
ಹಲವು ಪರಿಯಲಿ ನಮ್ಮ ಸಲಹೊದೇವಾ ।

ಮಟ್ಟತಾಳ

ಗುಣಪೂರ್ಣ ಸುಖ ಪೂರ್ಣ ಅಣುಮಹಾದೊಳು ವ್ಯಾಪ್ತ ।
ಕ್ಷಣಲವ ತೃಟಿಕಾಲ ಕೊರತಿಯಿಲ್ಲವುಕಾಣೆ ।
ಗುಣ ಬದ್ಧನು ಅಲ್ಲ ಕೇವಲ ನಿರ್ಗುಣಾ ।
ಅಣುಮಾತುರ ವನ್ನ ಭಿನ್ನ ವಿಷಯರಹಿತಾ ।
ಅನ್ಯೋನ್ಯವಾಗೆ ಜೀವಜಡದಲಿದ್ದು ।
ಇನ್ನು ಕ್ರೀಡೆಯು ಮಾಳ್ಪ ಚಿನ್ನುಮಯನಾಗಿ ।
ತನ್ನ ಆನಂದಕ್ಕೆ ಲೇಶ ಕೊರತೆಯಿಲ್ಲಾ ।
ಇನ್ನು ಜೀವರಿಗಾಗಿ ಸಕಲ ಕ್ರೀಡೆಯು ಮಾಳ್ಪಾ ।
ಪುಣ್ಯಪಾಪಗಳಿಂದ ವಿಲಕ್ಷಣನಯ್ಯಾ ।
ಇನ್ನೇ ನೊರ್ನಿಸುವೆ ಇವನ ಮಹಾಮಹಿಮೆ ।
ಅನಂತ ಗುಣಪೂರ್ಣಲಕುಮಿಗಾಗೋಚರ ।
ಎನ್ನಾಳುವ ಸ್ವಾಮಿಗೋಪಾಲ ವಿಠಲ ।
ತನ್ನ ನಂಬಿದವರ ತನ್ನ ಸದೃಶರ ಮಾಳ್ಪಾ ॥೨॥

ರೂಪಕತಾಳ

ನಿತ್ಯತ್ವ ನಿರ್ದೋಷ ನಿರ್ಗುಣ ಶ್ರೀಯುಕ್ತ ।
ಚಿತ್ತ್ವ ಭೃತ್ಯ ಭಾವವನೆ ಆನಂದ ಬಲ ।
ಸತ್ವ ಜೀವರಲ್ಲಿ ಬಿಂಬ ಸದೃಶ ಉಂಟು ।
ನಿತ್ಯ ಸಂಸಾರಿಗೆ ನಿತ್ಯತ್ವದಲ್ಲಿ ಮಾತ್ರ ।
ಮತ್ತಾವ ತಾಮಸ ಜೀವರ್ಗೆ ಸಾದೃಶ್ಯ ।
ನಿತ್ಯತ್ವ ನಿರ್ಗುಣ ಎರಡು ವಿಧ ಉಂಟು ।
ಸತ್ಯ ಜ್ಞಾನಿಗೆ ಸುಖ ಮಿಥ್ಯಾ ಜ್ಞಾನಿಗೆ ದುಃಖ ।
ವ್ಯಕ್ತಿ ಆಪುದು ಕೇವಲ ನಿರ್ಗುಣದಾಗಾ ।
ಸತ್ಯ ಸಂಕಲ್ಪ ಗೋಪಾಲ ವಿಠ್ಠಲನ್ನ ।
ಭಕ್ತರಿಗೆ ಭಯವಿಲ್ಲ ಬಲು ಆನಂದಾ ||೩||

ಝಂಪೆ ತಾಳ

ದ್ವೇಷಿ ಎಂತೆಂದು ಪಾಸನೆಯ ಮಾಳ್ಪರಿಗೆ ।
ದ್ವೇಷಿಯಾಗಿ ದುಃಖ ಉಣಿಸುವನು ।
ದ್ವೇಷರಹಿತನೆಂದುಪಾಸನೆಯ ಮಾಳ್ಪರಿಗೆ ।
ಮೀಸಲಾನಂದ ಸುಖ ಮಿಗಿಲುಣಿಸುವಾ ।
ದೋಷವಾರದು ನೋಡು ಚೇತನ ಯೋಗ್ಯತೆ ।
ನಾಶ ಮಾಡದದರ ಬೀಜ ಮೂಲಾ ।
ನಾಸಿವಿಯ ಬಿತ್ತಿನ್ನು ನಾಸಿವಿಯು ಬೆಳೆವ ಕಾ ।
ರ್ಪಾಸು ಬೆಳೆದರೆ ಇದು ದೋಷವಲ್ಲೆ ।
ವೈಷಮ್ಯ ನೈರ್ಘೃಣ್ಯ ಈಷನ್ಮಾತ್ರ ।
ದೋಷ ಚಿಂತನೆ ಜಗದೀಶಗಿಲ್ಲಾ ।
ವಾಸುದೇವ ಗೋಪಾಲ ವಿಠ್ಠಲನೆಂತು ।
ಪಾಸನೆಯ ಮಾಳ್ಪರಿಗಂತೆಂತೆ ಫಲವೀವ ||೪||

ತ್ರಿವಿಡಿ ತಾಳ

ಹರಿ ಎಂಬೊ ವನಧಿಯು ಕರುಣವೆಂಬೋ ಜಲಕ್ಕೆ ।
ಎರಡು ಧಡವು ಭಕುತಿ ವಿರುಕತಿಯನು ಮಾಡಿ ।

ವರಜ್ಞಾನವೆಂಬ ನಾವೆಯನು ಆಶ್ರೈಸಿ ।
ಪರಿಪರಿ ಗುಣವೆಂಬ ರತುನವ ಹುಡುಕುತ ।
ನಿರುತ ಅಲ್ಲಿಹ ದಿವ್ಯ ನೆರೆ ಕಥಾಮೃತ ಉಣುತ ।
ಮರೆ ಹೊಕ್ಕೀ (ಮೊರೆ)ಕ್ಕೆನ್ನಿರೋ । ಕೃಷ್ಣನೆಂಬೊ ಶರಧಿಬಿದ್ದು ।
ಬರಬೇಡಿರೆನ್ನ ಗೊಡಿವೆ ದುರಿತ ಕಾಮ ಕ್ರೋಧಗಳೆ ।
ಹರಿದು ಹೋಗುವಿ ರಿತ್ತ ಬರಲು ಯೋಗ್ಯರಲ್ಲಾ ।
ಶಿರವ ಚಂಡಾಡುವೆಮ್ಮರಸು ಕಂಡರೆ ನಿಮ್ಮ ।
ಸರಿ ಹೋದ ಸ್ಥಳಗಳಲಿ ಇರಹೋಗಿ ಇರಹೋಗಿ ।
ಸಿರಿ ಮಹಾರಾಜ ಗೋಪಾಲ ವಿಠ್ಠಲ ರೇಯನ ।
ಪರಿಚಾರಕರ ಪರಿಚಾರಕರಾಳು ನಾ ||೫||

ಅಟ್ಟ ತಾಳ

ಕೋಪಂಗಳೆನ್ನ ಸಂತಾಪ ಪಡಿಸದಿರಿ ।
ಶ್ರೀಪತಿ ಫೇಳಿ ನಾ ಕೊಲಿಯ ಕೊಲ್ಲಿಸುವೆನು ।
ಕೊಪಂಗಳ್ಯಾ ಪುಣ್ಯ ಲೋಪ ಮಾಡಿಸದಿರಿ ।
ವ್ಯಾಪಕನಾದ ವಿಷ್ಣುವಿಘೋಗಿ ಪೇಳುವೆ ।
ರೂಪಂಗಳೆ ಅನ್ಯ ರೂಪ ನೋಡಲಿ ಬೇಡಿ ।
ಆ ಪುರುಷ ಹೃಷಿಕಪಗೆ ಪೇಳುವೆ ।
ತಾಪಸ ರೊಡಿಯ ಗೋಪಾಲ ವಿಠ್ಠಲ ಎನ್ನ ।
ಕಾಪಾಡುವನು ನಿಮ್ಮ ವ್ಯಾಪಾರ ನಿಲ್ಲಿಸಿ ||೬||

ಆದಿ ತಾಳ

ಭಕುತ ಸಾರ್ಥ (ನಾರ್ತ) ಭಯ ನಿವಾ (ರಣಾ) ಣಾರ್ ।
ಮುಕುತಿ ದಾತಾ ಮುಕುಂದಾ ನಂದಾ ।
ಶಕುತಾ ವ್ಯಕುತಾ ಸಾರ ಭೋಕ್ತಾ ।
ಸುಖ ಸಮುದ್ರ ಸುರ ನದಿ ಜನಕಾ ।
ಅಕುಟಿಲ ಅಷ್ಟ (ಮುದ) ಮದ ಸಂಪನ್ನ ।
ಸ್ವಕುಲ ನಾಶಕ ಸ್ವಾರ್ಥ ರಹಿತಾ ।
ಸುಖವ ಯ ಕಾಯಾ ಸುಲಭ ದೇವಾ ।

ಸಾಕಾರ ರೂಪ ಸರ್ವಜ್ಞನೆ ।
ಪ್ರಾಕೃತ ದೂರಾ ಪರನು ಪುರುಷ ।
ನಾಕೇಶ ವಂದಿತ ಗೋಪಾಲ ವಿಠ್ಠಲ ।
ಸಾಕುವ ಸರ್ವದಾ ಸನ್ನಿಧಿಯಲಿದ್ದು ॥೭॥

ಜತೆ

ಹರಿಯು ಸರ್ವೋತ್ತಮನೆಂದು ನಿಶ್ಚಯದಿಪ್ಪ ।
ನರಗೆ ನಿರಯವಿಲ್ಲ ಗೋಪಾಲ ವಿಠ್ಠಲ ಬಲ್ಲಾ ॥೮॥

## ಸುಳಾದಿ ೭

ಶ್ರೀಹರಿ ಸರ್ವತಂತ್ರ ಸ್ವತಂತ್ರನಾದರೂ ಕರುಣಾಳು. ಹರಿಯು ಪ್ರಯೋಜನವಿಲ್ಲದೇ ಜೀವರುಗಳ ರಕ್ಷಣೆ ಭಾರಕರ್ತನು ಅನ್ಯರೊಬ್ಬರಿಲ್ಲ. ಸಕಲ ಕಾಲದಲ್ಲಿ ಅವನೆ ರಕ್ಷಕ, ಮಹಾರಾಜಾಧಿರಾಜ.

ರಾಗ ಭೈರವಿ ಧ್ರುವತಾಳ

ಅಪಕಾರ ಉಪಕಾರ ಹರಿಯೆ ನಿನ್ನಿಂದ ಲೇವೆ ।
ರಿಪು ಮಿತ್ರ ಗಳ್ವ್ಯಾಪಾರ ಹರಿಯೆ ನಿನ್ನದು ನೋಡಾ ।
ಕಪಟ ನಿಷ್ಕಪಟತ್ವ ನಿನ್ನಿಂದಲಾಗುವದು ।
ಶಪಥ ಅಶಪಥಗಳು ನಿನ್ನಾಧೀನವು ಸ್ವಾಮಿ ।
ಕ್ಷಿಪುತ ಅಕ್ಷಿಪುತಗಳು ನಿನ್ನಾಧೀನವು ನೋಡಾ ।
ಅಪರಾಧ ಸುಪರಾಧ ನಿನ್ನಾಧೀನವು ನೋಡಾ ।
ಅಪವರ್ಗ ಸುಪವರ್ಗ ನಿನ್ನಾಧೀನ ।
ಸಪುತ ದ್ವಿಲೋಕ ಸಪುತದ್ವೀಪ ನಿನ್ನಾಧೀನವು ।
ಸಪುತಾವರ್ಣವು ಉಳ್ಳ ಬೊಮ್ಮಾಂಡ ನಿನ್ನಾಧೀನ ।
ಸ್ವಪನ ಜಾಗ್ರಸುಷುಪ್ತಿವ್ಯಾಪಾರ ನಿನ್ನಾಧೀನ ।
ಸಫಲ ನಿಷ್ಫಲ ಸರ್ವಸಾಧನ ನಿನ್ನಾಧೀನ ।
ಉಪದೇಶಾನುಪದೇಶಗಳು ನಿನ್ನಾಧೀನ ।
ಗುಪುತ ವ್ಯಾಪುತ ಮೂರ್ತಿಗೋಪಾಲ ವಿಠ್ಠಲ ।
ತೃಪುತ ನಿತ್ಯ ನಿರ್ಲಿಪ್ತ ನಿರ್ದೋಷನಿಜಾನಂದ ॥೧॥

ಮಟ್ಟ ತಾಳ

ಲೋಕಾ ಲೋಕಾದಿಗಳಲ್ಲಿ ವ್ಯಾಪ್ತ ।
ಲೋಕಾಧಿಪತಿಗಳಿಗೆ ಒಡಿಯಾ ।
ಸಾಕಾರನಾಗಿ ಸಾಕುವನು ।
ಆಕಾರ ಅಂತ್ಯ ಕಂಡವರಿಲ್ಲ ।
ಜೋಕೆ ಮಾಡುವ ಗತಿಗಳ ಅರಿದು ।
ಸಾಕಾಣೆ ಇನ್ನೊಂದೊಸ್ತ ಸಾದ್ರಿಸ್ಯವ್ಹೋ ।
ಶ್ರೀ ಕರುಣಾಕರ ಗೋಪಾಲ ವಿಠ್ಠಲ ।
ಏಕನಲ್ಲದೆ ಅನ್ಯರ ನಾಕಾಣೆ ಪ್ರಭುವಿನ್ನ ॥೩॥

ರಾಗ ರೂಪಕ ತಾಳ

ಹರಿ ಅರಿವಂತೆ ಪರಿಚಾರಕ ರಾರಿವನಾವ ।
ಹರಿ ಸೇವೆ ಕೊಡಂತೂಳಿಗವಕೊಂಬನಾವ ।
ಹರಿ ತಿಳಿಸಂತೆ ತಿಳಿದು ಸಾಕುವ ನಾವ ।
ಹರಿ ನೋಡಿದಂತೆ ಪರಿವಾರ ನೋಡುವ ನಾವ ।
ಹರಿ ಆಳಿದಂತೆ ಪರಿಚಾರಿಕರಾಳುವ ನಾವ ।
ಹರಿ ಸಾರ್ವಭೌಮನು ಸುರ ಚಕ್ರವರ್ತಿನೋಡು ।
ಸಿರಿ ರಾಜಾಧಿರಾಜ ಧೊರೆ ಮಹಾರಾಜ ।
ಸಿರಿ ಅಜಭವ ವಂದ್ಯಾಗೋಪಾಲ ವಿಠ್ಠಲ ।
ಧೊರೆ ಒಬ್ಬನಲ್ಲದೆ ನರರು ಪ್ರಭುಗಳೆ ॥೪॥

ಝಂಪೆ ತಾಳ

ತನ್ನ ಯೋಗಕ್ಷೇಮವನ್ನು ಅರಿಯುದ ಪ್ರಭುವು ।
ಇನ್ನಾವ ಪರಿವಾರದಿರವನು ಬಲ್ಲನೆ ? ।
ತನ್ನಗಾಗೊ ಸುಖ ದುಃಖ ತಾನರಿಯದವ ।
ಅನ್ಯರಿಗನುಭವ ತಂದೀಯುಲಾಪನೆ ।
ಭಿನ್ನ ಕಾಮದಲ್ಲಿ ಬಯಕಿ ಉಳ್ಳವನು ।
ಚಿನ್ಮಮಯ ಹರಿಯಂತೆ ನಮ್ಮ ಪಾಲಿಸುವನೆ ।

ಅನಂತ ಗುಣ ಪೂರ್ಣ ಗೋಪಾಲ ವಿಠ್ಠಲ ।
ಇನ್ನಿಂಥ ಪ್ರಭುವಿರಲು ಅನ್ಯರ ಗೊಡವ್ಯಾಕೆ ||೪||

ತ್ರಿವಿಡಿ ತಾಳ

ಬೊಮ್ಮಾಂಡವೆ ಪುರವು ಬೊಮ್ಮಸಯ್ಯನ ಪಿತನು ।
ರಮ್ಮೆ ದೇವಿಯೆ ಮಾತಾ ಸುಮನಸರೆ ಬಂಧು ।
ಧರ್ಮಾಧರ್ಮಗಳೆಂಬ ನಿರ್ಮಳೆಂಬೆರಡು ವೃತ್ತಿ ।
ಕರ್ಮವೆಂಬ ಭೂಮಿಯಲ್ಲಿ ಬಿತ್ತಿ ।
ನಮ್ಮ ಯೋಗ್ಯತೆ ತಕ್ಕ ಸಂಬಂಧ ಫಲಗಳು ।
ಒಮ್ಮೆಗಾದರು ಕೊಡಲು ಕಡಿಮೆ ಇಲ್ಲದಂತೆ ।
ಎಮ್ಮಯ್ಯ ಸಾಕು ಸಂಬಂಧರದು ಇಲ್ಲ ।
ಹಮ್ಮು ಸಲ್ಲದು ನರನೆ ಈ ಮಹಿ ನಿನ್ನದೆ ।
ನಮ್ಮ ಸಾಕುವ ಧೊರೆ ಗೋಪಾಲ ವಿಠ್ಠಲ ।
ಆಮ್ಮಹಿಮ ನಿರಲಾಗಿ ನಿಮ್ಮ ನುತಿಸಲ್ಯಾಕೆ ||೫||

ಅಟ್ಟ ತಾಳ

ಜನನಿ ಗರ್ಭದಲಿ ತನುವು ಪೊರೆದವನಾವ ।
ಜನಕನ ಉದರದಿ ತಂದು ಇಟ್ಟವನಾವ ।
ಎನಗೆ ಶ್ರೀಹರಿಪಾದ ವನಜ ಧ್ಯಾನದ ಬಲ ।
ಇನಿತಾದರೆನ್ನಲ್ಲಿ ಅನುವಾಗಿ ಇತ್ತೆ ।
ಮನಿಗೆ ಇದ್ದಲ್ಲಿಗೆ ತನಗೆ ತಾನೆ ಸರ್ವ ।
ಘನಕಾಮ ಕನಕ ವಸನ ಮುಂತಾದವು ಎಲ್ಲ ।
ಶಣಸ್ಯಾಡಿ ಒಲ್ಲೆಂದರೆ ಬಿಡವವು ಕಾಣೋ ।
ಸನಕಾದಿಗಳ ವಂದ್ಯ ಗೋಪಾಲ ವಿಠ್ಠಲ ।
ಘನದೈವ ಎನಗಿರೆ ಮನುಜರ ಮಾತೇನು ||೬||

ಆದಿ ತಾಳ

ಹರಿಯೆ ನರಿಯದವನೆ ದಾರಿದ್ರ ।
ಹರಿಯ ನರಿದ ಬಡವ ಸಂಪನ್ನ ।

ಹರಿಯು ನೀಯ್ಯದ ವರವು ಅನಿತ್ಯ ।
ಅರಿಯ ದುಣುವನ ಸಿರಿಯು ಮಿಥ್ಯಾ ।
ಹರಿಯ ಭಜಿಸದೆ ಬದಿಕಿದ್ದೆ ವ್ಯರ್ಥ ।
ಹರಿಗೆ ತನ್ನ ಶರಣರಲ್ಲಿ ಸ್ವಾರ್ಥಾ ।
ಹರಿ ಅವತಾರ ಗೋಪಾಲ ವಿಠ್ಠಲ ।
ಧೊರೆ ಒಬ್ಬನೆ ಮನವೆರಕ ಎನಗಿನ್ನು ॥೭॥

ಜತೆ

ರಾಜಾಧಿರಾಜ ಗೋಪಾಲ ವಿಠ್ಠಲ ಮಹಾ ।
ರಾಜನಿರಲು ಅನ್ಯ ರಾಜರ ಗೊಡಿವ್ಯಾಕೆ ॥೮॥

## ಸುಳಾದಿ ೮

ಶ್ರೀಹರಿ ಸ್ವತಂತ್ರ ಕರ್ತಾ ಆತನ ಪ್ರೇರಣೆ ಇಲ್ಲದೆ ಒಂದು ಹುಲ್ಲು ಕಡ್ಡಿಯಾದರೂ ಚಲಿಸುವದಿಲ್ಲವೆಂಬ ಅನೇಕಶ್ರುತ್ಯರ್ಥ, ಜೀವರಿಗೆ ಯಾವಸ್ವತಂತ್ರವಿಲ್ಲ

ರಾಗ ಭೈರವಿ, ಧ್ರುವತಾಳ

ಸರ್ವ ಕರ್ತೃ ಶ್ರೀಹರಿ ಅಲ್ಲದಿನ್ನಿಲ್ಲವಿನ್ನು ।
ಸರ್ವ ಜಗತ್ತಿನಲ್ಲಿ ವ್ಯಾಪಿಸಿಹಾ ।
ಸರ್ವ ಜೀವರಿಗಿನ್ನು ಸಮನಾಗಿ ಇರುತಿಪ್ಪ ।
ಸರ್ವ ಪುಣ್ಯ ಪಾಪವು ಮಾಡಿಸುತ್ತ ।
ನಿರ್ವ್ಯಾಜ್ಯದಿಂದಲೆ ನಿತ್ಯ ಕರ್ಮವ ಮಾಡಿ ।
ಸರ್ವ ಜೀವರಿಗಿನ್ನು ಉಣಿಸುವನು ।
ಸರ್ವ ದೋಷ ದೂರ ಸರಿಯು ಇಲ್ಲದ ವಸ್ತಾ (ಸ್ತು) ।
ಸರ್ವಜ್ಞ ಸಗುಣ ರಹಿತ ಸರ್ವ ಶಕ್ತಾ ।
ಸರ್ವ ಗುಣಪೂರ್ಣ ಸಚ್ಚಿದಾಂದಾತ್ಮಕ ।
ಸರ್ವಾನಂದಪೂರ್ಣ ಸರ್ವೋತ್ತಮ ।
ಪೂರ್ವಿಕ ದೇವ ನಮ್ಮ ಗೋಪಾಲ ವಿಠಲ ।
ಸರ್ವಜೀವರಲ್ಲಿ ಪೋಷಿಸುವಾ ॥೧॥

ಮಟ್ಟತಾಳ

ವಿಷಯಂಗಳ ಸೃಜಿಸಿ ವಿಷಯದೊಳಗೆ ನಿಂತು ।
ವಿಷಯ ನಾಮಕನಾಗಿ ವಿಷಯ ಬಯಕೆವುಳ್ಳ ।
ವಿಷಯ ಜೀವರಿಗೆ ವಿಷಕೆ ಪ್ರೇರಣೆ ಮಾಡಿ ।
ವಿಷ ಅನುಭೋಗದ ವಿಷಯ ಮನಕೆ ತಂದು ।
ವಿಷಯ ಉಣಿಸಿ ದುರುವಿಷಯನು ತಾನಾಗಿ ।
ವಿಷಯ ಸಂಬಂಧದ ವಿಷವು ಉಣಿಸಿ ದುಃಖ ।
ವಿಷಯ ಅಂಬುಧಿಯಲ್ಲಿ ವಿಷ ಎರಡೂ ಮಾಡುವ ।
ವಿಷಯ ಬಯಕೆ ಬಿಟ್ಟ ವಿಶೇಷ ಜೀವರಿಗೆ ।
ವಿಷಯ ಉಣಿಸ ಮುಖ್ಯ ವಿಷಯನು ತಾನಾಗಿ ।
ವಿಷಯ ಸಂಬಂಧದ ವಿಷವು ಉಣಿಸನು ।
ವಿಷಯ ರಹಿತ ಸರ್ವಗೋಪಾಲ ವಿಠಲ ।
ವಿಷಯ ನಾಗುವ ತನ್ನ ವಿಷಯಕರಿಸುವಗೆ ॥೨॥

ರೂಪಕತಾಳ

ಇಂದ್ರಿಯಗಳಲಿ ನಿಂತು ಇಂದ್ರಿಯ ಮಾನಿನಿಗಳಿಗೆ ।
ಛಂದದಿ ಪ್ರೇರಿಸುವ ಒಂದೊಂದು ಕರ್ಮದಿ ।
ತಂದೀವ ತಜ್ಜ್ಯನ್ಯ ಫಲವನು ಅವರಿನ್ನು ।
ನಿಂದಿಹ ದೇಹದಿ ಉಳ್ಳ ಜೀವನಿಗೆ ।
ದ್ವಂದ್ವ ಕರ್ಮ ಅವರಿಂದಲೆ ಮಾಡಿಸಿ ।
ದ್ವಂದ್ವ ಫಲವನು ತಂದುಈವಾ ।
ದ್ವಂದ್ವ ಜೀವರಗಳ ಗತಿಯು ಅರಿತು ಇನ್ನು ।
ಸಂದೇಹವಿಲ್ಲದೆ ಈಪರಿ ಕರ್ಮವು ।
ನಿಂದಿರದೆ ಮಾಡಿಸುವ ಮಾನಿಗಳಿಂದ ।
ಗಂಧ ಇವರಿಗೆ ಇಲ್ಲ ದೋಷ ಸಂಬಂಧದ ।
ಮಂದರಧರ ಗಂತು ಮೊದಲೆ ಇಲ್ಲ ।
ಸುಂದರ ವಿಗ್ರಹ ಗೋಪಾಲ ವಿಠ್ಠಲ ।
ಬಂಧಕ ಮೋಚಕ ಶಕ್ತನಯ್ಯಾ ॥೩॥

ಝಂಪೆ ತಾಳ

ಹರಿಯ ಆಜ್ಞೆಯಿಂದ ಅಗ್ನಿ ತಾ ಜ್ವಲಿಸುತಿಹನು ।
ಹರಿಯ ಆಜ್ಞೆಯಿಂದ ತರಣಿ ತಾ ತಿರುಗುವನು ।
ಹರಿಯ ಆಜ್ಞೆಯದಿಂದ ಮರುತ ತಾ ಬೀಸುವನು ।
ಹರಿಯ ಆಜ್ಞೆಯದಿಂದ ಹರಿವವು ಸಲಿಲಗಳು ।
ಹರಿಯ ಆಜ್ಞೆಯಿಂದ ಇರುತಿಹದು ಆಕಾಶ ।
ಹರಿಯ ಆಜ್ಞೆಯಿಂದ ಧರಿಸಿಹಳೀ ಧರಣಿ ।
ಹರಿಯ ಆಜ್ಞೆಯಿಂದ ಪರಿತಪಿಸುವ ಚಂದ್ರ ।
ಹರಿಯ ಆಜ್ಞೆಯಿಂದ ಮರಬಳ್ಳಿ ಫಲಿಸುವವು ।
ಹರಿಯ ಆಜ್ಞೆಯಿಂದ ಕರೆವವು ಗೋವುಗಳು ।
ಹರಿಯ ಆಧೀನ ಇಪರವರೆಂದು ಮಿತಿಯಿಲ್ಲ ।
ಹರಿಯೆ ಸರ್ವ ವ್ಯಾಪ್ತ ಜ್ಯೇಷ್ಠಿಗೆ ನಿಯಾಮಕ ।
ಸರಿ ಇಲ್ಲದ ವಸ್ತು ಗೋಪಾಲ ವಿಠ್ಠಲ ।
ಇರುತಿಪ್ಪ ಇಷ್ಟರೊಳು ಅರಿತು ಯೋಗ್ಯತೆಯ ॥೪॥

ತ್ರಿವಿಡಿ ತಾಳ

ಭೇದವಿಲ್ಲದೆ ಇಪ್ಪ ಇಷ್ಟರೊಳಗೆ ತಾನು ।
ಭೇದವಾಗ ಕಾರ್ಯ ಮಾಡಿಸುತ ।
ಆದಿಯಲ್ಲಿ ಪೂರ್ಣ ಅಂತಿಯಲ್ಲಿ ಪೂರ್ಣ ।
ಭೇದ ಜೀವರಲ್ಲಿ ಭೇದ ಕರ್ಮ ಮಾಡಿಪ್ಪ ।
ಸಾಧು ಅಲ್ಲಿದ್ದ ಕಾರ್ಯ ಕ್ರೋಧರಲ್ಲಿ ಮಾಡಿಸಾ ।
ಕ್ರೋಧರಲ್ಲಿದ್ದ ಕಾರ್ಯ ಸಾಧು ಅಲ್ಲಿ ಮಾಡಿಸಾ ।
ಸಾಧುರೊಳಗೆ ಬೊಮ್ಮನ ಮೊದಲು ಮಾಡಿ ।
ಕ್ರೋಧರೊಳಗೆ ಇನ್ನು ಆದಿ ಕಲಿಯ ಮಾಡಿ ।
ಈ ದಾವ ತಾರತಮ್ಯವಾದ ಜೀವರುಗಳಿಗೆ ।
ಮಾಧವ ನಿತ್ಯದಿ ಸುಖ ದುಃಖ ಉಣಿಸುವ ।
ಶೋಧಿಸಿ ತಿಳಿದರೆ ಜಡಚೇತನದಿ ಭಿನ್ನ ।

ಆದಿ ಮೂರುತಿ ರಾಮ ಗೋಪಾಲ ವಿಠ್ಠಲ ।
ಆದರಿಸುವನಯ್ಯ ಆವಲ್ಲಿದ್ದರನ್ನ ॥೫॥

ತಾಳ ಅಟ್ಟ

ಕರ್ತೃ ಹರಿಯೆ ಮುಖ್ಯ ಹೊರ್ತನ್ಯೊಬ್ಬರಿಲ್ಲ ।
ಅರ್ತರೆ ಅರಿವೆವು ಮರ್ತರೆ ಮರಿವೆವು ।
ಕೀರ್ತಿಗೆ ಇವನಪಕೀರ್ತಿಗೆ ಇವನೆ ।
ಆರ್ತ ಜೀವರ ಗತಿ ಸ್ಫೂರ್ತಿಯ ಕೊಡುವನು ।
ವ್ಯರ್ಥ ಮಾಡನು ಹೀಗೆ ಅರ್ತಿವ ಮನುಜಗೆ ।
ಭರ್ತಿ ಮಾಡಿಜ್ಞಾನ ಅರ್ಥಿಯ ತೋರುವ ।
ಸರ್ತಿ ಇಲ್ಲದ ದೈವ ಗೋಪಾಲ ವಿಠ್ಠಲ ।
ಮೂರ್ತಿ ಮಂತನಾಗಿ ಇರುತಿಹ ನಮ್ಮೊಳು ॥೬॥

ಆದಿ ತಾಳ

ಮೂರು ಗುಣದೊಳಗೆ ಮೂರುತಿ ಆಗಿದ್ದು ।
ಮೂರು ಬಗೆಯ ವ್ಯಾಪಾರವ ಮಾಡುವ ।
ಮೂರು ವೆಂಬೊದೆ ಮೂಲ ಕಾರಣ ಸಂಸಾರ ।
ಮೂರು ಎಂಬೊದು ನಿತ್ಯ ಆರಿಸಿ ನೋಡಲು ।
ಕಾರಣನಾಗಿ ಹರಿಕಾರ್ಯವ ಮಾಡಿಪಾ ।
ಮೂರರಿಂದಲಿ ಭಿನ್ನ ಮೂರುತಿಯನು ನಿತ್ಯ ।
ಆರಾಧಿಸುವಗೆ ತೋರುವ ತನ್ನನು ।
ಮಾರುತ ವಂದ್ಯ ಪಾದ ಗೋಪಾಲ ವಿಠ್ಠಲ ।
ಭಾರಕರ್ತನು ಭವ ಭಾರವನಿಳಹುವ ॥೭॥

ಜತೆ

ಸ್ವಾಮಿ ರಹಿತನಾದ ಸ್ವಾಮಿ ಎನಗೆ ಸ್ವಾಮಿ ।
ಸಾಮಜ ವರದ ಗೋಪಾಲ ವಿಠ್ಠಲ ಬಂಧು ॥೮॥

## ಸುಳಾದಿ ೯

ಶ್ರೀಹರಿಯು ತ್ರಿವಿಧ ಜೀವರಲ್ಲಿಯೂ ನಿಂತು ಪ್ರೇರಕನಾಗಿ ನಾನಾ ವ್ಯಾಪಾರಗಳನ್ನು ಮಾಡಿ ಮಾಡಿಸುವದು ಶ್ರೀ ಹರಿಯಾಧೀನ, ಸಕಲ ವ್ಯಾಪಾರವೂ ನನದಲ್ಲ. ಶ್ರೀ ಹರಿಯೇ ನಿನ್ನದೆಂದು ಪ್ರಾರ್ಥಿಸು.

ರಾಗ ಶಂಕರಾಭರಣ, ಧ್ರುವತಾಳ

ಆಡಿ ಆಡಿಸುವನು ನಾಡ ಜೀವನರನ್ನು ।
ಮಾಡಿ ಮಾಡಿಸುವನು ನಾಡ ಜೀವರಕೈಯ್ಯಾ ।
ಬೇಡಿ ಬೇಡಿಸುವನು ನಾಡ ಜೀವರಕೈಯ್ಯಾ ।
ನೋಡಿ ನೋಡಿಸುವನು ನಾಡ ಜೀವರುಗಳ ।
ಓಡಿ ಓಡಿಸುವನು ನಾಡ ಜೀವರನ್ನು ।
ನೀಡಿ ನೀಡಿಸುವನು ನಾಡ ಜೀವರ ಕೈಯ್ಯಾ ।
ಕೇಡು ಲಾಭವು ಎರಡು ಕೂಡಿ ಹರಿ ಆಧೀನ ।
ಮಾಡಿಸುವ ಯೋಗ್ಯತೆ ಹಿಡಿದು ಸಾಧನವಾ ।
ರೂಢಿಯೊಳಗೆ ಇನ್ನು ಈಡಾದ ವಸ್ತುವಿಲ್ಲಾ ।
ನಾಡ ಜೀವರಿಗೀತ ನಲ್ಲದೆ ಗತಿಯಿಲ್ಲಾ ।
ಪಿಡೇಮನವೆ ನಿನ್ನನಾಡ ಯೋಚನೆಹೋಗಾ ।
ಲಾಡಿ ಹರಿಯ ಪಾದನೋಡಿ ಸುಖಿಯಾಗಿರು ।
ನಾಡದೈವರ ಗಂಡ ಗೋಪಾಲ ವಿಠ್ಠಲನ್ನ ।
ಹಾಡಿ ಪಾಡಿ ಕೊಂಡಾಡಿ ಬೇಡಿಕೊ ಸದ್ಗತಿಯ ।

ಮಟ್ಟತಾಳ

ನನ್ನದೆಂಬದರೊಳು ನಿನ್ನದೆ ಹರಿಯುನ್ನು ।
ಉಣ್ಣೊ ಊಟವು ಎಲ್ಲ ನಿನ್ನದೆ ಹರಿಯುನ್ನು ।
ಚಿನ್ನ ರೌಪ್ಯಗಳು ಬಣ್ಣಬಿಳಿದು ಎಲ್ಲ ।
ಕಣ್ಣಲಿ ಕಂಡದ್ದು ನಿನ್ನದೆ ಹರಿಅನ್ನು ।
ಪುಣ್ಯ ಪಾಪಗಳು ನಿನಗೆ ಮಾಡಲಿಕ್ಕೆ ।
ಇನ್ನು ಸ್ವಾತಂತ್ರವು ಎಂದೆಂದಿಗೆ ಇಲ್ಲಾ ।

ಕಣ್ಣು ಇಲ್ಲದವಗೆ ಅನ್ನ ಉಣಿಸಿದಂತೆ ।
ಪುಣ್ಯಾತ್ಮದೇವ ಎನ್ನ ಪಾಲಿಸುವನು ।
ನಿನ್ನ ಕರ್ತೃತ್ವವು ಹರಿ ಆಧೀನವು ।
ಮನ್ನಿಸುವನು ತನ್ನ ಮನ ಬಂದಂತಾಡಿ ।
ಅನ್ಯ ದೈವರ ಗಂಡ ಗೋಪಾಲ ವಿಠ್ಠಲ ।
ಅನಂತ ಶಕ್ತನು ಅನಂತ ಗುಣಪೂರ್ಣ ॥೧॥

ರೂಪಕತಾಳ

ಊರ ಒಳಗಿನ ವಸ್ತಾ ಆರಾದರು ವೈದರೆ ।
ದೂರು ಹಾಕಿ ತಳವಾರರ ಹೊಡೆದಂತೆ ।
ಕ್ರೂರವಚನ ನಿಷ್ಠುರ ಜಿಹ್ವೆನುಡಿದರೆ
ಸೇರದೆ ಪರರು ಹಲ್ಲುದರ ಬಡದಂತೆ ।
ಆರು ಮೆಚ್ಚದ ತಪ್ಪು ಕರಗಳು ಮಾಡಿದರೆ ।
ಹುರಿ ಬೆನ್ನಾ ಚರ್ಮ ಹಾರ ಹೊಡೆದಂತೆ ।
ಆರಾರಲ್ಲಿ ಕರ್ತಾ ಕಾರಯಿತಾ ಪ್ರೇರಕ ।
ಮಾರಜನಕನೆ ವ್ಯಾಪಾರ ಮಾಡಿಸಿ ಜೀವ ।
ನರಿಗೀ ಪ್ರಕಾರ ಕರ್ಮ ಫಲವುಣಿಸುವಾ ।
ಆರು ಈತಗೆ ಒಂದು ಸರಿಯಾದ ವಸ್ತುವಿಲ್ಲ ।
ವಾರಿಜ ನಾಭನೆ ಸರ್ವೋತ್ತಮ ಕಾಣಿರೊ ।
ಶ್ರೀ ರಮಣ ನಮ್ಮ ಗೋಪಾಲ ವಿಠ್ಠಲ ।
ಧೀರರಿಗೆ ಧೀರ ಕಾರುಣ್ಯಸಾಗರ ॥೨॥

ಝಂಪೆ ತಾಳ

ದೇವನೆಂದರೆ ನಮ್ಮ ದೇವ ಈತನೆ ಕಾಣೊ ।
ದೇವಾದಿ ದೇವತೆಗಳಿಗೆ ದೇವದೇವರೆಂಬೊಮಿಕ್ಕ ।
ದೇವತಿಗಳಿಗೆಲ್ಲ ದೇವ ಈತನೆ ಕಾವುತಾನೆ ನೋಡಿ ।
ದೇವನಿಲ್ಲದ ಸ್ಥಳವು ಆವಲ್ಲಿ ಇಲ್ಲವಿನ್ನು ।
ದೇವ ಸರ್ವತ್ರದಲ್ಲಿ ವ್ಯಾಪಕ ಭಾವಶುದ್ಧದಲಿನ್ನು ।
ಸೇವಿಸಿದರಿನ್ನು ದೇವ ದೇವಕ್ಕಿಗೆ ಕಂದನಾದಾ ।

ಗೊವಳರೊಡಿಯ ನಮ್ಮ ಗೋಪಾಲ ವಿಠ್ಠಲನ್ನ |
ಕಾವ್ಯೊ ಘನ ವಯ್ಯಾ ಇನ್ನಾವಲ್ಲಿದ್ದರನ್ನ ||೫||

ತ್ರಿವಿಡಿ ತಾಳ

ಲೋಕಾ ಲೋಕದೊಳು ಅನೇಕ ಜೀವರುಂಟು |
ಶೋಕಾ ಲೋಕಾಚಾರ ಅನೇಕ ಕರ್ಮಗಳುಂಟು |
ಲೋಕ ಲೋಕದೊಳಗೆ ತ್ರಿವಿಧ ಜೀವರುಂಟು |
ಲೋಕ ಲೋಕಕೆ ಎಲ್ಲ ಸಾಕುವನೊಬ್ಬನೆ |
ಕಾಕುಗೊಂಡಿನ್ನು ಕಂಡವರಿಗೆ ಬೇಡಿದರೆ |
ತಾ ಕೊಡುವರೆಲ್ಲಿಂದ ತಾ ಕಾಣದವರೆಲ್ಲ |
ಸಾಕುವ ನೊಬ್ಬನೆ ಸಕಲ ಜೀವರುಗಳ |
ನೀಕೇಳು ಮನವೆ ನಿನ್ನ್ವ್ಯಾಕುಲವನು ಬಿಡು |
ಏಕ ಚಿತ್ತದಲಿನ್ನು ಏಕೋ ದೇವನ ಭಜಿಸು |
ಸಾಕಲ್ಯ ಗುಣ ಪೂರ್ಣ ಗೋಪಾಲ ವಿಠ್ಠಲ |
ಲೋಕದಿಂದಲಿ ಭಿನ್ನ ಲೋಕರ ಪಾಲಕ ||೫||

ಅಟ್ಟ ತಾಳ

ತ್ರಿದಿಧ ಜೀವರು ಉಂಟು ತ್ರಿವಿಧ ಕರ್ಮಗಳುಂಟು |
ತ್ರಿವಿಧ ಗುಣಗಳುಂಟು ತ್ರಿವಿಧ ಕಾರ್ಯಗಳುಂಟು |
ತ್ರಿವಿಧ ರೊಳೊಂದೊಂದು ತ್ರಿವಧ ಬಗೆಯೆ ಉಂಟು |
ತ್ರಿವಿಧ ಜೀವರ ಕಾರ್ಯ ಶ್ರೀಹರಿ ಆಧೀನ |
ತ್ರಿವಿಧರಿಂದಲಿ ಭಿನ್ನ ತ್ರಿವಿಧರ ಪಾಲಕ |
ತ್ರಿ ವಿಕ್ರಮ ಮೂರುತಿ ಗೋಪಾಲ ವಿಠ್ಠಲನ್ನ |
ತಿಳಿದು ಸಾಕಲ್ಯದಿ ತಿಳಿಯಲಿ ವಶವಲ್ಲ ||೬||

ಆದಿ ತಾಳ

ಈತನೆ ನಮ್ಮ ದೇವ ಈತನೆ ನಮ್ಮಕಾವಾ |
ಈತನೆ ನಮ್ಮ ತಂದೆ ಈತನೆ ನಮ್ಮ ತಾಯಿ |
ಈತನೆ ನಮ್ಮ ಬಂಧು ಈತನೆ ನಮ್ಮ ಬಳಗಾ |

ಈತನೆ ಇಹ ನಮಗೀತನೆ ಪರವ್ರೋ ।
ಈತನ ದೇಶವು ಈತನೆ ದಿಕ್ಕಿನ್ನು ।
ಈತನೆ ಗತಿ ಇನ್ನೊಂದು ದೈವವಿಲ್ಲ ।
ವಾತ ಜಾತನ ಪಿತ ಗೋಪಾಲ ವಿಠ್ಠಲ ।
ಸೋತೆನೆಂದವರ ಬೆನ್ಹತ್ತಿ ಪಾಲಿಸುವನು ॥ ೭ ॥

ಜತೆ

ಬಿಡೆನು ಬಿಡೆನು ಇನ್ನು ಮುಂದೆ ಇದೆ ದೈವಾ ॥
ಪಿಡಿದೆ ಗೋಪಾಲ ವಿಠ್ಠಲನ ಅಡಿಗಳ ಅನುದಿನ ॥ ೮ ॥

## ಸುಳಾದಿ ೧೦

ಪ್ರಮೇಯ, ಬ್ರಹ್ಮಾದಿ ತೃಣಾಂತ ಸಕಲ ಜೀವರ ಜ್ಞಾನೇಚ್ಛಾಕ್ರಿಯಾ ವ್ಯಾಪಾರ ಶ್ರೀ ಹರಿಯಾಧೀನ, ಶ್ರೀ ಹರಿಯೇ ಸರ್ವ ಕರ್ತಾಕಾರಯಿತಾ ಜೀವರು ಅಸ್ವಾತಂತ್ರರು ನಾನಾಡುವ ಮಾಡುವ ವ್ಯಾಪಾರ ನಿನ್ನಾಧೀನ ವೆಂದು ಪ್ರಾರ್ಥನೆ.

ರಾಗ ಭೈರವಿ, ಧ್ರುವತಾಳ

ಎನ್ನ ಜ್ಞಾನಗಳಿಲ್ಲ ಎನ್ನ ಧ್ಯಾನಗಳಿಲ್ಲ ।
ಎನ್ನ ಮಾನಗಳಿಲ್ಲ ಎನ್ನ ಸ್ನಾನಗಳಿಲ್ಲ ।
ಎನ್ನ ಮಂತ್ರಗಳಿಲ್ಲ ಎನ್ನ ತಂತುಗಳಿಲ್ಲ ।
ಎನ್ನ ದಾನಂಗಳಿಲ್ಲ ಎನ್ನ ಧರ್ಮಂಗಳಿಲ್ಲ ।
ಎನ್ನ ತೀರ್ಥಯಾತ್ರೆಯಿಲ್ಲ ಎನ್ನ ಯಾಗಂಗಳಿಲ್ಲ ।
ಎನ್ನ ಪುಣ್ಯಗಳಿಲ್ಲ ಎನ್ನ ಕೌಶಲ್ಯವೆಲ್ಲ ।
ಇನ್ನಿದರೊಳಗಿನ್ನು ಎನ್ನಿಂದಾದ ಸಾಧನ ।
ವನ್ನು ಲೇಶವಾದರು ಕಣ್ಣಲಿ ಕಂಡಿದ್ದಿಲ್ಲ ।
ನಿನ್ನ ಸ್ವಭಾವವಯ್ಯಾ ನಿನ್ನ ಕರುಣ ರಸಕಿನ್ನು ।
ಆನೆನೆಂಬೆ ಎನ್ನೊಡಿಯನೆ ಕೇಳು ।
ಎನ್ನ ಕರ್ತೃತ್ವಗಳು ಇನ್ನು ಮುನ್ನಾದದಲ್ಲ ।

ನಿನ್ನ ಆಧೀನವಯ್ಯಾ ಎನ್ನ ಫಲಾಫಲವು ।
ಮನ್ನಣಿ ಮಾಡಿಸುವಿ ಅನ್ಯರಲಿಂದ ನೀನು ।
ಮನ್ನಣಿಯುನು ಕೊಂಬೇ ಎನ್ನಲ್ಲಿ ನಿಂತುಕೊಂಡು ।
ನಿನ್ನ ಭಕ್ತರವರನ್ನು ಪಾಲಿಸೊ ಬಗೆ ।
ನಿನ್ನವರ ಮಹಿಮೆ ನೀನೆ ಬಲ್ಲಿಯೊ ದೇವ ।
ನಿನ್ನನೆ ಗತಿ ಎಂದು ಬಿನ್ನಪ ಚಿತ್ತೈಸು ।
ಘನ್ನದಯಾನಿಧಿಯೆ ಪನ್ನಗಶಯನ ಗೋಪಾಲ ವಿಠಲರೇಯ್ಯಾ
ನಿನ್ನನೆ ನಿನ್ನನೆ ನಿನ್ನನೆ ಮೊರೆಹೊಕ್ಕೆ ॥೧॥

ಮಟ್ಟ ತಾಳ

ಸಿರಿ ಅಜಭವ ಸುರ ಸನಕಾದಿಗಳಿಗೆ ।
ಹರಿನೀ ಚಲಿಸದಿರೆ ಬೆರಳು ಆಡಿಸಲಿನ್ನು ।
ಥರವಲ್ಲ ವೆಂತೆಂದು ವರಶ್ರುತಿ ಸ್ಮೃತಿಗಳು ।
ಪರಿಪರಿಯಲಿ ಸ್ತುತಿಸಿ ಅರಸಿಕೊಂಡಾಡಲು ।
ಅರಿಯದೆ ನಾ ವ್ಯರ್ಥ ಮರುಳುಕರ್ತೃತ್ವಾ ।
ವರಿಸಿಕೊಂಡು ಇನ್ನು ಬರಿದೆ ದಣಿದೆನಯ್ಯಾ ।
ಪರಮ ಮೂರ್ಖನಾನು ಮರೆಹೊಕ್ಕೆ ಮರೆಹೊಕ್ಕೆ ।
ಮರದದ್ದೆಲ್ಲ ನೀನು ಅರವುಮಾಡೆನಗೀಗ ।
ಕರುಣಾಕರ ರಂಗ ಗೋಪಾಲ ವಿಠ್ಠಲ ।
ಕರುಣಾಳೆಂಬುವದು ಅರಿಯದಾದೆನಿನ್ನ ॥೨॥

ರೂಪಕತಾಳ

ಕರ ಚರಣಂಗಳ ಚೇಷ್ಟಿಪರಿ ವ್ಯಾಪಾರವು ಎನ್ನಿಂ ।
ದರಿದು ಮಾಡಿದ್ದರೆ ಅರಿಯುದಲೇ ಎನ್ನ ।
ಬೆರಳಿಂದ ಕಣ್ಣನು ಇರಿದುಕೊ ಬಲ್ಲಿನೆ ಚರಣದಿಂದಲಿ ಮುಳ್ಳು ।
ಭರದಿಂದ ತುಳಿವೆನೆ ಮರಳಿ ಎನ್ನಜಿಹ್ವೆ ।
ಮರದುನಾ (ಕಡ್ವೆಳ್ವಿನೇ) ಕಡಿವೆನೆ ।
ತೆರಿವೆನೆ ನೀ ಬಾಯನು ತೆರಿಸದಿದ್ದರೆ ನಾನು ।

ಹರಿಯೆ ನೀ ಕರ್ತನಿರೆ ಬರಿದೆ ನಾ ಕರ್ತೆಂದು ।
ಉರಲು ಹಾಕಿಸಿಕೊಂಡು ಗುರು ಗುರು ಗುಟ್ಟುವೆನೆ ।
ಶರಣರ ಪಾಲಕ ಗೋಪಾಲ ವಿಠ್ಠಲ ।
ಪೊರಿಯೆನ್ನ ಧೊರಿಯೆ ನೀ ಪರಿಪರಿ ಯಿಂದಲಿ ॥೩॥

ಝುಂಪೆತಾಳ

ಸರ್ವರಿಗೆ ಪ್ರೇರಕ ಸರ್ವಕರ್ತಾ ಭೋಕ್ತಾ ।
ಸರ್ವತ್ರದಲಿ ವ್ಯಾಪ್ತ ಸರ್ವ ಶಬ್ದವಾಚ್ಯಾ ।
ಸರ್ವಗುಣ ಪರಿಪೂರ್ಣ ಸರ್ವದೋಷದೂರ ।
ಸರ್ವ ಜ್ಞಾನ ಗಮ್ಯ ಸರ್ವಶಕ್ತಿಮೂರ್ತಿ ।
ಸರ್ವೇಶ ಚಲುವ ಗೋಪಾಲ ವಿಠ್ಠಲರೇಯ್ಯಾ ।
ಸರ್ವಂತರಿಯಾಮಿ ಸಾರ್ವಭೌಮನವೊ ॥೪॥

ತ್ರಿವಿಡಿತಾಳ

ಬಂದವನು ನೀನೆ ಭಕ್ತರಮನದಲ್ಲಿ ।
ನಿಂದವನು ನೀನೆ ಪಂಢರಪುರದಲ್ಲಿ ।
ತಂದೆಯಾಗಿ ಎನಗೆ ತಾಯಿಯಾಗಿ ಎನಗೆ ।
ಬಂಧುಯಾಗಿ ಎಮಗೆ ಸಂದೇಹವಿಲ್ಲದೆ ।
ಹಿಂದೆ ಮುಂದೆ ಏಕಾಗಿ ಒಂದೆ ಪರಿಯಲ್ಲಿನ್ನು ಸಕಲಕಾಲಿನ್ನು ।
ಛಂದದಿ ಪಾಲಿಸಲಾನಂದದಿ ಎನ್ನ ಮನ ।
ಮಂದಿರದಿ ಪೊಳೆದು ನಿಂದು ಆಡುವ ರಂಗ ।
ಒಂದೆ ದೈವವೆ ನಮ್ಮ ಗೋಪಾಲ ವಿಠ್ಠಲ ।
ಕಂದನ ತಾಯಿ ಸಲಹಿದಂದಗಿ ಸಲುಹುವಿ ॥೫॥

ಅಟ್ಟ ತಾಳ

ಬೇ [ಬ್ಯಾ] ಡೆನ್ನಬಾರದೆ ನಾಡ ವಿಷಯಕೆ ಮನ ।
ಓಡೆದರೆ ನೀನು ಓಡುತ ಲಿಹರೆ ।
ಮಾಡಿಕೊಂಡ ಪತಿ ನೋಡುತಿರಲು ಸತಿ ।
ಈಡ ಒಬ್ಬನ ಬೇರೆ ನೋಡಿ ಕೊಂಡರೆ ಇನ್ನು ।
ಮಾಡುವನೊ ಕೃಪೆ ಕೇಡಾಗೊದಲ್ಲದೆ।

ನಾಡ ದೈವದ ಗಂಡ ಗೋಪಾಲ ವಿಠ್ಠಲ ।
ಖೋಡಿ ವಿಷಯಕ್ಕೆ ಮನ ಓಡಾಡದಂತೆ ಮಾಡೊ ॥೬॥

ಆದಿ ತಾಳ

ಗರತಿಯ ಲಕ್ಷಣ ದೊರಕಿಸು ಎನಗೆ ।
ಗರಳ ಎನಿಸು ಪರ ಅರಸಿಯುಲಿ ।
ಕುರುಹ ತಿಳುಹಿಸು ನಿನ್ನ ತತ್ವಗಳಲ್ಲಿ ।
ಮರುಳು ಬಿಡಿಸು ಮನ ಮಮತಿಗಳಲ್ಲಿ ।
ತಿರುಗಿಸೆನ್ನನ್ನು ತೀರ್ಥಯಾತ್ರೆಗಳಲ್ಲಿ ।
ಹರಟೆ ಮಾಡಿಸು ಹರಿ ವಾರ್ತೆಗಳಲ್ಲಿ ।
ಕರವ ಮುಗಿಸು ನಿನ್ನ ರೂಪಂಗಳಲ್ಲಿ ।
ಕರವ ಪಿಡಿಸು ನಿನ್ನ ಶರಣರಲ್ಲಿ ।
ಪರಮ ದಯಾಳು ಗೋಪಾಲ ವಿಠ್ಠಲರೇಯಾ ।
ಕರೆವ ವಚನಗಳಲ್ಲಿ ಆರುವಂತೆ ಮಾಡೊ ನಿನ್ನ ॥೭॥

ಜತೆ

ನಾನಾಡುವ ಮಾತೆಲ್ಲ ನಿನ್ನದೆ ವಯ್ಯಾ ।
ನಾನರಿಯೆ ನೀನೆ ಗತಿ ಗೋಪಾಲ ವಿಠಲಾ ॥೮॥

## ಸುಳಾದಿ ೧೧

"ಏನಂಮೋಚಯಾಮಿಃ" ಎಂಬ ಹರಿವಾಕ್ಯದಂತೆ ಶ್ರೀಹರಿ ಪ್ರಸಾದವೆ ಮುಖ್ಯ ಜೀವರುಗಳ ನಾನಾ ಸಾಧನ ಭಗವಂತನ ಆಧೀನ, ನಿನ್ನ ಚಿತ್ತದಲ್ಲಿದ್ದದ್ದು ಮಾಡಿಸು ಇನ್ನೊಂದು ನಾನೊಲ್ಲೆ ಎಂಬ ಪ್ರಾರ್ಥನೆ.

ರಾಗ ವಸಂತಭೈರವಿ, ಧ್ರುವತಾಳ

ಕಾಯಾ ಕ್ಲೇಶವ ಬಡಿಸಿ ಕಂಡವರಿಗೆ ಹಾರೈಸಿ ।
ಸಾಯಾಸಬಟ್ಟು ನಾನಾ ಸಾಧನವನ್ನು ಮಾಡಿ ।
ಕಾಯಾ ನಿನ್ನ ಪ್ರೀತಿ ಆಯಿತೊ ಎಂದು ಎನ್ನ ।
ಸಾಯಾಸಕೆ ಇನ್ನಾರು ಸರಿಯಿಲ್ಲ ಎಂದುಕೊಂಬೆ ।
ನ್ಯಾಯವೊ ಅನ್ಯಾಯವೊ ನಾನರಿತವನಲ್ಲ ।

ಆಯಾವ ನೀನೆ ಬಲ್ಲಿ ಅವರವರದು ।
ಜ್ಯೋಯಿಸಿಯ ಧರ್ಮವ್ರ ಆಗುವದ್ಹ್ಯಾಗೊ ಕಡಿಗೆ ।
ಮಾಯಾ ಮಾಡಲಿ ಬೇಡ ಮಾರಮಣ ಎನ್ನೊಡನೆ ।
ನ್ಯಾಯವೆಂದು ತಿಳಿದಿಪ್ಪೆ ನಾನು ಮಾಡುವ ಧರ್ಮ ।
ನ್ಯಾಯವೆಂಬೊದು ನೀ ನನ್ಹ್ಯಾಯವ ಮಾಡುಪಿನ್ನು ।
ನಾಯಕ ಕೇಳು ನಾ ಅನ್ಯಾಯ ಒಂದಾದ್ದೆಲ್ಲ ।
ನ್ಯಾಯವಾಗಿ ತೋರೋದು ನಿನ್ನ ಚಿತ್ತದಲ್ಲಿ ।
ಮಾಯ ರಹಿತ ನಮ್ಮ ಗೋಪಾಲ ವಿಠ್ಠಲ ।
ದಾಯಿಗರಿ ಗೊಪ್ಪಿಸದೆ ಆಯವರಿತು ಪೊರಿಯೊ ॥೧॥

ಮಟ್ಟತಾಳ

ನಿನ್ನವ ನೆಂತೆಂದು ಪೇಳಿಕೊಂಬುವದಕ್ಕೆ ।
ಇನ್ನಿತಾದರು ಸಾಧನವೆನ್ನಲ್ಲಿಲ್ಲ ।
ನಿನ್ನವರಲ್ಲಿ ಭಕುತಿ ಇನ್ನು ಮೊದಲಿಗೆ ಇಲ್ಲಾ ।
ನಿನ್ನ ವಾರುತಿಯಲ್ಲಿ ನಿನ್ನ ಕೀರುತಿಯಿಲ್ಲಿ ।
ನಿನ್ನ ದಾಸರು ಎಲ್ಲಿ ಆನೆಲ್ಲಿ ನರಗುರಿಯು ।
ಬಣ್ಣಗೆಟ್ಟವನಯ್ಯಾ ಬರಿದೆ ನಿನ್ನವನೆಂದು ।
ನನ್ನೊಳಗೆ ನಾನು ಮದಸೊಕ್ಕಿ ತಿರುಗಿ ।
ಧನ್ಯನೆಂದುಕೊಂಡು ಧೈರ್ಯದಲ್ಲಿಯಿಪ್ಪೆ ।
ನಿನ್ನ ಚಿತ್ತದಲಿ ಹೊಂದಿನ್ನು ನೀನೆ ಬಲ್ಲೆ ।
ಅನ್ಯ ದೈವರ ಗಂಡ ಗೋಪಾಲ ವಿಠ್ಠಲ ।
ನಿನ್ನ ದಯಾರಸವೊ ಇನ್ನೊಂದನರಿಯೆ ॥ ೨ ॥

ರೂಪಕತಾಳ

ಹಾಡಿ ಸುಖಿಪರು ಕೆಲರು ಬೇಡಿ ಸುಖಿಪರು ಕೆಲರು ।
ಮಾಡಿ ಸುಖಿಪರು ಕೆಲರು ನೀಡಿ ಸುಖಿಪರು ಕೆಲರು ।
ನೋಡಿ ಸುಖಿಪರು ಕೆಲ ರೊಡನಾಡಿ ಸುಖಿಪರು ಕೆಲರು ।
ನಾಡ ಜೀವರಿಗೆ ನಾನಾಕು ಸಾಧನೆ ಉಂಟು ।

ಆಡುವ ನಾನಲ್ಲ ಬೇಡುವ ನಾನಲ್ಲ ।
ಪಾಡುವ ನಾನಲ್ಲ ಕಾಡುವನಾನಲ್ಲ ।
ನೀಡುವ ನಾನಲ್ಲ ಮಾಡುವ ನಾನಲ್ಲ ।
ಮಾಡಿಸಿ ಮಾಡುವ ಸಾಧು ಜೀವರ ಸಂಗ ।
ಕೂಡಿ ಪೊಡನಾಡಿನ್ನು ನೋಡುವ ಭಾಗ್ಯವು ।
ಜೇಡಿ ಹಾರೈಸಿ ನಾ ಬೆನ್ನು ಬಿದ್ದೆನು ದೇವಾ ।
ರೂಢಿಗಧಿಕ ನಮ್ಮ ಗೋಪಾಲ ವಿಠ್ಠಲ ।
ಈಡು ಇಲ್ಲದ ದೈವ ಮಾಡು ಎನಗೆ ಕೃಪೆಯಾ ॥೩॥

ಝಂಪೆತಾಳ

ಸ್ನಾನ ಸಂಧ್ಯಾನ ಜಪತಪದಿ ಅನುಷ್ಠಾನ ।
ದಾನ ಸತ್ಕರ್ಮಂಗಳಲ್ಲಿ ಎನಗೆ ।
ಏನಾಯಿತು ಇಷ್ಟೆ ಸಾಕೆಂಬ ವೈರಾಗ್ಯ ।
ತಾನು ಕೊಡದಿರು ಎನಗೆ ಕರ್ಮಂಗಳಲ್ಲಿ ।
ಹೀನರ ಸಂಗದಲಿ ಇಟ್ಟು ಎನ್ನನ್ನು ಬಹು ।
ದಿನಗಳ ಬದುಕಿಸೊಕಿಂತ ಹರಿಯೆ ।
ಜ್ಞಾನಿಗಳೊಡನೊಂದು ದಿನ ಬದುಕಿದದಕೆ ಸ।
ಮಾನ ಉಂಟೇನಯ್ಯಾ ಸರ್ವೋತ್ತಮಾ ।
ಮಾನಿಸ ಜನ್ಮವು ಮೇಲೆ ವೈಷ್ಣವನಾಗಿ ।
ಶ್ರೀನಾಥ ಸೃಜಿಸಿದೆಯೋ ಅವನಿಯೊಳಗೆ ।
ಕಾಣೆನೋ ನಾನಿದಕೆ ತಕ್ಕಸಾಧನಗಳು ।
ನೀನೆ ಗತಿ ಎನಗೆ ಮುಕುಂದನಂದಾ ।
ನೀನು ಕರುಣಿಸಿದರೆ ಸಕಲಸಾಧನ ತನ್ನಿಂ ।
ತಾನೆ ಆಗುವದಯ್ಯಾ ತಪ್ಪಿಸದಲೆ ।
ಹಾನಿ ಲಾಭವು ಎರಡು ಎನಗೆ ಬಂದರು ನೀ ।
ಧ್ಯಾನಿಸಿ ನಿನ್ನ ತಿಳುವೊಜ್ಞಾನನೀಯೋ ।
ದೀನ ರಕ್ಷಕರಂಗ ಗೋಪಾಲ ವಿಠ್ಠಲ ।
ನೀನೆಗತಿ ನಿನ್ನ ಬಿಡೆ ನಿತ್ಯ ತೃಪ್ತಾ ॥೪॥

ತ್ರಿವಿಡಿತಾಳ

ನಾನು ದೋಷಕಾರಿಯೋ ನೀ ನಿರ್ದೋಷನು ದೇವಾ ।
ನಾನು ದುಃಖಭರಿತ ನೀನು ಸುಖಪೂರ್ಣ ।
ನಾನು ಅಜ್ಞಾನಿಯೊ ನೀನು ಜ್ಞಾನಪೂರ್ಣ ।
ನಾನು ಅಲ್ಪಗುಣನೋ ನೀನು ಗುಣಪೂರ್ಣ ।
ನಾನು ಅಸ್ವತಂತ್ರ ನೀನು ಸ್ವಾತಂತ್ರನೋ ।
ನಾನು ನಾಶವು ಇಲ್ಲಾ ನೀನು ನಾಶವು ಇಲ್ಲ ।
ನೀನು ಅನಾದಿನಿತ್ಯನಾನು ಅನಾದಿಭೃತ್ಯ ।
ನೀನು ಎನಗೆ ಬೇಕು ನಾನು ನಿನಗೆ ಬೇಕು ।
ನಾನೆಂಬುವರು ಬೇರೆ ಇಲ್ಲದಿದ್ದರಾಯಿತೆ ।
ನೀನೆಂಬುವದು ಇನ್ನು ಆರು ಬಲ್ಲರು ದೇವ ।
ಜ್ಞಾನಿ ಇವನೆಂದರೆ ಅಜ್ಞಾನಿ ಬ್ಯಾರುಂಟು ।
ದಾನಿ ಇವನೆಂದರೆ ದೀನನು ಬ್ಯಾರುಂಟು ।
ಜಾಣ ಇವನೆಂದರೆ ಜಡಮತಿವೆಂಬರು ಉಂಟು ।
ಮಾನಿತಾ ನೆನೆ ಅಪಮಾನಿ ತಾ ಬ್ಯಾರುಂಟು ।
ಹೀನೆ ಎಂಬೊ ಅಹಂಕಾರವನು ಎನಗೆ ಇರಲಿ ।
ನಾನೆ ಕರ್ತನೆಂಬೋದೆನಗೆ ಎಂದಿಗೆ ಬೇಡ ।
ನಾನೆಂಬ ಅಸ್ವಾತಂತ್ರ ವಸ್ತುವಿದ್ದ ಕಾರಣ ।
ನೀನೆಂಬ ಸ್ವಾತಂತ್ರ ಪ್ರಕಟವಾಯಿತು ರಂಗ ।
ಏನೆಷ್ಟು ಸೌಭಾಗ್ಯ ವಿದ್ದಕಾಲಕು ನಿನಗೆ ।
ದಾನ ಬೇಡುವ ಜೀವರಿಂದಲೆ ಶೋಭಿತಾ
ನೀನೆ ನಿನಗೆ ಬೇರೆ ಕೊಟ್ಟು ಕೊಂಡಾಡಿಯಾ ।
ನೀನೆ ನಿನಗೆ ತುತಿ ಮಾಡಿಕೊಂಡಿಯಾ ದೇವ ।
ಶ್ರೀನಾಥ ಬಾರಯ್ಯ ಗೋಪಾಲ ವಿಠ್ಠಲ ।
ಏನಾದರು ನಿನಗೆ ಎನಗೆ ಬಿಟ್ಟದ್ದು ಅಲ್ಲಾ ।

ಅಟ್ಟ ತಾಳ

ಎಂಟು ಶೇರಿನದೊಂದು ಘಂಟೆಯು ನಿರ್ಮಿಸಿ ।
ಒಂಟೇಲಿ ಇಟ್ಟಿನ್ನು ಹಿಡಿದು ಬಾರಿಸಿದರೆ ।

ಘಂಟಿಯಲ್ಲಿದ್ದ ನಾದ ಘಂಟೆಯಿಂದದ ತಿಳಿವದೆ |
ಎಂಟು ತೊಲಿಯದೊಂದು ಸೊಂಟೆ ನಾಲಿಗೆಯನ್ನು |
ಉಂಟಾದರಾಯಿತೆ ಘಂಟಿ ಶೋಭಿಸುವದು |
ಘಂಟೆಯಂತೆ ನೀನು ನಾಲಿಗೆಯಂತೆ ನಾನು |
ಘಂಟಿಯೊಳಗೆ ನಾಲಿಗಡಕವಾಗಿಪ್ಪೊದ್ದು |
ಒಂಟೆ ನಾನಿನ್ನೊಳು ಅಡಕವಾಗಿಪ್ಪೆನು |
ನೆಂಟತನವು ನಿನಗೆನಗೆ ಹೀಗುಂಟು ವೈ |
ಕುಂಠ ಮೂರುತಿ ರಂಗ ಗೋಪಾಲ ವಿಠ್ಠಲ |
ಬಂಟರಿಂದಲೆ ನಿನ್ನ ಭಾಗ್ಯ ಶೋಭಿಸುವದು ||೬||

ಆದಿ ತಾಳ

ಸಿರಿವಂತ ನೀನೆಂದು ಧರಿಯೊಳು ತೋರಿದ |
ಪರಮ ಭಕುತನಾದ ದರಿದ್ರ ಸುದಾಮನೆ |
ಹರಿ ನಿರ್ದೋಷ ನೀನೆಂದು ಸ್ಮರಿಸಿ ಜಗದೊಳಗೆ |
ಹರಹಿದ ಅಜಮಿಳ ಪರಮ ದೋಷಕಾರಿಯೆ |
ಹರಿ ಸರ್ವೋತ್ತಮನೆಂದು ನರಗೆ ಅಂಜದಲಿದ್ದ |
ತರುಳ ಪ್ರಲ್ಹಾದ ಪರಮ ಛಲಪಾತಕಿಯೆ |
ಹರಿಕಾರ್ಯವ ಅರಿತು ಅಸುರಗೆ ರಾಜ್ಯವ ಸೋತು |
ಧರಿ ಚರಿಸಿದ ಪಾಂಡವರು ಅಜ್ಞಾನಿಗಳೆ |
ಹರಿನೀ ಭಕ್ತರ ವಶ ಕರನು ಎಂಬುವದಕ್ಕೆ |
ಪಿರಿದು ಕಾಲ ಕಟ್ಟಿದ ದುರುಳಳೇನಾಯಶೋದೆ |
ಹರಿ ನಿನ್ನ ಶರಣರಾ ಸಿರಿಯು ಇನ್ನೆಂತೆಂತು |
ಸರಿಗಾಣೆ ನಾ ನಿನ್ನ ಶರಣರಿಗೆ ನಮೊ ಎಂಬೆ |
ಪರಮ ದಯಾಳುವೆ ಗೋಪಾಲ ವಿಠ್ಠಲ |
ಮೊರೆ ಹೊಕ್ಕೆ ನಿನಗಿನ್ನು ನೆರೆ ಬದುಕಿಸನುಗಾಲಾ ||೭||

ಜತೆ

ನಿನ್ನ ಚಿತ್ತದಲಿದ್ದದೆನಗೆ ಮಾಡಿಸು ದೇವ |
ಇನ್ನೊಂದು ಆನೊಲ್ಲೆ ಗೋಪಾಲ ವಿಠ್ಠಲ ||೮||

## ಸುಳಾದಿ ೧೨

ಪ್ರಾರ್ಥನೆ- ಬಿಂಬನು ಕರಚರಣಾದ್ಯವಯುವಗಳಿಂದ ಪ್ರತಿಬಿಂಬಿನಲ್ಲಿ ಇರುವಿಕೆ. ಬಿಂಬನಾದ ಹರಿಯು ಸುಖಪೂರ್ಣನಾದವನು ಪ್ರತಿಬಿಂಬಗಳಿಗೆ ತಾಪತ್ರಯ ಉಂಟೇನೋ? ಬಿಂಬೇಚ್ಛಾದಂತೆ ಜೀವರ ಸ್ವರೂಪ ಗುಣ ಕರ್ಮಾನುಸಾರ ಫಲ ತಂದೀವ ಕಾರಣ ಸಕಲ ಭಕ್ತರು ಸುಖದಲ್ಲಿರಲೆಂಬ ಪ್ರಾರ್ಥನೆ.

ರಾಗ ಶಂಕರಾಭರಣ, ಧ್ರುವತಾಳ

ಆಪತ್ತು ಕಾಲ ಈಗ ಬಂದಿದೆ ಅಯ್ಯಾ ಅಯ್ಯಾ ।
ಶ್ರೀಪತಿ ಕಾಯೊ ಆಶ್ರಿತ ಜನ ಬಂಧು ।
ನೀ ಪರಮ ಪುರುಷ ನಿತ್ಯ ತೃಪುತ ದೇವಾ ।
ನಾ ಪರದೇಶಿಯೊ ಹೇ ನಳಿನ ನಾಭಾ ।
ಅಪಾರ ದೋಷಿ ಇನ್ನು ಆನುಹುದಯ್ಯಾ ಅಯ್ಯಾ ।
ನೀ ಪೂರ್ಣ ಗುಣ ನಿಧಿ ನಿರ್ದೋಷನಲ್ಲೆ ।
ಲೇಪರಹಿತ ನೀನು ಬಿಂಬನಾದ ಬಳಿಕ ।
ತಾಪ ಉಂಟೇನು ಪ್ರತಿ ಬಿಂಬಗಳಿಗೆ ।
ಭೂ ಪಾಲಕನು ಸುಖದಲ್ಲಿ ಇರಲಾಗಿ ।
ಆಪತ್ತು ಉಂಟೆ ಅವನ ಆಳು ಜನಕೆ ।
ನೀ ಪರ ಉಪಕಾರಿ ನಿನಗೊಂದಪೇಕ್ಷೆ ಇಲ್ಲ ।
ಸಾಪಾಟೆ ಅಧಿಕ ಶೂನ್ಯ ಸರ್ವೋತ್ತಮಾ ।
ತಾಪತ್ರಯಂಗಳು ತ್ರಿವಿಧ ಗುಣದ ಕಾರ್ಯ ।
ನೀ ಪ್ರೇರಿಸಿದಂತೆ ನಿತ್ಯ ದಣಿಸೋವು ।
ನಾ ಪ್ರತಿಗಾಣೆ ನಿನಗೆ ವಂದನ್ನಮಾಡಿ ತೋರ ।
೧ ಆಪೂ ೨ ಸಾಪಿಗೆ ಮಾತ್ರ ಕರ್ತನಯ್ಯಾ ।
೩ ಹೋಪ ೪ ಬಪ್ಪದು ಏನು ಒಂದಾದರು ಎನ್ನಿಂದ ।
ಕಾಪಾಲಿ ವರದ ಕಾರುಣ್ಯಾಂಕಾರಾ ।
೫ ರಾಪು ಮಾಡುವೆ ನೀ ರಹಸ್ಯ ಮಾಡಿದ ಕಾರ್ಯ ।

---

೧. ಕೆಟ್ಟದು. ೨. ಸಾಪು=ಚನ್ನ, ಒಳ್ಳೇದು. ೩. ಹೋಗುವದು. ೪ ಬರುವದು. ೫ ರಾಪು ಹೊರಗೆ ಬೀರು.

ಕೋಪ ಸಲ್ಲದಯ್ಯಾ ಕೋದಂಡಪಾಣಿ ।
ಮಾಪು ಪಿಡಿದು ಇನ್ನು ಅಳಿಯು ಕುಳಿತ ಬಳಿಕ ।
ಲೋಪ ಮಾಡುವದ್ಯಾಕೆ ಲೋಕದೊಳು ।
ಈ ಪರಿ ಎನ್ನಮನದ ಅಭಿಪ್ರಾಯು ।
ಗೋಪಾಲಾ ಸರ್ವ ಪಾಲಾ ಸರ್ವಇಷ್ಟಾ ।
ದ್ರೌಪದಿ ಮಾನದೊಡೆಯು ಗೋಪಾಲ ವಿಠ್ಠಲ ।
ತಾಪಸರ ಮನದಿಸಿಲ್ಕಿ ಅಗಲದ ದೇವಾ ॥ ೧ ॥

ಮಟ್ಟತಾಳ

ನಿನ್ನದು ನೀನಿತ್ಯಾ ಎನ್ನದು ಅನಿತ್ಯ ।
ನಿನ್ನದು ಸ್ವಾಧೀನ ಎನ್ನದು ಪರಾಧೀನ ।
ನಿನ್ನಾನಂದ ನಿನಗೆ ನಿನ್ನಿಂದಾನಂದೆನಗೆ ।
ನಿನ್ನವನಾ ಅಧೀನಾಗೆ ಎನ್ನವ ನೀ ಎನಗೆ ।
ಎನ್ನದು ಸಕಾಮಾ ನಿನ್ನದು ನಿಷ್ಕಾಮಾ ।
ಎನ್ನವೊಳಗೆ ನೀನೆ ನಿನ್ನವೊಳಗೆ ನೀನೆ ।
ಅನ್ಯ ಆಪೇಕ್ಷ ಮಾತ್ರ ವೆಂಬೊದು ಎನಗೆ ದೋಷ ।
ನಿನ್ನ ಅಪೇಕ್ಷವೆ ಎನ್ನ ಪೋಷಣೆ ಅಲ್ಲೆ ।
ಎನ್ನ ನೀ ಮರೆದರೆ ನಿನ್ನನಾ ಮರವೂವೆ ।
ಎನ್ನ ನೀ ತಿಳಿದರೆ ನಿನ್ನನಾ ತಿಳವೂವೆ ।
ಎನ್ನನು ನೀ ಮರದದಕನು ಭೋಗಾ ।
ಭಿನ್ನ ವಿಷಯುದಲ್ಲಿ ಇನ್ನು ಪೋಗೊದೆ ಸಾಕ್ಷಿ ।
ಎನ್ನ ವ್ಯಾಪಾರವು ನಿನ್ನಾಧೀನವಿರಲು ।
ಅನ್ಯಕೆ ಎಳೆದು ಬನ್ನಬಿಡಿಸಾ ಆವದು ।
ಅನ್ಯಾಯು ನ್ಯಾಯು ಇನ್ನೇನಿನ್ನೇನೊ ।
ಮನ್ನವಾಚಕಾಯು ಇನ್ನು ಎನಗೆ ದೇವಾ ।
ನಿನ್ನನ್ನೆ ಬೇಕೆಂಬೊ ಘನ್ನ ಆಶೆಯುು ಬಹಳ ।
ಮನ್ನಿಸಿ ಬಿನ್ನಪ ಮನಕೆ ತಾನೀವೇಗಾ ।

ಸುನ್ಮುನಿಗಳ ಪ್ರೀಯಾ ಗೋಪಾಲ ವಿಠ್ಠಲ।
ನಿನ್ನನಲ್ಲದೆ ಬೇರೆ ಇನ್ನಾರನ ಕೇಳ್ವೆ ॥೨॥

ರೂಪಕತಾಳ

ಎನ್ನ ಯೋಗ್ಯತೆ ಅರಿತು ಉಣಿಸೆನೆಂದರೆ ನೀನು।
ನಿನ್ನ ಸಂಲ್ಪಕ್ಕೆ ಪ್ರತಿಕೂಲ ನಾನಲ್ಲ।
ನಿನ್ನ ಭೃತ್ಯನು ನಾನು ನಿಜವೆಂಬೋದು ಇತ್ತೆ।
ಎನ್ನ ಸ್ವರೂಪವು ದುಃಖಿ ಬೇರೆಲಿಲ್ಲಲ್ಲ।
ಚನ್ನಾಗಿ ಚಿದ್ರೂಪಿ ನಿರ್ಗುಣ ಜೀವಕ್ಕೆ।
ಇನ್ನು ಶೋಕಂಗಳು ಆವ ಪರಿಉಂಟು।
ಭಿನ್ನ ತ್ರಿಗುಣದಿಂದ ಘನ್ನ ಶೋಕಗಳೆಂಬ।
ಇನ್ನು ಜಡಂಗಳು ಬನ್ನಬಡಿಸುವವ್ರೋ।
ಎನ್ನ ಮನಸಿಗಿದು ನಿಜವು ತೋರುವದಿಲ್ಲ।
ಇನ್ನು ಬಿದ್ದಲ್ಲಿಂದ ಚಲಿಸದೆ ಜಡಗಳು।
ಮುನ್ನ ಚೇತನಗಳು ದಣಿಸಬಲ್ಲವೆ ದೇವಾ।
ಇನ್ನು ಅವಕ್ಕೆ ಬೇರೆ ಅಭಿಮಾನ್ಯರುಂಟೆಂಬ।
ಎನ್ನಂತೆ (ತ) ಸ್ವಾತಂತ್ರರವರಲ್ಲವೇ।
ಇನ್ನೊಬ್ಬರಿನ್ನೊಂದು ಜಡಚೇತನಗಳಿಂದ।
ಎನ್ನ ದಣಿಸುವರ ಕಾಣೆನಯ್ಯಾ ಸ್ವಾಮಿ।
ಘನ್ನ ವೈಕುಂಠದಿನ್ನಲ್ಲಿ ಆಗೋಸುಖ।
ಇನ್ನಿಲ್ಲೆಕೊಡುವ ಸ್ವಾತಂತ್ರನಿನಗುಂಟಯ್ಯಾ।
ನೀನಲ್ಲ ದಿಲ್ಲಿನ್ನು ಸುಖದುಃಖಗಳು ಒಂದು।
ಎನ್ನಯ್ಯಾ ಎನ್ನಯ್ಯಾ ಏದೇವನೆ।
**ಕಣ್ಣಿನೊಳಗೆ ಕಣ್ಣು ಕರ್ನದೊಳಗೆ ಕರ್ನ।**
**ಬೆನ್ನಿನೊಳಗೆ ಬೆನ್ನು ಇನ್ನು ಕಾಲೊಳು ಕಾಲು।**
**ಎನ್ನ ಆಕಾರ ದೊಳೆಲ್ಲ ವ್ಯಾಪಿಸಿ ಇಪ್ಪ।**
**ಚಿನ್ನುಮಯ ಜ್ಞಾನಾನಂದ ನಿರ್ದೋಷಪೂರ್ಣ।**

ಭಿನ್ನ ಕಾಮರಹಿತ ಗೋಪಾಲ ವಿಠ್ಠಲ ।
ನಿನ್ನವರವನಯ್ಯಾ ಬಿನ್ನಪ ಚಿತ್ತೈಸು ॥೩॥

ಝಂಪೆ ತಾಳ

ಇದೆ ವೇಳ್ಯ ಇದೆ ಸಮಯ ಈಗಲೆ ನಿನ್ನಾಟ ।
ಒದಗಿ ದೊರಕೆದೆ ನಿನಗೆ ಒಳಿತಾಗಿ ನೋಡು ।
ಗಡಗಡನೆ ನಡುಗಿಸು ಉದರ ಕಸಿವೆಯಕೊಡಿಸು ।
ಒದರಿಸುಎನಗಿನ್ನ ಆರನಾ ಕಾಣೆಂದು ।
ಕುದರಿಯಂತೆ ಕುಟಿಲ ರೋಗಗಳ್ಹಚ್ಚು ।
ಒದಗಿ ನಡೆಯದಂತೆ ಇದ್ದಲ್ಲೆಕುಳ್ಳಿಸೊ ।
ಮದುವಿಗಳ ಮಾಡಿಸು ನದಿಗಳೊಳು ಮುಣುಗಿಸು ।
ಮಧುರ ಅನ್ನವ ಉಣಿಸು ಸದಾಚಾರಿ ಎಂದೆನಿಸು ।
ಇದಕ್ಕೊಂದೆ ಅದಕ್ಕೊಂದೆ ಇನ್ನೊಂದಕೆ ಒಂದೆ ।
ಇದರ ಭೋಗಗಳೆಲ್ಲ ಭಿನ್ನ ಎನ್ನಿಂದಯ್ಯಾ ।
ತುದಿಗೆ ನಿರ್ಗುಣನಾಗೆ ಪೊದಗೊದಾನಂದವ್ಯಕ್ತಿ ।
ಆದರ ಮೇಲೆ ಇನ್ನು ಅಲ್ಲಿ ಮಾಡಿಸಲಾಪ್ಯಾ ।
ಬದುಕು ಎನ್ನದು ಏನು ಕೆಟ್ಟು ಪೋಗುವದು ।
ಪದೋ ಪದಿಗೆ ವಿಸ್ಮೃತಿಯಿಂದ ದಣಿವೆ ।
ಅದೇ ಸಮಯದಲ್ಲಿ ಉದ್ಧರಿಸಬೇಕು ।
ಹೃದಯದೊಳಗೆ ನಿನ್ನ ನಿದರ್ಶನವನ್ನು ।
ಸದಾಕಾಲದಲ್ಲಿ ತಾ ಸಾಕುವ ಧೊರಿಯೆ ।
ಮದನ ಜನಕ ನಮ್ಮ ಗೋಪಾಲ ವಿಠ್ಠಲ ।
ಒದಗಿ ಬಪ್ಪವು ಹರುಷಕ್ಲೇಶದಿ ನಿನ್ನನು ತಿಳಿಸೊ ॥೪॥

ತ್ರಿವಿಡಿತಾಳ

ಇಂದ್ರಿಯಗಳಿಂದಲಿ ಆಗುವ ಕರ್ಮವು ।
ದ್ವಂದ್ವವಾಗ್ಯುಂಟು ಕೃಷ್ಣದ್ವೈಪಾಯನ ।
ಒಂದರೊಳಗೆ ಒಂದು ಅಂದಿಸುತಲೆಲ್ಲಿ ।
ಸಂಧಿ ಸಂಧಿಗೆಬಿಡದೆ ಎನ್ನ ಎಳೆದು ।

ಒಂದು ಎನ್ನ ವಿಷಯ ನಿಜವಸ್ತುವಿರಲಾಗಿ |
ಹಿಂದೆಮಾಡಿ ಆದರ ಹಿತ ಅರಿಸದೆ |
ಬಂಧಕರನು ಮಾಡಿ ಬಯಕಿಪುಟ್ಟಿಸಿಬಾಹಿರ |
ಕುಂದು ವಿಷಯಕಿನ್ನು ಮೋಸಗೊಳಿಸಿ |
ಅಂಧಕನ ಪಿಡಿದು ಆಟಆಡಿಸಿದಂತೆ |
ಸಂದಳಿ ಅಂಗಡಿಗೆನ್ನ ನೂಕಿ |
ಬಂಧು ಅಲ್ಲದವರ ಬಂಧು ಯೆಂದು ತಿಳಿಸಿ |
ನಿಂದ್ರಲರಿಯದಾವಸ್ಥೆ ನಾ ನಿತ್ಯ ವೆಂದರಿವಿಸಿ |
ಗಂಧ ವಲ್ಲದ್ದು ಎಲ್ಲ ಗಂಧವೆಂದರಿವಿಸೆ |
ಛಂದವಲ್ಲದ ರಸವು ಛಂದವೆಂದು ತಿಳಿಸಿ |
ಹಿಂದೆ ಮುಂದೆ ಕಾಣದಂತೆನ್ನ ಕುಳ್ಳಿಸಿ |
ಎಂದಿಗೆ ನಾಶವಿಲ್ಲದ ಜೀವಸಿಗೆ |
ಬಂದು ಹೋಗುತಿನೆಂಬೊ ಮೃತ್ಯು ಭಯಪುಟ್ಟಿಸಿ |
ಅಂದಾಗಿ ನೀ ಬಿಡದೆ ಈ ಪರಿ ಮಾಡಿಸಿ |
ಎಂದಿಗಾ ಜೀವರು ಹೊಂದುವರು ನಿನ್ನ |
ಗಂಧ ಸುಳಿದಂತೆ ಇದರ ಒಳಗೆ ಒಮ್ಮೆ |
ತಂದು ಸ್ಮೃತಿಗೆ ನಿಜ ಇಂದ್ರಿಯಿಂದ ನಿನ್ನ |
ಛಂದುಳ್ಳ ಗುಣಗಳು ಅನುಭವಕೆ ಬಂತೆ |
ಅಂದಿಗೆ ಸಂದೇಹ ನಿವೃತ್ತಿ ಆಹೋದು |
೧ ಇಂದನ್ನಕ ನೋಡೆ ಈ ಬಟ್ಟೆ ಹಾ ಕೆಟ್ಟೆ |
ಸಂದಿಲೀ ಇದ್ದನ್ನ ಈ ಪರಿ ಮಾಡಲು |
ಅಂದವೆ ಅಂದವೆ ಅಪ್ಪಾ ಅಪ್ಪಾ |
ವಂದಿಸಿ ಮೊರೆ ಇಟ್ಟೆ ಒಂದು ಆದರು ನಿ |
ನ್ನಿಂದಿಲ್ಲಾ ವಿಲ್ಲಾದಿಲ್ಲವೆಂದು |
ಸಂದೇಹವನು ಬಿಟ್ಟು ಸುಂದರ ಮೂರುತಿ ಗೋಪಾಲವಿಠ್ಠಲ |
ತಂದೆ ನಿನ್ನ ಚಿತ್ತ ಬಂದದೆ ಮಾಡಯ್ಯಾ ||೫||

---

೧. ಈ ಪರಿಯಂತರ, ಈ ವರೆಗೆ.

ಅಟ್ಟ ತಾಳ

ಹೇ ಅಚ್ಯುತನೆ ಹೇ ಅನಂತನೆ ।
ಹೇ ಅದ್ಭುತನೆ ಹೇ ಅಗೋಚರನೆ ।
ಹೇ ಅಗಮ್ಯನೆ ಹೇ ಅಹೋರಾಜ ।
ಹೇ ಅದಿತಿಸುತ ಹೇ ಅಕ್ರೂರ ಪಾಲ ।
ಹೇ ಅಹಲ್ಯಾ ರಕ್ಷಕ ಹೇ ಅಂಬರೀಷ ಪಾಲಾ ।
ಹೇ ಅಜಮಿಳ ವರದ ಹೇ ಅರಕಾಣೆಂದ ಗಜರಾಜ ವರದನೆ ।
ಹೇ ಅನಿಮಿತ್ಯ ಬಂಧು ನಿತ್ಯ ನಿರಂಜನ ।
ಹೇ ಅಪ್ಪಾ ಅಯ್ಯಾ ಪೂತುರೆ ಪೂತುರೆ ।
ಹೇ ಅನಾದಿ ದೇವ ಆನಂದಪೂರ್ಣನೆ ।
ಹೇ ಅಘಟಿತ ಘಟಿತಾನಂತ ಐಶ್ವರ್ಯ ।
ಹೇ ಆಶ್ಚರ್ಯನೆ ಹೇ ಅಖಂಡಿತಾ ।
ಹೇ ಅರ್ಧ ಗರ್ಭ ಹೇ ಅಧೋಕ್ಷಜ ।
ಹೇ ಅಜ ಹೆದ್ದಯ್ಯಾ ನಾ ಅಜ್ಞಾ ನೀಪೂರ್ಣ ।
ಬಾ ಅಯ್ಯಾ ಕಾಯಯ್ಯಾ ತ್ರಾಹಿ ತ್ರಾಹಿ ಕೃಷ್ಣ ।
ನಾ ಅಲ್ಪ ನೀ ಪೂರ್ಣ ಭಳಿರೆ ಭಳಿರೆ ರಾಯಾ ।
ನೀ ಅಲ್ಲ ದಿಲ್ಲಿನ್ನು ಗೋಪಾಲ ವಿಠ್ಠಲ ।
ಬಾ ಆಶ್ರಿತ ಜನ ಬಂಧು ಭಕುತ ಪಾಲಾ ॥೬॥

ಆದಿ ತಾಳ

ಪರರಿಗೆ ಹಿತವಾಗಿ ಎನ್ನಿಂದಲಿ ಇತ್ತೆ ।
ಇರಿಸು ಎನ್ನನ್ನು ಇತ್ತೆ ಧರಿಯ ಮೇಲೆ ದೇವಾ ।
ಶರಣ ಜನರ ಹಿತವೆ ಎನ್ನ ಹಿತವು ।
ಶರಣರ ಆಪತ್ತೆ ಎನ್ನ ಆಪತ್ತಯ್ಯ ।
ಹರಿಯೆ ನಾ ನಿನಗಿನ್ನು ವಂದಿಸಿ ಮೊರೆ ಇಟ್ಟೆ ।
ಕರುಳನ ಬಿನ್ನಪ ಮನಕೆ ತಾರೈದೇವಾ ।
ಧರಿಯ ಮೇಲಿನ್ನೆಷ್ಟು ಶರಣ ಜನರು ಉಂಟು ।
ನಿರುತ ಅವರಿಗಿನ್ನು ಎರಡೊಂದು ಗುಣದ ।

ಕರ ಕರೆ ಕ್ಲೇಶವೂ ಇರದಂತಲಿ ಮಾಡು ।
ಧರಣಿಯ ರಮಣ ತರುಳ ಸಲಿಗಿಯಲ್ಲಿ ಇನ್ನೊಂದು ಬೇಡುವೆ।
ಕರುಣಿಸೊದುಚಿತವೆ ಆಗಿತ್ತೆ ಕರುಣಿಸು ।
ಸ್ಥಿರ ಎನ್ನ ಗುರುವಿನ ಇನ್ನು ಮೊದಲು ಮಾಡಿ ।
ಪರಿ ಪರಿ ಪರಿ ಇನ್ನೆಂತು ಉಂಟೋ ।
ಪರಿಹರಿಸವರಿಗೆ ಹರುಷದಲ್ಲಿ ಇಟ್ಟು ।
ಬರಿದೆ ಎನ್ನನ್ನು ನೀನು ಅವರ ಕ್ಲೇಶಗಳೆಲ್ಲ ।
ಹರಹುವೊಎನ್ನಲ್ಲಿ ಸ್ಮರಣೆ ಪೂರ್ವಕವಾಗಿ ।
ದುರಿತಗಿರಿ ಕುಲಿಶ ದುಷ್ಟರ ಮರ್ದನ।
ಶರಣರ ರಕ್ಷಕ ಕರುಣಾಕರ ಸ್ವಾಮಿ ।
ಮರುದಂತರ್ಗತ ಗೋಪಾಲ ವಿಠ್ಠಲ ।
ಸರಿ ಬಂದದು ಮಾಡೊ ಶರೀರ ಒಪ್ಪಿಸಿದೆ ॥೭॥

ಜತೆ

ಸಕಲ ಭಕುತರೆಲ್ಲ ಸುಖದಲ್ಲಿ ಇರಲೆಂಬೊ ।
ಕಕುಲಾತಿ ಎನಗೆ ಕರುಣಿಸೊ ಗೋಪಾಲ ವಿಠ್ಠಲ ॥೮॥

## ಸುಳಾದಿ ೧೩

ಶ್ರೀಹರಿ ಸ್ವಾತಂತ್ರ ಜೀವಪಾರತಂತ್ರ್ಯ ವಿಷಯ ಅನೇಕ ಶಾಸ್ತ್ರಾರ್ಥ ವಿಚಾರ. ಹರಿಕರ್ತೃತ್ವ ತಿಳಿದು ತಾರತಮ್ಯ ಪಂಚಭೇದವರಿತವರಿಗೆ ಹರಿಯು ತಾ ನೊಲಿವ

ರಾಗ ಮಾರವಿ ಧ್ರುವತಾಳ

ಚ್ಯುತ ರಹಿತವಾದಂಥ ಗತಿಯುಬೇಕೆಂಬವರಿಗೆ ।
ಜಿತಜ್ಞಾನ ಭಕುತಿ ವಿರಕುತಿಯು ಬೇಕು ।
ಪತಿವ್ರತ ತಾನೆಂಬೋದು ಮನಕೆ ಲೇಶತಾರದೆ ।
ಪತಿತನಾಗಿರಬೇಕು ಅಂತರದಿ ।
ಪತಿತ ಬಾಹ್ಯರ ಕಂಡು ಪರವೆಮಾಡದೆ ತನ್ನ ।
ಮತಿಯಲಿ ತಿಳಿದುಕೊಂಡು ಮೌನಧರಿಸಿ ।

ಅತಿ ಆಯಾಸವು ಬಡದೆ ಅಲ್ಪ ಬಂದರು ತಾ ಪೂ ।
ರ್ಣತಿಯನು ಮಾಡಿಕೊಂಡು ತುಷ್ಟನಾಗಿ ।
ಮತಿ ಎರಡು ಪ್ರಕಾರ ಮಾಡದೆ ಸಗುಣದಿಂದ ।
ಅತಿ ವೇಗ ಬಿಡಿಸಿ ನಿರ್ಗುಣಕೆನಿಲ್ಲಿಸಿ ।
ಹಿತಾಹಿತದ ದಾರಿ ವಿವರವನ್ನೆ ಅರಿದು ।
ಸತಿಸುತರರ ಮನಕೆ ಸಿಕ್ಕದಲೆ ।
ವ್ಯಥೆ ಬಂದ ಕಾಲದಲ್ಲಿ ಹರುಷ ಮನಕೆ ತಂದು ।
ಅತಿ ಸುಖ ಬಂದಾಗಲೂ ವ್ಯಥಿಯ ತಿಳಿದು ।
ಸತತ ನಿತ್ಯವಾದ ವಸ್ತ ಆವದು ಅದಕೆ ।
ಪ್ರತಿಬಿಂಬ ತಾನು ಎಂದು ತಿಳಿದುಕೊಂಡು ।
ಸ್ವತಂತ್ರಾಸ್ವತಂತ್ರ ವಿವೇಕವನ್ನೆ ತಿಳಿದ ।
ಸ್ವಾತಂತ್ರ ಧೃಡವ ತನ್ನಲ್ಲಿರವ ನೋಡಿ ।
ಚತುರ ವಿಧವುಪಾಯದಿಂದ ತನ್ನ ಸ್ವರೂಪ ।
ಚ್ಯುತನಲ್ಲವೆಂದು ತನ್ನ ಸ್ಥಿತಿಯನರಿತು ।
ಪತನಾಗೊದೆಲ್ಲ ತನಗೆ ಬಂದ ದೇಹಗಳೆಂದು ।
ಹಿತಮಾಡದೆ ಅಲ್ಲಲ್ಲಿ ಮಮತೆ ಬಿಟ್ಟು ।
ತತುವ ವಿವೇಕ ಜ್ಞಾನವುಳ್ಳವನಾಗಿ ಶಾ ।
ಶ್ವಿತವೆಂಬ ಜ್ಞಾನ ಸಂಸಾರದಲ್ಲಿ ಬಿಟ್ಟು ।
ಕೃತು ಮೊದಲಾದ ಕರ್ಮ ಹರಿಮಾಡಿ ಮಾಡಿಸಿದ ।
ಸ್ಥಿತಿಯನರಿದು ತನ್ನ ಕೃತಿಯ ಮರೆದು ।
ದ್ವಿತಿಯು ತೃತಿಯು ತತ್ವ ಚತುರ ವಿಂಶತಿ ದಶ ।
ತೃತಿಯು ಮಂಡಲ ತತ್ವಭಾಗವರಿದೂ ।
ಅತಿದೂರನಾಗಿ ಅದಕ್ಕೆತತುವಿಲಕ್ಷಣ ತನ್ನಜಡವಸ್ತುವಿನಕಿಂತ।
ಶತಗುಣ ವಿಲಕ್ಷಣನೆಂದು ಮತಿಮಾತ್ರದದರಲ್ಲಿ ।
ಸತತ ತಾನಾಗೆ ಶಾಶ್ವತ ವಸ್ತವಿನ್ನು ।
ಜಿತವಾಗಿ ಪಿಡಿದುಕೊಂಡು ಪತಿತಪಾವನನಾದ ಗೋಪಾಲವಿಠ್ಠಲನಲ್ಲಿ
ರತಿವುಳ್ಳವನಾದರೆ ಪಥ ಪೊಂದುವನುಗತಿಗೆ ॥-॥

ಮಟ್ಟತಾಳ

ಪ್ರಥಮ ಸಾಧನಜೀವ ಅಸ್ವತಂತ್ರ ।
ದ್ವಿತಿಯ ಸಾಧನ ಹರಿ ಸ್ವತಂತ್ರ ಸ್ಮೃತಿ ।
ತೃತಿಯ ಸಾಧನ ಜಡ ಚೇತನ ಜ್ಞಾನ।
ಚತುರ ಸಾಧನ ಪೂರ್ಣ ಅಪೂರ್ಣವು ।
ಮತಿ ಇಂದಲಿ ಇದನೆ ಮತ್ತೆ ವಿಸ್ತರಿಸಲು ।
ಶತ ಸಾಹಸವು ಆಗಿ ಸಾಧನ ಕಾಣಿಪವು ।
ಸತುವ ಜೀವ ಮಾತ್ರಕ್ಕೀ ಸಾಧನ ಹೊರ್ತು ।
ಗತಿ ಆಗದು ಕಾಣೊ ಎಷ್ಟು ಸಾಧನ ಮಾಡೆ।
ಗತಿ ಅಗತಿ ಗಮನ ಸ್ವರ್ಗ ನರಕಗಳಲಿ ।
ಮಿತಿ ಇಲ್ಲದೆ ಪುನಹಾ ಸುತ್ತುತಲಿ ಇರುವ ।
ಚ್ಯುತ ದೂರ ಚಲುವ ಗೋಪಾಲ ವಿಠ್ಠಲ ।
ಸ್ವತಃ ವೊಲಿದರೆ ವೊಲಿವಯುತನಕ್ಕಗೋಚರಾ ॥೨॥

ರೂಪಕ ತಾಳ

ಕರ್ತು ನಾನೆಂದರೆ ದೋಷ ಫಲವು ಪ್ರಾಪ್ತಿ ।
ಕರ್ತನಲ್ಲೆಂದರೆ ಸಾಧನಕ್ಕೆ ಫಲವಿಲ್ಲ ।
ವ್ಯರ್ಥ ಸುಮ್ಮನಿಪ್ಪುವದಕ್ಕಿಂತ ಜಡನಲ್ಲ ।
ಕರ್ತ ಜೀವೆಂಬುವದು ಶ್ರುತಿ ಸ್ಮೃತಿಗಳಲಿ ಸಿದ್ಧಾ ।
ಕರ್ತ ಜೀವೆಂಬುವದು ಜೀವ ಸ್ವಾಧೀನಲ್ಲಾ ।
ಕರ್ತು ನಿಷ್ಠಾ ಧರ್ಮು ಕೊಟ್ಟರಿವರಿಗೆ ಉಂಟು ।
ಕೊರ್ತೆ ಮಾಡುವನಲ್ಲ ಕೊಟ್ಟ ಕರ್ತುತ್ವಂನ್ಯಾ ।
ನಿಷ್ಟವಾಗಿ ಜೀವಕ್ಹತ್ತಿ ತಾ ಇಪ್ಪೆದು ।
ಸ್ಫೂರ್ತಿ ಬಂದರೆ ಅರಿವಾ ಸ್ಫೂರ್ತಿ ಬರದಿರೆ ಮರೆವ ।
ಗಾತ್ರ ಹಸಿದರೆ ಅಳುವಾ ಗಾತ್ರ ತುಂಬಲು ನಲಿವಾ ।
ಕೀರ್ತಿ ಅಪಕೀರ್ತಿ ತನ್ನದೆಂದ್ಹಿಗ್ಗುವಾ ।
ವ್ಯರ್ಥ ಇದರಿಂದ ಆನಂದ ಆಚರಿಸುವ ।
ಸ್ವಾರ್ಥ ಸುಖವ ನರಿಯಾ ಹರಿ ಕರ್ತುಕನಾಗಿ

ಸ್ಫೂರ್ತಿ ತಂದಿತ್ತರೆ ಸುಖವೆ ಬಡಿವಾ ।
ಮರ್ತರೆ ಮರೆವುವನು ಸ್ವಾರ್ಥಪುಟ್ಟದೊ ಹರಿಯು ತಿಳಿಸದಿರಲು
ಕರ್ತೃ ಕಾರ್ಯ ತಾ ವಿಷ್ಣು ಗೋಪಾಲ ವಿಠ್ಠಲ ।
ಪಾತ್ರ ಪಾತ್ರವರಿತು ಫಲವ ನೀವಾ ॥೩॥

ಅಟ್ಟ ತಾಳ

ಅನಾದಿ ಇಂದಲೆ ಹರಿ ತನ್ನ ಸ್ವಾತಂತ್ರ್ಯ ।
ನಾನಾ ಜೀವರಲಿ ವಿವರ ಮಾಡಿ ಇಟ್ಟಿರುವ ।
ತಾನು ಅಭೇದನಾಗಿ ಸರ್ವಾಂತರದಿದ್ದು ।
ನೂನ್ಯಾಧಿಕ ವೆನಿಪಾ ಅಧಿಕಾರಾನುಸಾರ ।
ಶ್ರೀ ನಾರಿಯಲ್ಲಿ ಶತಸಹಸ್ರ ಭಾಗವು ನಿಟ್ಟ ।
ಅನಿಲಾನಲ್ಲಿ ಶತವು ಇಟ್ಟು ।
ತಾನು ಇಟ್ಟನು ರುದ್ರನಲ್ಲಿ ತದರ್ಧವು ।
ನೂನ್ಯ ಇದರೊಳಗರ್ಧ ಇಂದ್ರಗಿತ್ತಾ ।
ಅನಿಮಿಷ ಗಂಧರ್ವ ಋಷಿಕ್ಷಿತಿಪರರು ಕ್ರ ।
ಮಾನುಸಾರವು ಇತ್ತಾ ಮಾನುಷ್ಯರಿಗೆ ।
ಏನಿತ್ತ ಸ್ವಾತಂತ್ರ ತಾನೆ ಇಟ್ಟುಕೊಂಡು ।
ನಾನಾಪರಿಯು ನಾಟಾ ನಾಡಿಸುವ ।
ಆನಿಯಲ್ಲಿ ಇದ್ದು ಗೋಣಿಯು ಹೊರಿಸುವಾ ।
ಹೇನಿನಲ್ಲಿದ್ದರು ತೃಣವು ಭಾರಾ ।
ಇನಿತಿಘೆಚ್ಚಿಗೊಡ ಅಲ್ಲಲ್ಲಿ ಸ್ವಾತಂತ್ರ।
ತಾನು ಸಮ ಸರ್ವತ್ರದ್ರುವ್ಯ ಪೂರ್ಣ ।
ಪ್ರಾಣಿಗಳಿಗೆ ಮಾತ್ರ ತಿಳಿಯಗೊಡದೆ ತನ್ನ ।
ತಾನು ಬಡಿದಾಡಿಸುವ ಜೀವಿಗಳನ ।
ತಾನು ಜ್ಞಾನ ಬಲಪೂರ್ಣನು ಆದರು ।
ಪ್ರಾಣಿಗಳ ಸ್ಥಿತಿಯ ಅರಿತು ಚರಿಯುಮಾಳ್ಪ ।
ಆನಂದ ಸುಖಸಾಂದ್ರ ಗೋಪಾಲ ವಿಠ್ಠಲ ।
ಜ್ಞಾನಿಗಳಿಂದೀಗೆ ತಿಳಿಯಪಡುವಾ ॥೪॥

ತ್ರಿವಿಡಿತಾಳ

ನೋಡು ಕರ್ಮಗಳಿನ್ನು ಅನಂತವಾಗ್ಯುಂಟು ।
ಮಾಡಿ ಪೂರೈಸದೆ ಅಂತೆ ಇಲ್ಲ ।
ಮಾಡಿದೆನೆಂಬ ಅಹಂಕಾರ ಬಂದೊದಗಿದರೆ ।
ಮಾಡಿದವು ನಷ್ಟ ಮೇಲಿನ್ನು ದೋಷಾ ।
ಮಾಡದಿಪ್ಪವೆ ನಡಿಯದ ಕರ್ಮ ಮಾಡೊದಕಿಂತ ।
ಮೂಢನಾಗಿಪ್ಪವದೆ ಜಡನುಲೇಸು ।
ನೋಡು ಸಕಲ ಕರ್ಮ ಆವಾದರೊಳು ।
ಅಡಕ ಮಾಡಿದರೆ ಪುರುಷಕೊಡುವಂಥದೂ ।
ಮಾಡು ಹರಿಕಥಾ ಶ್ರವಣಾಖ್ಯ ಕರ್ಮವು ಮನಕೆ ।
ಕೂಡಿದರೆ ಪುನಹ ಪುನಹ ಮಾಡಬೇಕೊ ।
ಮಾಡಿದಂತೆ ಮನನ ಮಾಡಿ ಮನದಲ್ಲಿ ಗುರುತು ।
ಮಾಡಬೇಕಿನ್ನು ಮಹಾಶ್ರದ್ಧೆಯಿಂದ ।
ಮಾಡಿ ಮಾಡಿಸುವಂಥ ಹರಿಯ ತಿಳಿದರೆ ಕೈಯ್ಯ ।
ಗೂಡುವದು ಒಂದಕಾನಂತ ತಿಳಿಪಾ ।
ಮಾಡಿ ಮಾಡಿ ಹೀಗೆ ಅರ್ಪಣ ಬುದ್ಧಿಯಲಿ ।
ಮಾಡದೆ ಕರ್ಮಫಲ ಕೊಡುವವಲ್ಲಾ ।
ನೋಡು ಒಂದು ಜನ್ಮಶ್ರವಣವ ಮಾಳ್ಪ ।
ನೋಡು ಒಂದು ಜನ್ಮಮನನ ಮಾಳ್ಪ ।
ನೋಡು ಶತಜನ್ಮವು ನಿಧಿಧ್ಯಾಸವು ಮಾಡಿ ।
ನೋಡುವ ಸಂಪ್ರಜ್ಞ ಸ್ಥಿತದಿ ಹರಿಯ ।
ಮಾಡುವನು ಆ ಮೇಲೆ ಅಸಂಪ್ರಾಜ್ಞಸಮಾಧಿ ।
ಕೂಡುವನು ಅನ್ಯ ಎಚ್ಚರವ ಮರೆದು ।
ನೋಡುವ ಜನರಿಗೆ ಜಡನಂದದಿ ಕಾಂಬಾ ।
ಮಾಡನು ಬಾಹಿರ ವಿಷಯದಲಿ ಮನವ ।
ಪಾಡಿದವರ ಪ್ರಾಣ ಗೋಪಾಲ ವಿಠ್ಠಲ ।
ನೀಡುವನು ಗತಿ ಅವರ ಯೋಗ್ಯತರಿತು ॥೩॥

ಅಟ್ಟ ತಾಳ

ತಿಳುವನಾಗಲಿ ಬೇಕು ತನಗಿಂದುತ್ತಮರಿಂದ ।
ತಿಳದಾಡುತಿರಬೇಕು ತನ್ನ ಸಮಾನಿಕರಿಂದ ।
ತಿಳಿಯ ಪೇಳಲಿ ಬೇಕು ತನಗಿಂದವರಾರಿಗೆ ।
ತಿಳಿದವರವರ ಸ್ಥಿತಿಗಳು ಅರಿದಿನ್ನು ।
ತಲೆವಾಗಿ ಸತ್ವರಿಗಭಿಮುಖವಾಗಿ ಸಂಚರಿಸು ।
ತಲಿರಬೇಕು ಚಲಿಸದೆ ನೀಚರ್ಗೆ ।
ಅಲ್ಪರಿಯದೆ ಅರ್ಥ ಬಲವಂತರ ಕಂಡು ।
ಹಳಿದು ತನ್ನ ನಿಜ ಬಡತನ ಪೇಳದೆ ।
ಘಳಿಸೆ ದ್ರವ್ಯದಿ ಪೂಜೆ ಹರಿಯ ಒಲಿಸೆನೆಂಬ ।
ಕಳವಳವನು ಬಿಟ್ಟು ಮಲರಹಿತನಾಗಿ ।
ಸಲಿಲದಿಂದಲೆ ಹರಿ ಸಂತೋಷಬಡಿಸಿನ್ನು ।
ಕಿಲಿಕಿಲಿ ನಗುತಲಿ ದುಷ್ಟರ ಎದುರಿಗೆ ।
ಶಿಲುಕದೆ ಅವರಿಂದರ್ಚನೆ ಒಮ್ಮೆ ಆದರೂ ।
ಬಲರಹಿತರ ಬಳಿಯಲಿ ಇದ್ದ ತನ್ನ ಭಾಗ ।
ತಿಳಿದುಕೊಂಡು ಹರಿಗೆ ಅರ್ಪಣೆ ಮಾಡಿ ।
ಜಲದಲ್ಲಿ ಇದ್ದ ಕಮಲದಂತೆ ಸಂಸಾರ ।
ಸುಳಿಗೆ ಸಿಕ್ಕದೆ ಬಯಲಿಗೆ ಬೀಳೊ ಬಗೆ ಇದೇ ।
ಮಲತ ಮಲ್ಲರ ಗಂಡ ಗೋಪಾಲ ವಿಠ್ಠಲ ।
ಸುಲಭನು ಈಪರಿ ತಿಳಿವಿಕಿದ್ದವಗೆ ॥೬॥

ಆದಿ ತಾಳ

ದ್ವೇಷಿಯಾದವರಿಗೆ ದ್ವೇಷಿಯಾಗಿರುವ ।
ದಾಸನಾದವರಿಗೆ ಪೋಷಿಯಾಗಿರುವ ।
ದೋಷ ರಹಿತ ನೆನ್ನೆ ದೋಷ ಕೆಡಿಸುವ ।
ನಾಶರಹಿತ ನೆನ್ನೆ ನಾಶದೇಹವನೀಯಾ ।
ದೋಷಕ್ಕೆ ಕ್ಲೇಶ ತಾ ಉಣಿಸಿ ಬಿಡುವದು ।
ದ್ವೇಷಕ್ಕೆ ದುಃಖ ಶಾಶ್ವಿತವೆಂದೆಂದು ।

ದೋಷಕ್ಕೆ ಪ್ರಭೇದ ನಾನಾ ಬಗೆ ಉಂಟು ।
ದೋಷವಲ್ಲದೆ ನೋಡು ಅನೃತವೆಂಬೊದು ।
ಈ ಸಮಸ್ತ ಜನ ಬಿಡದಲೆ ಆಡೋದು ।
ನಾಶವಿಲ್ಲದ ಛೇದ್ಯ ಭೇದ್ಯ ಜೀವರಗಿತ್ತ ।
ನಾಶ ನಾದೆ ನಲ್ಲ ಯೆಂದನುವದು ತಾನು ।
ವೃಷ ಕಾಣತ್ವಾದಿಗಳನೆಲ್ಲ ತಾನಾಗೆ ।
ಶಾಶ್ವಿತವೆಂದು ತಾ ಕ್ಲೇಶವ ಬಡುವದು ।
ನಾಶ ತಿಳಿದು ತನ್ನ ತಾನೆವೆ ಛೇದಿಸಿಕೊಂಡು ।
ಮೋಸ ಹೋಗುವ ತನ್ನ ವಾಸಿಯಾ ಅರಿಯದಾ ।
ದೋಷ ಇನ್ನಿದರಿಂದೆ ಹೇಸ ಸಂಸಾರದಿ ।
ಬೇಸರದಲೆ ಇದ್ದು ಬೆಂದು ಬೆಂಡಾಗುವ ।
ಏಸೇಸು ಜನುಮವು ಬಂದರು ದು ।
ರ್ವಿಷಯ ದಾಸಿಯ ಬಿಡದಲೆ ಲೇಸು ದೊರಿಯದಿನ್ನು ।
ಶ್ರೀಶನ ಕರುಣವು ಸಂಪಾದಿಸಲಾಯಿತೆ ।
ಏಸೇಸು ಜನುಮದಿ ಮಾಡಿದಘವು ತೂಲ ।
ರಾಶಿಗೆ ವನ್ಹಿ ಸ್ಪರ್ಶವಾದಂತೆ ವಿ ।
ನಾಶನ ವಾಗೋವು ದೋಷ ಕಾರ್ಯಗಳೆಲ್ಲ ।
ಭಾಸುರ ಮೂರುತಿ ಗೋಪಾಲ ವಿಠ್ಠಲ ।
ಶಾಶ್ವತನಾಗಿನ್ನು ಸಾಕುವಬಿಡದೆ ||೭||

ಜತೆ

ಹರಿ ಕರ್ತೃತ್ವ ತಿಳಿದು ತಾರತಮ್ಯ ಪಂಚಭೇದ ।
ಅರಿದವರಿಗೆ ವೊಲಿವ ಗೋಪಾಲ ವಿಠ್ಠಲಾ ||೮||

## ಸುಳಾದಿ ೧೪

ಶ್ರೀಹರಿ ಸ್ವತಂತ್ರವಿಚಾರ ಜೀವರು ಅಸ್ವಾತಂತ್ರರು ಎಂಬುವ ವಿಷಯ ಅನೇಕ ದೃಷ್ಟಾಂತಪೂರ್ವಕ ಶ್ರೀಹರಿಯೆ ನೀನು ಸ್ವಾತಂತ್ರ ಅಸ್ವಾತಂತ್ರತರ ನಾನು ನೀನೆದಾತಾರ ದಾತನೆಂದು ಪ್ರಾರ್ಥನೆ.

ರಾಗ ಭೈರವಿ ಧ್ರುವತಾಳ

ದೀನರಕ್ಷಕ ನಿನ್ನಧೀನದವ ನಾನು ।
ದಾನ ಬೇಡಿದೆ ನಾ ಧರ್ಮವಂತ ।
ಪ್ರಾಣಿಮಾತ್ರಕೆ ಹಿಂಸ ಪಾಪವೆನ್ನಿಂದನಬೇಡ ।
ನಾನಾ ಜೀವರಲ್ಲಿ ನಿನ್ನಂತೆ ತಿಳಿಸೊ ।
ಗೇಣುಒಡಲಿಗಾಗಿ ಗೆದ್ದು ಹೋಗುವವಮಾತು ।
ಏನಾದರೇನು ಎಂದೆಂದಿಗೂ ಬೇಡ ।
ಗಾಣಿಗ ತಿಲವ ಪಿಡಿದುಗಟ್ಟಿಸಿ ತೈಲತೆಗೆದ ।
ದಾನವ ಮಾಡಿದಂತೆ ಧರ್ಮವಲ್ಲ ।
ಮಾನಸದೊಳಗೆ ನಿನ್ನ ಮೂರುತಿ ಎನಗೆ ತೋರಿ ।
ಹೀನ ಕರ್ಮಗಳೆಲ್ಲ ಹಿಮ್ಮೆಟ್ಟಿಸೋ ।
ಶ್ರೀನಿವಾಸ ರಂಗಗೋಪಾಲ ವಿಠ್ಠಲ ।
ಕಾಣೆನೊ ನೀನಲ್ಲದ ರೊಬ್ಬರಿನ್ನೆಂದಿಗೆ ॥೧॥

ಮಟ್ಟತಾಳ

ಮಾಯಾ ಧಾರಿಸ ಮಾಯಾ ತಿಳಿಯದನಕಾ ।
ಮಾಯುವ ನೀಗೊ ಉಪಾಯುವ ಬಲ್ಲೆನೆ ।
ಮಾಯಾ ಪೊಂದಿಸುವದು ನಿನ್ನ ಆಧೀನವೊ ।
ಮಾಯಾ ಬಿಡುವದು ನಿನ್ನ ಆಧೀನವೊ ।
ಕಾಯಾಕ್ಲೇಶವು ಬಟ್ಟು ಕರ್ಮವು ಮಾಡಿದರೆ ।
ಕಾಯಾ ನಿನ್ನ ಒಲಿಮೆ ಆಯಿತಾಗುವದೇ ।
ಮಾಯಾರಹಿತ ದೇವ ಗೋಪಾಲ ವಿಠ್ಠಲನ ।
ಸಾಯಿಸ ತುಪ್ಪೆಂನ್ನಂಥ ನಾಯಿಗೆ ದೊರಕುವ್ಯಾ ॥೨॥

ತ್ರಿವಿಡಿತಾಳ

ಗೋದಿಯು ಹೊಲದೊಳಗೆ ಹಾದಿ ದೊರಕಿದರೆ ।
ಆದರದಿ ಮನೆಮನೆಗೆ ಹೋಗಿ ಔತನಪೇಳಿ ।
ಭೂದೇವಾ ಮೇಲೆ ಭಕ್ಷಸಂಖ್ಯೆಯು ಬರದು ।
ಪೋದ ಪೋದ ಜನಕೆ ಉಣಿಸಿದೆನೋ? ।(ಉಣಿಸೊರೇನೊ)
ಮಾಧವಗಿನ್ನ ಸಾಧಿಸುತ ಸ್ವಲ್ಪ ।
ಆದಿತೆಂತು ಇನ್ನು ತಿಳಿಯುದಲೆ ।
**ವಾದಿಸುತಲಿ ತತ್ವ ವರ ದೊರದು ಪರರಿಗೆ ।**
**ಬಾಧಿಸಿ ಬೋಧಿಸ ಪೇಳಿದೇನೊ ।**
**ಆದದ್ದು ಇದರೊಳಗೆ ಒಂದಾದರು ಕಾಣೆ ।**
**ಓದನಕೆ ಉಪಾಯು ಆಯಿತಲ್ಲಾ ।**
ಶ್ರೀದೇವಿ ಅರಸ ಗೋಪಾಲ ವಿಠ್ಠಲ ನಿನ್ನ ।
ಪಾದ ಕಮಲ ನಿರುತ ಸ್ವಾದವೆನಗೆ ತೋರೊ ||೩||

ಅಟ್ಟ ತಾಳ

ಇಂದು ಎನ್ನೊಳಗೆ ನೀ ಬಂದು ನಿಂದಿಯೊ ದೇವ ।
ಅಂದು ನಾ ನಿನ್ನವ ಇಂದು ನಿನ್ನವನೆ ।
ಒಂದಕೆ ಎನಗೊಂದು ಭೌತಿಕ ದೇಹವ ।
ಛಂದದಲಿತ್ತು ದೂರದಿಂದ ನೋಡುತಲಿದ್ದು ।
ಅಂದವು ನಿನಗಿದು ಆಟವಾಗಿದೆ ಒಂದು ।
ಇಂದಿರಪತಿ ಎಮ್ಮ ಕುಂದುಗಳೇನಯ್ಯಾ ।
ಹಿಂದು ಇಂದು ಮುಂದು ಎಂದೆಂದಿಗೆ ನಿನ್ನ ।
ಪೊಂದಿದವರ ಮನೆ ಕಂದ ನಾನಯ್ಯ ದೇವಾ ।
ಕಂದರ್ಪ ಜನಕ ಗೋಪಾಲ ವಿಠ್ಠಲ ನಿನ್ನ ।
ಸಂದರುಶನದಿಂದ ನಂದವ ಬಡಿಸು ||೪||

ಆದಿ ತಾಳ

ಬೇಡುವರಾನಂತ ನೀಡುವ ನೀನೊಬ್ಬ ।
**ಮಾಡುವಿ ಕರುಣವು ಮಾಡಿದರಿತು ಇನ್ನು ।**

ಬೀಡುವಿ ( ಇಂಬು, ಆಶ್ರಯ) ನೀ ಭಕುತರನ ಭಕುತಿಯನು ।
ಮಾಡುವ ಸ್ವಾತಂತ್ರ್ಯ ಕೊಡುವದೆಮಗಿನ್ನು ।
ನೀಡಿದರೆನಗುಂಟು ನೀಡದಿದ್ದರೆ ಇಲ್ಲ ।
ಕೋಡಗನ ಕೊರವ ಆಡಿಸಿದಂತೆ ನೀ ।
ನಾಡ ವಿಷಯಂಗಳಿಗೆ ಓಡಿ ಆಡಿಸಿ ಎನ್ನ ।
ಕೇಡು ಮಾಡಿಸಿ ದೂರ ನೋಡುವಿ ಕರುಣದಿ ।
ಗಾಢಾ ಅಹಂಕಾರವು ನೀಡದಲೆ ಎನ್ನಲ್ಲಿ ।
ಕಾಡೋ ದುರಿತ ಹೋಗಲಾಡಿಸಿ ಪೊರೆ ಎನ್ನ ।
ನಾಡ ದೈವರ ಗಂಡ ಗೋಪಾಲ ವಿಠ್ಠಲ ।
ಬೇಡುವೆ ನಿನ್ನನು ಬೇಡೆನೊ ಅನ್ಯರ ॥೫॥

— ಜತೆ —

ಸ್ವತಂತ್ರ ನೀನು ಅಸ್ವಾತಂತ್ರತರನಾನು ।
ದಾತರ ದಾತ ಗೋಪಾಲ ವಿಠ್ಠಲರೇಯಾ ॥೬॥

## ಸುಳಾದಿ ೧೫

ಶ್ರೀ ಹರಿಯೇ ಸರ್ವೋತ್ತಮ ರುದ್ರಾದಿಗಳು ಕಿಂಕರರು ಎಂಬ ಹರಿಯು ಅನೇಕ ಅವತಾರ ಮಹಿಮಾ ವರ್ಣನ ಪೂರ್ವಕ, ಮುಖ್ಯ ಕಾರಣ ಶ್ರೀಹರಿಯೆ ಎಂಬ ಹರಿ ಮಹಿಮಾ ಸ್ತೋತ್ರ.

ರಾಗ ಪೂರ್ವಿ ಧ್ರುವತಾಳ

ಹರಿಯೆ ಸರ್ವೋತ್ತಮ ಹರಿಯೆ ಮೂಲದೈವ ।
ಹರಿ ಕ್ಷರಾಕ್ಷರದಿಂದ ವಿದೂರ ದೂರಾ ।
ಹರಿ ಜಗದ್ವ್ಯಾಪಕ ಸಕಲರಿಂದಲ್ಲಿ ಭಿನ್ನ
ಹರಿ ಮೂಲರೂಪ ಅವತಾರ ಅತ್ಯಂತ ಐಕ್ಯ ।
ಹರಿ ಚಿದಾನಂದ ಚಿನುಮಯ ಚಿದ್ರೂಪ ।
ಹರಿ ಸತ್ಯಸಂಕಲ್ಪ ಉತ್ಪತ್ತಿನಾಶ ದೂರ ।
ಹರಿ ನಿರ್ಜಿತ ಮಾಯಾ ಲೋಕ ಮೋಹಕದೇವ

ನಿರಾಶ್ರಯಾನಂದ ಗೋಪಾಲ ವಿಠ್ಠಲ ।
ಸರಸಿ ಜಾಂಡದ ಧೊರೆ ಸುರತರುವೆ ॥ ೧ ॥

ಮಟ್ಟತಾಳ

ಪಂಚ ಮುಖನ ಕುರಿತು ಕೃಷ್ಣ ತಪಸುಮಾಡಿ ।
ಪಂಚ ಬಾಣನ ಪೆತ್ತ ನೆಂಬಿರೆಲ ಲಾಹಾ ।
ವಂಚಕ ಶ್ರೀಹರಿ ಪ್ರಳಯದಿ ವಟದೆಲಿಯ ।
ಮಂಚದ ಮೇಲೊರಗಿ ತದನಂತರದಿ ವಿ ।
ರಿಂಚಿಯನು ಪಡೆದ ವರ ವಾರದು ಪೇಳಿರಿ ।
ಕೆಂಚೆ ಲಕುಮಿಯುರಸ ಉಪನಯನವಿಲ್ಲದೆ ।
ಮುಂಚೆ ಮಕ್ಕಳ ಪಡದದು ಜಗವರಿಯದೆ ಮರಳೆ ।
ಪಂಚ ಏಕದಶಕ ಸಾಹಸ್ರ ಸ್ತ್ರೀಯರ ಪತಿ ।
ಪಾಂಚಾಲಿಯ ವರದ ನಿತ್ಯ ಬ್ರಹ್ಮಚಾರ್ಯೆಂದು ।
ಪಂಚತ್ವವ ಐದಿದ ತರುಳ ಪರೀಕ್ಷಿತಗೆ ।
ಪಂಚ ಪ್ರಾಣಗಳಿತ್ತ ಅಪ್ರಾಕೃತ ದ್ವಿ ।
ಪಂಚೇಂದ್ರಿಗಳು ಶ್ರೀಹರಿಗೆ ಜನನ ।
ಪಂಚತ್ವವು ನಾಶ ಪ್ರಾರಬ್ಧ ಆಗಾಮಿ ।
ಸಂಚಿತಗಳ ದೂರ ಶುಕ್ಲ ಶೋಣಿತದ ಪ್ರ ।
ಪಂಚ ಎಂದಿಗೆ ಇಲ್ಲ ನರಪಂಚಾನನ ।
ಮಿಂಚುತಲಿದೆ ಮಹಿಮೆ ಅನಂತ ವೇದಾವಳಿಗೆ ।
ವಂಚನಿಯನು ತೋರಿದ ಅಸುರ ಮೋಹನಾರ್ಥ ।
ಪಂಚ ಮುಖ ಹನುಮಂತನ ಪಿತ ಗೋಪಾಲ ವಿಠ್ಠಲನ ।
ವಂಚನಿಲ್ಲದೆ ಸ್ಮರಿಸಲು ಸಂಚಿತಾಗಾಮಿ ತರಿವಾ ॥ ೨ ॥

ರೂಪಕತಾಳ

ಶ್ರೀಧವ ಹರಿಯು ಮತ್ಸ್ಯಾವತಾರಗಳು ।
ಮೇದನಿ ವೊಳಗೆ ಪ್ರಾಕೃತವೆಂಬಿರಿ ।
ಶ್ರೀ ದೇವ ವದನದಿ ವಿಶ್ವ ತೋರಿಸಿದಾಗ ।
ಭೇದಿಸದೆ ಪ್ರಾಕೃತ ಶರೀರವಾದರೆ ।

ಭೇದ ಭೇದವ ತೋರಿದ ಅಸುರ ಮೋಹನಾರ್ಥ |
ಭೇದ್ಯ ಭೇದ್ಯ ಆದೇಹ ಪ್ರಾಕೃತವಾದಡೆ ಅಜ್ಞಾನ |
ಖೇದಕ್ಕೆ ಕಾರಣ ಪೂರ್ಣತ್ವಕ್ಕೆ ಹಾನಿ |
ವೇದಾವಳಿಗಳು ಪೂರ್ಣನೆಂದು ಪೊಗಳಲಿವಕೊ |
ಸಾಧು ಜೀವರಿಗೆ ಈ ಪರಿಜ್ಞಾನ ಸಲ್ಲದು |
ಮೋದ ತೀರ್ಥರ ಉಕ್ತಿ ವಿರೋಧ ಈ ಪರಿಜ್ಞಾನ |
ಆದಿ ನವವಿಧ ದ್ವೇಷದೊಳು ಇದು ಒಂದನ್ನ |
ಯಾದವ ಕೃಷ್ಣನು ತಪಸು ಮಾಡಿದ್ದು ಸತ್ಯ |
ವಾದರೆ ಪ್ರಾಕೃತ ಶರೀರ ಆದರಂತೆ |
ವೇದಾಂತ ವೇದ್ಯ ಗೋಪಾಲ ವಿಠ್ಠಲರೇಯಾ |
ಭೇದ ನಲ್ಲವೊ ಮೂಲ ಅವತಾರಕ್ಕೆ ಐಕ್ಯಾ ||೪||

ಝಂಪತಾಳ

ಹಿರಣ್ಯಕಶ್ಯಪನ ಸಂಹಾರ ಮಾಡಿ ನರಸಿಂಹ ಇರು |
ತಿರಲು ಆಗ ಹರಿ ಶರಭರೂಪದಿ ಬಂದು |
ನರಹರಿಯು ಕೂಡ ಯುದ್ಧವಮಾಡಿ ಜಯಸಿದ |
ಹರನೆ ಸರ್ವೋತ್ತಮನೆಂದು ನುಡಿವಿ |
ಶರ ಭಂಜೆಯು ಪೇಳುವದು ಒಂದೇ ಪುರಾಣದಲ್ಲಿ |
ದುರುಳ ತಾಮಸ ಜೀವರ ಗೋಸುಗ |
ನರಸಿಂಹ ಜಯ ಪೇಳುವ ಪುರಾಣವು ಸಪ್ತ |
ಪರವೇದ ಶಾಸ್ತ್ರ ಸರ್ವತ್ರದಲ್ಲಿ |
"ಹರಿಗುಂಹರಂತ್ರ ಮನುಯುಂತ್ರದೇವಾ |"
ಅರಿಯೊ ಈ ವೇದಾರ್ಥ ಮರಳೆ ಮರಳೆ |
ಅರಿಗೆ ಆಪರಿ ಸಮರ್ಥಿಯನುಳ್ಳರೆ ತನ್ನ |
ಶರಣನ್ನ ಕೊಲ್ಲುತಿರೆ ನೋಡುತಿಹನೆ |
ನರಹರಿ ಧ್ವನಿಗೆ ಸರಸಿಜಾಂಡವು ನಡುಗೆ |
ಹರ ಮೌನ ಧರಿಸನೆ ಆಕಾಲದಲ್ಲಿ |
ಕರಸಾಹಸ್ರವು ಅಷ್ಟೆಚರಣ ಆನನಪಂಚ |

ಮೆರೆವ ದ್ವಯ ಪಕ್ಷಸಾವಿರ ಆಯುಧ ।
ಧರಿಸಿದ ಘೋರ ಶರಭನ್ನ ನರಹರಿಯು ।
ಪರಮ ನಾಯಾಸಾದಿ ಸಂಹಾರಮಾಡಿದ।
ಧರಿಯಲ್ಲಿ ರುಧಿರವು ವ್ಯಾಪಿಸಲು ।
ದುರುಳಜನ ಮರ್ದನ ಗೋಪಾಲವಿಠ್ಠಲರೇಯಗೆ ।
ಸರಿಯಿಲ್ಲ ಸರಿಯಿಲ್ಲ ಸರ್ವೋತ್ತಮಾ ||೪||

ತ್ರಿವಿಡಿತಾಳ

ರಾಮ ರಾವಣನ ಕೊಂದ ದೋಷವು ಬರಲಾಗ ।
ತಾ ಮಾಡಿದನು ಲಿಂಗ ಪೂಜೆ ತಸ್ಮಾತ್ ।
ಉಮಾಕಾಂತನೆ ಸರ್ವೋತ್ತಮನೆಂದು ನುಡಿವಿ ನೀ।
ಪ್ರೇಮದಿ ಇರಿಸಿದ ಶಿವನ ಅಷ್ಟಳದಲ್ಲಿ ।
ಭೀಮಸೇನನು ಪುರುಷಾಮೃಗ ತರ ಪೋಗುವಾಗ ।
ರೋಮಗಳು ಹನುಮಂತ ಕೊಡಲು ಒಯ್ದು ।
ಆ ಮೃಗವು ಅತಿ ತೀವ್ರದಿ ಬರಲಾಗಲು ಒಂದು ।
ರೋಮ ಬಿಸಾಟಿ ಕೋಟಿ ಲಿಂಗ ಕೋಟಿ ತೀರ್ಥ ।
ರೋಮ ರೋಮಕೆ ಕೋಟಿ ಲಿಂಗಗಳ ಮಾಡಿತು ।
ಶ್ರೀ ಮಾರುತಾತ್ಮಜನ ರೋಮಂಗಳು ಆ ಮ ।
ಹಾ ಮಹಿಮ ಶ್ರೀ ರಾಮಚಂದ್ರನ ದೂತಾ ।
ರಾಮಗೆ ಲಿಂಗ ಪೂಜೆಯ ಮಾಳ್ಪ ಬಗೆಯಂತೊ ।
ಆ ಮಹಾ ಕಾಲದಲ್ಲಿ ಈ ಮೂಜಗಂಗಳೆಲ್ಲ ।
ಸಾಮಸ್ತ ಸುರಮುನಿ ಋಷಿ ಸನಕಾದಿಗಳು ಇಂದ್ರ ।
ಕಾಮ ಗರುಡ ರುದ್ರ ಫಣಿಪ ಆವಿರಿಂಚಿಯ ।
ತಾ ನುದರದಿ ತಿಂದು ಸರ್ವವು ಲಯವು ಮಾಡಿ ಪ ।
ಕೋಮೇವ ದ್ವಿತೀಯನಾಗಿ ಸ್ವಾಮಿ ಮಲಗಿದ್ದಾಗ ।
ಯ್ಯೋಮಕೇಶನು ಆವ ಕಡೆ ಇದ್ದನೊ ।
ತಾಮರಸ ಪೀಠ ಫಣಿಪ ರುದ್ರಾದ್ಯರು ।
ರಾಮಗೆ ಕಿಂಕರರು ಜಗತ್ತಿಗೆ ಗುರುಗಳು ।

ರಾಮ ಚಂದಿರ ಗೋಪಾಲ ವಿಠ್ಠಲರೇಯಾ |
ಕಾಮಾರಿ ವರದ ಕರುಣಾ ಸಾಗರಾ ||೫||

ಅಟ್ಟ ತಾಳ

ವ್ಯಾಸ ಹಯಗ್ರೀವ ಹರಿಪರರೆನ್ನುವ |
ರಾಶಿರ ಬಾಹು ಖಂಡಿಸಿದಲೆಂಬರಿ ವೇದ |
ವ್ಯಾಸ ಹಯಗ್ರೀವ ಇರುತಿರೆ ಅವರಂತೆ (ಲೆಂಕಾರಿ)—
ವೇಷವ ಧರಿಸಿ ಖಳರು ಇಬ್ಬರು |
ಮೋಸದಿ ಸಭೆಯೊಳು ನಿಂತು ಕೂಗಲವರ—
ಸಿರಬಾಹು ಖಂಡಿಸಿದವು ಅವರಿಗೆ |
ಈ ಶಬ್ದ ನುಡಿಯ ಯೋಗ್ಯತೆ ಇಲ್ಲದವರಿಗೆ |
ಶ್ರೀಶರಂಗನೆ ಅವರನ್ನ ಭೇದಿಸಿದ |
ವ್ಯಾಸ ಹಯಗ್ರೀವರಿಬ್ಬರಿವರು ಬೇರೆ |
ಈಶನು ಭುಜವೆತ್ತಿ ಕುಣಿಯುಲೆ ಉ |
ಮೇಶಗೆ ಭೃಗುಶಾಪ ಲಿಂಗವಾಗೆಂದು ರ |
ಮೇಶ ಗೋಪಾಲ ವಿಠ್ಠಲನೆ ಪರೇಶ ವ್ಯಕ್ತ ಶಾಶ್ವತ ಶಾಶ್ವತನೊ ||೭||

ಆದಿತಾಳ— ಸಿಕ್ಕಿಲ್ಲ

ಜತೆ

ಮುಖ್ಯ ಕಾರಣ ಅಪ್ರಾಕೃತ ನಿರಂಜನ |
ಮುಖ್ಯ ಪ್ರಾಣಾಂತರ್ಗತ ಗೋಪಾಲ ವಿಠ್ಠಲ ||೮||

## ಸುಳಾದಿ ೧೬

ಶ್ರೀವಸುಧೇಂದ್ರ ಮುನಿಯರ್ಚಿತ ಶ್ರೀ ಮೂಲರಾಮದೇವರ ವಿಚಿತ್ರ ಮಹಿಮಾ. ಋಜುಪುಂಗವರಾದ ಬ್ರಹ್ಮಕರ ಸ್ಪರ್ಶದಿಂದ ಜಡಗಳಲ್ಲಿ ಸಹ ವ್ಯಕ್ತತಯಾ ಶ್ರೀಹರಿ ಸಾನಿಧ್ಯಾದಿ ಪ್ರಮೇಯ.

ರಾಗ ನೀಲಾಂಬರಿ ಧ್ರುವತಾಳ

ತರಣಿ ಕುತೋತ್ಪನ್ನ ತಪುತಕಾಂಚನವರ್ಣ |
ಪರಮ ಮಂಗಳಮೂರ್ತಿ ಪಾವನ್ನ ಸೂಕೀರ್ತಿ |

ಕ್ಷೀರ ಅಕ್ಷರದಿಂದ ವಂದಿತ ವ್ಯಾಪುತ ।
ಶರಣ ಜನರಪಾಲಾ ಶತಆನಂದ ಜನಕ ।
ಪರಿಪೂರ್ಣ ಗುಣಭರಿತಾ ವರಜ್ಞಾನ ಪ್ರದಾತಾ ।
ಅರಿತು ಫಲವ ತ್ರಿವಿಧರಿಗೆ ಇಪ್ಪುವದಾತ ।
ಧರೆ ಈರೇಳು ರಕ್ಷಕಧರ್ಮ ಪ್ರತಿಪಾಲಕ ।
ಸರಿಯಿಲ್ಲದ ದೇವ ಸರ್ವೋತ್ತಮ ।
ದುರುಳಜನ ಮರ್ದನ ದುಃಖಾದಿಗಳದೂರಾ ।
ತರುಣಿಯಿಂದ ಬಿರದು ವರಗಳನೀವುತ ।
ನಿರುತದಿ ನಮ್ಮ ವಸುಧೇಂದ್ರ ಮುನಿಯುಚಲ್ವ ।
ಕರಕಮಲದಲಿ ನಿಂದು ಮೆರೆವ ದಾತಾ ।
ಪರಮದಯಾಳು ರಾಮ ಗೋಪಾಲ ವಿಠ್ಠಲನಿನ್ನ ।
ದರುಶನವೆ ಇಂದಿನ ದಿನವೆ ಸುದಿನವು ॥೧॥

ಮಟ್ಟತಾಳ

ಆದಿಯಲ್ಲಿ ಆದರದಲ್ಲಿ (ದಿ) ನಿನ್ನ ಮೋದದಿ ಅರ್ಚಿಸೆ ।
ಸಾಧಿಸಿ ಪದವಿಯ ಐದವ ಧರಿಗೆ ।
ಸಾಧು ಜೀವರ ಪೊರಿಯೆಕ್ರೋಧರಹಿತ ನಿನ್ನ ।
ಮೇದಿನಿ ಒಳಗಿಟ್ಟು ಹಾದಿಯತೋರಿದ ಹಾ ಅಜನು ನಿನ್ನ ।
ಪಾದದ ಸೇವಿಯು ಶೋಧಿಸಿ ಮಾಳ್ಪರಿಗೆ ।
ಬಾಧೆ ಗೆಲಿಸುವದು ಜನನ ಮರಣಗಳ ।
ಪಾದಸೋಂಕಿದ ಶಿಲೆಯು ಪಾವನ್ನ ಮಾಡಿದ ।
ಶ್ರೀಧರ ರಾಮ ಗೋಪಾಲ ವಿಠ್ಠಲ ।
ವಾದೇಂದ್ರ ಸುಕರಗೊಲಿದು ಮೆರೆವ ಪ್ರೀತಾ ॥೨॥

ರೂಪಕತಾಳ

ಛಂದದಿ ಬೊಮ್ಮರುದ್ರ ಇಂದ್ರಾದಿಗಳು ।
ಕುಂದದೆ ಸುರ ಋಷಿ ಗಂಧರ್ವಾದಿಗಳು ।
ಒಂದೊಂದಂಶದಿಂದ ಬಂದು ನಿನ್ನರ್ಚಿಸಿ ।
ಮುಂದ ಬುದ್ಧಿಗಳುಳ್ಳ ಜಗವಪಾಲಿಸುವರು ।

ಮಂದಮತಿಗಳು ಇವರ ಮನುಜರೆಂದವರಿಗೆ ।
ಪೊಂದುವರು ಮಹದಾದಿ ನಿರಯದಲ್ಲಿ ।
ಸಂದರುಶನದಿಂದೆ ಸಕಲದೋಷದೂರ ।
ಇಂದಿರೆ ಅರಸನು ಇಪ್ಪುವ ಇವರಲ್ಲಿ ।
ಬಂದ ಬಂದವರ ಅಭೀಷ್ಟವ ಪೂರೈಸಿ ।
ನಿಂದು ಮೆರೆವ ವಸುಧೀಂದ್ರ ಮುನಿಯ ಮನ ।
ಮಂದಿರ ದೊಪ್ಪುವ ರಾಮ ಗೋಪಾಲ ವಿಠ್ಠಲ ।
ಬಂಧಕ ಮೋಚಕ ಮಾಳ್ಪ ಶಕ್ತ ।

ಝಂಪೆ ತಾಳ

ನಿನ್ನ ನಾಮ ಒಮ್ಮೆ ಸ್ಮರಿಸಿದಡಾಯಿತೇ ।
ಘನ್ನ ದುರಿತಗಳೆಲ್ಲ ದೂರಾಗಿ ಪೋಗುವವು ।
ನಿನ್ನ ಮೂರುತಿ ಒಮ್ಮೆ ನೋಡಿದರಾಯಿತೆ ।
ಜನುಮಾದಿಗಳು ಜಡಕ್ಲೇಶಗಳು ತರಿವುವದು ।
ನಿನ್ನ ಅವಯವಂಗಳು ಎಲ್ಲಿ ನೋಡಲು ಪೂರ್ಣ ।
ನಿನ್ನ ಬಳಿಯಲ್ಲಿ ಸಕಲಾದಿ ತೀರ್ಥಂಗಳುಂಟು ।
ನಿನ್ನ ಪಾಲ್ಗೈಸುತ್ತ ಸುರರಿಪ್ಪುವರು ।
ಘನ್ನ ಮಹಾ ಮಹಿಮ ಮೂಲ ರಾಮ ।
ನಿನ್ನ ಪರಿವಾರ ಸಹಿತ ಎನ್ನ ಗುರು ವಸುಧೀಂದ್ರ ।
ಮುನ್ನೆ ನಿನ್ನರ್ಚಿಸುವ ಭಾಗ್ಯವೆಂತೊ ।
ಚಿನ್ನುಮಯ ಮೂರುತಿ ಗೋಪಾಲ ವಿಠ್ಠಲ ।
ನಿನ್ನ ಭಕುತರು ನಿನ್ನ ಮಹಿಮೆಗೆ ನಮೋ ॥೪॥

ತ್ರಿವಿಡಿ ತಾಳ

ಶರಣರ ಪಾಲಕ ದುರುಳರ ಶಿಕ್ಷಕ ।
ಶರಣು ಶರಣು ನಿನ್ನ ಚರಣ ಕಮಲಕ್ಕೆ ।
ಪರಮ ಪಾವನ ನಾಮ ಪರಿಪೂರ್ಣ ಗುಣ ಕಾಮ ।
ಸ್ಥಿರ ಯೋಗಿಗಳರಸ ಸ್ಥಿರ ಜೀವಿಯೊ ।
ಮುಧಿತಗಿರಿಗೆ ಕುಲಿಶ ದೂರ ಅತಿ ದೂರ ।

ಚರಣದಂದುಗೆ ಗೆಜ್ಜೆವರ ಜಾನು ಜಂಘ ಕಟಿ ।
ತರ ಮೇಲೆ ಪೊಳಿವ ಕಿಂಕಿಣಿಯು ಘಂಟೆ ।
ಪರಮ ಶೋಭಿತದ ಉದರ ವೃಕ್ಷ ಕೌಸ್ತುಭ ।
ಕೊರಳ ಪದಕ ನಾನಾ ಸರಗಳಿಂದೊಪ್ಪುತ ।
ಸಿರಿ ಗಂಧ ಕಸ್ತೂರಿ ಪರಿಮಳ ಭೂಷಿತ ।
ವರ ಶಾರಂಗ ಪಾಣಿ ಕರನ ಕುಂಡಲ ಧರ ।
ಸ್ವರೂಪಾದಿ ನಯನ ಸಿರಿ ಕಿರೀಟಧರ ।
ಸ್ವರೂಪಲಂಕಾರದಿಂದೊಪ್ಪುವ ಶ್ರೀ ರಾಮ ।
ಪರಮ ಶೋಭಿತ ನಾಮ ಗೋಪಾಲ ವಿಠ್ಠಲ ।
ನಿರುತ ವಸುಧೀಂದ್ರ ಮುನಿಯ ಮನದಿ ವಾಸಾ । ॥೫॥

ಅಟ್ಟ ತಾಳ

ನಿತ್ಯ ಅನಿತ್ಯ ಜಡದಲ್ಲಿಪ್ಪುವನು ನೀನೆ ।
ವ್ಯಕ್ತ ಅವ್ಯಕ್ತನಾಗಿದ್ದು ಈ ಧರಿಯ ।
ಭಕ್ತರುಗಳಿಗೆ ನೀ ಬಲ್ಲಂತೆ ತೋರುತ್ತ ।
ಮರ್ತ್ಯ ಲೋಕದಿ ಬಂದು ಈ ಪ್ರತಿಮೆ ಅಂತರ್ಗತನಾಗಿದ್ದು ।
ನಿತ್ಯಉತ್ಸಾಹಗಳು ಭಕ್ತರಿಂದಲಿಕೊಂಡು ಬಹು ಧರ್ಮದಿಂದಲಿ।
ನಿತ್ಯ ವಸುಧೀಂದ್ರ ಹೃತ್ಕಮಲದಿ ।
ತತ್ತ್ವಳಿಸುತ ಮೆರೆವ ಸಿರಿರಾಮ ।
ಮುಕ್ತಿಪ್ರದಾಯಕ ಗೋಪಾಲ ವಿಠ್ಠಲ ।
ಚಿತ್ತಶುದ್ಧನ ಮಾಡು ಭಕ್ತಿಜ್ಞಾನವೆ ನೀಡು ॥೬॥

ಆದಿತಾಳ

ದುರಿತದೂರ ದುಃಖನಾಶ ।
ಕರುಣಾಕರ ಕಪಟ ರಹಿತ ।
ಶರಣ ಪಾಲಸಿರಿ ಅರಸ ।
ಗರುಡ ಗಮನ ಗರ್ವ ರಹಿತ ।
ಸರಸಿಜಾಕ್ಷ ಸರ್ವೋತ್ತಮ ।
ಸಾರ ಭೋಕ್ತ ಸರ್ವ ವ್ಯಾಪ್ತ ।

ಕಾರಣನೆ ಕರ್ಮ ರಹಿತಾ ।
ಭಾರ ಕರ್ತ ಭಯ ನಿವಾರಣ ।
ತಾರಕನೆ ತ್ರಿಗುಣ ದೂರಾ ।
ಮಾರನಯ್ಯಾ ಮಧುಸೂದನ ।
ಮಾರುತೀಶ ಮಾಯಾ ರಹಿತಾ ।
ಜಾರ ಚೋರ ಜನ್ಮ ರಹಿತಾ ।
ಧೀರ ಶೂರ ದಿವ್ಯ ವಿಗ್ರಹ ।
ಪರಮ ಪುಣ್ಯ ಪರಿಪೂರ್ಣ ।
ಸುರಾದಿ ವಿನುತ ಗೋಪಾಲ ವಿಠ್ಠಲ ।
ಗುರು ವಸುಧೇಂದ್ರ ಮುನಿಯ ಈಶಾ ॥೭॥

ಜತೆ

ಗುರು ವಸುಧೀಂದ್ರರ ಕರಕಮಲದೊಳು ತೋರ್ಪ ।
ಸಿರಿ ರಾಮ ಗೋಪಾಲ ವಿಠ್ಠಲ ಶರಣು ಶರಣು ॥೮॥

## ಸುಳಾದಿ ೧೭

ಭಕ್ತರ ಮಹಿಮೆ ಶ್ರೀ ಹರಿಯು ಭಕುತರಲ್ಲಿ ಮಾಡುವ ವಾತ್ಸಲ್ಯ

ರಾಗ ಭೈರವಿ, ಧ್ರುವತಾಳ

ಭಕುತರ ಸೃಷ್ಟಿಯೇವೆ ನಿನ್ನ ಸೃಷ್ಟಿಯೋ ದೇವಾ ।
ಭಕುತರ ಸ್ಥಿತಿಯೇವೆ ನಿನಗೆ ಸ್ಥಿತಿಯುಸ್ವಾಮಿ ।
ಭಕುತರ ಲಯುವೆ ನೋಡು ನಿನಗೆ ಲಯುವು ಇನ್ನು ।
ಭಕುತರ ಪ್ರೇರಣವೆ ನಿನಗೆ ಪ್ರೇರಣೆಕಾಣೋ ।
ಭಕುತರ ಜ್ಞಾನವೆ ನಿನಗೆ ಜ್ಞಾನವು ನೋಡು ।
ಭಕುತರ ಅಜ್ಞಾನವೆ ನಿನಗೆ ಸ್ವಾಧೀನವದು ।
ಭಕುತರ ಬಂಧದಿಂದ ಬಂಧನೆಂದೆನಿಸಿಕೊಂಬೆ ।
ಭಕುತರ ಮೋಚನವೆ ನಿನಗೆ ಮುಖ್ಯಮೋಚನ ।
ಭಕುತರಿಗೆ ನಿನ್ನದು ಒಂದಾದರು ಬಾರದು ।
ಭಕುತರದು ನಿನ್ನಲ್ಲಿ ಒಂದು ಇಲ್ಲದ ವಿಲ್ಲಾ ।

ಭಕುತರು ನಿನ್ನಾಧೀನ ನೀ ಭಕುತರಾಧೀನ |
ಭಕುತರಿಗೆ ನೀ ಬೇಕು ನಿನಗೆ ಭಕುತರುಬೇಕು |
ಭಕುತರೆ ನಿನಗಿನ್ನು ಬ್ಯಾಡದಿದ್ದರೆ ಸ್ವಾಮಿ |
ವ್ಯಕುತಿ ಮಾಡುವರಾರು ಈ ನಿನ್ನ ಗುಣಗಳ |
ಸಕಲವುಳ್ಳವ ಶೌರ್ಯವಂತ ನೀನು ಆದರು |
ರಿಕತ ನಿಂದಲೆ ಅದು ಪ್ರಕಟವಾಗಲಿಬೇಕು |
ಭಕುತ ವತ್ಸಲ ನಮ್ಮ ಗೋಪಾಲ ವಿಠ್ಠಲ |
ಭಕುತರೆ ಬಲ್ಲಿದರೋ ನಿನ್ನ ಬಲದಿಂದ ಸ್ವಾಮಿ | ||೧||

ಮಟ್ಟತಾಳ

ಜಗವು ನಿನ್ನ ಒಳಗೆ ನೀನು ಭಕುತರೊಳಗೆ |
ಜಗವ ಪೊತ್ತಿಹೆ ನೀನು ನಿನ್ನ ಪೊತ್ತಿಹರವರು |
ಜಗಕೆ ಮೋಹಕ ನೀನು ನಿನಗೆ ಮೋಹಿಸೊರವರು |
ಜಗದಿ ವ್ಯಾಪ್ತನೀನು ನಿನ್ನವ್ಯಾಪ್ತರವರು |
ಜಗದಿ ಭಿನ್ನನು ನೀನು ನಿನಗೆ ಭಿನ್ನರವರು |
ಚಿಗಿದರೆ ಚಿಗಿವರು ನಗಿದರೆ ನಗುವರು |
ಹಗಿಯು ಸ್ನೇಹವೆಲ್ಲ ನಿನ್ನಾಧೀನವೆಂದು |
ಬಿಗಿದುಕೊಂಡಿಹರು ಬಗಿಯದೆ ಅನ್ಯರನ |
ಖಗವಾಹನ ಚಲ್ವ ಗೋಪಾಲ ವಿಠ್ಠಲ |
ಅಗಲದೆ ನಿನ್ನನು ಅರ್ಚಿಸುವರು ಬಿಡದೆ ||೨||

ರೂಪಕತಾಳ

ಜಗವನೆಲ್ಲ ಸುತ್ತಿಸುವನೆ ನಿನ್ನ ಅವರು |
ಮಗನ ಮಾಡಿ ಪಿಡಿದು ಮತ್ತೆ ಆಡಿಸುವರು |
ಜಗವನೆಲ್ಲವ ಇಚ್ಛೆಯಲಿ ಕಟ್ಟುವನೆ ನಿನ್ನ |
ಬಿಗಿದು ಕಟ್ಟುವರು ಕಾಲನೆ ಹಗ್ಗದಿಂದಲಿ |
ಸೊಗಸಾದ ವೈಕುಂಠ ವಾಸವಾಗಿದ್ದನ್ನ |
ಜಗದಲ್ಲಿ ನಿಂತು ಬಾ ಎಂದಿಲ್ಲಿ ಕರೆವರು |
ಯುಗ ಮಹಾ ಪ್ರಳಯಕ್ಕೆ ಚಲಿಸದವನ ನಿನ್ನ |

ಮಿಗೆ ಕೂಗಿ ಕರೆದು ಘಾಬರಿಗೊಳಿಸಿದರು ನಿನ್ನ ।
ಜಗ ಜನ್ಮಾದಿ ಕರ್ತಾ ಗೋಪಾಲ ವಿಠ್ಠಲ ।
ಬಿಗವು ಬೇರೆ ನಿನ್ನ ಭಕತರ ಭಾಗ್ಯವು ॥೩॥

ಝಂಪೆ ತಾಳ

ನಿತ್ಯ ತೃಪ್ತನೆ ನಿನಗೆ ಅನ್ನವನೆ ಉಣಿಸಿದರು ।
ಸತ್ಯ ವಚನವು ಬಿಡಿಸಿ ಪಿಡಿಸಿದರು ಚಕ್ರವನು ।
ಭೃತ್ಯ ರಜ ಭವ ಮಹಾಮಹಿಮನೆ ಕೈಯು ।
ಎತ್ತಿ ಹಾಕಿಸಿದರೆಲ್ಲರು ಉಂಡ ಪರ್ನಗಳ ।
ರಕ್ತ ಶುಕ್ಲರಹಿತ ಕಾಯದವನ ನಿನ್ನ ।
ಮತ್ತೆ ಬಾಣದಿ ಎಚದು ತೋರಿದರು ನಿನ್ನವರು ।
ಸ್ತುತ್ಯ ನೀ ಸರ್ವೋತ್ತಮ ಅಹುದೊ ಅಲ್ಲವೊ ಎಂದು ।
ಎತ್ತಿ ಕಾಲಿಲೆ ಎದಿಗೆ ಒದ್ದರು ನಿನ್ನವರು ।
ಭಕ್ತ ವಾತ್ಸಲ್ಯತ್ವ ತೋರುವದಕೆ ನಿನ್ನ ಕಚ್ಚಿ ।
ಸುತ್ತಿದನು ಕಪಟದಲ್ಲಿ ನಿನ್ನವನು ।
ಮತ್ತೆ ಕಟ್ಟಿದ ಮೀಸೆಯನು ಪಿಡಿದು ಸತ್ಯ ವ್ರತ ।
ನಿತ್ಯ ಬಾಗಿಲ ಕಾಯಿಸಿದನು ಆ ಬಲಿರಾಯಾ ।
ಕಿತ್ತಿ ಕೊಂಡೋಡಿದನು ಕಿರೀಟ ನಿನ್ನವನು ।
ಮತ್ತೆ ಮಳೆಗರೆದು ಪರ್ವತ ಹೊರಸಿದರವರು ।
ಸತ್ಯ ಸಂಕಲ್ಪ ಗೋಪಾಲ ವಿಠ್ಠಲರೇಯಾ ।
ಭಕ್ತರೊಳು ನಿನ್ನ ಆಟವ ತಿಳಿವ ಧನ್ಯಾ ॥೪॥

ತ್ರಿವಿಡಿ ತಾಳ

ನೋಡಿ ನೋಡಿಸಬೇಕು ಓಡಿ ಓಡಿಸಬೇಕು ।
ನೀಡಿ ನೀಡಿಸಬೇಕು ಆಡಿ ಆಡಿಸಬೇಕು ।
ಕೂಡಿ ಕೂಡಿಸಬೇಕು ಮಾಡಿ ಮಾಡಿಸಬೇಕು ।
ಕೇಡು ಲಾಭಂಗಳಿಗೆ ಭಿನ್ನವಾಗಿ ನೀನು ।
ಮಾಡುತಾ ಈ ಪರಿ ಸಿಲ್ಕಿ ನಿನ್ನವರೊಳು ।
ಕೂಡುತ ಮಲಗುತ ಏಳುತ ನಿಂತು ನೀ ।

ನೋಡುವರಿಗೆ ಬಿಂಬಕ್ರಿಯದ ಮೇಲಿನ್ನು ।
ಪಾಡಾಗಿ ತಿಳಿದರೆ ಸ್ವಾಮಿ ಭೃತ್ಯ ಕಾರ್ಯ ।
ಜೋಡೆರಡೊಂದಲ್ಲ ಮಾಡುವನು ಒಬ್ಬ ।
ಮಾಡಿಸುವ ತತ್ತತ್ಯೋಗ್ಯತಿ ಅನುಸಾರ ।
ಪ್ರೌಢ ನಿನಗೆ ಒಂದು ಫಲ ಅಪೇಕ್ಷೆಯು ಇಲ್ಲ ।
ಮಾಡುವೀ ಈ ಪರಿ ಭಕ್ತರಿಗೆ ।
ಮೂಢ ಶಂಕೆಯು ಸಲ್ಲ ವೈಷಮ್ಯ ನೈರ್ಘಣ್ಯ ।
ಕೂಡದು ನಿನ್ನಲ್ಲಿ ಎಂದೆಂದಿಗೂ ।
ಪಾಡಿದವರ ಪ್ರಾಣ ಗೋಪಾಲ ವಿಠ್ಠಲ ।
ಈಡ್ಯಾರೊ ನಿನಗೆ ನೀ ಮಾಡಿದ್ದೆ ಮಹಾಧರ್ಮ ॥೫॥

ಅಟ್ಟತಾಳಿ

ಭಕುತರು ಮಾಡಿದ್ದು ನೀ ಮಾಡಿದುದಯ್ಯಾ ।
ಭಕುತರು ನೋಡಿದ್ದೆ ನೀನು ನೋಡಿದುದಯ್ಯ ।
ಭಕುತರು ನೀಡಿದ್ದೆ ನೀನು ನೀಡಿದದಯ್ಯಾ ।
ಭಕುತರು ಕೊಂಡದ್ದೆ ನೀನು ಕೊಂಡದದಯ್ಯಾ ।
ಭಕುತರು ಆಡಿದ್ದೆ ನೀನು ಆಡಿದದ್ದೈಯ್ಯಾ ।
ಭಕುತರು ಬೇಡೋದು ನಿನ್ನ ಬೇಡುವದಯ್ಯಾ ।
ಭಕುತರು ಉಂಡರೆ ನೀನು ಉಂಡವನಯ್ಯಾ ।
ಭಕುತರು ಉಟ್ಟರೆ ನೀನು ಉಟ್ಟವನಯ್ಯಾ ।
ಭಕುತರು ದಣಿದರೆ ನೀ ದಣಿವನಯ್ಯಾ ।
ಭಕುತರ ಹಿತವೆಲ್ಲ ನಿನ್ನ ಹಿತವು ಸ್ವಾಮಿ ।
ಭಕುತರಲ್ಲಿ ನಿನ್ನ ರತಿ ಅನುಗಾಲವು ।
ಭಕುತ ಬ್ಯಾಸತ್ತರು ನೀ ಬೇಸರುವನು ಅಲ್ಲ ।
ಭಕುತರನು ಮತ್ತೆ ನೀನು ಹುಡುಕುತಿಪ್ಪಿ ।
ಭಕುತರು ನಿನ್ನ ಸುತ್ತಲೆ ಸಂಚರಿಸೋರು ।
ಮುಕುತಿ ದಾಯಕ ಸಿರಿ ಗೋಪಾಲ ವಿಠ್ಠಲ ।
ಭಕುತರಲ್ಲವೆ ಆ ಸಕುತಿಯು ನಿನಗೆ ॥೬॥

ಆದಿತಾಳ

ಕಂಡರು ಕಾಣರು ಉಂಡದ್ದೆ ಉಣ್ಣರು ।
ಕೊಂಡದ್ದೆ ಕೊಳ್ಳರು ಪಂಡಿತರವರು ।
ಮಂಡಿಯ ತಗ್ಗಿಸಿ ನಿನ್ನ ಕೆಳಗೆ ಬಿದ್ದು ।
ಮಂಡಲದೊಳಗೆಲ್ಲ ಸಂಚರಿಸುವರು ।
ಪುಂಡರೀಕಾಕ್ಷನೀ ಅವರೆಲ್ಲಿ ಪೋದಲ್ಲಿ ।
ಕಂಡ್ಹಾಗೆ ತಿರುಗಿದಂತೆ ನೀನು ತಿರುಗುವಿ ।
ಖಂಡಾಖಂಡ ಮೂರ್ತಿ ವ್ಯಾಪ್ತನಿರ್ಲಿಪ್ತವು ।
ದ್ದಂಡ ಉತ್ತಮ ಪುರುಷೋತ್ತಮ ಸರ್ವೋತ್ತಮನೆ ।
ಪಾಂಡವ ಪಾಲಕ ಗೋಪಾಲ ವಿಠಲ ।
ಕಂಡ ಮಾತಿಗೆ ಇದಕನುಮಾನವ್ಯಾತಕೆ ॥೭॥

ಜತೆ

ಭಕುತರ ಭಾಗ್ಯವು ಜಗವೆಲ್ಲ ತುಂಬಿದೆ ।
ರಿಕತನೊಬ್ಬನೆ ಕಾಣೊ ಗೋಪಾಲ ವಿಠ್ಠಲ ॥೮॥

## ಸುಳಾದಿ ೧೮

ರಾಗ ಕಾಂಬೋದಿ ಧ್ರುವತಾಳ

ಹಸಿದು ಉದರ ಗತಿಯು ಹದನವ ನರಿಯದ ।
ಶಿಶುವಿನ ತಾಯಿ ಪಿಡಿದು ಮೊಸರನ್ನ ಉಣಿಸದರೆ ।
ಕೊಸರಿ ಕೊಳ್ಳುತಲಿಪ್ಪದು ವೊಲ್ಲೆನೆನ್ನಲಾಜನನಿ ।
ಶಿಶುವಿಗೆ ಅನ್ನವ ಉಣಿಸದಲೆ ಬಿಡುವಳೆ ।
ವಶವಾಗುವದಕೆ ನಾನಾ ೧ ಬಣ್ಣಿಗಿ ೨ ಯೋಜನಾ
೩ ವ್ಯಸಗಿ ಮಂಡೆಯಾ ೪ ನ್ಯಾವರಿಸಿ ಉಣಿಸೊಳಲ್ಲದೆ ।
ಶಿಶುವಿಗೆ ನನ್ನ ತನ್ನ ಹಸಿವಿ ಚಿಂತೆ ಮತ್ತುಂಟೆ ।
ಹಸಿವಿಗೆ ತನಗಿದು ವಿಷಯುವೆಂಬ ಜ್ಞಾನ ।

---

೧ ಬಣ್ಣಗಿ—ರಚನೆಮಾಡಿ ೨ ಕಾರ್ಯಕ್ಕೆ ಬೇಕಾದ ೩ ವ್ಯಸಗಿ — ಮಾಡಿ
೪ ನ್ಯಾವರಿಸು—ತಿದ್ದು ವ್ಯವಸ್ಥೆ

ಶಿಶುವಿಗುಂಟಾಗಿದ್ದರೆ ಕೊಸರಿಕೊಂಬನೇನಯ್ಯಾ ।
ಮಶಕಂಗಳ ಬಾಧೆ ಮುನ್ನೆ ಏನಿದ್ದರು ।
ಶಿಶುವಿಗೇನಾದರ ನಿವಾರಿಸುವ ಬ್ಯಾರಿರಲಾಗಿ ।
ಅಸುರ ಮರ್ದನ ರಂಗ ಗೋಪಾಲ ವಿಠ್ಠಲ ನಿನ್ನ ।
ಶಿಸುವಿನ ಹಸಗೆಡಿಸದಿರು ಪಿಡಿದು ।

ಮಟ್ಟಿತಾಳ

ವಿಹಿತ ಫಲವು ನೀನು ಪ್ರೊಹಿಸದಿದ್ದಡೆ ದೇವಾ ।
ಸಾಹಸವು ಬರಿಬಾಗೆ ಅಹಿತ ಮುತ್ತಾರಿಗೆ ।
ಅಹಿವದನಕೆ ಮೂಷಕವು ಸಿಲ್ಕಿದರೆ ।
ವಿಹಿತ ಬಿಡುವದೆ ಆಹಾರವೆಂದು ಅದಕ್ಕೆ ।
ಅಹಿಗೆ ಅನಿಳಾಹಾರವನು ಇತ್ತು ಮೂಷಕನ ಬಿಡಿಸೋದು ।
ಅಹಿಗಿತ್ತಂತೆ ಮಾಡು ನೀ ಮಹಿಸುರರ ಸಮ್ಮತಿ ಫಲವುದೇವ।
ಒಹಿಸಬೇಕು ಧರ್ಮ ನಡಿಸಬೇಕಾಗಿತ್ತೆ ।
ಬಹಿರ ಅಂತರ ಭರಿತಾ ಗೋಪಾಲ ವಿಠ್ಠಲ ।
ಕುಹಕರ ಮರ್ದನ ಕುಜನ ಪ್ರದಾತನೆ ॥೨॥

ತ್ರಿವಿಡಿತಾಳ

ಕಂಟಕ ಪರಿಹರಕೆ ರಕ್ಷ ಮೆಟ್ಟಲಿಬೇಕು ।
ಕಂಟಕ ಪಾದರಕ್ಷಗೆ ಕುಂಟುಬೀಳಲು ಧರ್ಮವೆಂಬಪಾದವು ಜೀರ್ಣ।
ಕಂಟಕಾರಿಯು ಮೆಟ್ಟಿಯೇನು ಫಲವೊ ।
ಒಂಟಿ ಡುಬ್ಬದಂತ ಲೌಕಿಕರಿಂದ ಲೇನು ।
ಬಂಟ ಜನರು ಇದನು ಬಯಸುವರೆ ।
ಕುಂಟಲಗಿತ್ತಿಯು ಕೂಡಲಿ ಅನುದಿನ ।
ಒಂಟಲಿಡಿಸಬೇಡ ಲೌಕಿಕದಿ ।
ನೆಂಟರು ಬಹುಮಂದಿ ಸಾಹಯವಾಗಿ ಬಂದು ।
ಗಂಟು ಕೆಡದಂತೆ ಕಾಪಾಡಲಿ ।
ಕಂಟಕಹರ ಚಲ್ವ ಗೋಪಾಲ ವಿಠ್ಠಲ ।
ಉಂಟಾಗದಕ್ಕೆ ವಲ್ಲೆನೆನಲು ಬಿಡದೆ ಉಣಿಪೆ ॥೩॥

ಅಟ್ಟ ತಾಳ

ಮೂಕನಣಕಿಸಲಿ ತಾ ಕುಳಿತವನಿಗೆ ।
ಮೂಕತ್ವದ ಶೋಕ ಅವನಿಗೆ ಆಗುವದು ।
ಠಾಕುರುಡನಲ್ಲ ಪರರ ಅಣಕಿಸುವಂಗೆ ।
ಶೋಕವ ಬಡುವನೆ ಅಂಧಕನಂದದಿ ।
ವಾಕು ದಂತೋಚ್ಚರಣ ಪರರನಣಕಿಂಪಗೆ ।
ವಾಕು ಸಂಬಂಧ ಕ್ಲೇಶ ತಾಕುವದೇ ಅವಗೆ ।
ಶೋಕವಿಟ್ಟು ತಾನು ಪರರಣಕಿಸುವವ ।
ಶೋಕದ ಅನುಭವ ಅವನಿಗೆ ಇಪ್ಪುವದೆ ।
ಶ್ರೀ ಕರುಣಾಕರ ನಿನಗೆ ಈ ಪರಿ ಆಹುದು ।
ನೀ ಕೇಳೆಲೋ ಸ್ವಾಮಿ ನಿನ್ನ ಭಕ್ತನಿಗೀಗ ।
ಲೌಕಿಕದೊಳಗಿರೆ ಸಾಕುವಿ ಇದರಂತೆ ।
ಏಕೋಮೇವದೇವ ಗೋಪಾಲ ವಿಠ್ಠಲ ।
ನೀಕರ ಪಿಡಿದವಗೆ ತಾಕ ಲ್ಲದೆ ದುರಿತಾ ||೪||

ಆದಿತಾಳ

ನಮೊ ನಮೊ ಕಾರುಣ್ಯ ಮೂರ್ತಿದಯಾಪರ ।
ನಮೊ ನಮೊ ಸರ್ವಜ್ಞ ನಿತ್ಯನಿರಂಜನ ।
ನಮೊ ನಮೊ ಅಖಂಡ ವ್ಯಾಪ್ತನಿರ್ದೋಷನೆ ।
ನಮೊ ನಮೊ ದುಷ್ಟಶಿಕ್ಷಾ ಶಿಷ್ಟರಪಾಲಾ ।
ನಮೊ ನಮೊ ಬ್ರಹ್ಮಣ್ಯದೇವ ಭಕ್ತರಕಾವ ।
ನಮಿಸುವೆ ನಮಿಸುವೆ ನಮ್ರಿಭೂತನಾಗಿ ।
ಶಮಲಮತಿಯು ಕಡಿ ದ್ಯುಮಣಿಶತತೇಜ ।
ಯಮನೇಮಗಳಲಿ ಮಮತೆನಿರಂತರ ।
ಸಮ ಅಧಿಕ್ಕೆನಿಸದೆ ನೀ ಎಮಗಿರು ಸದಾ ।
ಸುಮನಸರೊಡಿಯಾ ಶ್ರೀ ಗೋಪಾಲ ವಿಠ್ಠಲ ।
ನಮಿಸಿ ಬೇಡುವವರ ನೀನರಿಯಾದದೆಲ್ಲ ।

ಜತೆ

ಪತಿವ್ರತಾ ಸ್ತ್ರೀಗೆ ಆವ ವ್ರತವು ಇಲ್ಲಾ ।
ಪತಿ ಆಜ್ಞವು ಒಂದೆ ಗೋಪಾಲ ವಿಠ್ಠಲ ತಂದೆ ||೬||

## ಸುಳಾದಿ ೧೯

ರಾಗ ಭೈರವಿ ಧ್ರುವತಾಳ

ಆದಿನಾರಾಯಣಾ ಅನಿಮಿತ್ಯ ಬಂಧು ದೇವಾ ।
"ಭೇದಕಾರ್ಯ ತೋ ಗುಣವಾನ್ ಜ್ಞಾನಾನಂದಪೂರ್ಣ ।"
ವೇದಾಂತ ವೇದ್ಯ ಅವತಾರ ಮೂಲಕ್ಕೆ ಐಕ್ಯ ।
ನಾದಾಬಿಂದು ಘೋಷ್ಯ ಸರ್ವರಂತರಲಿಪೂರ್ಣ ।
ವೇದಿನಿಯೊಳಗಂತರ್ಬಹಿ ನಾರಾಯಣವ್ಯಾಪ್ತಾ ।
ಭೇದ ಭೇದವು ನಾಶ ಜನನ ಮರಣ ರಹಿತ ।
ಆದಿಯಲ್ಲಿ ಪೂರ್ಣ ಸಾಧು ಜೀವರ ಪಾಲ ಸರ್ವಕಾಲದಲ್ಲಿ ।
ಶೋಧಿಸಿ ತಿಳಿವೋದು ಜಡಚೇತನದಿ ಭಿನ್ನ
ಕ್ರೋಧರಹಿತ ಸಕಲ ದೋಷದೂರರಂಗ ।
ಮೋದ ತೀರ್ಥರ ಉಕ್ತಿಸಾಧಿಸಿ ಅರಿದರೆ ।
ಆದರಿಸುವನು ಹರಿ ಆವಲ್ಲಿದ್ದರನ್ನ ।
ಮಾಧವನಕೂಡ ವಿರೋಧವಮಾಡಿದಂತೆ ಅಲ್ಲ ।
ಖೇದಗೊಂಡು ಬರಿದೆ ಏನಾದರು ನೋಡಲಿ ।
ಖೇದಗೊಂಡು ಬರಿದಾಗದೆ ಪೇಳುವದಿಲ್ಲ ।
ಶ್ರೀಧರ ಸೃಷ್ಟಿ ಸ್ಥಿತಿಲಯಕೆ ಕಾರಣ ।
ಯಾದವರ ಕೂಡಲಿ ಅಜ್ಞ ಜನಮೋಹ ।
ಈ ಧರಿಯೊಳಗಾಡಿ ಬಗೆ ಬಗೆ ತೋರಿದ ।
ಕಾದಿ ಸೋತು ಬಾಣದಿಂದ ಪೆಟ್ಟನೆ ತಿಂದು ।
ಆದಾವ ಜನರಿಗೆ ಅಜ್ಞಾನ ತೋರಿದ ।
ಕಾದನು ಗೋವುಗಳ ಭಕ್ತರಪಾಲಿಪ ।
ಈ ದೇವಕಿಗೆ ತಾ ಸುತನು ಆದಾ ।

ಓದನಗಳು ಉಂಡ ಉದ್ಧರಿಸಾ ಭಕ್ತರ |
ಭೇದಾ ಭೇದ ತೋರಿದ ಅಸುರರಿಗೆ |
ಪಾಪ ಸಲ್ಲದು ಕೋಪಿಪರಾದರು ಕೇಳಿ |
ವಾದಿಪುವರಿಗೆ ನರಕವು ತಪ್ಪದು |
ಭೂದೇವಿ ಅರಸ ಗೋಪಾಲ ವಿಠ್ಠಲನ್ನ |
ಪಾದ ಸೇವಕರಿಗೆ ಬಾಧೆ ಬಂಧನವಿಲ್ಲ ||೧||

ಮಟ್ಟತಾಳ

ಒಂದೆ ದೇವನು ತಾನು ಅನಂತ ಅನಂತವತಾರ |
ಒಂದೊಂದು ಅವತಾರಕ್ಕೆ ಮೂಲ ರೂಪದಲಿದ್ದ |
ಒಂದೆ ಬಲಜ್ಞಾನ ಆನಂದ ನಿರ್ದೋಷ |
ಒಂದಾನಂತರೂಪ ವರಿದು ಕಡಿಯ ಮಾಡಿ |
ಒಂದವತಾರ ನೋಡೆ ಒಂದೆಸಮಾನವಿನ್ನು |
ಕುಂದು ಕೊರತೆಯಿಲ್ಲ ಹರಿಗುಣ ಬಲಜ್ಞಾನ |
ಒಂದರೊಳಾನಂತ ಅನಂತಾನಂತ |
ಎಂದೆಂದಿಗು ತಾನು ಒಂದೆ ಪರಿಯಲಿ ರೂಪ |
ಸಂದೇಹವು ಬೇಡಿ ಸಜ್ಜನರೇ ಕೇಳಿ |
ಇಂದಿರಾದೇವಿ ತಾನು ಚಂದದಿ ಹರಿ ನಖವು |
ವೆಂದು ಪಿಡಿದು ತಾನು ಎಣಿಸಲಾರದೆ ರೂಪ |
ಅಂದದ್ದೆ ಆನಂದ ಅಬ್ಧಿಯೊಳಗೆ ಮುಳುಗಿ |
ಮಂದರ ಧರನ ತಾ ಪೊಂದಿ ಕೊಂಡಾಡಿದಳು |
ಮಂದ ಜನರು ಕೇಳಿ ಇಂದಿರೇಶನ ರೂಪ |
ಒಂದೆರಡೆಂಬಂಥ ಮಿತಿ ಇಲ್ಲವು ಕಾಣೊ |
ಸಿಂಧು ಶಯನ ಗೋಪಾಲ ವಿಠ್ಠಲರೇಯಾ |
ಒಂದೆ ದೈವವೆನ್ನಿ ಚಂದದಿ ಪಾಲಿಸುಪಾ ||೨||

ರೂಪಕ ತಾಳ

ಪತಿ ಉಪಾಸನೆಯುನ್ನು ಇಂದಿರಾದೇವಿಗೆ |
ಪಿತನುಪಾಸನೆಯಿನ್ನು ಬೊಮ್ಮಾದಿಗಳಿಗೈಯ್ಯಾ |

ಪಿತಸ ಪಿತನ ಪಾಸನೆಯು ಹರಾದಿಗಳಿಗೆ ಸತತಾ ।
ಭೃತ್ಯಭಾವ ಇಂದ್ರ ಕಾಮರಿ ಗೈಯ್ಯಾ ।
ಇತರ ಜನರಿಗೆಲ್ಲ ಇದರಂತೆ ತರುವಾಯು ।
ಗತಿ ಹೊಂದುವರಿಗೆಲ್ಲ ಸ್ವಾಮಿ ಭೃತ್ಯನ್ಯಾಯ ।
ಜತಸಿತ್ಯ ಸಂಸಾರಿಗಳ ಉಪಾಸನಿ ಎನ್ನು ।
ಪಥ ತಪ್ಪಿಕಂಡ ದೇವತೆಗಳ ಭಜನೆಯು ।
ಹಿತ ದೈವ ಒಂದೆ ಅಹಿತ ದೈವ ಒಂದೆ ।
ಇತರ ದೈವಗಳೆಲ್ಲ ಕರ್ಮಾಂತರೆಂದೆಂದು ।
ಪೃಥವಿಯೊಳಗೆ ಸಂಚರಿಸುತಿಪ್ಪರು ।
ಗತಿಗೇಡಿಗಳೆಲ್ಲ ಹರಿಯೆನ್ನು ತಮ್ಮ ಸಮಾ ।
ನಿತನ ಮಾಡಿಕೊಂಡು ಮತಿಗೇಡಿಗಳು ಆಗಿ ।
ಮಿತಿ ತಪ್ಪಿ ತಮ್ಮ ತಮ್ಮ ಗತಿಗಳ ನೈದೋರು ।
ಪತಿತ ಪಾವನ ರಂಗ ಕ್ಷಿತಿಯು ವೊಳಗೆ ಇನ್ನು ।
ಕೃತಿಯು ಮಾಡಿಸುವನು ತ್ರಿವಿಧ ಜೀವರ ಕೈಯ ।
ಅತಿತನಾಗತ ಬಂಧು ಗೋಪಾಲ ವಿಠಲನು ।
ಗತಿ ಎಂದು ನಂಬಲು ಹಿತದಿ ಪಾಲಿಸುವಾ ॥೩॥

ಝಂಪೆ ತಾಳ

ಧರೆಯೊಳು ರಾಮಕೃಷ್ಣಾವತಾರಗಳಿನ್ನು ।
ನರರಂತಾ ಗಾದೆ ಪ್ರಾಕೃತವೆಂಬೆರಿ ।
ಮರುಳು ಗೊಳ್ಳಲಿಬೇಡ ಹಿರಿಯರಾದರು ಕೇಳಿ ।
ಅರಿದು ಪೇಳುವೆ ಹರಿ ಪ್ರೇರಣೆಯಿಂದ ।
ಹರಿಯೆ ನಾರಾಯಣ ಮೂಲ ರೂಪದಿ ತಾನು ।
ಇರಲಾಗಿ ಕ್ಷೀರಸಾಗರದಲಿನ್ನು ।
ಪರಮ ಕ್ರೂರತನದಿ ಬಲಿಚಕವರ್ತಿ ತಾನು ।
ಹರಿಯ ಕಿರೀಟ ಎತ್ತಿಕೊಂಡೋಡಲು ।
ಗರುಡ ವೇಗನೆ ಕಂಡು ಮರಳಿ ತಂದು ಇನ್ನು ।
ಸರನೆ ಗೋಮಂತ ಪರ್ವತದಲಿದ್ದ ।

ಸಿರಿ ಕೃಷ್ಣಗೆ ತಾನು ಹರುಷದಿ ಇಡಲಾಗಿ ।
ಸರಿ ಹೋಗೋದೆ ಬೇರೆ ಬೇರೆ ಆದರೆ ।
ಹರಿ ಮೂಲವು ಇನ್ನು ಅವತಾರಗಳಿಗೆಲ್ಲ ।
ಎರಡಿಲ್ಲವು ಕಾಣೋ ಜ್ಞಾನಿಗಳ ಕೇಳಿ ।
ಮುರಳಿ ಹಿಂದಾದ್ದು ಮುಂದಾಗುವದಿನ್ನು ।
ಎರಡುಪರಿ ಅನ್ನವನು ಒಲ್ಲೆನೆಂದು ।
ದುರುವಾಸ ಮುನಿ ಬಂದು ಹರಿರಾಮನ ತಾನು ।
ತ್ವರಿತದಲಿ ಅನ್ನವನು ಬೇಡಲಾಗಿ ।
ಸಿರಿರಾಮನು ತಾನು ಕರವನೆತ್ತೀಯ್ಯಲು ।
ಹರುಷದಲಿ ಉಂಡು ಸಂತೋಷವಾಗನೆ ।
ಬರಿದೆ ಪ್ರಾಕೃತ ಶರೀರವಾದಡೆ ಇನ್ನು ।
ದೊರಕುವದೆ ಈಪರಿ ಸಮ ರತುನವು ।
ಹರಿಗೆ ಪ್ರಾಕೃತ ಶರೀರವೆಂದವಗೆ ನರಕವು ।
ಹರಿಪರನೆಂದವಗೆ ಇಹಪರ ಸುಖವು ।
ದುರುಳ ಜನ ಮರ್ದನ ಗೋಪಾಲ ವಿಠ್ಠಲರಿಗೆ ।
ಸರಿಯಿಲ್ಲ ಸರಿಯಿಲ್ಲ ಪರದೇವತಿ ॥೪॥

ತ್ರಿವಿಡಿ ತಾಳ

ಜಗಕೆ ಒಡಿಯನಾಗಿ ಜಗವ ಪಾಲಿಸುವನು ।
ಜಗಕೆ ಕರ್ತನಾಗಿ ಸೃಷ್ಟಿಯ ಮಾಳ್ಪನು ।
ಜಗಕೆ ಭಿನ್ನನಾಗಿ ಲಯ ನು ಮಾಡುವ ।
ಜಗ ಜನ್ಮಾದಿಕರ್ತ ನಮ್ಮ ರಂಗ ।
ಜಗದೀಶ್ವರನು ತಾನು ಜಿಗುಳಿಸಿದರೆ ಬೆರಳ ।
ಜಗದ ಜೀವರು ಚಲಿಸಲೊಶವಲ್ಲವು ।
ನಗವ ಪಿಡಿದು ಇನ್ನು ಚೇತನ ಮಾಡಬಲ್ಲ ।
ಸೊಗಸಾಗಿ ಜಡ ಚೇತನಗಳ ಮಾಡಬಲ್ಲ ।
ಜಗವ ಸೃಷ್ಟಿಸಿ ಬೊಂಬಿಯಂತೆ ಕುಣಿಸಬಲ್ಲ ।
ಜಗವನೆಲ್ಲ ನುಂಗಿ ಒಬ್ಬನೆ ಇರಬಲ್ಲ ।

ಜಗದೀಶನ ಲೀಲೆ ಮುಕ್ತಳಾಟಿಕೆ ಕಾಣೊ ।
ಜಗದೊಳೀತಗೆ ಒಂದು ಸರಿಯು ವಸ್ತು ।
ಮಿಗಿಲು ಉಂಟೆಂದರೆ ಹೀಗೆ ಹ್ಯಾಗೆನ್ನಬಹುದು ।
ಜಗದೀಶ್ವರನ ಇಚ್ಛೆ ಇಂಥಾದೆ ।
**ಮಗಳಿಗೆ ಪತಿಯಾದ ಮಗಳಿಗಳಿಯನಾದ ।**
ಮಗುವಾಗಿ **ಗೋಪಿಯ ಮೊಲಿಯನುಂಡ ।**
ಬಗೆ ಬಗೆ ಜಗದೊಳು ಹಗರಣ ತೋರಿದ ।
ನಗು ಬಾಟ ಈ ದೈವ ನಮ್ಮ ನಿಮ್ಮಿಂದೇನು ।
ಜಗದೊಳಗಿನ್ನು ತ್ರಿವಿಧ ಜೀವಿಗಳು ತಾವು ।
ರಘುಪತಿ ನಡಿಸಿನುಡಿಸಿದಂತೆ ನುಡಿವೋರು ।
ಜಗದ ವಲ್ಲಭ ನಮ್ಮ ಗೋಪಾಲ ವಿಠ್ಠಲನು ।
ಆಗಲ ನಂಬಿದವರ ಸೊಗಸಾಗಿ ಪೊರವೂವ ||೫||

ಅಟ್ಟತಾಳ

ಉತ್ತಮರೊಳಗೆಲ್ಲ ಉತ್ತಮ ಈತನೆ ।
ನಿತ್ಯ ವಸ್ತುಗಳಲ್ಲಿ ಹರಿ ಒಬ್ಬನೆ ನಿತ್ಯ ।
ಸತ್ಯ ಸಂಕಲ್ಪನು ಸತ್ಯ ಮಹಿಮನು ।
ಸತ್ಯ ವಾಕ್ಯವು ವರನಿತ್ತರೆ ತಪ್ಪನು ।
ಮತ್ತೆ ಈ ತೆರದಿ ದೇವತೆಗಳೆಲ್ಲ ತಾವು ।
ಚಿತ್ತಜ ನಯ್ಯನ ಆಜ್ಞದಿಂದಲೆ ವರ ।
ವಿತ್ತು ಪಾಲಿಸುವರು ಶಕ್ತರಲ್ಲ ತಾವು ।
ವೃತ್ಯ ಲಾಭಾಲಾಭ ಹರಿ ಆಧೀನವು ।
ಕರ್ತಾ ಭೋಕ್ತಾ ನೀತನಲ್ಲದಿಲ್ಲವಿನ್ನು ।
ವ್ಯರ್ಥ ಮನುಜ ನಿನ್ನ ಪುತ್ರಮಿತ್ರರಿನ್ನು ।
ನಿತ್ಯರೆಂದು ನೀನು ಸ್ವಾರ್ಥದಿ ಕೆಡಬೇಡ ।
ನಿತ್ಯದಿ ಹರಿಪಾದ ಅರ್ಥಿಲಿ ಸ್ಮರಿಸುವರ ।
ಉತ್ತಮರ ಸಂಗ ಹತ್ತಿಕೊಂಡಿರು ಇನ್ನು ।
ಇತ್ತಲನ್ಯವರ ಅಹಿತವ ನುಡಿದರೆ ।

ಕತ್ತಲೆಸದವಿಗೆ ನಿಸ್ಸಸು ಹಾಕುವ ।
ಚಿತ್ತಜ ನಯ್ಯನ ಭೃತ್ಯರಲ್ಲಿ ಇನ್ನು ।
ಜತ್ತಾಗಿ ಭಕುತಿಡೆ ಹತ್ತಿಗರುವ ಹರಿ ।
ಉತ್ತರ ಪೇಳುವೆ ನಿನಗಿಂದೆರಡು ಗುಣ ।
ಉತ್ತಮರ ಪಿಡಿದು ಅಜ ಸಿರಿ ಪರಿಯಂತ ।
ಭೃತ್ಯಭಾವ ವೊಹಿಸಿ ಚಿತ್ತಶುದ್ಧನಾಗಿ ।
ನಿತ್ಯವುಳ್ಳ ಪದವಿ ನಿತ್ಯ ನಿತ್ಯ ಪಡಿಯೊ ।
ಭಕ್ತ ವತ್ಸಲರಂಗ ಗೋಪಾಲವಿಠ್ಠಲ ।
ಎತ್ತನೋಡಿದರತ್ತ ಸುತ್ತನಲಿವುತಪ್ಪ ॥೬॥

ಆದಿತಾಳ

ಕಾರಣವೆಂಬಂಥ ಕಾರ್ಯ ಸರ್ವರಿಗುಂಟು ।
ಕಾರಣ ಶ್ರೀಮುಖ್ಯ ಹರಿ ಕಾಣೊ ।
ಕಾರಣರು ನಮಗೆ ಹರಿಯ ತೋರಿಸುವಂಥ ।
ಕಾರಣ ಕರ್ತರ ಪೇಳುವೆನು ।
ಕಾರಣಕೆ ಮಾಡುವ ಕಾರ್ಯಗಳೆಲ್ಲ ಜಡ ।
ಕಾರಣದಿಂದೇನು ಫಲವಿಲ್ಲ ।
ಕಾರಣ ಪ್ರಥಮ ಶ್ರೀ ಮರುತ ನಮಗೆ ।
ಕಾರಣ ಈತನವರೆಲ್ಲ ನಮಗೆ ।
ಕಾರಣವಂತರಾದ ಕಾರಣದಿಂದಲಿ ।
ಕಾರಣ ದ್ವಾರಕೆ ಕಾರ್ಯವಯ್ಯಾ ।
ಕಾರಣಿಲ್ಲದ ಕಾರ್ಯ ಒಂದಾದರು ಇಲ್ಲ ।
ಕಾರಣಕೆ ಕಾರಣ ಮಾಡಿಸುವ ।
ಕಾರಣ ಶ್ರೀ ಹರಿಗೆ ನಮೊ ನಮೊ ।
ಕಾರುಣ್ಯ ಮೂರುತಿ ಶ್ರೀಗೋಪಾಲ ವಿಠ್ಠಲ ।
ಕಾರಣವಿಲ್ಲದೆ ಕಾರ್ಯ ಮಾಡಿಸನು ॥ ೭ ॥

ಜತೆ

ಈ ಪರಿ ತಿಳಿದವರಿಗೆ ಆಪತ್ತು ಹರಿಸಿ ।
ತಾ ಪಾಲಿಸುವ ಬಿಡಿದೆ ಗೋಪಾಲ ವಿಠ್ಠಲ ॥ ೮ ॥

## ಸುಳಾದಿ ೨೦

ರಾಗ ಕಾಂಬೋದಿ, ಧ್ರುವತಾಳ

ಲಕುಮಿ ದೇವಿಗೆ ಈಶ ಎನಗೆ ನೀನೆವೆ ಈಶ।
ಸಕಲ ಬೊಮ್ಮಾದಿ ಸುರರಿಗೆಲ್ಲರಿಗೆ ನೀ ಈಶ ।
ಮುಕುತಿದಾಯಕ ಸರ್ವವ್ಯಾಪ್ತನೆ ಸರ್ವೇಶ ।
ಭಕುತವತ್ಸಲ ಆರ್ತಜನ ಭಯ ನಿವಾರಣ ।
ಶಕುತಿ ಯುಕುತಿ ಸರ್ವ ಚೇಷ್ಟ ಪ್ರದಾಯಕ ।
ಸಕಲರಂತರಯಾಮಿ ಹೇ ಸರ್ವೋತ್ತಮ ಹರಿಯೆ ।
ಅಕಳಂಕ ಗುಣ ಅಪ್ರಾಕೃತನೆ ನಿರ್ದೋಷ ।
ಸಕಲಠಾವಿಲಿವ್ಯಾಪ್ತ ಸರ್ವೇಶನಿರ್ಲಿಪ್ತ ।
ನಖ ಶಿಖವೆಲ್ಲ ಪೂರ್ಣ ಜ್ಞಾನಾನಂದ ಕಾಯಾ ।
ಮಕರ ಕುಂಡಲ ಕೊರಳ ಮಾಲೆಯಿಂದ ಶೋಭಿತ ।
ಭಕುತ ಜನಕೆ ಸುಖವ್ಯಕುತ ಮಾಡಿಪದಾತಾ ।
ಅಕಟಕಟ ನಾನಿನ್ನ ಅರಿಯದೆ ಮೋಸಹೋದೆ ।
ಉಕುತಿಗಳಿಂದ ನಿನ್ನ ಒಂದಿನವಾದರು ।
ಯುಕುತಿ ಪೂರ್ವಕವಾಗಿ ತುತಿಯನು ಮಾಡಲರಿಯೆ ।
ರುಕುಮಿಣಿಯ ವಲ್ಲಭ ಗೋಪಾಲವಿಠ್ಠಲ ।
ಭಕುತರಲ್ಲಿ ನಿಂತಿರುವೆ ಭಯ ಅಭಯ ನೀವುತಲಿ ॥೧॥

ಮಟ್ಟ ತಾಳ

ಅಚ್ಯುತನೆ ಕೇಳು ಅನಂತನೆ ಕೇಳು ।
ಮತ್ಸ್ಯಾದಿಯೆ ಕೇಳು ಸಚ್ಚಿದ ಆನಂದ ।
ಸ್ವಚ್ಛಳ್ಳ ವಿಗ್ರಹ ಸ್ವರಮಣ ಚಲ್ವಾ ।
ನಿಚ್ಚಳಾ ನಿಚ್ಚಳ ನಿತ್ಯತೃಪ್ತದೇವ ।
ಹೆಚ್ಚಿನ ಹೆದ್ದೈವ ಹೇ ದೋಷದೂರ ।
ಕುಚ್ಛಿತ ನರರಿಗೆ ಕುರುಹ ತೋರದವನೆ ।
ವತ್ಸನ ಬಿನ್ನಪ ಒದಗಿ ಮನಕೆ ತಂದು ।

ತುಚ್ಛಿಕರೀಸದಲೆ ತುತ್ತು ಮಾಡಿಟ್ಟಂತೆ ।
ಎಚ್ಚರಿಕೆಯ ನಿತ್ತು ಎಡಬಲದಲೆನಗೆ ।
ಇಚ್ಛೆಯೂ ನಿನ್ನಲ್ಲೆ ಈಸಾಡಿಸುನಿರುತ ।
ನೆಚ್ಚಿಸು ನಿನ್ನನೆ ನ್ಯಾಯದಿಂದಲಿನ್ನು ।
ಅಚ್ಛಕರುಣಿರಂಗ ಗೋಪಾಲ ವಿಠ್ಠಲ ।
ಪೆಚ್ಚಿದ ಅಘವೆಲ್ಲ ನುಚ್ಚುಮಾಡಿಸಲಹೋ । ॥೨॥

ರೂಪಕತಾಳ

ಭಕುತರಾಧೀನನಾಗಿ ನೀನು ಇರುವೆ ಅಯ್ಯಾ।
ಭಕುತರಿಗಾಗಿ ನೀ ಕರ್ಮಗಳ ಮಾಡುವಿ ।
ಭಕುತರಿಗಾಗಿ ನೀ ವ್ಯಕ್ತವ ಆಗುವಿ ।
ಭಕುತರಿಗಾಗಿ ನೀ ಸಂಕಲ್ಪಮಾಡುವಿ ।
ಭಕುತರಿಗಾಗಿ ನೀ ಪುರಗಳ ಸೃಜಿಸುವಿ ।
ಭಕುತರಿಗಾಗಿ ನೀ ಉಣುತ ಉತ್ಸಾಹ ಪಡುವಿ ।
ಭಕುತರಿಗಾಗಿ ಅಳದೆ ಬಳದೆನೆಂಬಿ ।
ಭಕುತರಿಗಾಗಿ ನೀ ಹಿಗ್ಗುವಿ ಹಿತಬಡುವಿ ।
ಭಕುತರಿಗಾಗಿ ನೀ ಬಂದಹೋದನೆಂಬಿ ।
ಭಕುತರಿಗಾಗಿ ಸರ್ವಜಡಗಳ ಸೃಜಿಸುವಿ ।
ಭಕುತರಿಂದಲಿ ನೀನು ಭೇದನಾಗಿಪ್ಪೆ ।
ಭಕುತರು ಎಲ್ಲರು ನಿನ್ನಾಧೀನರಯ್ಯಾ ।
ಭಕುತ ವತ್ಸಲ ನಮ್ಮ ಗೋಪಾಲ ವಿಠ್ಠಲ ।
ಭಕುತರಿಂದಲಿ ಬಾಹೊ ಫಲನಿನಗೊಂದಿಲ್ಲ । ॥೩॥

ಝಂಪೆತಾಳ

ನಿನ್ನ ಭಕುತರು ನಿನ್ನನ್ನೆ ಹುಡುಕುವರು ।
ಚನ್ನಾಗಿ ನೀ ಇನ್ನು ಭಕುತರ ಹುಡುಕುವಿ ।
ನಿನ್ನನೆ ಆಶ್ರಯಿಸಿ ತಮ್ಮ ಮನಬಂದಂತೆ ।
ಇನ್ನಿಪ್ಪವರು ಸುಸನ್ಮಾರ್ಗದಿಂದಲಿ ।

ನಿನ್ನ ಬಲದಿಂದಲೆ ಮೆರೆವುವರು ಸಿರಿಯಿಂದ ।
ನಿನ್ನ ಬಲದಿಂದಲೆ ಉರುವುವರು ಜಗವೆಲ್ಲ ।
ಅನ್ಯಂ ಗಣಣೆಯಿಲ್ಲ ಸ್ವಧರ್ಮದಿಂದಲೆ ।
ಘನ್ನತೆಯಿಂದಲಿ ಉಬ್ಬಿಕೊಂಡಿಹರಯ್ಯಾ ।
ಘನ್ನ ಮಹಾಮಹಿಮಃ ಗೋಪಾಲ ವಿಠ್ಠಲ ।
ನಿನ್ನ ಭಕುತರಿಗೆ ನಿನ್ನ ಮಹಿಮೆಗೆ ನಮೊ ॥೪॥

ತ್ರಿವಿಡಿತಾಳ

ಇಟ್ಟು ನೋಡಿವೆಯ್ಯಾ ಭಕುತರಲ್ಲೆ ನೀನು ।
ಬಿಟ್ಟು ನೋಡಿವೆಯ್ಯಾ ಭಕುತರಲ್ಲೆ ನೀನು ।
ಕೊಟ್ಟು ನೋಡಿವೆಯ್ಯಾ ಭಕುತರಲ್ಲೆ ನೀನು ।
ಕಟ್ಟಡಿಯ ಮಾಡಿ ಕರ್ಮ ಮಾಡಿಸುತ್ತ ।
ಇಷ್ಟ ನಷ್ಟವು ಎಂಬೋ ದಾರಿಯ ತೋರಿಸುತ್ತ ।
ಕಷ್ಟ ಗತಿಗೆ ಅವರ ಕೆಡಹದಲೆ ।
ದುಷ್ಟ ಜೀವರಿಗಿನ್ನು ಈ ಮೂರು ಕ್ರೀಯವು ।
ದೃಷ್ಟಿಲಾದರು ಅವರ ನೋಡಿಸದೆ ।
ಸೃಷ್ಟಿ ಸ್ಥಿತಿಲಯ ಮೂರರೊಳಗೆ ನೋಡೆ ।
ಸ್ಪಷ್ಟವಾಗಿ ತೋರಿಹೋದು ನಿನ್ನವರಿಗೆ ।
ಧಿಟ್ಟನಾಗಿಪ್ಪರು ಕಳೆಯಾ ಗುಂದದಲೆ ।
ನಷ್ಟಲಾಭಕಿನ್ನು ಅಂಜದಲೆ ।
ಹುಟ್ಟಲಿ ಉದಕವು ಅಟ್ಟನೂಕಿದಂತೆ ।
ಭ್ರಷ್ಟ ಸಂಗತಿಗಿನ್ನು ಸಿಲುಕದಲೆ ।
ಇಷ್ಟ ದೇವ ನಮ್ಮ ಗೋಪಾಲ ವಿಠ್ಠಲ ।
ಇಷ್ಟರೊಳಗೆ ಎಲ್ಲ ಇಷ್ಟ ವಸ್ತುವೊ ನೀನೆ ॥೫॥

ಅಟ್ಟತಾಳ

ಮಂದರ ಧರನೆ ಮಹಾ ಭಯ ಹಾರಿ ।
ಸುಂದರ ವಿಗ್ರಹ ಶುಭ್ರವರ್ನ ಗೋ ।

ವಿಂದ ಇಂದಿರಾಪತಿ ಇಂದು ವದನ ಆ |
ನಂದ ಪೂರ್ಣನೆ ಅಜ್ಞಾನ ವಿನಾಶಕ |
ವೃಂದಾವನದಿಂದ ನಂದ ಗೋಪಿಯ ಕಂದ |
ಒಂದೆ ಮೂಲ ಅನಂತವತಾರದಿ |
ನಿಂದು ಸಕಲರ ಮಂದಿರದೊಳಗೆ |
ಛಂದದಿ ನಲಿ ನಲಿದಾಡಿ ಕುಣಿವ ಮು |
ಕುಂದ ಮುರಾರಿ ಮೂಜಗದೊಡಿಯ |
ಮಂದಾಕಿನಿಯ ಪೆತ್ತ ಮಹಾದಾದಿ ದೈವ |
ಬಂಧಕ ಮೋಚಕ ಭಕುತ ವತ್ಸಲ |
ಸಿಂಧು ಶಾಯಿ ಕರುಣಾಕರ ಕೃಷ್ಣ |
ಬಂಧು ಅನಿಮಿತ್ಯ ಗೋಪಾಲ ವಿಠ್ಠಲ |
ಸಂದರುಶನವಿತ್ತು ಸಲಹೆನ್ನ ಬಿಡದೆ ||೬||

ಆದಿತಾಳ

ನಿನ್ನ ವ್ಯಾಪಾರವೆ ಎನಗೆ ವ್ಯಾಪಾರವು |
ನಿನ್ನ ತಿಳುವ ಜ್ಞಾನ ಎನಗದೆ ಧನವು |
ನಿನ್ನ ನೋಡುವ ರೂಪ ಎನಗದೆ ವಿಷಯವು |
ನಿನ್ನೊಳಗಾಡೊದೆ ಎನಗೆ ಆನಂದವು |
ಇನ್ನಿತಃ ಈ ಪರಿಸುಖಿ ಇರಲಾಗಿ ಎನಗೆ |
ಇನ್ನಿದಲ್ಲದೆ ಭಿನ್ನ ವಸ್ತುವಿನಿಂದ |
ನಿನ್ನಿಂದಾಗುವ ಸುಖ ಇನ್ನಾಗಬಲ್ಲದೆ |
ನಿನ್ನ ನಂಬಿದ ಅಚ್ಛಿನ್ನ ಭಕುತರೆಲ್ಲ |
ನಿನ್ನ ವಿಷಯ ಕರಸಿನ್ನು ಇಪ್ಪುವರಯ್ಯಾ |
ನಿನ್ನವರ ಕೃಪೆಯೆನಗಾಗುವದಕ್ಕೆ |
ನಿನ್ನ ಕರುಣದಿಂದ ಮನ್ನಿಸುವರಯ್ಯಾ |
ಘನ್ನ ದಯಾನಿಧೆ ಗೋಪಾಲ ವಿಠ್ಠಲ |
ನಿನ್ನಲ್ಲದೆ ನಾ ಇನ್ನೊಂದರಿಯೆ ||೭||

ಜತೆ

ಜಗದ ಅಂತರಯಾಮಿ ಎನ್ನ ಅಂತರಯಾಮಿ ।
ಅಘ ದೂರ ಗೋಪಾಲ ವಿಠ್ಠಲ ಅನಿಮಿತ್ಯ ಬಂಧು ॥೮॥

## ಸುಳಾದಿ ೨೧

ರಾಗ ಭೈರವಿ ಧ್ರುವ ತಾಳ

ನೀನೆ ಎನಗೆ ಬಂಧ ನೀನೆ ಎನಗೆ ಮೋಚ ।
ನೀನೆ ಎನಗೆ ಲಿಂಗ ನೀನೆ ಗುಣತ್ರಯವು ।
ನೀನೆ ಎನಗೆ ಲಾಭ ನೀನೆ ಎನಗೆ ನಷ್ಟ ।
ನೀನೆ ಎನಗೆ ಧರ್ಮ ನೀನೆ ಎನಗೆ ಅಧರ್ಮ ।
ನೀನೆ ಎನಗೆ ಸೃಜ್ಯ ನೀನೆ ಎನ್ನಪಾಲಕ ।
ನೀನೆವೆ ಸಂಹಾರಕ ನೀನೆ ಎನಗೆ ಕರ್ತು ।
ನೀನೆ ಸರ್ವ ಪ್ರೇರಕ ನೀನೆ ಎನಗೆ ಸ್ವಾಮಿ ।
ಜ್ಞಾನಮಯ ಆನಂದ ಗೋಪಾಲ ವಿಠ್ಠಲ ।
ನೀನೆ ಸರ್ವ ವ್ಯಾಪ್ತ ನಿತ್ಯ ತೃಪ್ತಾ ॥೧॥

ಮಟ್ಟತಾಳ

ಭಿನ್ನಭಿನ್ನ ಪುಣ್ಯ ಭಿನ್ನ ಭಿನ್ನ ಪಾಪ ।
ಭಿನ್ನ ಭಿನ್ನ ಜೀವಕ್ಕಿನ್ನು ಉಣಿಸುವಿ ।
ಅನ್ಯ ವಿಷಯದಲ್ಲಿ ನನ್ನದೆಂಬೊ ಮಮತಿ ।
ಇನ್ನು ಪೆಚ್ಚಿಹರಿಯೆ ನಿನ್ನ ತಿಳಿಸದೆ ।
ಬನ್ನ ಬಡಿಸುವಿ ಮುನ್ನ ತೋರದಂತೆ ।
ಭಿನ್ನ ಪುಣ್ಯ ಬೀಜ ಭಿನ್ನ ಪಾಪ ಬೀಜ ।
ಇನ್ನು ಕೆಡುವದೆಂದು ಮುನ್ನ ಅರಿಯ ಒಂದು ।
ಘನ್ನ ದಯಾನಿಧಿ ಗೋಪಾಲ ವಿಠ್ಠಲ ನಿನ್ನ ।
ಚುನ್ನಾಟಕೆ ಇನ್ನು ನಮೊ ಎಂದೆ ॥೨॥

ರೂಪಕ ತಾಳ

ಅನ್ಯ ವಿಷಯಗಳೆ ಭಿನ್ನ ಧರ್ಮವೆನಗೆ ।
ನಿನ್ನ ವಿಷಯ ಕರಿಸುವದೆ ಪುಣ್ಯ ಧರ್ಮ ।

ವೆನ್ನಗೆ ಇಂತು ಈ ಪರಿ ಇರಲಾಗೆಯೆ ದೇವಾ ।
ಎನ್ನ ದಣಿಸುವದು ಇನ್ನಾವ ನ್ಯಾಯವೊ ।
ಎನ್ನ ಮಮತೆ ಭಿನ್ನದಲ್ಲಿ ಪುಟ್ಟಿಪವು ।
ನಿನ್ನಾಧೀನ ಮತ್ತೆ ನೀ ಅದಕೆ ಪ್ರೇರಕ ।
ಭಿನ್ನ ಕಾಮ ರಹಿತ ಗೋಪಾಲ ವಿಠ್ಠಲ ।
ನಿನ್ನವ ನಿನ್ನವ ನಿನ್ನವರನನೊ ॥೨॥

ಝಂಪೆ ತಾಳ

ಅಲ್ಲದೆ ಆಹುದೆಂಬೊ ಬಲ್ಲದ್ದು ಅರಿಯೆನು ।
ಕಲ್ಲು ಕಠಿಣವೆಂಬೊ ಜ್ಞಾನವಿಲ್ಲ ।
ಬೆಲ್ಲ ಬೇವು ಎಂಬೊ ತೆರನಂತೆ ಬಿಟ್ಟಿಹೆ ।
ಅಲ್ಲವಯ್ಯನಗೆ ಹೀಗ್ಯಾಕೆ ತಿಳಿಪಿ ।
ಸಲ್ಲದು ಈ ಮೇಲೆ ಮೋಸಗೊಳಿಸಿದರೆನಗೆ ।
ನಿಲ್ಲಯ್ಯಾ ನಿನಗೆ ನಿನ್ನ ಭಕುತರಾಣೆ ।
ಬಲ್ಲೆ ನಾನೆಲ್ಲ ನಿನ್ನ ಮಾಯವೆಂಬುವದು ।
ಇಲ್ಲ ನೀನಲ್ಲದೀ ಜಗಕೆ ಸ್ವಾತಂತ್ರ ।
ಎಲ್ಲ ಸುರರೊಡೆಯ ಗೋಪಾಲ ವಿಠ್ಠಲರೇಯಾ ।
ಬಲ್ಲವರ ಮುಂದೆ ಬಚ್ಚಿಡುವದೊಳಿತಲ್ಲ ॥೪॥

ತ್ರಿವಿಡಿ ತಾಳ

ಎನ್ನ ಮನಸ್ಸಿನಲ್ಲಿ ನಿನ್ನ ಮನಸ್ಸು ಇಟ್ಟು ।
ಭಿನ್ನ ವಿಷಯದಲ್ಲಿ ಎನ್ನ ಎಳೆವಿ ।
ಎನ್ನ ವಸ್ತದ ಖೂನ ಇನ್ನು ನಾನರಿಯದೆ ।
ಭಿನ್ನ ವಿಷಯದಲ್ಲಿ ಮೋಸ ಹೋದೆ ।
ಎನ್ನಂತೆ ನೀ ಬೇರೆ ಮೋಸ ಹೋಗುವನಲ್ಲ ।
ಇನ್ನು ತ್ರಿಗುಣಗಳಿಗೆ ನಿಯಾಮಕ ।
ನಿನ್ನ ವಿಷಯಗಳಿಗೆ ನಿನಗೆ ಅಭೇಧ ।
ಎನ್ನ ವಿಷಯಕ್ಕೆ ಎನಗೆ ಭೇದಾ ಭೇದ ।

ಇನ್ನಿತು ಈ ಬಗೆ ಇಪ್ಪುವಾದೆಲ್ಲದು ।
ನಿನ್ನಾಧೀನ ದೇವ ನಿನ್ನವನೊ ।
ಅನಂತ ಗುಣಪೂರ್ಣ ಗೋಪಾಲ ವಿಠ್ಠಲ ।
ಇನ್ಯಾತಕೆ ಸಂಶಯು ನೀನಲ್ಲದೊಂದಿಲ್ಲ ॥೫॥

ಅಟ್ಟ ತಾಳ

ಒಂದೆ ಅನಂತಾಗಿ ಹೊಂದಿವೆ ವ್ಯಾಪ್ತನೆ ।
ಮಂದ ಮತಿನಾ ತಿಳಿಯೆ ನಿನ್ನೊಡವೆ ।
ಎಂದಿಗೆ ಈ ಬಂಧ ಛಿಂದಿ ಆಗುವದೊ ಮು ।
ತ್ತೆಂದಿಗೆ ಲಿಂಗ ದೇಹವು ದಹಿಸುವದೊ ।
ಎಂದಿಗೆ ನಿನ್ನ ಪದಾಂಬುಜ ದೊರೆವದೊ ।
ಎಂದಿಗೆ ತ್ರಿಗುಣಾತೀತನಾಗುವಿನೊ ।
ಸುಂದರ ಮೂರುತಿ ಗೋಪಾಲ ವಿಠ್ಠಲ ।
ತಂದೆ ನಿನ್ನ ಪಾದ ಅಂದಿಸೊ ಮನಕೆ ।

ಆದಿತಾಳ

ಕಾಲ ಎನಗೆ ಕಾರಣಲ್ಲ ಕರ್ಮ ಎನಗೆ ಕಾರಣಲ್ಲ ।
ಶೀಲ ವಿಮಲ ಕಾರಣಲ್ಲ ಕಾಮ ಎಂಬೊದೆ ಕಾರಣಲ್ಲ ।
ಮೇಲ ಮೇಲು ಪೂರ್ವಕ ಕರ್ಮ ಕಾರಣಗಳಿಗೆ ಕಾರಣನೀನೆ।
ಪಾಲ ಸಾಗರ ಶಾಯಿ ಚಲ್ವ ಗೋಪಾಲ ವಿಠ್ಠಲ ।
ಆಲೋಚನೆಯು ಇಲ್ಲ ಎನಗೆ ಆಪ್ತ ಬಂಧು ನೀನೆ ನೀನೆ ॥೬॥

ಜತೆ

ಹಿಂದೆ ಇಂದು ಮುಂದೆ ಹುತ್ತೆ ಎಂದೆಂದಿಗೆ ಇದೆ
ಒಂದೆ ಮಾತಯ್ಯಾ ಗೋಪಾಲ ವಿಠ್ಠಲಯ್ಯಾ ॥೮॥

## ಸುಳಾದಿ ೨೨

ರಾಗ ಶಂಕರಾಭರಣ ಧ್ರುವತಾಳ

ಕೇಳಯ್ಯಾ ದೇವ ನಿನ್ನ ಊಳಿಗನ ಬಿನ್ನಹ ।
ಏಳಲ ಮಾಡದಲೆ ಆಲಿಸಿ ಹರುಷದಿ ।

ತಾಳಲಾರೆನೊ ತಾಯಿ ಗರ್ಭದೊಳಿಹ ದುಃಖ |
ಹೇಳಿಕೊಳ್ಳಲು ಜಲ ಪ್ರಳಯುವಾಗಿಹದು |
ಏಳು ಪ್ರಕಾರ ಹೊಲಿಯ ಚೀಲದೊಳಗೆ ಹಾಕಿ ಬ |
ಹಾಳ ಪರಿಲಿ ಕುದಿದು ಬಾಳುವೆನು ದೇವ |
ಕೋಳಿ ಕಲ್ಲನು ತಿಂದು ಗೋಳಿಟ್ಟು ಕೂಗಿದಂತೆ |
ಬಾಳಿದೆನಯ್ಯಾ ಗರ್ಭದೊಳಿಂಥ ಸುಖದಿಂದ |
ವೇಳ್ಯೆವ ಕಳೆದೆ ಹೀಗೆ ಏಳ್ವೆದು ಮಾಸ |
ಮೇಲೆ ಪುಟ್ಟಿದೆ ರಂಗ |
ಮೇಳವಾಗಟ್ಟೆ ಬಂಧುಗಳು ಎಲ್ಲರು ಬಂದು |
ಕೇಳಿ ಮೂಹುರ್ತ ನಾಮಕರಣಗಳೆಲ್ಲನು ಮಾಡಿ |
ಪಾಲಿಸಿದರಾಗೆ ಜೋಗುಳ ಪಾಡುತಲಿ |
ಶೂಲಿ ಎಂದು ಉದರ ಚಾಲವರಿದರಿನ್ನು |
ಪಾಲು ನೆರಿವರಯ್ಯಾ ಬಾಲ ಹಸಿದನೆಂದು |
ಆಲಸ್ಯದಿಂದ ಹಸಿದು ಅಳವುತ್ತಿರೆ ಖಾರ |
ಗಳನು ಹಾಕುವರು ತಿಳಿವಿಕೆ ಇಲ್ಲದಲೆ |
ಸೂಳಿಯು ಗುಡಿಸಿಲಂತೆ ಬಾಳಿವ್ಯಾಯಿತೆನ್ನದು |
ಕೇಳಯ್ಯಾ ಹರಿ ಕರುಣಾಳುಗಳರಸನೆ |
ಆಲದೆಲೆಯ ಶಾಯಿ ಗೋಪಾಲ ವಿಠ್ಠಲ |
ಘಾಳಿ ಮಾಡದೆ ವಾಕು ಲಾಲಿಪದು ಜೀಯಾ ||೧||

ಮಟ್ಟತಾಳ

ಅನಂತ ಅನಂತ ದೇಹ ಅನಂತ ಅನಂತ ಜನುಮ |
ಅನಂತ ಅನಂತ ಬಂಧು ಅನಂತ ಅನಂತ ಬಳಗ |
ಅನಂತ ಅನಂತ ಸತಿ ಅನಂತ ಅನಂತ ಸುತರು |
ಅನಂತ ಅನಂತ ತಾಯಿ ಅನಂತ ಅನಂತ ತಂದೆ |
ಅನಂತ ಅನಂತ ಪರಿಯುಲಿ ಹೀಗೆ ಪುಟ್ಟೆ ಪುಟ್ಟೆ |
ಘನ್ನ ಬಂಧನದೊಳಗಿನ್ನು ಬೆಳದೆನಯ್ಯಾ |
ಎನ್ನದಾವದೊ ಜಾತಿ ಎನ್ನದಾವದು ಕುಲವೊ |

ಎನ್ನದಾವದೊ ಗೋತ್ರ ಎನ್ನವರಾವರು ।
ಇನ್ನಾರದು ಪಿಂಡ ಇನ್ನಾರಿಗುದಿಸಿತು ।
ಬನ್ನ ಭವದೊಳು ಇನ್ನು ಹೊರಳಿ ಹೊರಳಿ ।
ಮುನ್ನ ನೆಲಿಯು ದಾರಿಯುನ್ನು ಗಾಣದೆ ಪೋದೆ ।
ಚಿನ್ನುಮಯ ಮೂರ್ತಿ ಗೋಪಾಲ ವಿಠ್ಠಲ ।
ಹುಣ್ಣು ಹುಣ್ಣಾದೆನು ಜನನ ಮರಣಗಳಿಂದ ॥೧॥

ತ್ರಿವಿಡಿ ತಾಳ

ಜನುಮ ಜನುಮದಲ್ಲಿ ಅನುವಾಗಿ ಉಂಡಂಥ ।
ಜನನಿಯ ಮೊಲೆ ಪಾಲು ಎಣಿಕೆ ಮಾಡಲು ಇನ್ನು ।
ಘನವಾದವಯ್ಯಾ ಕ್ಷೀರ ವನಧಿಗಿಮ್ಮಡಿ ।
ಎಣಿಸಲೊಶವೆ ಎಲವು ಚರ್ಮ ರಕ್ತ ಮಾಂಸ ।
ಕೊನೆ ಗಾಣದಾದೆ ಮೇರುವಿಗಿನ್ನಾಲ್ಕುಮಡಿ ।
ಕ್ಷಣ ಕ್ಷಣಕೆ ದೇಹ ಪರಿಮಾಣದ ಚರ್ಮ ।
ಅನುವರಿತು ನೋಡಾ ಅವನಿಗಿಂದೈದುಮಡಿ ।
ದಣಿದೆನಯ್ಯಾ ನಾನಾ ಭವಣೆಯಿಂದಲಿನ್ನು ।
ಕೊನೆಗಾಣೆ ಕೊನೆಗಾಣೆ ಇನ್ನಿತು ಇಷ್ಟೆಷ್ಟೆಂದು ।
ಕುಣಿಯ ವಳಗೆ ಬಿದ್ದು ಕುರುಡನಂತಲಿ ಇನ್ನು ।
ಒಣಗಿ ಬಾಯಾರಿ ಆಲ್ಪರಿದೆನು ಅನುಗೆಟ್ಟು ।
ಕನಸಿನಾಗಿನ ಗಂಟಿನಂತೆ ಈ ಕಾಯವು ।
ಎನಗೆ ನಂಬಿಗೆಯಿಲ್ಲ ಎನ್ನವ ಮೊದಲಿಲ್ಲ ।
ಅನುಗೆಟ್ಟೆ ಅನುಗೆಟ್ಟೆ ಅನಿಮಿತ್ಯ ಬಾಂಧವ ।
ತನು ಸಂಬಂಧಿಗಳು ತಮ್ಮತ್ತಲೆಳವರು ।
ನಿನಗೆ ನಾ ಮೊರೆ ಇಟ್ಟೆ ಗೋಪಾಲ ವಿಠ್ಠಲ ।
ನಿನಗೆ ನಾ ನಿನ್ನವನಾಗದಾದೆ ॥೨॥

ಅಟ್ಟತಾಳ

ಸುತನಾದೆ ನಾ ಮಾತಾ ಪಿತರಿಗೆ ಗತಿಯುನ್ನು ।
ಪತಿಯಾದೆ ನಾ ನೋಡು ಸತಿಯಳಿಗೆ ಇನ್ನು ।

ಪಿತನಾದೆ ನಾ ಎನ್ನ ಸುತರಿಗೆಲ್ಲ ಇನ್ನು ।
ಇತರ ಜನರಿಗೆ ಬಂಧು ಬಳಗವಾದೆ ।
ಮತಿಗೇಡಿ ನಾ ನಿನ್ನ ಗತಿಗೆ ದಾವದು ಅದೆ ।
ಪಥ ತಿಳಿಯದು ಜಗತ್ಪತಿ ನಿನ್ನ ಪ್ರೊಂದೊದು ।
ಪತಿತ ಪಾವನ ರಂಗ ಗೋಪಾಲ ವಿಠ್ಠಲ ।
ಹಿತದಿಂದಲಿ ನಿನ್ನ ಸತತ ಭೃತ್ಯನೆನಿಸೊ ॥೪॥

ಆದಿತಾಳ

ನಿನ್ನವರಾ ಸೇವೆ ದೊರಕೊದು ಆವಾಗಲೆ ನಾ ।
ನಿನ್ನವನಾಗುವೆ ಆವದು ತೊಪ್ಪಲು ।
ಸಾವದು ತಪ್ಪದು ಆವಲ್ಲಿ ಇದ್ದರು ।
ಕಾವುವ ನೀನಯ್ಯಾ ಆವದು ವಲ್ಲೆ ನಿನ್ನವನೆಂದೆನಿಸೆನ್ನ ।
ಗೋವಳರೊಡಿಯ ಗೋಪಾಲ ವಿಠ್ಠಲರೇಯಾ ।
ಭಾವ ಶುದ್ಧ ನೀ ಎಂಬೊ ಭಕುತಿಯ ನೀ ಇನ್ನು ॥೫॥

ಜತೆ

ಸಂಸಾರ ವೆಂಬಂಥ ಶರಧಿಯ ದಾಟಲಿ ।
ಕಂಸಾರಿ ನಿನ್ನ ಪಾದಕ ನೀ ಗತಿ ಎನ್ನು ॥೬॥

## ಸುಳಾದಿ ೨೪

ರಾಗ ಪಂತುರಾವಳಿ ಧ್ರುವತಾಳ

ಇಂದುವಿನ ಪೋಲ್ವ ಪಾದದಂದಿಗೆ ಗೆಜ್ಜೆಗುಲ್ಲೆ ।
ಮಂದ ಕದಳಿ ಸ್ತಂಬದಂದದಿ ಊರು ಜಾನು ।
ಚಂದದಿ ಉಡಿಗಂಟೆ ಕುಂದಣ ದುಡುಧಾರ ।
ಬಿಂದುಲಿ ಖಡಿಯ ತೋಳ್ಬಂದಿ ಮುದ್ದಿನುಂಗುರ ।
ಗಂಧ ಪೂಸಿದ ಕಂದರದಿ ವಿಶಾಗ್ರ ನಖವು ।
ಪೊಂದಿಸಿ ಇಟ್ಟ ಕರ್ನಕುಂಡಲಾನಂದ ಮುಖ ।
ಮಂದಹಾಸ ಅರವಿಂದ ನಯನ ಚಲ್ವ ।

ಅಂದವಾದರಳಿಲೆ ಸುಂದರ ಕಿರೀಟವು |
ವೃಂದಾವನದಿ ಗೋವಿಂದ ಶ್ರೀಕೃಷ್ಣ |
ಇಂದಿರಾಪತಿ ಅಮರೇಂದ್ರ ವಂದಿತ |
ಕಂದರ್ಪ ಜನಕ ಏ ನಂದ ನಂದನ ಕಂದ |
ಹಿಂದೆ ಕಾಳಿಂದಿ ಮೇಲೆ ನಿಂದು ಕುಣಿದಂತೆ |
ಇಂದೆನ್ನ ಮನವೆಂಬೊ ಮಂದಿರದೊಳು ಬಂದು |
ಧಿಂಧಿಮಿಧಿಮಿಕ್ಕು ತೋಂಧಿಗಿಧಿಗಿ |
ತಂದನ್ನ ತಾನಾ ತಥೈ ಎಂದು ಕುಣಿದಿನ್ನು |
ಹಿಂದಿನ ದೋಷಂಗಳ ಕುಂದಲೊತ್ತಿನ್ನು ವೇಗ |
ಮುಂದಿನ ದುಷ್ಕೃತವು ನಿಂದಿರದಂತಲಿ ಮಾಡೊ |
ಮಂದ ಜನರ ದೋಷವೆಂಬೋ ಅಂಧಕಾರಕ್ಕೆ |
ಸುಂದರಾಂಗನೆ ರವಿ ಎಂದದಿ ನೀ ಪೊಳೆಯೊ |
ನಿಂದಿರವೊದೆ ತಮ ಛಿಂದಿಸಿ ಪೋಗುವದು |
ಒಂದರಘಳಿಗೆನ್ನ ಮುಂದೆ ಬಿಡದಲೆ |
ನಂದಾದಿ ಸುಳಿದೆನ್ನ ಮಂದನ್ನ ಮಾಡದೆ ಮು |
ಕುಂದ ನೀ ಎನಗೆ ಬಂಧು ಕಾಣಯ್ಯಾ ದೇವ |
ಸಿಂಧು ಶಯನ ರಂಗ ಗೋಪಾಲ ವಿಠ್ಠಲ |
ಹಿಂದೆ ಮುಂದೆ ಎನಗೆ ಒಂದಾಗಿ ಪೊರೆಯೊ ||೩||

ಮಟ್ಟತಾಳ

ಬಲಿಯ ದಾನವ ಬೇಡಿ ನೆಲನೆ ಈರಡಿ ಮಾಡಿ |
ಸ್ಥಳವ ಸಾಲದೆ ಪಾದ ಬಲಿಯ ಶಿರದಲಿಟ್ಟೆ |
ಎಲೆ ದೇವ ಆದಿಪಾದ ಎನ್ನ ತಲೆಯಮೇಟ್ಟೆನಗೆ |
ತುಳಿ ಎನ್ನ ದೋಷಗಳಳಿದು ಪೋಗುವಂತೆ |
ಹಲವು ದೋಷಂಗಳಿಗೆ ಬಲು ಅಧಿಕಾರಿ ನಾನು |
ನೆಲೆ ಆವದೊಂದಿನ್ನು ತಿಳಿಯ ಕುಳಿತರಿನ್ನು |
ಹೊಳಿಯ ನೀರಿಗೆ ತೃಣವು ಮರಳಿ ಬೀಳೋದೆ ಅಡ್ಡ |

ನಳಿನನಾಭನೆ ನೀನು ನೆಲಿಯು ಬಲ್ಲವನಯ್ಯಾ |
ಸುಲಭದಿಂದಲಿ ನಿಚ್ಚಳನ ಮಾಡಿ ಎನ್ನ |
ತಿಳಿಸಿ ನಿನ್ನ ರೂಪ ಇಳಿಯೊಳಗಿಡಿಸೆನ್ನ |
ಖಳರ ಮರ್ದನನೆ ಗೋಪಾಲ ವಿಠ್ಠಲ |
ಕಾಲ ಕಾಲಕೆ ನಿನ್ನ ವಾಲಗದೊಳಗಿಡಿಸೊ ||೨||

ತ್ರಿವಿಡಿ ತಾಳ

ನೀನು ಪಿಡಿಯೆ ಕುಬುಜಿ ಯೆವ್ವನಳಾದಳು |
ನೀನು ಸೋಕಲು ಶಿಲಿತಾನೆ ಸ್ತ್ರೀಯಾದಳು |
ನಿನಗೆ ನೀ ವರದೆ ಅಂದು ಧ್ರುವರಾಯಗೊಲಿದಯ್ಯಾ |
ಏನು ಸುಖ ಶಬರಿ ಫಲವನುಣ್ಣಿಸಿದಳು |
ನೀನೊಲಿದವರ ಮಹಿಮೆ ನೀನೆ ಬಲ್ಲಿಯೊ ದೇವ |
ಆನೇನು ಬಲ್ಲೆನು ನೀನು ತೋರಿಸಿದಷ್ಟು |
ನೀನೆ ಎನಗೆ ಸ್ವಾಮಿ ನಾನಿನ್ನ ಭೃತ್ಯರ್ಗಂಜೊ |
ದಾನು ಒಂದೆ ಬಲ್ಲೆ ಇನ್ನೊಂದು ಅರಿಯೆನಾ |
ಮನಸಾ ವಾಚಾ ಕಾಯಾ ನಿನ್ನ ನಂಬಿದೆ ದೇವ |
ಏನು ಮಾಡಿದದೊಳಿತೆ ನೀನೆ ಗತಿ ಎನಗೆ |
ಕಾನನ ಪಟ್ಟಣ ಸಮವನು ಮಾಡಿದಂಥ |
ಜ್ಞಾನಿಗಳೊಡನಿಡಿಸು ಅನಂತ ಕಾಲದಿ |
ದಾನ ವಾಂತಕ ರಂಗ ಗೋಪಾಲ ವಿಠ್ಠಲ |
ದೀನ ರಕ್ಷಕ ಭಕ್ತರಾಧೀನ ದೇವ ||೩||

ಅಟ್ಟತಾಳ

ಹಿಡಿಯನೆ ಎನ್ನಲ್ಲಿ ಮಡಿಗಿಕೊಂಡಿದ್ದಿನ್ನು
ಬಿಡದೆ ಎನ್ನಿಂದ ಮಾಡಿಸಿದ ಕರ್ಮಗಳೆಲ್ಲ |
ಸಡಗರದಿ ನಿನ್ನ ಅಡಿಗೆ ಅರ್ಪಿಸಿದರೆ |
ಒಡನೆ ಎನ್ನನು ನೀನು ಕಡೆಯು ನೋಡಲಿ ಯಾಕೊ |
ಪೊಡವಿಯೊಳು ನ್ಯಾಯಕೆ ದೃಢ ಭಕುತರಲ್ಲಿ ಬಾ |

ಹಿಡಿದು ನಿನ್ನನು ನಾನು ಸಡಲದೆ ಕಟ್ಟುವೆ ।
ಬಡವನೆಂದು ಬಾಯ ಬಿಡುವದೊಳಿತಲ್ಲ ।
ಬಿಡು ಹಾಗಾದರೆ ಭಕುತ ವತ್ಸಲ ಬಿರಿದಿನ್ನು ।
ಸಡಗರದ ದೈವ ಗೋಪಾಲ ವಿಠಲ ।
ಕೊಡು ಭಕುತಿ ನಿನ್ನ ಅಡಿಗಳಲ್ಲೆನಗೆ || ೪ ||

ಆದಿ ತಾಳ

ಹಾಗೆ ಹೀಗೆ ಮನವು ಭೋಗ ವಿಷಯಂಗಳಿಗೆ ।
ಹೇಗೆ ಹೋಗೆಳೆದರೆ ನೀನು ಸಾಗರದಂತೆ ಮಾಡಿಯಾ ।
೧ ನಾಗಾರಿ ಕುಳ್ಳ ನಿಜ ಭಾಗವತರ ಮನೆ ।
ಬಾಗಿಲು ಕಾಯುವಂಥ ಭಾಗ್ಯವನಿತ್ತು ।
ಹೇಗೆ ನಿನ್ನ ಚರಣಗಳಿಗೆ ಮರುಳಾಗುವಂತೆ ಮನ ।
ನಾಗ ಶಯನ ಮಾಡೋ ।
ರೋಗ ವಿಷಯಗಳೆಂಬೊ ಹಾದಿಗೆ ಹರಿವಿ ಮುಳ್ಳು ।
ಜಾಗರತದಲೆನ್ನ ಕಾಯಬೇಕಿನ್ನು ।
ಸಾಗರ ಶಯನ ಗೋಪಾಲ ವಿಠ್ಠಲರೇಯಾ ।
ಚಾ ಗುಡಿಸಿಕ್ಕದೆ ನೀಗರಿ ಮುಂದಕ್ಕೆ || ೫ ||

ಜತೆ

ಎನ್ನಪರಾಧ ಅನಂತವಿದ್ದರು ಕ್ಷಮಿಸಿ ।
ಮನ್ನಿಸಿ ಸಲಹೆನ್ನ ಗೋಪಾಲ ವಿಠಲರೇಯಾ || ೬ ||

## ಸುಳಾದಿ ೨೪

ರಾಗ ಮಾರವಿ ಧ್ರುವತಾಳ

ಹೊತ್ತು ಹೋಗದಿನ್ನು ಅನಾದಿ ಅವಿದ್ಯಾವಿನ್ನು ।
ಹೊತ್ತಿಸಲಿ ಜ್ಞಾನಾಗ್ನಿ ಬಲ ಸಾಲದು ।
ಹೊತ್ತು ಬಹು ಆಯಿತು ಇನ್ನು ತೀರದಲ್ಲ ।

---

೧ ಗರುಡನ ಮೇಲೆ ಕುಳಿತು.

ಹೊತ್ತು ಹಾಕೊ ಉಪಾಯ ತಿಳಿಯಲಿಲ್ಲ |
ಹೊತ್ತು ಬಹು ದಣಿದು ಮಮತೆಂಬೊ ಭಾರವ ಪೊತ್ತು |
ಹೊತ್ತು ಆವದೊ ಎನಗೆ ನಿನ್ನ ತಿಳಿಯ |
ಹೊತ್ತಾಡುವವು ಎನ್ನ ಕಾಯಾದಿಗಳು ಬಿಡದೆ |
ಹೊತ್ತಾ್ರುಕುವವು ನಾನಾ ವಿಷಯಗಳಿಗೆ |
ಹೊತ್ತು ಒಂದಿನದ ಒಳಗಾಗಿ ಲವಕಾಲ |
ಹೊತ್ತು ನಿನ್ನ ಸಂಸ್ಮೃತಿಯು ಮನಕೆ ಬಂತೆ |
ಹೊತ್ತು ಅಂದರೆ ಅದೆ ಹೊತ್ತು ಸರಿಕಾಣೆಯ್ಯಾ |
ಹೊತ್ತವನೆ ಸರಿ ಬರಿದೆ ಹೊತ್ತು ವ್ಯರ್ಥ |
ಹೊತ್ತು ಆಡುವ ಧೊರಿಯೆ ಗೋಪಾಲ ವಿಠ್ಠಲ |
ಹೊತ್ತು ನಡಿಸುವ ಪಾದದ್ವತ್ತಿಲಿಡಿಸೆನ್ನ || ೧ ||

ಮಟ್ಟತಾಳ

ನಿನ್ನ ಸ್ಮೃತಿಯೇ ಕಾಲ ವಿಸ್ಮೃತಿಯೆ ಅಕಾಲ |
ನಿನ್ನ ಸ್ಮೃತಿಯೇ ಪುಣ್ಯ ವಿಸ್ಮೃತಿಯೆ ಪಾಪ |
ನಿನ್ನ ತಿಳದವ ಸರ್ವ ತಿಳದವ |
ನಿನ್ನ ಅರಿಯದವ ನಿರಯ ಬಿದ್ದವ |
ನಿನ್ನಿಂದಲಿ ಒಂದು ಕರ್ಮ ಮಾಡಿದವ |
ಇನ್ನು ನಾನಾ ವಿಧಿಯು ತಾನು ಮಾಡಿದವ |
ಪುಣ್ಯವೆಂದರು ಇದೆ ಪಾಪವೆಂದರು ಅದೆ |
ಅನ್ಯಾಸಕ್ತಿ ಎಂಬುದೆನಗೆ ದೋಷಾ |
ನಿನ್ನಾಸಕ್ತಿಯು ಎಂಬದೆನಗೆ ಪುಣ್ಯ |
ಎನ್ನಯತನವೇನು ಇನ್ನಿದಕಾದರು |
ನಿನ್ನ ಕರುಣದಿಂದೆ ಇಂದು ಆಗಲಿಬೇಕು |
ಘನ್ನ ದಯಾನಿಧಿ ಗೋಪಾಲ ವಿಠ್ಠಲ |
ಅನಂತಾನಂತ ಅಘಟಿತ ಮಹಾ ಘಟಿತಾ || ೨ ||

ರೂಪಕ ತಾಳ

ನಿನ್ನ ಕರುಣವೆಂಬ ಘನ್ನ ಮಹಾ ಸೋಸಿಗೆ ।
ಎನ್ನ ದೋಷವೆಂಬ ವನ್ಹಿತಾ ನಿಲ್ಲುವದೆ ।
ನಿನ್ನ ಕರುಣ ರಸದ ಬಲವೆಲ್ಲಿ ನೀನೆಲ್ಲಿ ।
ಎನ್ನಲೂ ಎನಸಲ್ಲ ಬಲ್ಲ ಮಾತಿಗೆ ದೇವ ।
ನಿನ್ನ ಕರುಣದಿಂದ ಪೋಗುವಷ್ಟು ಪಾಪ ।
ಎನ್ನಿಂದ ಲಾಗುವದೆ ಎಲೆ ಎಲೆ ಸರ್ವಜ್ಞ ।
ನಿನ್ನ ಆನಂತಕ್ಕೆ ಅಂತಿ ಎಂಬುದು ಇಲ್ಲಾ ।
ಕಣ್ಣಿಲಿ ಕಟ್ಟಿಸಿಕೊಂಡಿ ಎಂತೋ ಕರುಣಿ ।
ನಿನ್ನ ಅಣುತ್ವಕ್ಕೆ ವಿಶ್ರಾಂತಿಯಿಲ್ಲ ಸರಿ ।
ಇನ್ನೇಕ ಕಾಲದಲ್ಲಿ ಅಣು ಮಹತ್ತು ರೂಪ ।
ವನ್ನೆ ಒಂದರಲ್ಲೆ ತೋರ್ಪದೆಂತೊ ।
ಚಿನ್ನುಮಯ ಮೂರುತಿ ಗೋಪಾಲ ವಿಠ್ಠಲ ।
ನಿನ್ನ ಆಟವನು ಬಲ್ಲರೋ ಸಿನ್ನವರು ॥ ೩ ॥

ಝಂಪೆತಾಳ

ಕೋಡಗ ತನ್ನ ವರಿಯ ಕಚ್ಚಿಕೊಂಡು ಇನ್ನು ।
ಓಡ್ಯಾಡಿದರು ಇನ್ನು ನಾನಾಕಡಿಗೆ ।
ಬಿಡಿಸಿಕೊಳ್ಳದೆ ಇಪ್ಪುವ ಸ್ವಾತಂತ್ರ ।
ಕೊಡಗನದೋ ಆದರ ವತ್ಸನದೊ ।
ನೋಡೆನ್ನನು ಬಡಿದು ಆಡುವ ಆಟವು ।
ಓಡಿಸಿದಂತೆ ನಾ ಓಡಾಡುವೆ ।
ಕೋಡಗ ತನ್ನ ಕೂಸು ಕೊಂಡೇ ತಾನು ।
ಓಡ್ಯಾಡಿ ಫಲ ಮೆದ್ದರಿನ್ನು ಮೆಲಿವುವದು ।
ಕೇಡು ಲಾಭದ ಸ್ಥಿತಿಯು ಕೂಸು ಬಲ್ಲದೆ ಇನ್ನು ।
ಕೋಡಗ ಕುಣಿಸಿದಂತೆ ಕುಣಿವದು ।
ರೂಢಿಗೊಡಿಯಾ ದೇವ ಗೋಪಾಲ ವಿಠ್ಠಲ ನೀ ।
ಆಡಿಸಿದಂತೆ ನಾ ಆಡುವೆನೊ ॥ ೪ ॥

ತ್ರಿವಿಡಿತಾಳ

ಎಷ್ಟು ಆದವು ನೋಡು ಎನಗೆ ಬಂದ ಯೋನಿ ।
ಕಷ್ಟ ಬಟ್ಟದು ಕಡೆ ಮೊದಲೆ ಇಲ್ಲ ।
ವೈಷ್ಣವ ಜನ್ಮಂಗಗಳು ಇದಕ್ಕಿಂತಧಿಕಾಗಿ।
ಕೊಟ್ಟದು ಹಾಗೆ ಸಾರಿ ಜ್ಞಾನವಿತ್ತು ।
ಎಷ್ಟು ಕಡಿಮೆ ನೋಡು ಆಗ ಈಗಲು ನೋಡಾ ।
ನಷ್ಟ ಅನಂತ ಮಾಡಿ ಈ ಜ್ಞಾನ ನೆನ್ನ ।
ಬಟ್ಟ ಭವಣೆ ಎಷ್ಟು ಈಗ ವೈಷ್ಣವನಾಗಿ ।
ಪುಟ್ಟುವದಕ್ಕೆನಗೆ ಪುಣ್ಯ ಪುರುಷ ।
ಎಷ್ಟು ಮಂದಿ ಜನ ಎನಗೆ ಸಹಾಯವಾಗಿ ।
ಸೃಷ್ಟಿಮಾಡಿಸಿಪ್ಪದು ನೀನರಿಯಾ ।
ಶಿಷ್ಟ ಜನರ ಪಾಲ ಗೋಪಾಲ ವಿಠ್ಠಲ ।
ಘಟ್ಯಾಗಿ ಪಿಡಿದೆನ್ನ ಸಾಕಬೇಕು ॥ ೫ ॥

ಅಟ್ಟತಾಳ

ಸನ್ಯಾಸಿ ಎನಿಸಿ ನಾನಿನ್ನಕಾಣಲಿ ಇಲ್ಲ ।
ಹನ್ನೆರಡು ನಾಲ್ಕೊರುಷ ನರಕ ಭೋಗಿಸಿಯಿಪ್ಪೆ ।
ಇನ್ನು ವೈದಿಕನಾಗಿ ಬ್ರಹ್ಮದ್ರೋಹವು ತಾಕಿ ।
ಬನ್ನ ಬಟ್ಟು ಯಿಪ್ಪೆ ಇನ್ನು ಕೆಲವು ಹಿಂದೆ ।
ಹೆಣ್ಣಿಗಾಗಿ ಪೋಗಿ ಮುನ್ನೆ ಪ್ರಾಣವು ಕೊಟ್ಟು ।
ಇನ್ನು ಅದರ ಶೇಷ ಈಗನುಭವಿಸುವೆ ।
ಇನ್ನು ನಾನಾ ದೋಷ ಘಟಿಸಿ ಇಪ್ಪವು ಬಹಳ ।
ನಿನ್ನ ಕರುಣದಿಂದೆ ಕಡೆಹಾಯಿಸೆಂದೆನಿಪೆ ।
ಅನಿಮಿತ್ಯ ಬಂಧು ಗೋಪಾಲ ವಿಠ್ಠಲ ।
ನಿನ್ನ ಬಿಟ್ಟವನಲ್ಲ ಏನು ಬಂದರನ್ನ ॥ ೬ ॥

ಆದಿ ತಾಳ

ಪಾಹಿ ಪಂಢರಿರೇಯಾ ಪಾಲಿತ ನಿನ್ನಿಂದು ।
ಪಾಹಿ ಪಾಂಡವ ಪಾಲ ಪಾಪ ವಿನಾಶನ ।
ಪಾಹಿ ಅಹೋಬಲ ಶ್ರೀ ನಾರಸಿಂಹನೆ ।
ಪಾಹಿ ಅಳಗಿರಿ ತಿರುಮಲರಾಯನೆ ।
ಪಾಹಿ ಪಾಹಿ ರಾಮಾ ತ್ರಾಹಿ ತ್ರಾಹಿ ಹರೆ ।
ಹಾ ಹಾ ಅಲೌಕಿಕ ಹೋ ಹೋ ಸುಖ ಪೂರ್ಣ ।
ಮಹಾತಿ ಸುಂದರ ಮನ್ಮಥ ಮನ್ಮಥ ।
ದೇಹಿ ಜ್ಞಾನ ಭಕ್ತಿ ವೈದೇಹಿ ರಮಣನೆ ।
ರಹಸ್ಯದಲಿ ನಿನ್ನಗಭಿವಂದಿಸುವೆ ಎನಗೆ ।
ದೇಹ ತಂದಿತ್ತಂತೆ ತತ್ಕಾರ್ಯ ಸಾಧನ ।
ಬಹಳಾಗಿ ಮಾಡಿಸಿ ಬಂದು ಪೊದಗಿ ನೀನು ।
ಶ್ರೀಹರಿ ಕಾಣಿಸಿಕೊಂಡು ಕಾಯೋ ।
ನಹರೆ (ನಾಹಾರಿ) ಸದ್ರಿಶ್ಯ ರಹಿತ ಗೋಪಾಲ ವಿಠಲ ।
ಪಾಹಿ ಪಾಹಿ ನಮೋ ನಮೊ ಸ್ವಾಮಿ ॥ ೭ ॥

ಜತೆ

ಅಪರಾಧ ಅನಂತ ಮಾಡಿ ನಾ ಮೊರೆ ಹೊಕ್ಕೆ ।
ಅಪಾರ ಕರುಣಿ ಗೋಪಾಲ ವಿಠ್ಠಲ ಕಾಯೊ ॥ ೮ ॥

## ಸುಳಾದಿ ೨೫

## — ಐತಿಹಾಸಿಕ —

ರಾಗ ಭೈರವಿ ಧ್ರುವತಾಳ

ನೀಲ ಗುದರಿಯನೇರಿ ಕಾಲು ಸೊಂಟಕೆ ಸುತ್ತಿ ।
ಕಾಲು ಕುಪ್ಪಸ ತೊಟ್ಟು ಮೇಲೆ ಮೋಹನ್ನ ಹಾಕಿ ।
ಓಲ್ಯಾಡಿಸುತ್ತ ವಂಟೆ ಢಾಳಾಗಿ ಶೋಭಿಸಲು ।

ಸಾಲು ಬೆರಳುಂಗರ ಕೈಯಲಿ ಖಡ್ಗವ ಪಿಡಿದು |
ತೋಳು ತಾಯಿತ ಶಿರಕೆ ಮೇಲಾದ ವಸ್ತ್ರಸುತ್ತಿ ||
ಫಾಲ ಕಸ್ತೂರಿ ನಿಟ್ಟು ಮೈಲಿ ಗಂಧವು ಪೂಸಿ |
ಪಾಲಾಯನಾದಿ ಅಶ್ವವೇರಿ ಓಲ್ಯಾಡಿಸುತ್ತ ||
ಆಲೆನಾಹಿತೆಂದು ಕೇಳಿದವನಾರವ್ವಾ |
ವೇಳೆ ಸಾಲಧೋಯಿತು ಕೇಳುವದಕೆನಗೆ |
ಹೇಳುವದಕೆ ವಚನಾಗದ್ಗದದಿ |
ಏಳದುವಚನಉಚ್ಚರಿಸುವೆನೆನಲು |
ಆಲೋಚನೆಗೆ ಅತಿವಿಚಿತ್ರವು |
ಕೇಳಿಲ್ಲ ಕಂಡಿಲ್ಲ ಇಂಥ ಪುರುಷನ್ನ ಎಂದು |
ಕಾಳಗತ್ತಲು ಅಲ್ಲ ಅತ್ತ ನೋಡು ಹಗಲು ||
ಕೇಳು ತಗ್ಗು ಮಿಟ್ಟೆ ಮೇಲೆ ಮಂಜ(ಜು)ರವಲ್ಲ ||
ಹೇಳಲೆ ನಾ ನಿಂದು ಸೋಜಿಗವೆ |
ಕಾಲು ಏಳವು ಮುಂದೆ ನಡಿಯಲಿ ಎನಗಿನ್ನು |
ಆಲೋಚನೆ ಎಲ್ಲ ಅತ್ತಲಾಗಿ ಎನ್ನ |
ಕೇಳಿದನಲ್ಲೆ ಆರಿ ಮಾತಿನಿಂದಲಿ ಇನ್ನು |
ಹೇಳುವ ಪುರುಷ ಆವನಾಗುವನು |
ಆಲೋಚನೆಗೆ ಎನಗೆ ತೋರುತಲಿದೆ ತುಲಸಿ |
ಮಾಲೆ ಪರಿಮಳ ಗಂಧ ಕುರುಹದಿಂದ |
ಶೀಲಾ ಮೂರುತಿ ಪಂಢರಿರಾಯಾ ಗೋಪಾಲ ವಿಠ್ಠಲ ||
ಓಲ್ಯಾಡಿ ಕುದುರೆ ಓಡ್ಯಾಡಿಸುತ್ತ ಪೋದನಲ್ಲೆ |

ಮಟ್ಟ ತಾಳ

ಕಂಡಿರ್ಯಾ ಕಂಡಿರ್ಯಾ ಖಂಡ ವ್ಯಾಪುತನಿವ |
ಕಂಡಿರ್ಯಾ ಕಂಡಿರ್ಯಾ ಬೊಮ್ಮಾಂಡದೊಡಿಯನ |
ಕಂಡಿರ್ಯಾ ಕಂಡಿರ್ಯಾ ಅಜ ಭವಾದಿಗಳು |
ತೋಂಡರ ಮಾಡಿ ಬಿಡದ್ಯೆ ಖಂಡ ಪೊರೆವುವನ |

ಕುಂಡಿರ್‍ಯಾ ಕಂಡಿರ್‍ಯಾ ಸರ್ವ ಜೀವರ ಪಶು ।
ಹಿಂಡು ಮಾಡಿ ಬಿಡದೆ ಕಾಯುವ ಗೋಪಾಲನ ।
ಕಂಡಿರ್‍ಯಾ ಕಂಡಿರ್‍ಯಾ ಮಣಿ ಪೌಳಿ ಮಲ್ಲಿಗೆ ದಂಡೆಯು ।
ಮುಂಡಿಯು ಶೋಭಿಸೆ ಮುದ್ದು ಮೊಗದ ಚಲುವ ।
ಪುಂಡರೀಕ ದಳನಯನ ಕಸ್ತೂರಿ ತಿಲಕ ।
ಕುಂಡಲ ಕರ್ನ ಕಪೋಲ ತಥಳಿಸುತ್ತ ।
ಪುಂಡರೀಕ ತುಲಸಿ ದಂಡೆಯು ಕೊರಳೊಲಿಯೆ ।
ಚಂಡು ಬೊಗರಿ ಚಿಣಿ ಗೋಲುಗಳಾಡುತ ।
ಪುಂಡರೀಕನ ಭಕುತಿಗೊಲಿದು ಬಂದು ನಿಂದಾ ।
ಪಂಢರಿ ಪುರಿರೇಯಾ ಗೋಪಾಲ ವಿಠ್ಠಲನ್ನ ।
ಕಂಡಿರ್‍ಯಾ ಕಂಡಿರ್‍ಯಾ ಕಪಟ ನಾಟಕ ಹರಿಯ ॥ ೨ ॥

### ರೂಪಕ ತಾಳ

ಆವ ರೂಪದಲ್ಲೆ ಗೋವು ಕಾಯಿದ ರೂಪ ।
ಆವ ಈ ರೂಪವೆ ಮತ್ಸ್ಯಾದಿ ರೂಪವು ।
ಆವ ಈ ರೂಪವೆ ಅಜಾದಿ ರೂಪವು ।
ಆವ ಈ ರೂಪವೆ ಆತ್ಮಾದಿ ರೂಪವು ।
ಆವ ಈ ರೂಪವೆ ಅನಂತಾತ್ಮಕ ।
ಶ್ರೀ ವಿಷ್ಣು ರೂಪವು ಮತ್ತಿವನೆ ಸಾಕ್ಷಾತ ನೋಡಾ ॥
ಈ ವಿಧ ರೂಪವು ಅನಂತಾನಂತವಿರಲು ।
ಆವ ರಾಹುತನಂತೆ ಅಶ್ವವೇರಿ ಎನ್ನ ।
ಈ ವಿಧದಲಿ ಎನ್ನ ಕಾವಳಗೊಳಿಸಿದುದು ಏನು ।
ನಾ ಒಂದರಿತವನಲ್ಲ ನಿನ್ನ ಲೀಲೆ ।
ಆವ ಬಗೆಯೊ ನಾನರಿಯೆ ಈ ವಿಧ ತೋರಿದ್ದು ।
ಸೇವಕ ಜನಸ್ಥಿತಿ ನೀನೆ ಬಲ್ಲೆ ।
ಗೋವರ್ಧನೋದ್ಧರ ಗೋಪಾಲ ವಿಠ್ಠಲ ।
ದೇವಾ ಪಂಢರಿರಾಯಾ ಶ್ರೀ ವಿಜಯದಾಸರ ಪ್ರಿಯಾ ॥

ಝಂಪೆ ತಾಳ

ನೋಡಿದಂತೆನಗೆ ನೋಡದಿದ್ದರೆನಗೆ ।
ಮಾಡಿಕೊಂಬೆ ಮನಕೆ ಆವನಾಧಾನೆಂದು ।
ನೋಡಿದ ಕ್ಷಣದಲ್ಲಿ ಕಾಣಧೋದರಿಂದ ।
ನೋಡಬೇಕಾಯಿತು ಆವವನೊ ಎಂದು ।
ನೋಡ ನೋಡಾ ಅದೃಶ್ಯನಾದ ಕಾರಣ ಮನಕೆ ।
ನೋಡು ಎಂತಿಪ್ಪನದು ನೋಡುವರಿಗೆ ।
ಆಡುವ ಮಾತಿಲ್ಲ ಕಂಡ ಕಂಡಂತಿನ್ನು ।
ನೋಡಬಾರದೆ ಒಂದು ಘಳಿಗೆ ನಿಂದು ।
ನೋಡಿದಕ್ಷಣ ನಿಂದು ಬೇಡುವದಿನ್ನೇನು ।
ನೋಡೊ ಯೋಗ್ಯತೆ ಇನಿತೆ ಇತ್ತೋ ಏನು ಧೊರಿಯೆ ।
ಆಡಿದ್ದೆಲ್ಲ ಬರಲಿ ಇಲ್ಲವೆಂದು ಎನ್ನ ।
ನೋಡು ಆವ ಸ್ಥಳಕೆ ಬರಲಿ ಆನು ।
ನೋಡು ತಿಳಿಯದು ಸ್ವಾಮಿ ಗೋಪಾಲ ವಿಠ್ಠಲ ।
ನೋಡು ಪಂಢರಿರಾಯಾ ಮಾಡುದಯವ ॥ ೪ ॥

ತ್ರಿವಿಡಿ ತಾಳ

ಆವ ದೇಶಕೆ ಬರಲಿ ಆವಕ್ಷೇತ್ರವು ನೋಡಲಿ ।
ಆವ ಸಂಗವ ಬಿಡಲಿ ಆವ ಪಿಡಿಯಲಿ ಸಂಗ ।
ಆವ ವ್ರತಗಳು ಮಾಡಲಿ ಆವ ಶ್ರವಣವು ಕೇಳಲಿ ।
ಆವ ಧೈರ್ಯವು ಇರಲಿ ಆವದಾವದು ತಿಳಿಯಲಿ ।
ಆವ ಸಾಧನ ಮಾಡಲಿ ಆವದಾವದು ಕೊಡಲಿ ।
ಆವದಾವದು ಉಣಲಿ ಆವದಾವದು ಹೊದಿಯಲಿ ।
ಆವದಾವದು ನೋಡಲಿ ಆವದಾವದು ಬಿಡಲಿ ।
ಆವದಾವದು ತಡಿಯಲಿ ಆವದಾವದು ಜಡಿಯಲಿ ।
ಆವದಾವ ಅರ್ಚಿಸಲಿ ಆವದಾವದು ಕೇಳಲಿ ।
ಆವದಾವದು ನುಡಿಯಲಿ ಆವದಾವದು ಜಪಿಸಲಿ ।

ದೇವ ನೀನಲ್ಲದಿಲ್ಲ ಇದರೊಳಗೊಂದು ।
ಆವಲ್ಲಿಗೊ ನಾನರಿಯೆ ಬರಹೇಳಿದ್ದು ಎನ್ನ ।
ಪಾವನ್ನ ಮಾಳ್ಪ ಶಕ್ತ ನೀನೆ ಎನ್ನ ।
ಆವಲ್ಲಿದ್ದರು ಎನಗೆ ಅನುಭವ ಈಗಲೆ ।
ಕಾವಲಿ ಬಹು ಇರಲಿ ಕಾಕು ಜನರಿಂದ ಬಂದಸೊಲ್ಲಿಗೆ ಮ ।
ನ ವೈದು ವಶವು ಮಾಡಲಿ ಬೇಡ ।
ನಾ ಒಬ್ಬನೇವೆ ಅಲ್ಲ ನಿನ್ನ ಪೊಂದಿ ನಡೆವ ಸಿ ।
ರಿ ವಿಜಯ ದಾಸರ ಸಹವಾಸದಲಿಪ್ಪ ।
ಜೀವರುಗಳಿಗೆಲ್ಲ ನೋವು ಎಂಬದು ಬೇಡ ।
ದೇವ ಪಂಢರಿರಾಯಾ ಗೋಪಾಲ ವಿಠ್ಠಲ ।
ನೀ ಮೊಲಿದದಕಿಂದು ಈ ವರವ ನೀಡು ॥ ೫ ॥

ಅಟ್ಟತಾಳ

ಶರಣು ಗೋವಳರಾಯಾ ಶರಣು ನಿರ್ಜಿತ ಮಾಯಾ ।
ಶರಣು ಮುಕ್ತಾಶ್ರಯಾ ಶರಣಾನಂದಮಯಾ ।
ಶರಣು ದೋಷವಿದೂರ ಶರಣು ನಿರ್ವಿಕಾರ ।
ಶರಣು ಭಕ್ತರ ಪಾಲ ಶರಣು ಲೀಲಾವತಾರ ।
ಶರಣು ಅವ್ಯಕ್ತ ಕಾಯಾ ಶರಣು ಪ್ರಾಕೃತ ಕಾಯಾ ।
ಶರಣು ಜ್ಞಾನಪೂರ್ಣ ಶರಣು ಮೂಲ ಕಾರಣ ।
ಶರಣು ಅಖಂಡೇಶ ಶರಣು ಅನಾದಿ ದೇವಾ ।
ಶರಣು ನಿತ್ಯ ತೃಪ್ತಾ ಶರಣು ನಿರಂಜನಾ ।
ಶರಣು ಘಟಿತಾ ಘಟಿತಾನಂತ ಐಶ್ವರ್ಯ ।
ಶರಣು ಅಗಮ್ಯ ಅಲೌಕಿಕ ಐಶ್ವರ್ಯ ।
ಶರಣು ಮಹಾ ಪ್ರಭೊ ಹೇ ರಾಜಾಧಿ ರಾಜ ।
ಶರಣು ಅಯ್ಯಾ ಅಯ್ಯಾ ಪೂತುರೆ ಪೂತುರೆ ।
ಶರಣು ಶರಣು ಸಿರಿ ಅಜ ಭವಾದಿಗಳೀಶಾ ।
ಶರಣು ಪಂಢರಿರಾಯಾ ಗೋಪಾಲ ವಿಠ್ಠಲ ।
ಶರಣು ಶರಣು ನಿನ್ನ ಪರಿವಾರ ಸಹ ನಿತ್ಯ ॥ ೬ ॥

ಅದಿ ತಾಳ

ಮಾನಿಸ ರೂಪದಿ ಮಹಿಮೆಯ ತೋರ್ದನೆ ।
ಮಾನಿಸ ರೂಪದಿ ಮನೆ ಮನೆ ಪೊಕ್ಕನೆ ।
ಮಾನಿಸ ರೂಪದಿ ಮಣ್ಣನೆ ಮೆದ್ದನೆ ।
ಮಾನಿಸ ರೂಪದಿ ಮುನಿಮನ ಶೆಳೆವನೆ ।
ಮಾನಿಸ ರೂಪಾಗಿ ಮಾನಿನಿಗೊಲಿದನೆ ।
ಮಾನಿಸ ರೂಪದಿ ದನುಜರ ಕೊಂದನೆ ।
ಮಾನಿಸ ರೂಪಾಗಿ ಧನುವನ್ನು ಮುರಿದನೆ ।
ಮಾನಿಸ ದೃಷ್ಟಿಗೆ ಮಾನುಷ್ಯನಂತೆ ಅ ।
ಮಾನುಷ್ಯ ಮಹಿಮನೆ ಮರೆಮೋಸ ಮಾಡೋದು ।
ಮಾನಿತವೇನಯ್ಯಾ ಮಾನವಂತನೆ ಹೀಗೆ ।
ಮಾನಿಸನ್ನವನುಂಬ ಮನುಜನಾದದರಿಂದ ।
ಮಾನುಷ್ಯನಂತೆ ನಿನ್ನ ಮನದಿ ನಿಶ್ಚೈಸಿದೆ ।
ಮಾನ ಗುಣಾಂಬುಧಿ ಗೋಪಾಲ ವಿಠ್ಠಲ ।
ಮನಸಾ ವಾಚಾ ಕಾಯಾ ಮೊರೆಹೊಕ್ಕೆ ಮನನೀಡು ॥ ೭ ॥

ಜತೆ

ಎಲ್ಲ ನೋಡಿದರು ಒಳಿತೆಲ್ಲವಿರಲು ಬರ ।
ಲಿಲ್ಲವೆಂದನು ಗೋಪಾಲ ವಿಠ್ಠಲ ತಿಳಿಸೋ ॥ ೮ ॥

## ಸುಳಾದಿ ೨೬

## — ಐತಿಹಾಸಿಕ —

ರಾಗ ಕಾಂಬೋದಿ ಧ್ರುವ ತಾಳ

ಮಗುವಾಗಿ ಮಗನಾಗಿ ಮಮತೆ ಪುಟ್ಟಿಸಿ ನಿನ್ನ ।
ಮಗುವ ರೂಪವು ತೋರಿ ಮರಳಿ ಎನ್ನ ಕಣ್ಣಿಗೆ ।
ಸಿಗದಂತೆ ನೀನು ಎನ್ನ ಮಗನೆಂದು ಪೇಳಿಕೊಂಡ ।
ಬಗೆ ಆವ ಲೀಲೆಯೋ ಚನ್ನಿಗನೆ ಗೋವಳರಾಯಾ ಬಪ್ಪ ।

ಬಗೆ ಏನೊ ಎನ್ನೊಡನೆ ಚುನ್ನಾಟವಾಡಲಿಕ್ಕೆ ।
ಅಗಣಿತ ಗುಣಗಣ ಅಂಬುಧಿಯೋ ।
ಸೊಗಸಾಗಿ ಎನಗೆ ಮೊದಲಿಗೆ ನಿಜವ ತೋರಿದರೆ ।
ಮಿಗಲಾಗಿ ನಿನ್ನ ಸ್ತೋತ್ರಗಳನಾದರು ಮಾಳ್ಪೆ ।
ಯುಗ ಮಹಾ ಪ್ರಳಯಕ್ಕೆ ಚಲಿಸದ ಸರ್ವೇಶ ।
ಮಗುವಾಗಿ ತೋರಿ ಮೋಸಗೊಳಿಸುವದರಿಯಾದಾದೆ ।
ನಗು ಬಾಟಲವ ಮಾಡಿ ಕಡಿಗೆ ಹಿಂದೆ ನೋಳ್ಪಿವಿಯೊ ।
ಧಿಕು ಧಿಕು ಎನ್ನ ಜನ್ಮಸಾರ್ಥಕೇನೊ ।
ನಗಧರ ಚಲುವ ಗೋಪಾಲ ವಿಠ್ಠಲ ಕೃಷ್ಣ ।
ನಗೆ ಆಟ ತೋರೆನ್ನೊಡನೆ ಸಿಗದೆ ಮರಿಯಾಗಬಹುದೆ ॥ ೧ ॥

ಮಟ್ಟತಾಳ

ತಿಳಿಯದೆ ಸ್ವಪ್ನದಿ ಕಳವಳಿಕೆಯಿಂದ ।
ಶಳದು ನೂಕಿದೆನಲ್ಲ ಬಳಿಯು ನಿಲ್ಲಗೊಡದೆ ।
ಕಿಲಿ ಕಿಲನೆ ನಗುತ ಚಿನ್ನ ಬಾಲಕನಾಗಿ ।
ಸುಳಿದು ಆಡಿದರು ತಿಳಿಯದೆ ನಾ ಪೋದೆ ।
ತಳಕು ಹಾಕಿ ಕಾಲು ತೊಡರಿಸಿ ಕೊಂಡರು ।
ಎಳೆದು ಎಳೆದು ನಿನ್ನ ೧ ಎಬ್ಬೆಟ್ಟೆದೆನಲ್ಲಾ ।
ಭಳಿರೆ ನಿನ್ನ ಮಾಯಾ ಬಡವರಿಗೆ ಇನ್ನು ।
ತಿಳಿಯಲೊಶವೆ ಕರುಣ ಚಿತ್ರ ವಿಚಿತ್ರನೆ ।
ಮಲತ ಮಲ್ಲರ ಗಂಡ ಗೋಪಾಲ ವಿಠ್ಠಲ ।
ಅಲೌಕಿಕ ಚರಿಯ ಅಘಟಿತ ಮಹಾಘಟಿತಾ ॥೨॥

ತ್ರಿವಿಡಿತಾಳ

ಪುಟ್ಟಿದ ಶಿಶುವೆಲ್ಲಿ ಎಷ್ಟು ದಿವಸಾಯಿತು ।
ದೃಷ್ಟಿಲಿ ನಾನೆತ್ತ ನೋಡಿದವನೆ ಅಲ್ಲ ।
ಕೊಟ್ಟವನೆ ಕೊಂಡೊಯ್ದನೆಂದು ಮನಸು ಎಲ್ಲ ।

---

೧. ಅನುಸರಿಸು

ಘಟ್ಯಾಗಿ ಆದರ ಚಿಂತನಿಯು ಗಂಥವೆ ಎಲ್ಲ ।
ಬಿಟ್ಟವನಿಗೆ ಸ್ವಪ್ನದಲ್ಲಿ ಆ ರೂಪದಿ ।
ಚೇಷ್ಟಿಯು ತೋರಿಸಿ ಚತುರ ಕ್ರೀಡಿಯನಾಡಿ ।
ಬಿಟ್ಟು ಕೊನಿಗೆ ಎನಗೆ ದೃಷ್ಟಿಗೆ ತೋರದ ।
ಶ್ರೇಷ್ಠ ಬಾಲಕ ರೂಪ ನೀನೊ (ಅಜಿತನೊ) ಅಜೀವನೊ ।
ಇಷ್ಟು ಮಾತ್ರವು ಎನ್ನ ಮನದಲ್ಲಿ ನೆಲೆಗೊಂಡು ।
ಸ್ಪಷ್ಟಾಗಿ ತಿಳಿಪೋದು ಸರ್ವೇಶ್ವರ ।
ಎಷ್ಟಿಲ್ಲವೆಂದರೆ ಎನ್ನ ಮನದ ವ್ಯಥೆ ।
ಬಿಟ್ಟು ಪೋಗದು ಕಾಣೊ ಬಿನ್ನೈಸುವೆ ।
**ಇಷ್ಟುಮಾತ್ರವು ಅಲ್ಲ ನಿನ್ನ ರೂಪ ಬಾಲ ।**
**ಕೃಷ್ಣನೆಂದು ಪೆಸರು ಪೇಳಿದ್ಯಾಗ ।**
ಎಷ್ಟು ಜನ್ಮದ ನೋಪು (ನೋವು) ನಾ ತಿಳಿದವನಲ್ಲ ।
ಘಟ್ಯಾಗಿ ಎನ್ನ ಗುರುಗಳೆ ಬಲ್ಲರೊ ।
ಪುಟ್ಟ ಬಾಲಕ ಉಡುಪಿ ಕೃಷ್ಣ ಗೋಪಾಲ ವಿಠ್ಠಲ ।
ಇಷ್ಟೇವೊ ಎನ್ನ ಪ್ರಾಪ್ತಿ ಮುಂದೆ ಉಂಟೊ ||೩||

ಅಟ್ಟತಾಳ

ತೃಷಿಲಿಂದ ನೀರು ರಭಸದಿ ಕುಡಿವಂಗೆ ।
ಕಸಕೊಂಡ ತೆರನಂತೆ ಕೈಯೊಳ ಪಾತ್ರೆಯು ।
ಹಸಿದನ್ನವ ಕೊಂಬಗೆ ಹಾರ ಹೊಡದ ತುತ್ತು ।
ಕೊಸರಿ ಬಿಟ್ಟ (ಷ್ಟ) ಂತಿನ್ನು ಎನ್ನ ಆಶಿಯ ನೋಡು ।
ಉಸರಲಾರಿನೊ ನೀ ಪೋಷಿಸಿ ಸುಖಿಸಿ ಎನ್ನ ।
ಕೊಸರಿ ಬಿಟ್ಟ ಕ್ಲೇಶ ಕೊಂದೆನಲಲ್ಲ ಈಡಿಲ್ಲ ।
ಕಸುಕೊಂಡು ಗಂಟಗಲ್ಲದ ಬಿಡಿದಿನ್ನು ।
ಉಸರದೆ ಮೆಲ್ಲಗೆ ಪೋದವನಂತೆ ರಾ ।
ಜಸ ಮತಿಯುವನಿಗೆ ನಿನ್ನ ಒಲಿಮೆ ಎಂತ ।
ಅಸಮ ದೇವ ಕೃಷ್ಣ ಗೋಪಾಲ ವಿಠ್ಠಲ ಕ ।
ವಸಿನ ರೂಪವು ಮನಸ್ಸಿಗೆ ನೆಲೆಯಾಗು ||೪||

ಆದಿತಾಳ

ಏನನ್ನರಿಯೆ ನಿನ್ನ ಮಹಿಮೆ ।
ಏನನ್ನರಿಯೆ ನಿನ್ನ ಸೇವೆ ।
ಏನನ್ನರಿಯೆ ಪ್ರೀತಿ ಕರ್ಮ ।
ಏನನ್ನರಿಯೆ ಜ್ಞಾನ ಮಾರ್ಗ ।
ಏನನ್ನರಿಯೆ ಭಕುತಿ ಸ್ಥಿತಿಯು ।
ಏನನ್ನರಿಯೆ ವಿರಕುತಿಯ ।
ಏನೊ ನಿನ್ನ ಕರುಣಪೂರ್ಣ ನೀನು ಎಂದು ನಾನು ಬಲ್ಲೆ ।
ದೀನನಾಥ ಎನ್ನ ಅವಗುಣ ಗುಣ ನಿನಗೇನೊ ।
ಜೇನು ಕ್ರಿಮಿಗಳ ವಮನವನು ಮಜ್ಜನವು ಎಂದು ।
ಜ್ಞಾನಿಗಳು ತಂದು ಸ್ನಾನ ಮಾಡಿಪರೊ ನಿನಗೆ ।
ಜ್ಞಾನಿಗಳ ಪಾದಡಿಯಲಿ ನಾನು ಬಿದ್ದವನು ಎಂದು ।
ನೀನೇ ನೋಡಿ ಸಾಕಬೇಕು ।
ಶ್ರೀನಿವಾಸ ದಯಾಂಬುಧಿ ಮಾನಿಸ ರೂಪಾಗಿ ಪೊಳೆದ ।
ಜಾಣ ಗೋಪಾಲ ವಿಠ್ಠಲ ಪ್ರಾಣಾಧಾರ ನಿನ್ನ ಇರವ ।
ಧ್ಯಾನದೊಳಗೆ ನಿಲಿಸಿ ಕಾಯೋ || ೫ ||

ಜತೆ

ಸ್ವಪ್ನದಲ್ಲಿ ಸುಳಿದ ಅಪರಿಮಿತ ಮಹಿಮ ।
ತಪಸಿಗೆ ವದಗೊ ಗೋಪಾಲ ವಿಠ್ಠಲ ಕೃಷ್ಣ || ೬ ||

## ಸುಳಾದಿ ೨೬

ರಾಗ ಭೈರವಿ ಧ್ರುವತಾಳ

ಒಂದಪರಾಧವೆಂದು ವಂದಿಸಲೇನಯ್ಯ ನಾ ।
ಒಂದರ ಚಿಂತೆಯನ್ನು ವರ್ನಿಸಲೇನಯ್ಯಾ ।
ಒಂದರ ಭಯವೆಂದು ಒತ್ತಿಕೊಳ್ಳಲೇನಯ್ಯಾ ।
ಒಂದರ ಹರುಷವೆಂದು ಒದಗಿ ನುಂಗಲೇನಯ್ಯಾ ।

ಒಂದರ ಆಶೆ ಎಂದು ಒಲಿಸಿ ಪೇಳಲೇನಯ್ಯಾ ।
ಒಂದರ ಮೋಹವೆಂದು ಒಳ್ಳಿದೆಂದೆನ್ನಲೇನಯ್ಯಾ ।
ಒಂದರುಪಾಯವೆಂದು ವಂದಿಸಲೇನಯ್ಯ ನಾ ।
ಒಂದಲ್ಲ ಎರಡಲ್ಲ ವಿವರಿಸಿ ಪೇಳಲಿನ್ನು ।
ಒಂದಪರಾಧ ಇದಕೆ ಕಾರಣವೆಲ್ಲ ।
ಇಂದಿರೇಯರಸನೆ ಗೋಪಾಲ ವಿಠ್ಠಲ ।
ತಂದೆ ನಿನ್ನ ವಿಸ್ಮೃತಿ ಎನಗೆ ಮುಖ್ಯಪರಾಧಾ ॥ ೧ ॥

ಮಟ್ಟತಾಳ

ಜನನದ ಚಿಂತೆ ಜನಿಸುವ ಭಯವೋ ।
ಜನಿಸಿದರೆ ಹರುಷ ದಿನ ದಿನಕೆ ಆಗೆ ।
ಘನ ಆಶೆಯಿಂದಲಿ ಮೋಹ ಘನಮೋಹಕೆ ಕ್ಲೇಶ ।
ಅನ ನಂತರಪಾಯುಗಳ್ಳೀ ವಂದೆನಂತ ಇನಿತು ಅಜ್ಞ ।
ಘನತಿ ಕಾಳಿಂದ ದಣಿದು ದಣಿದು ನಾನುಧೈರ್ಯರ್ಯಭ್ರಷ್ಟನಾಗಿ।
ಮಣಾಗಿ ತೇಲಿಪೆನಯ್ಯಾ ಮುಂದುಗಾಣದೆ ಇನ್ನು ।
ಘನದಯಾವಾರಿಧಿ ಗೋಪಾಲ ವಿಠಲ ।
ನೆನೆಯದೆ ನಾನಿನ್ನ ಕೊನೆಗಾಣದೆ ಪೋದೆ । ॥ ೨ ॥

ರೂಪಕ ತಾಳ

ಹಿಂದಿನ ಸಾಧನ ಏನೇನು ಆದರು ಎಲ್ಲ ।
ಇಂದಿಗಾ ಇದರ ವಿಚಾರವ ತಿಳಿಯಿತು ।
ಮುಂದಿನ ಗತಿಗೆ ಮುಕುಂದಪೊಂದುವದೋ ।
ಧ್ವಂದ್ವವನರಿಯನೈಯ್ಯಾ ಸುಂದರಾಂಗ ದೇವಾ ।
ನಿಂದಲ್ಲಿ ಕುಳಿತಲ್ಲಿ ಬಂದಲ್ಲಿ ಹೋದಲ್ಲಿ ।
ತಂದು ನೀಡು ನಿನ್ನ ಚಂದುಳ್ಳ ಸ್ಮೃತಿಯನ್ನು ।
ನಂದನ ಕಂದ ಗೋಪಾಲ ವಿಠ್ಠಲ ದಯಾ ।
ಸಿಂಧು ಅನಿಮಿತ್ಯ ಬಂಧು ನೀ ಸಲಹೊ ಎನ್ನ ॥ ೩ ॥

ಝಂಪೆ ತಾಳ

ಸಲಹುವ ನೀನಯ್ಯಾ ಸಲಹಿಕೊಂಬುವ ನಾನು ।
ಫಲಿತಾರ್ಥ ವಂದೇ ಸರಿ ಉಳಿದಾದನೇನಯ್ಯಾ ।
ಹಲವು ಪರಿ ಸಾಧನಗಳು ಎಲ್ಲ ಕೂಡಿದರು ।
ಕಳಿಯ ಬಲ್ಲದೆ ಎನ್ನ ಭಗರೋಗವಾ
ತಿಳದದ್ದು ಇಷ್ಟೆ ಸರಿ ನಳಿನ ನಾಭನೆ ನಿನ್ನ ।
ಸುಲಭ ಸ್ಮರಣೆಕಿಂತ ಮಿಗಿಲು ಇಲ್ಲಾ ।
ಸುಲಭ ಕೇಳಯ್ಯಾ ಕೊಳ್ಳಿಯ ನೀ ವೈಯ್ಯಾ ।
ಚಲಿಸಲಿ ಬೇಡಿನ್ನು ಮನದಲಿಂದಾ ।
ಗೆಲಿಸೆ ಈ ಸಂಸಾರ ಕೊಲಿಯ ತಾಳಲಾರೆ ।
ಬಳಲಿ ಬಳಲಿ ಬಾಯ ಬಿಡುತಲಿಹೆನಯ್ಯಾ ।
ಹೊಳಿಯ ಜನಕ ನಮ್ಮ ಗೋಪಾಲ ವಿಠ್ಠಲನೆ ।
ತಿಳಿಯಬೇಕು ಎನ್ನ ಸ್ಥಿತಿಗತಿಗಳ ॥ ೪ ॥

ತ್ರಿವಿಡಿ ತಾಳ

ಆವಾಗ ಎನಗಿನ್ನು ನಿನ್ನ ಸ್ಮೃತಿಯು ಬಂತೆ ।
ಆವ ಕಾಲವೆ ಪುಣ್ಯ ಕಾಲವಯ್ಯಾ ।
ಆವ ದೇಶದಲ್ಲಿ ನಿನ್ನ ಸ್ಮೃತಿಯುಂಟಾಯ್ತು ।
ಆವ ದೇಶವೆ ಪುಣ್ಯ ದೇಶವಯ್ಯಾ ।
ಆವ ಸಂಗತಿಯಿಂದ ನಿನ್ನ ಸ್ಮೃತಿಯು ಬಂತೆ ।
ಅವ ವಾಸವೆ ಸಜ್ಜನ ಸಹವಾಸ ।
ಆವ ಕರ್ಮಾದರು ನಿನ್ನ ಸ್ಮರಣೆ ಇನ್ನು ।
ಅವು ಒದಗಿತ್ತೆ ಅದೆ ಸ ಕರ್ಮ ।
ಆವ ನಿಮ್ಮ ಸ್ಮರಣೆ ರಹಿತವಾದ ಕರ್ಮ ।
ದೇವಾರ್ಚನಾದರೂ ಏನು ಫಲವೋ ।
ನಾ ವಲ್ಲೆನಯ್ಯಾ ನಿನ್ನ ಸ್ಮರಣೆ ರಹಿತನಾಗಿ ।
ಜೀವಿಸಿಕೊಂಡಿನ್ನು ವ್ಯರ್ಥವಾಗಿ ।

ಆವ ಭಯಕು ನಾನು ಅಂಜುವದಿಲ್ಲವೋ ।
ದೇವ ನಿನ್ನ ವಿಸ್ಮೃತಿಗೊಂದಂಜುವೆ ।
ಪಾವನ ಕಾಯ ಗೋಪಾಲ ವಿಠಲ ನಿನ್ನ ।
ಆವ ಸರ್ವದಾ ಸ್ಮರಣೀವೆ ಜೀವನ್ಮುಕ್ತಾ ॥ ೩ ॥

ಅಟ್ಟತಾಳ

ನಿನ್ನ ಸ್ಮೃತಿಯೆ ವಿಧಿ ವಿಸ್ಮೃತಿಯೆ ನಿಷೇಧ ।
ಪುಣ್ಯವೆಂಬದು ಇದೆ ಪಾಪ ವೆಂಬದು ಅದೆ ।
ಇನ್ನಿಲ್ಲ ಇನ್ನಿಲ್ಲ ಇದಕ್ಕಿಂತ ಸಾಧನ ।
ಸ್ತನ್ನಿ ಪಾನವು ತಾನೊ ಉಣ್ಣಲೊಲ್ಲೆನು ಪುನ: ।
ಇನ್ನೆಂಬೊ ಆವಂಗೆ ಇದೆ ಇದೆ ಉಪಾಯ ।
ತನ್ನ ಮೊದಲು ಮಾಡಿ ತೃಣ ಜೀವ ಕಡಿಮಾಡಿ ।
ಚನ್ನಾಗಿ ತತ್ವೇಶರಿನ್ನು ಲಕುಮಿ ಸಹಿ ।
ತಿನ್ನವರ ವರ್ಗ ತನ್ನಿಯಾಮಕನಾಗಿ ।
ಎನ್ನ ಅಂತರ್ಯಾಮಿ ಯವನೆ ಮಾಡಿಪನೆಂಬೊ ।
ಇನ್ನಾವ ಸ್ಮೃತಿ ಏನು ಪುಣ್ಯಸಾಧನವಯ್ಯಾ ।
ಘನ್ನದಯಾನಿಧಿ ಗೋಪಾಲ ವಿಠ್ಠಲ ।
ನಿನ್ನ ರೂಪವ ಧನ್ಯ ಪುಣ್ಯಪಾಪಗಳಲ್ಲಿ ॥ ೬ ॥

ಆದಿತಾಳ

ನಿನ್ನ ಅರಿಯದಿಪ್ಪದೆ ಅಜ್ಞಾನವಯ್ಯ ಅಯ್ಯಾ ।
ಇನ್ನು ಅಜ್ಞಾನದಿಂದ ಅನ್ಯಥಜ್ಞಾನವಯ್ಯಾ ।
ಅನ್ಯಥಜ್ಞಾನ ಈಗ ಅಧಮ ಜೀವಿಗಳಿಗೆ ।
ಇನ್ನು ಮಿಥ್ಯಾ ಜ್ಞಾನವನ್ನು ಪುಟ್ಟಿಪದಯ್ಯಾ ।
ಇನ್ನು ಆರಾರ ಗತಿ ಅರಿತು ಜ್ಞಾನಕೆ ನೀನು ।
ಮುನ್ನೆ ಪ್ರೇರಕನಾಗಿ ಮುದದಿ ಮಾಡಿಸುವಯ್ಯಾ ।
ಘನ್ನ ಸ್ವಾಮಿಯು ನೀನು ಬನ್ನದಾಸನು ನಾನು ।
ನಿನ್ನವರವ ನಾನು ನಿನ್ನ ತಿಳಿವ ಜ್ಞಾನ ।

ವನ್ನು ಎನಗೆ ಇತ್ತು ಜನನ ಮರಣದ ಬಾಧಿಯ ಬಿಡಿಸಿನ್ನು ।
ನಿನ್ನ ಸೇವೆಯೊಳಿಟ್ಟು ಚನ್ನಾಗಿ ಪಾಲಿಸಯ್ಯಾ ।
ಚಿನ್ನುಮಯ ಮೂರುತಿ ಗೋಪಾಲ ವಿಠ್ಠಲ ।
ಎನ್ನಯುತನ ಸಾಧನ ನಿನ್ನಾಧೀನವಯ್ಯಾ ॥ ೭ ॥

ಜತೆ

ಅಪರಾಧ ಅಪರಾಧ ಅಪರಾಧ ನಮೊ ನಮೊ ।
ಕೃಪೆ ಮಾಡಿ ಸಲಹಯ್ಯಾ ಗೋಪಾಲ ವಿಠ್ಠಲ ॥ ೮ ॥

## ಸುಳಾದಿ ೨೮

ರಾಗ ಭೈರವಿ ಧ್ರುವತಾಳ

ನಿನ್ನ ಸತಿಯುಳಾದ ಸಿರಿಯ ಪದವಿಯು ನೋಡು ।
ನಿನ್ನ ಮಗನು ಆದ ಅಜನ ಪದವಿಯು ನೋಡು ।
ನಿನ್ನ ಮೊಮ್ಮಗನಾದ ಹರನ ಪದವಿಯು ನೋಡು ।
ನಿನ್ನ ಸೇವಕರೊಳು ಇಂದ್ರನ್ನ ಭಾಗ್ಯ ನೋಡು ।
ನಿನ್ನ ಮಗಳು ಭಾಗೀರಥಿಯು ಭಾಗ್ಯವ ನೋಡು ।
ನಿನ್ನ ಭಕ್ತರಾದ ಗಂಧರ್ವರ ಭಾಗ್ಯ ನೋಡು ।
ನಿನ್ನಿಂದ ಲಿವರನ್ನೆಲ್ಲ ಸೃಷ್ಟಿಸಲಿ ಪಟ್ಟಿತು ।
ಎನ್ನನು ನೀನು ಹರಿ ಸೃಷ್ಟಿಯ ಮಾಡಲಿಲ್ಲೆ ।
ತನ್ನ ಮಕ್ಕಳಿಗೆ ತಾಯಿ ಅನಂತದಿದ್ದರನ್ನ ।
ಮನ್ನಿಸಿ ಒಬ್ಬರನ್ನ ಮನ್ನಿಸದಲೀ ಹೊಳೆ ।
ಇನ್ನು ಇವರು ಎಲ್ಲ ಏನಿತ್ತರು ನಿನಗೆ ।
ಮುನ್ನೆ ನಾನೇನು ನಿನಗೀಯದಾದೆನೋರಂಗ ।
ಮನ್ನಿಸುವರು ನೀ ಮನ್ನಿಸದಿರೆ ಇವರು ।
ಕಣ್ಣೆತ್ತಿ ನೋಡರು ನೀ ಕರುಣಿಸದಿರಿನ್ನು ।
ಮುನ್ನೆ ಇವರ ಉಚ್ಛಿಷ್ಟನ್ನವಾದರು ಎನಗೆ ।
ಇನ್ನಿತಾದರು ಎನಗೆ ಕಾರಣವಿಲ್ಲವೇನೋ ।

ನಿನ್ನ ಬೇಡುವ ಸಥೆ ಎಲ್ಲಿಂದ ಬಂತು ಎಂಜೆ ।
ನಿನ್ನವರು ಕೊಟ್ಟಂಥ ಬಲವು ಎನಗೆ ಇದ್ದು ।
ಹಣ್ಣು ಉಂಟಾದ ವೃಕ್ಷ ಹಂಬಲಿಸೋರು ಜನರು ।
ನಿನ್ನಲ್ಲಿಹೊ ಮಾಯಾ ನೀನೆ ಬಲ್ಲಿಯೋ ದೇವಾ ।
ಘನ್ನ ಮಹಿಮ ಚಲುವ ಗೋಪಾಲ ವಿಠ್ಠಲ ।
ನಿನ್ನಂತೆ ಸಾಕುವರು ಇನ್ನೊಬ್ಬರಿಲ್ಲೊದೇವಾ ||೧||

ಮಟ್ಟತಾಳ

ಧರಿಯೊಳು ಇದ್ದಂಥ ಪರಿ ಪರಿ ಕಮಲಗಳು ।
ಅರಳುವದಕೆ ಇನ್ನು ಬೇರೆ ಬೇರೆ ರವಿ ವುಂಟೆ ।
ವರುಷ ಕಾಲಗಳಲ್ಲಿ ಸುರಿಸುವ ಮೇಘಗಳು ।
ಪರಿ ಪರಿ ಗ್ರಾಮಕ್ಕೆ ಪರಿ ಪರಿ ಬೇರುಂಟೆ ।
ಎರಡೇಳು ಲೋಕಕ್ಕೆ ಧೊರಿನೀನಲ್ಲದೆ ।
ಮರಳಿ ಇನ್ನೊಂದು ದೇವರ ನಾ ಕಾಣೆ ।
ಕರುಣಾಕರ ರಂಗ ಗೋಪಾಲ ವಿಠ್ಠಲ ।
೧ ಮೊರೆಹೊಕ್ಕೆನೋ ಕಾಯೋ ಬಿರಿದುಳ್ಳದೇವ ||೨||

ತ್ರಿವಿಡಿ ತಾಳ

ಪಿಡಿಯದೆ ಎನ್ನ ಕರವ ಸಡಿಲ ಬಿಟ್ಟರೆ ಇನ್ನು ।
ಪೊಡವಿಯೊಳಗೆ ನಿನ್ನ ಒಬ್ಬರು ಮೆಚ್ಚರು ।
ಮಡದಿ ಪತಿಯರು ಕೂಡಿ ಪಡೆದು ಬಂದಶಿಶುವು ।
ಬಡದಾಡಿ ದೋಪಾದಿ ನಿನಗೆ ನನಗೆ ನ್ಯಾಯ ।
ಕೆಡಿವ್ಯಾಟ ಬಿದ್ದರೆ ಬಿಡಿಸುವರಿಲ್ಲವು ।
ಬಿಡಿಸೊ ನಿನ್ನ ಪಾದ ಎಂದೆಂದಿಗೆ ।
ಪೊಡವಿಯೊಳಗೆ ಇನ್ನು ನಿನಗೆ ಸರಿ ಆರಿಲ್ಲ ।
ದೃಢವಾಗಿ ನೀನಲ್ಲದೆನಗಿನ್ನು ಗತಿಯಿಲ್ಲ ।
**ಬಿಡದೆ ಎನ್ನಲ್ಲಿ ನೀ ಪಡದಂಥ ಸುತರನ್ನು ।**

---

೧ ಶರಣು

ಕೊಡುವೆ ನಿನಗೆ ತಡಿಯದಲೆ ಇನ್ನು ।
ತುಡಗುತನವ ಬಿಡಿಸು ಕೆಡಿಸದೆ ಎನ್ನ ಕಂಡ ।
ಕಡೆ ವಿಷಯಗಳಿಗೆ ಎರಗಿಸದೆ ।
ಬಡವನೆಂದು ಎನ್ನಕಡೆ ಕಣ್ಣು ನೋಡಿದರೆ (ನೋಡದಿರೆ) ।
ಬಡವನಾನಲ್ಲ ನಿನ್ನೊಡತಿಗೆ ಪಡಿದೊತ್ತು ।
ಕಡಲ ಶಯನ ರಂಗ ಗೋಪಾಲ ವಿಠ್ಠಲ ।
ಕಡುದೀನ ರಕ್ಷಕ ನಿಮ್ಮ ನಾಮಾ ॥ ೩ ॥

ಅಟ್ಟತಾಳ

ಊರ ಔತನ ಹೇಳಿ ಸಾರಿ ಡಂಗುರ ಹೊಯಿಸಿ ।
ಧೀರ ರಾಯರಿಗೆಲ್ಲ ಸಾರ ಷಡ್ರಸವಿತ್ತು ।
ತಿರುಗಿ ತಿರುಗಿ ಇನ್ನು ಬೀರುತ್ತ ಉಣಿಸೋಗ (ಗೆ) ।
ದ್ವಾರದಲೊಬ್ಬ ಮಾಧಕಾರದವನು ಬಂದು ।
ಅರಿವರಿದರಿನ್ನು ಹಾರಿ ಸಾಕುವರುಂಟೆ ।
ಕಾರುಣ್ಯ ಮೂರುತಿ ಕರುಣದಿಂದಲಿ ಕೇಳು ।
ನೀರೊಳಗಿನ ಮತ್ಸ್ಯನೀರೆ ಬಯಸುವವು ।
ಘೋರ ಅರಣ್ಯಕ್ಕೆ ಹಾರೈಸಬಲ್ಲವೆ ।
ಮಾರ ಜನಕ ನಮ್ಮ ಗೋಪಾಲ ವಿಠ್ಠಲ ।
ಸೇರಿಸೊ ನಿನ್ನನು ಸೇರಿದವರ ಬಳಿಯಾ ॥ ೪ ॥

ಆದಿ ತಾಳ

ಒಂದೆ ಬೇಡುವೆ ನಿನ್ನ ಒಂದೆ ದೇವನೆ ಕೇಳು ।
ಒಂದೆ ವ-ನವು ಕೊಡು ವಂದಿಸಾ (ಸೆ) ನಿನ್ನನ್ನು ।
ಹಿಂದಾನಂತ ಜನ್ಮದಿ ಮಾಡಿದ ದೋಷ ।
ಮುಂದಾಗುವ ಅನಂತ ದೋಷಗಳಿಗೆ ।
ಒಂದು ಭಾರೆನ್ನ ನಿನ್ನ ಸ್ಮರಣೆ ಮರಿಸದೆ ।
ಚಂದದಿ ನಿಂತು ಆನಂದದಿ ಪೊರಿಯೊ ।
ಬಂದೆನು ನಾನಿತ್ತ ಬರಬಾರದೆ ಇನ್ನು ।

ನೊಂದೆನೊ ನಾ ಬಲು ಬಂಧಾನ ಸಿಲ್ಕಿನ್ನು ।
ತಂದದಕೆ ಎನ್ನ ತಂದು ಕಾರ್ಯ ಮಾಡಿಸಿ ।
ಪೊಂದಿಸು ನಿನ್ನ ಅರವಿಂದ ಚರಣದಲ್ಲಿ ।
ಕಂದರ್ಪನಯ್ಯಾ ಗೋಪಾಲ ವಿಠ್ಠಲ ಇನ್ನು ।
ಎಂದೆಂದಿಗೆ ಇನ್ನು ನೀನೆ ನೀನೆ ಗತಿ ॥ ೫ ॥

ಜತೆ

ನಿನ್ನ ದಾಸರ ದ್ವಾರವನ್ನು ಕಾಯ್ವರಮನೆ ।
ಕುನ್ನಿ ಎಂದೆನಿಸೆನ್ನ ಗೋಪಾಲ ವಿಠ್ಠಲ ॥ ೬ ॥

## ಸುಳಾದಿ ೨೯

ರಾಗ ಪಂತುರಾವಳಿ ಧ್ರುವತಾಳ

ನೀನೆ ಏನೋ ವಿಠಲ ನಿಗಮವು ತಂದವನು ।
ನೀನೆ ಏನೋ ವಿಠಲ ನಗವನ್ನು ಪೊತ್ತವನು ।
ನೀನೆ ಏನೋ ವಿಠಲ ವರಹ ರೂಪನಾದವ ।
ನೀನೆ ಏನೋ ವಿಠಲ ನರಮೃಗ ರೂಪಾದದ್ದು ।
ನೀನೆ ಏನೋ ವಿಠಲ ವಟು ರೂಪ ತಾಳಿದವ ।
ನೀನೆ ಏನೋ ವಿಠಲ ಪರುಶವ ಪಿಡಿದವ ।
ನೀನೆ ಏನೋ ವಿಠಲ ಶಿಲೆಯನ್ನುದ್ಧರಿಸಿದವ ।
ನೀನೆ ಏನೋ ವಿಠಲ ಪಾಂಡವರ ಕಾಯ್ದವ ।
ನೀನೆ ಏನೋ ವಿಠಲ ಬೌದ್ಧರೂಪನಾದದ್ದು ।
ನೀನೆ ಏನೋ ವಿಠಲ ತುರಗವನೇರಿದವ ।
ನೀನೆ ಏನೋ ವಿಠಲ ಚತುರಮೂರ್ತಿ ಆದವ ।
ನೀನೆ ಏನೋ ವಿಠಲ ಅಷ್ಟ ಮೂರ್ತಿ ಆದವ ।
ನೀನೆ ಏನೋ ವಿಠಲ ಕೇಶವಾದಿ ಆದವ ।
ನೀನೆ ಏನೋ ವಿಠಲ ಅಜಾದಿ ಮೂರ್ತ್ಯಾದವ ।
ನೀನೆ ಏನೋ ವಿಠಲ ವಿಶ್ವಮೂರ್ತಿ ಆದವ ।

ನೀನೆ ಏನೋ ವಿಠಲ ಅನಂತಾನಂತರೂಪ ।
ನೀನೆ ಏನೋ ವಿಠಲ ಸಿರಿ ಅಜಭವರಿಂದ ।
ನಾನಾಕು ಪರಿಯಲ್ಲಿ ಸೇವೆಯ ಕೊಂಬುವನೆ ।
ನೀನೆ ಏನೋ ವಿಠಲ ಆತ್ಮ ಅಂತರಾತ್ಮ ।
ಕಾಣಿಸುವೆ ಎನ್ನಲ್ಲಿ ಅನಂತ ಒಂದೇ ಆಗಿ ।
ಖೂನ ಪಿಡಿದು ಬಿಡೆ ಯೆಂದಿನವನೆ ನಾನು ।
ಏನೊ ಈಗ ನೋಡಲು ಆರೋ ಅಂಬಂಧ ವಿಧಿ ।
ಜಾಣ ಚನ್ನಿಗರಾಯ ಗೋಪಾಲ ವಿಠ್ಠಲ ।
ಪ್ರಾಣದೊಲ್ಲಭ ನಿನ್ನ ಕಾಣದೆ ನಿಲ್ಲಲಾರೆ ॥ ೧ ॥

ಮಟ್ಟತಾಳ

ಆವ ನಿನ್ನ ಶಿರವು ಅಂತಿಯ ತೋರದು ।
ಆವ ನಿನ್ನ ನಯನ ಅಂತಿಯ ತೋರದು ।
ಆವ ನಿನ್ನ ಮುಖ ಅಂತಿಯ ತೋರದು ।
ಆವ ನಿನ್ನ ಕರಗಳಂತಿಯ ತೋರದು ।
ಆವ ನಿನ್ನ ಅವಯುವಂಗಳಿಗೆ ಅಂತ್ಯವಿಲ್ಲ ।
ಆವ ನಿನ್ನ ಪಾದಂಗಳಿಗೆ ಅಂತೆಯಿಲ್ಲ ।
ದೇವ ನಿನ್ನ ಆವ ಅವಯುವಕೆಲ್ಲ ಪೂರ್ಣ ।
ಆವ ದಿಕ್ಕು ನೋಡಲಿ ನಿನ್ನ ನೋಟ ವ್ಯಾಪ್ತಿ ।
ಧಾವತೆಯು ಇಲ್ಲ ಆವಲ್ಲಿ ನಿನಗೆ ।
ಕಾವು ಬಹಳ ಭಕುತರನ್ನ ಪಾಲಿಪಲ್ಲಿ ।
ದೇವ ಬಾರೋ ಗೋವಳರಾಯ ನಿನಗೆ ।
ಆವ ತಂದಿ ಕಾಣೊ ಆವ ತಾಯಿ ನಿನಗೆ ।
ಜೀವ ಜಡ ಭಿನ್ನ ಗೋಪಾಲ ವಿಠ್ಠಲ ।
ದೇವ ನಿನ್ನ ಚರಿಯ ಕೋವಿದರಿಗೆ ಪ್ರಿಯಾ ॥ ೨ ॥

ರೂಪಕ ತಾಳ

ನಿನ್ನ ಕರುಣದಿಂದೆ ಎನ್ನ ಸೃಷ್ಟಿಸಿದದ್ದು ।
ನಿನ್ನ ಕರುಣದಿಂದೆ ಎನ್ನ ಪಾಲಿಸುವದು ।

ನಿನ್ನ ಕರುಣದಿಂದೆ ದೇಹ ವಿಯೋಗವು ।
ನಿನ್ನ ಕರುಣದಿಂದೆ ಎನ್ನ ಬಾಳವಿ ಬದಕು ।
ನಿನ್ನ ಕರುಣದಿಂದೆ ಮಾನಾಪಮಾನವು ।
ನಿನ್ನ ಕರುಣದಿಂದೆ ಲಾಭಾಪಜಯಗಳು ।
ನಿನ್ನ ಕರುಣದಿಂದೆ ಸಾಧನ ಸಂಪತ್ತು ।
ನಿನ್ನ ಕರುಣದಿಂದೆ ಬಂಧನ ನಿವೃತ್ತಿ ।
ನಿನ್ನ ಕರುಣದಿಂದ ಆಗುವದೊ ರಂಗ ।
ಎನ್ನಿಂದ ನಿನಗಿನ್ನು ಲೇಶಾಪೇಕ್ಷೆಯು ಇಲ್ಲ ।
ನಿನ್ನ ಹಂಗಿನೊಳು ಮುಳುಗಿ ಆಡುವೆನಯ್ಯಾ ।
ಇನ್ನು ಇಲ್ಲಿಗೆ ಸರಿಆಯಿತೆಂಬುವೇನೇ ।
ಇನ್ನು ಮುನ್ನೆ ಇದೆ ಆಗಲಿ ಆಗಲಿ ।
ಚಿನ್ನುಮಯ ಮೂರ್ತಿ ಗೋಪಾಲ ವಿಠ್ಠಲ ।
ಜನುಮ ಜನುಮಕ್ಕೆ ನೀನೆ ಎನಗೆ ದಾತಾ ॥ ೨ ॥

ಝಂಪೆತಾಳ

ಎನಗೆ ಪಶು ಜನ್ಮವು ಬಂದಾಗೆ ನೀನಿದ್ದು ।
ಎನಗೆ ಸ್ಥಾವರ ಜನುಮವು ಬಂದಾಗೆ ನೀನಿದ್ದು ।
ಎನಗೆ ಶ್ವಾನ ಸೂಕರ ಜನ್ಮ ಬಂದಾಗೆ ನೀನಿದ್ದು ।
ಎನಗೆ ಜಲಚರ ಜೀವಜನುಮ ಬಂದಾಗಿದ್ದು ।
ಎನಗೀಗ ಆವಾದ ದೇಹದಲ್ಲುಸುಭೋಗ ।
ಅನುವಾಗಿ ನೀನಿದ್ದು ಅಲ್ಲಿ ಉಣಿಸಿ ।
ಎನಗೆ ಅನುಭೋಗಕ್ಕೆ ಆಗ ತಂದು ಕೊಡದೆ ।
ದಣಿಸಿ ನೋಡಿದಿ ಅಲ್ಲವೇನೆ ಕೃಪಾಳು ।
ಎನಗೆ ನಿನ್ನ ಮಹಿಮೆ ಎಣಿಸಲಾಗೋದರವು ।
ದಣಿದೆ ದಣಿದೆ ನಾನಾ ಜನುಮಗಳಲ್ಲಿ ಬಂದು ।
ಎನಗೀಗ ಮಾನಿಸ ಜನುಮ ಲಾಭವಿನ್ನು ।
ಆನುವಾಗಿ ಇತ್ತದಕ್ಕನುಕೂಲವಾಗಿನ್ನು ।

ಘನವಾದ ಸಾಧನವನ್ನು ಎನ್ನಿಂದಲಿ ।
ದಿನ ದಿನದಿ ಮಾಡಿಸಿ ನೂತನವಾಗಿನ್ನು ।
ಕ್ಷಣ ಕ್ಷಣಕೆ ನಿನ್ನ ಸ್ಮರಣೆ ಎನಗೆಯಿತ್ತು ।
ಜನನಿಯ ಜಠರದಿ ಜನಿಸದಂತದಿ ಮಾಡು ।
ಘನ ದೇವ ಕೇಳು ಗೋಪಾಲ ವಿಠ್ಠಲರೇಯ ।
ಎನಗೆ ನಿನ್ನರ್ಚಿಸೊ ಗುಣ ಉಪಾಸನೆ ಈಯೋ ।

### ತ್ರಿವಿಡಿ ತಾಳ

ಪ್ರಾಕೃತ ರಹಿತನೆ ಎಲೋ ದೇವ ನಿನಗೆ ಈ ।
ಪ್ರಾಕೃತ ಉದಕದಿ ಮಜ್ಜನವೆ ।
ಪ್ರಾಕೃತ ರಹಿತನೆ ಎಲೋ ದೇವ ನಿನಗೆ ಈ ।
ಪ್ರಾಕೃತ ಉಡಗಿಯು ವಸನಂಗಳೆ ।
ಪ್ರಾಕೃತ ರಹಿತನೆ ಎಲೋ ದೇವ ನಿನಗೆ ಈ ।
ಪ್ರಾಕೃತ ಜಡಗಳು ಆಭರಣವೇ ।
ಪ್ರಾಕೃತ ರಹಿತನೆ ಎಲೋ ದೇವ ನಿನಗೆ ಈ ।
ಪ್ರಾಕೃತ ಗಂಧ ತುಲಸಿ ಪುಷ್ಪವೇ ।
ಪ್ರಾಕೃತ ರಹಿತನೇ ಎಲೋ ದೇವ ನಿನಗೆ ಈ ।
ಪ್ರಾಕೃತ ಧೂಪ ದೀಪದಾರ್ತಿಯೆ ।
ಪ್ರಾಕೃತ ರಹಿತನೆ ಎಲೋ ದೇವ ನಿನಗೆ ಈ ।
ಪ್ರಾಕೃತವನ್ನವು ನೈವೇದ್ಯವೇ ।
ಪ್ರಾಕೃತಬದ್ಧನ ಮಾಡಿ ಎನ್ನಿಂದಲಿ ।
ಪ್ರಾಕೃತ ಪೂಜೆಯು ಕೈಕೊಂಬಿ ।
ಪ್ರಾಕೃತದೊಳು ನೀನ ಪ್ರಾಕೃತ (ಅಪ್ರಾಕೃತ) ನಾಗಿದ್ದು ।
ಈಪರಿಯಲಿ ನಿತ್ಯ ಪೂಜಿಗೊಂಬೆ ।
ಪ್ರಾಕೃತ ರಹಿತನಾಗಿ ನಿನ್ನ ದಾಸರು ।
ಪ್ರಾಕೃತದೊಳಗಿನ್ನು ಇಪ್ಪುವರು ।
ಪ್ರಾಕೃತ ರಹಿತನೆಂದೀ ಪರಿಚಿಂತಿಪರ ।

ಪ್ರಾಕೃತ ಬದ್ಧದಿ ರಹಿತರ ಮಾಡುವಿ ।
ಅಪಾರ ಮಹಿಮನೆ ಗೋಪಾಲ ವಿಠಲ ।
ಈಪರಿಯಲಿ ನಿನ್ನ ಚಿಂತಿಪರೊಡನಿಡಿಸೊ ||೫||

ಅಟ್ಟತಾಳ

ಧನದ ಆಪೇಕ್ಷಕ್ಕೆ ನಿನ್ನ ಪೂಜೆಯು ಬೇಡ ।
ವನಿತೆ ಅಪೇಕ್ಷಿಸಿ ನಿನ್ನ ಪೂಜೆಯು ಬೇಡ ।
ಮನೆಯು ಅಪೇಕ್ಷಿಸಿ ನಿನ್ನ ಪೂಜೆಯು ಬೇಡ ।
ತನುವು ಅಪೇಕ್ಷಿಸಿ ನಿನ್ನ ಪೂಜೆಯು ಬೇಡ ।
ಘನ ಸುತರಿಗಾಗಿ ನಿನ್ನ ಪೂಜೆಯು ಬೇಡ ।
ಕನಸಿನೊಳದಾರು ಕಾಮ್ಯ ಫಲಕೆ ನಿನ್ನ ।
ನೆನೆಸದಂತೆ ಮಾಡು ನ್ಯಾಯದಲೆ ಇನ್ನು ।
ಎನಗೆ ಈ ದೇಹದಲ್ಲೇನೇನು ಅನುಭೋಗ ।
ಅನುವಾಗಿ ಇದ್ದದ್ದು ಉಣಿಸದೆ ಬಿಡಿ ಇನ್ನು ।
ಎನಗೇನು ಈ ದೇಹ ಹೇಗೆ ಬಂದೀತೆಂದು ।
ಕ್ಷಣವು ಆದರು ನಿನ್ನ ಚಿಂತಿಸಿ ಇದ್ದೇನೆ ।
ತನವು ಕೊಟ್ಟವಗೆ ತಾಪತ್ರಯದ ಚಿಂತೆ ।
ಎನಗೆ ಎನಗೇನು ಯೋಚನಿಲ್ಲ ;
ತನು ಮನದೊಡಿಯನೆ ಗೋಪಾಲ ವಿಠ್ಠಲ ।
ಎನಗೆ ನಿಷ್ಕಾಮಕ ನಿನ್ನಾರಾಧನೆ ಈಯೋ || ೬ ||

ಆದಿತಾಳ

ಶುಭವೆಂದು ಪಿಡಿಯ ಶುಭದೊಳಶುಭವುಂಟು ।
ಶುಭವೆಂದು ಬಿಡಲು ಅಶುಭದೊಳು ಶುಭವುಂಟು ।
ಶುಭವು ಅಶುಭವು ಎರಡಿಂದು ಎನಗೆ ।
ವಿಭಾಗ ತಿಳಿಯದು ವಿವರಿಸಿ ನೋಡಲು ।
ಶುಭಕೆ ಕಾರಣ ನೀನೆ ಅಶುಭಕೆ ಕಾರಣನೆಂದು ।
ದ್ವಿ ಭಾಗವು ವಿವರಣೆ ನಭದವರೆ ಮಾಡಿಹರು ।

ಇಭರಾಜ ಪಾಲಕ ಗೋಪಾಲ ವಿಠಲ ।
ಶುಭ ಅಶುಭವು ನಿನ್ನಾಧೀನ ಇಪ್ಪವು । ॥ ೭ ॥

ಜತೆ

ಎನಗೆ ನೀ ಬೇಕೆಂಬೊ ಆಶೆಯು ಘನವಯ್ಯಾ ।
ನಿನಗೆ ಬೇಕಿತ್ತೆ ಪ್ರೊರಿ ಗೋಪಾಲ ವಿಠಲ ॥ ೮ ॥

## ಸುಳಾದಿ ೩೦

ರಾಗ ಕಾಂಬೋದಿ ಧ್ರುವತಾಳ

ಹರಿಯೆ ಸರ್ವೋತ್ತಮ ಹರಿಯೆ ಪರದೈವ ।
ಪರಿಪೂರ್ಣ ಗುಣ ಭರಿತ ನಿರಾಶ್ರಯಾನಂತ ।
ಪರತತ್ವ ಪರ ಪೂಜ್ಯ ಪರಮ ಮಂಗಳ ಮೂರ್ತಿ ।
ಸಿರಿದೇವಿ ಪರಮೇಷ್ಠಿ ಹರರಿಂದ ವಂದಿತ ।
ಸ್ವ ರಮಣ ಶ್ರುತಿಪಾದ್ಯ ಜರಾಮರಣ ರಹಿತ ।
ಸುರರ ಪಾಲಕನೆ ನಿರ್ದೋಷಿ (ಷ) ಶಿಖಾಮಣಿ ।
ಕರಿರಾಜ ವರದನೆ ಕರುಣಾಕರ ದೇವ ।
ದುರುಳ ಮರ್ದನ ದೂರಾತಿ ದೂರನೆ ।
ಸುರಪತಿ ಸುರ ಮುನಿಗಳಿಂದ ಸೇವಿತ ।
ಗರುಡ ವಾಹನ ಚಲುವ ಸ್ಥಿರ ಭಕುತರೊಡಿಯ ।
ಸಿರಿ ದ್ರೌಪದಿ ಅಭಿಮಾನ ರಕ್ಷಕ ದೇವ ।
ಸ್ಮರಣೆ ಮಾತ್ರದಲ್ಲಿ ಅಜಮಿಳನ ರಕ್ಷಿಸಿದಂತೆ ।
ಪರಮ ದಯಾಳು ಗೋಪಾಲ ವಿಠಲರೇಯ ।
ಸರಿ ಇಲ್ಲದ ದೈವ ಮೊರೆ ಹೊಕ್ಕೆ ಕಾಯೋ ॥ ೧ ॥

ಮಟ್ಟ ತಾಳ

ಅನಂತ ಜನ್ಮದಿ ಅನಂತ ಪಾಪವ ಮಾಡಿ ।
ನಿನ್ನನು ಮರತೇನೊ ಸನ್ಮುನಿಗಳ ಪ್ರಿಯಾ ।
ಎನ್ನಂಥ ಪಾತಕಿಯ ಏನೆಂತು ಕರುಣಿಸಿಯೋ ।

ಬಿನ್ನಹಕ್ಕೆ ಬಾಯಿ ಲ್ಲ ನಿನ್ನ ಬೇಡಲೆನಗೆ ।
ಬೆನ್ನು ಬಿದ್ದವರನ್ನು ಮನ್ನಿಸಿ ಕಾಯೋವಂಥ ।
ಘನ್ನ ಬಿರಿದುಂಟೆಂದಿನ್ನು ನಾ ಮೊರೆ ಹೊಕ್ಕೆ ।
ಚಿನ್ನುಮಯ ಮೂರುತಿ ಗೋಪಾಲ ವಿಠಲರೇಯಾ ।
ಅನ್ಯರಿಗೊಪ್ಪಿಸದೆ ನಿನ್ನವರೊಳಿರಿಸೋ ॥ ೨ ॥

ತ್ರಿವಿಡಿ ತಾಳ

ಹಿಂದೆ ನಾ ಮಾಡಿದಂಥ ಕುಂದು ದೋಷಗಳಿಂದ ।
ಬಂದೆ ನಾ ನರ ಜನ್ಮ ಬಂಧನದೊಳಗಿನ್ನು ।
ಮುಂದಣ ಸಾಧನಗಳೊಂದು ನಾಗಾಣೆನಯ್ಯ ।
ಎಂದಿಗೆ ನಿನ್ನ ಅರವಿಂದ ಚರಣ ಬಳಿಗೆ ಪೊಂದಿಸಿಯೊ ಎನ್ನನು ।
ಕಂದರ್ಪ ಜನಕನೆ ಸಿಂದಿರಿಸಿನ್ನು ನಿನ್ನ ।
ಚಂದದ ರೂಪವ ಆನಂದಾದಿ ಎನ್ನ ಮನಮಂದಿರದೊಳಗೆ ।
ಬಂಧಾನಾಗಲಿ ಸುಖ ಬಂದದಾಗಲಿ ಜನ ।
ನಿಂದೆ ಮಾಡಲಿ ಬಹು ವಂದಿಸುವರಾಗಲಿ ।
ಒಂದೇ ಮನವು ದೃಢದಿಂದ ನಿನ್ನರ್ಚಿಪಂತೆ ।
ಛಿಂದೆ ಇಲ್ಲದ ಭಕ್ತಿ ಚಂದದಿ ಪಾಲಿಸಯ್ಯಾ ।
ಮಂದರ ಧರನೆ ಗೋಪಾಲ ವಿಠಲರೇಯಾ ।
ವಂದಿಸಿದೆನು ಮನ ಬಂದದ್ದು ಮಾಡೋ ॥ ೩ ॥

ಅಟ್ಟತಾಳ

ಪದ್ಧತಿ ತಿಳಿಸಿನ್ನು ಮಧ್ವಮತಾನುಸಾರ ।
ಶುದ್ಧ ಜ್ಞಾನವ ಕೊಟ್ಟಪದ್ಧ ಮತಗಳೆ ನಿ ।
ಷಿದ್ಧವೆನಿಸಿ ಪೊದ್ದಿಸದಂತಘವದ್ದು ಕಡಿಗೆ ನೂಕಿ ।
ತಿದ್ದಿಸಿ ಎನ್ನನು ಉದ್ಧರಿಸು ಪಾಪ ।
ಖದ್ದಿನೋಳ್ತಾಕದೆ ಮುದ್ರೆ ಪಚ್ಚಿಸಿ ನಿನ್ನ ।
ಉದ್ಯೋಗದೊಳಗಿಡು ।

ಪ್ರದ್ಯುಮ್ನ ಮೂರುತಿ ಗೋಪಾಲ ವಿಠಲರೇಯಾ ।
ಬಿದ್ದೆ ಚರಣದ ಮೇಲೆ ಬದ್ಧಾಗಿ ಪಿಡಿಯೋ ॥ ೪ ॥

ಆದಿ ತಾಳ

ಆರೋಗ್ಯ ಆಯುಷ್ಯ ಐಶ್ವರ್ಯಗಳು ಮಾನ ಅಪೇಕ್ಷ ।
ಕೋರದಂತೆ ಮಾಡಯ್ಯಾ ಅನಾಥ ಬಂಧು ।
ಘೋರಿಸುತಿಪ್ಪ ಎನ್ನ ಆರು ಮಂದಿ ಖಳರ ದೂರ ಮಾಡಿ ಇನ್ನು ।
ತೋರಿಸು ನಿನ್ನ ಚರಣ ಸೇರಿಸು ನಿನ್ನ ।
ಪರಿಚಾರಕರೊಳಗಿನ್ನು ಆರೆ ಸಂಸಾರದ ಮರಿಯು ಕೆಳಗೆ ।
ಶ್ರೀರಮಣನೆ ಚಲ್ವ ಗೋಪಾಲ ವಿಠಲಾ ।
ಪಾರ ಗುಣನಿಧಿ ಸಾರಿದೆ ಕಾಯೋ ॥ ೫ ॥

ಜತೆ

ಎಂದಿಗೆ ನಿನ್ನ ಪಾದ ಚಂದಾದಿ ಪೂಜಿಸಲಿ ।
ಕುಂದು ಇಲ್ಲದ ಭಕ್ತಿಲಿ ಬೇಗ ಗೋಪಾಲ ವಿಠ್ಠಲ ॥ ೬ ॥

## ಸುಳಾದಿ ೩೧

ರಾಗ ಭೈರವಿ ಧ್ರುವ ತಾಳ

ಕರೆದ ಮಾತಿಗೆ ನೀನು ಬರುವುವನಲ್ಲ ಸಾರಿ ।
ಅರುವಾಯಿತೆನ್ನ ಮನಕೆ ಅಪ್ರಮೇಯಾ ।
ತುರುವ ಸ್ವಭಾವ ನೀನು ತುರಿಸಿದರೆವೆ ಲಭ್ಯಾ ।
ತುರುಸುವ ಬಗೆ ತಿಳಿಯಬೇಕಾಯಿತು ।
ಪುರುಷ ನಿನಗೆ ಸಮ ಅಧಿಕ ಒಬ್ಬನಿದ್ದರೆ ।
ವರಿಶಾಡಬಹುದು ನೀನವರ ಸಂಗಡ ।
ಪರಮ ಅಸ್ವಂತ್ರ ಪರಿಪಾಲಿತ ನಿನ್ನಿಂದ ।
ವರಸುವೆನೆಷ್ಟೆನ್ನಿಂದ ವಾರಿಜಾಕ್ಷ ।
ಅರಸು ನೀ ಮೇಲೆ ನಿನ್ನ ಸ್ಪರಿಶ ಮಾಡುವದಕ್ಕೆ ।
ಭರವಸ ಕೊಡುವದು ಭಕ್ತ ಪ್ರೀಯಾ ।

ಪುರುಷನ ಕೂಡಲಿನ್ನು ಸಲಿಗೆ ಕೊಟ್ಟರೆ ಅರಸಿ ।
ಸರಸವಾಡೊಳು ತನ್ನ ಸರಿ ಬಂದಂತೆ ।
ಅರಸರರಸ ಚಲುವ ಗೋಪಾಲ ವಿಠಲ ನಾ–ಉ ।
ಚ್ಚರಿಸುವೆ ನಿನ್ನ ಗುಣ ಕರ್ಮಗಳು ॥ ೧ ॥

ಮಟ್ಟ ತಾಳ

೧ ಉರಗನಂದದಿ ಗುಣವುಳ್ಳ ಪುರುಷ ನೀನು ।
೨ ಹರಿಯೆ ನೀ ಮಾರ್ಜಾಲ ನಂದದಿ ಗುಣದವ ।
೩ ಸರಿ ಬಿಡು ಮೂಷಕ ಗುಣವನುಳ್ಳವ ನೀನು ।
೪ ಗರುಡ ನಂಥವ ನೀನು
೫ ವರಕಪಿ ಗುಣದವ ನೀನು ।
೬ ಕರಿಯಂಥವ ನೀನು
೭ ಕಪ್ಪೆಯಂಥವ ನೋಡು ।
ಪರಿಪೂರ್ಣ ನಿರ್ದೋಷ ಗೋಪಾಲ ವಿಠಲ ।
ಸರಿಹೋದಂತಾಡುವೆ ಸಲಿಗೆ ಇಂದಲಿನಾ ॥ ೨ ॥

ತ್ರಿವಿಡಿ ತಾಳ

ಮಡಿವಾಳನಂಥವ ಮೈಲಿಗೆ ಕಳೆವಲ್ಲಿ ।
ಬಡಿಗನಂಥವ ದೋಷ ಕಡಿದು ಕಡಿಗಿಡುವಲ್ಲಿ ।

---

೧ ಸರ್ಪನಪ್ಪಂದೆ ಮಕ್ಕಳ ಪಡೆದು ಪುನಃ ನುಂಗುವಿ.
೨ ಮಾರ್ಜಾಲ ಒಬ್ಬರು ತಂದುಕೊಟ್ಟ ಬ್ಯಾಟೆ ತಾ ತಿನ್ನಲಿಕ್ಕಿಲ್ಲ. ತಾನೇ ಬಡಿದು ತಿನಬೇಕು.
೩ ಮೂಷಕಗುಣ ದೋಷಗಳ ಕಡಿವಲ್ಲಿ.
೪ ಗರುಡನ ಸ್ವಭಾವ ಧ್ಯಾನಕ್ಕೆ ಸಿಲುಕದೆ ಹಾರುವ ವಿಷಯದಲ್ಲಿ.
೫ ಕಪಿಗುಣ ಅಣಕಿಸ್ಯಾಡುತ್ತ ಒಡಿಯುವದರಲ್ಲಿ.
೬ ಭಕ್ತರ ಭಾರ ಹೊರುವ ಅಥವಾ ಭಕ್ತಿಯು ಮದವೇರಿಸಿ ಭಕ್ತರನ್ನು ತಿರುಗಿಸುವ.
೭ ಕಪ್ಪೆಯುಗುಣ ನೀರಿದ್ದಲ್ಲಿ ನಿಲ್ಲೋಣವು. ನೀನು ಭಕ್ತಿ ಇದ್ದಲ್ಲೇ ಇರೋಣವು.

ತಡಿಯದೆ ಕುಲಾಲ ಗುಣವನುಳ್ಳವ ದೇಹ ।
ಬಿಡಲು ದೇಹ ಪುನಃ ಕೊಡುವಲ್ಲಿ ಮನೆಮಾಡಿ ।
ಪಿಡಿದು ಒಂದಾನಂತ ಮಾಳ್ಪಲ್ಲಿ ಅಗಸಾಲ್ಯಾ ।
ಪಿಡಿದು ಬಿಡದವಲ್ಲಿ ೧ ಊಷ್ಟ್ರನಂತವ ಕಾಣೊ ।
ಬಡವ ಬಲ್ಲಿದನೆನೆ ಬಿಡದೆ ಸರ್ವರೊಳಿದ್ದು ।
ತಡಿಯದೆ ಸರ್ವ ವ್ಯಾಪಾರ ಮಾಳ್ಪೆ ।
ಕಡುದಯಾಸಾಗರ ಗೋಪಾಲ ವಿಠ್ಠಲ ।
ನುಡಿದೆ ನಾನಿನ್ನಲ್ಲಿ ಇದ್ದ ಗುಣಗಳೇವೆ ॥ ೩ ॥

ಅಟ್ಟತಾಳ

ಆಳುಗಳಿಂದೊಂದು ಅಪರಾಧ ಬಂದರೆ ।
ತಾಳಿಕೊಂಡವನೇವೆ ಸ್ವಾಮಿ ಎನಗೆ ಕಾಣೊ ।
ಊಳಿಗವನುಕೊಂಡು ಫಲಕೊಟ್ಟರಾಯಿತೆ ।
ಹೇಳಯ್ಯಾ ನಿನ್ನ ಸ್ವಾಮಿತ್ವ ಪೂರ್ಣತೆಯನು ।
ಊಳಿಗವನು ಮಾಡಿ ಬೆಲೆಯು ಕೇಳುವಂಥ ।
ಆಳಲ್ಲ ನಿನಗಿನ್ನು ಸ್ವಾಮಿನೀ ಅವಾಗನ್ನ ।
ಊಳಿಗವನು ಮಾಡಿ ಫಲವು ಬೇಡುವಂಥ ।
ಆಳುನಾ ಅಹುದಲ್ಲೊ ಆಲೋಚನ್ಯಾತಕೆ ।
ವೇಳೆ ಸಮಯ ನೋಡಿ ಕೇಳಲಿಲ್ಲೆಂದರೆ ।
ವೇಳೆ ಆವದು ನೋಡೊ ಭಕ್ತ ಬೇಡುವದಕ್ಕೆ ।
ಕೇಳಿನ್ನ ಸ್ವಭಾವ ನಿನ್ನ ಭಕ್ತರಿಗೊಂದು ।
ಆಳಾಪ ಬಂದರೆ ಹೇಳಿಕೊಂಬುವದುಂಟು ।
ಪಾಲಸಾಗರ ಶಾಯಿ ಗೋಪಾಲ ವಿಠ್ಠಲ ।
ಪಾಲಿಸ ಬೇಕಿದು ಎಷ್ಟರ ಮಾತಯ್ಯಾ ॥ ೪ ॥

---

೧ ಊಷ್ಟ್ರವು ಹಿಡದು ಬಿಡದಿಹದರಲ್ಲಿ. ಈ ಪ್ರಕಾರ ತಿಳಿಯಬೇಕು.

( ಚಿಪ್ಪಗಿರಿ ಹಳೇ ಪುಸ್ತಕದಲ್ಲಿದೆ )

ಆದಿತಾಳ

ಎನ್ನ ೧ ದುಃಶಕಕ್ಕೆ ಆಗಿ ಇನ್ನೊಂದು ಕೊಡು ಎಂದು ।
ನಿನ್ನ ಬೇಡುವದಿಲ್ಲ ಘನ್ನದಯಾನಿಧಿ ।
ನಿನ್ನ ಭಕುತ ಜನಕ್ಕಿನ್ನೊಂದು ದುರ್ಘಟ ।
ಬನ್ನ ಬಂದರೆ ನಾ ನಿನ್ನ ಬೇಡೊದೆಬಿಡೆ ।
ಇನ್ನು ಅಪರಾಧವನ್ನು ಮೊದಲು ಮಾಡಿ ।
ಎನ್ನ ನೀದಣಿಸಿದರಿನ್ನಂಜುವನಲ್ಲಾ ।
ಸಣ್ಣಪರಾಧಕೆ ಕಣ್ಣಿಗೆ ತೋರದೆ ।
ಮುನ್ನಡಗುವರೆ ಚಿನುಮಯ ದೇವ ।
ಪನ್ನಂಗಶಯನ ಗೋಪಾಲ ವಿಠಲರೇಯಾ ।
ನಿನ್ನವರಾದ ಇವರೆ ಎನ್ನೇನು ಮಾಳ್ಪೆ ॥ ೫ ॥

ಜತೆ

ಏನು ಬಂದರೆ ನಿನ್ನ ನಾನು ಬಿಡುವನಲ್ಲಾ ।
ಮಾನ ನಿನ್ನದೊ ಜಾಣ ಗೋಪಾಲ ವಿಠಲ ॥ ೬ ॥

## ಸುಳಾದಿ ೩೨

ರಾಗ ರೇಗುಪ್ತಿ ಧ್ರುವತಾಳ

ಪೋಯಿತೆನ್ನ ಜನುಮ ವೃಥಾಯುವಾಗಿ ಇನ್ನು ।
ನ್ಯಾಯದ ಮಾರ್ಗವನು ೨ ಆಯವಳಿಯದೆ ।
ಬಾಯಿ ಮುಚ್ಚಿಕೊಂಡು ಬಹು ಜನ್ಮದ ದುಷ್ಕೃತ ।
ಕಾಯದ ಸುಖಕ್ಕಾಗಿ ಕಂಡವರ ಹಾರೈಸಿ ।
ಛಾಯಗಾರಿಕೆ ತೋರಿ ಕ್ಷೇತ್ರ ವೃತ್ತಿ ಘಳಿಸಿ ।
ಮಾಯ ಪ್ರಪಂಚನಾಗಿ ಮದೋನ್ಮತ್ತದಿಂದಲಿನ್ನು ।
ಆಯುಷ್ಯವ ಕಳೆದೆ ಅಜ್ಞಾನತನದಲ್ಲಿ ।
ನಾಯಿ ಬದುಕಿನಂತೆ ಆಯಿತೆನ್ನದು ನೋಡು ।

೧ ಗೋಪುಗ. ೨ ಆಯ–ಗುಪ್ತ ಅಂತರಿಯ ವಿಸ್ತಾರ

ತಾಯಿಯು ಪಂಙ್ತಿಯಲ್ಲಿ ಪಾಯಿಸೂಟವ ಬಿಟ್ಟು ।
ದಾಯಿಗರ ಮನೆ ಪೀಯುಷ ಉಂಡಂತೆ ।
ನಾಯಕನಿರಲಿ ಸತಿ ಅನ್ಯಾಯಕ್ಕೆ ಬಿದ್ದು ಪರ ।
ನಾಯಕಗೆ ಬಲು ಸಾಯ ಸ ಬಟ್ಟಂತೆ ।
ನೋಯ ದಣಿದೆನಯ್ಯಾ ಸಾಯ (ಸಹಾಯ) ವಾಗುವರಿಲ್ಲ ।
ಕಾಯೊ ಲಕುಮಿ ರಮಣ ದಯದಿಂದಲಿ ಎನ್ನ ।
ಗಾಯತ್ರಿ ಪ್ರತಿಪಾದ್ಯ ಗೋಪಾಲ ವಿಠಲ ।
ಮಾಯಾ ರಹಿತ ಸೂತ್ರಧಾರಕ ಜಯ ಜಯ ॥ ೧ ॥

ಮಟ್ಟ ತಾಳ

ನಿನ್ನವ ನೆಂತಲೆ ಅನ್ಯರಗೆ ತೋರ್ವೆ ।
ನಿನ್ನ ಪ್ರೀತಿಯ ಧರ್ಮ ಎನ್ನೊಳೊಂದಿಲ್ಲ ।
ಅನ್ಯಕೆ ಮಾಡುವೆನೊ ಅರ್ಚನೆಗಳು ಎಲ್ಲ ।
ಪುಣ್ಯಾತುಮ ನಿನ್ನ ಪೂಜಿಸಲಿಲ್ಲಯ್ಯಾ ।
ಕಣ್ಣಿಗೆ ತೋರುವೆ ಹರಿ ಭಕ್ತನಂತೆ ।
ಕನ್ನಗಾರನಂತೆ ನಿನ್ನವರಲಿ ದೋಷ ।
ವನ್ನು ನಾ ಎಣಿಸುವೆ ಬಣ್ಣಗೆಟ್ಟು ಬಲು ।
ಇನ್ನು ಇದರ ಮೇಲೆ ನಿನ್ನವನೆಂತಹೆ ।
ಅನ್ಯಾಯ ನ್ಯಾಯ ಇನ್ನೇನಿನ್ನೇನು ।
ಘನ್ನ ದಯಾನಿಧೆ ಗೋಪಾಲ ವಿಠಲ ।
ಎನ್ನ ಗುಣದೋಷ ಎಣಿಸದೆ ಕಾಯಯ್ಯಾ ॥ ೨ ॥

ರೂಪಕ ತಾಳ

ಅನ್ಯ ವಿಷಯಕೆ ಬಟ್ಟಂತ್ತಿನ್ನು ಥಾವತಿಗಳು ।
ನಿನ್ನ ಪರ ಆದರೆ ಎನ ಗೆಲ್ಲೆವ ದೋಷ ।
ಹೊನ್ನು ಹೆಣ್ಣು ಮಿಕ್ಕ ಅನ್ಯವಾರ್ತೆಗಳಲ್ಲಿ ।
ಎನ್ನ ಮನವು ಎಳೆದು ಪುಣ್ಯವ ಪೋಗಾಡಿ( ಹುಣ್ಣು )ಆಗೋದಾ।

ನಿನ್ನವರನ್ನವರ ಬಾಗಿಲನ್ನ ಕಾಯಿಂದಿಹೆಂತೆ ।
ಕುನ್ನಿ ಎನಿಸು ಹರಿ ಎನ್ನ ಮನೋವಾಚಾಕಾಯದಿನ್ನುಮಾಳ್ಪ ।
ಚನ್ನ ಕರ್ಮಗಳೆಲ್ಲ ನಿನ್ನ ಪರವೆ ಮಾಡು ।
ಇನ್ನೇನು ನಿನ್ನ ನಾ ಘನ್ನ ಬೇಡುವದಿಲ್ಲ ।
ಮನ್ನಿಸಿ ಎನ್ನ ಮನ ಅಧೀನವಮಾಡು ।
ಪನ್ನಗ ಶಯನ ಗೋಪಾಲ ವಿಠ್ಠಲರೇಯ್ಯಾ ।
ನಿನ್ನ ಹೊರತು ಎನ್ನಗನ್ಯಥ ಗತಿಯಿಲ್ಲ ॥೩॥

ಝಂಪೆತಾಳ

ಗತಿ ಎಂಬುವದೆ ನಿನ್ನ ಸ್ಮರಣವೆ ಗತಿ ಅನ್ಯ ।
ಗತಿ ಎಂಬುವದು ನಿನ್ನ ವಿಸ್ಮರಣೆ ।
ಹಿತ ಎಂಬುವದು ನಿನ್ನ ಅರ್ಚನೆ ಹಿತವು ।
ಅಹಿತವೆಂಬುವದು ನೀನೆ ತಾನೆಂಬೋದು ।
ಮತಿ ಎಂಬುವದು ನಿನ್ನ ಮನದಲ್ಲಿ ತಿಳಿವದು ಮಂದ ।
ಮತಿ ಎಂಬುವದು ನಿನ್ನನ್ನು ತಿಳಿಯದ್ದೆ ।
ಆತುಮ ಮೂರುತಿ ಅಂತರಾತುಮ ಮೂರುತಿಯಾಗಿ ।
ಸತತ ಮಾಡಿಸುವಿ ಸರ್ವಕರ್ಮವು ।
ಹಿತಕಾರ್ಯವೆಲ್ಲ ದೇವತಿಗಳದ್ವಾರಅ ।
ಹಿತ ಕಾರ್ಯ ಅಸುರರ ದ್ವಾರದಿಂದ ।
ಜಿತವಾಗಿ ಮಾಡಿಸಿ ಜೀವರಿಗೆ ಕರ್ಮಫಲ ।
ಮಿತಿ ತಪ್ಪದೆ ಉಣಿಸುವೆಯ್ಯಾ (ಸುಪಿಯಾ) ಧೊರಿಯೆ ।
ಪತಿತ ಪಾವನ ರಂಗ ಗೋಪಾಲ ವಿಠ್ಠಲ ।
ಪತಿತನ್ನ ಪೊರಿಯೆಯ್ಯಾ ಹಿತದಿಂದಲಿ ॥೪॥

ತ್ರಿವಿಡಿತಾಳ

ಅನಾದಿ ಕಾಲದಿಂದ ಆ ನಿನ್ನವ ನಾದಿನೆ ।
ಆ ನಾವದು ಮಾಡಿದ ಅಧರ್ಮವೆಧರ್ಮ ।
ಆ ನಾದರು ಇನ್ನು ಅನಂತ ಪಾತಕಕ್ಕೊಂದು ।

ಕಾಣಿಸುತದೆ ದೇವ ಕಾರುಣ್ಯಸಾಗರ ।
ಏನು ಸ್ವಭಾವವೊ ಎನಗೆ ಕಾಣೆ ನೀನೆ ಬಲ್ಲ್ಯೋ ।
ನೀನೆ ಗತಿ ಎಂಬೊ ದೃಢವನು ದೊರಕುತದೆ ।
ನೀನಿರು ಸ್ವಾತಂತ್ರ್ಯಾ ಆನೇನು ಬಲ್ಲೆನೊ ।
ಏನಿದರ ಮೇಲೆ ನಾನಿನ್ನವನಾಹೇ ಹೇಗೆ ।
ಜ್ಞಾನಿಗಳು ಕಂಡರೆ ಹೀನನ ಮೇಲೆ ದಯ ।
ಮಾನು ಮಾಡುತಲಾರೆ ನ್ಯೂನಗಳೆಣಿಸದೆ ।
ನಾನಾದರು ಅವರ ಧೇನಿಸಿ ತಿಳಿಯಲರಿಯೆ ।
ತಾನಾಗೇವೆ ದಯವನು ಮಾಡುವರು ರಂಗಯ್ಯಾ ।
ನೀನೆ ಕಾರಣ ಪರಿಯೋನಿಧಿ ನಿಷೇಧನಿಯಲ್ಲಿ ।
ಆನೊಬ್ಬರರಿಯೆನು ಅನಿಮಿತ್ಯ ಬಂಧು ದೇವ ।
ದೀನ ರಕ್ಷಕ ಚಲುವ ಗೋಪಾಲ ವಿಠಲ ।
ಮಾನಾಭಿಮಾನದೊಡಿಯಾ ನಾನಿನ್ನ ಬಿಡೆನಯ್ಯಾ ॥ ೫ ॥

ಅಟ್ಟ ತಾಳ

ಕೆಟ್ಟದೆಲ್ಲ ಎನ್ನ ಕಾರ್ಯಗಳೇನು ।
ಕೊಟ್ಟದ್ದಿಲ್ಲ ನಿನ್ನ ಕೈಗೆ ನಾನೇನು ।
ಎಷ್ಟು ಕ್ಲಪ್ತದೊಳಿಟ್ಟಷ್ಟೆ ಮಾಡಿಸುವಿನ್ನು ।
ಘಟ್ಯಾಗಿ ಕ್ಲಪ್ತ ಮೀರಿ ಪಾಪ ಪುಣ್ಯ ।
ಅಟ್ಟಹಾಸವಾಗೆ ನಷ್ಟ ಮಾಡಿಸಿ ಇನ್ನು ।
ಇಷ್ಟ ಮಾತ್ರಕೆ ನಾ ಕೆಟ್ಟದ್ದೇನು ಹರಿ ।
ನಷ್ಟ ಇಷ್ಟ ಇನ್ನು ಆರಭಾರಗಳಿಲ್ಲ ।
ಸೃಷ್ಟ್ಯಾ ದೃಷ್ಟ ಕರ್ತ ಕೃಷ್ಣ ನಿನ್ನದಯ್ಯಾ ।
ಇಷ್ಟ ದೈವ ನಮ್ಮ ಗೋಪಾಲ ವಿಠಲ ।
ಬಿಟ್ಟನೆಂದರ ಬಿಡಿ ಎಷ್ಟು ಸುಮ್ಮನಿರೆ ॥ ೬ ॥

ಆದಿತಾಳ

ಕಾಲ ಕಾಲಕೆ ನಿನ್ನ ಕಾರ್ಯಗಳನ್ನು ತಿಳಿಯೆ ।
ಪಾಲಿಸಬೇಕಯ್ಯಾ ಪರಮ ಪುರುಷ ಹರಿ ।

ಬಾಳಿವೆಯು ಮಾಡಿಸು ವೇಳ್ಯೆ ವೇಳ್ಯೆಕೆ ನಿನ್ನ ।
ಊಳಿಗದೊಳಗಿಟ್ಟು ಕಾಲವ ಕಳೆಸೋದು ।
ತಾಳಿಮಿಕಿಯು ಕೊಡು ಕೋಪಾಟೋಪಗಳಲ್ಲಿ ।
ಆಳರಿತು ಪ್ರೇರಿ ಕಂಡ್ಯಾ ಗೋಪಾಲ ವಿಠಲ ।

ಜತೆ

ನಾ ಅಪರಾಧ್ಯೆ ಯ್ಯಾ ನೀ ಅಲ್ಲೆ ಪ್ರೇರಕಾಹೆ ।
ಅಹಲ್ಯಾ ಶಾಪ ವಿಮೋಚಾ ಗೋಪಾಲ ವಿಠಲ ॥ ೮ ॥

## ಸುಳಾದಿ ೩೩

ರಾಗ ಶಂಕರಾಭರಣ ಧ್ರುವತಾಳ

ಬಂದು ನಿಲ್ಲಯ್ಯಾ ಭವದ ಸಿಂಧುವಿಗೆ ಅಗಸ್ತ್ಯ ।
ನಂದದಿ ಸೆಳೆದು ಎನ್ನ ಮಂದಿರದೊಳಗಿನ್ನು ।
ಇಂದಿರೆ ಇಂದ್ರೊಪ್ಪುತ ಕಂದಾಕಂದ ಬೊಮ್ಮಮತ್ತ ।
ನಂದಿವಾಹನ ಸುರರಿಂದ ವಂದಿತನಾಗಿ ।
ಚಂದುಳ್ಳವಾಲಗ ಆನಂದದಿ ಕೊಳುತಲಿ ।
ಇಂದು ಬಾರಯ್ಯಾ ಬಲು ಸುಂದರ ವಿಗ್ರಹ ।
ಮಂದ ಮತಿ ನಾನಿನ್ನ ಮನದಣಿ ಬೇಡಿಕೊಂಬೆ ।
ಕಂದನ ಬಿನ್ನಪವ ತಂದಿಯೊ ತಾರೊ ಮನಕೆ ।
ಒಂದರಿತವನಲ್ಲ ವಂದೆ ದೇವನೆ ಕೇಳು ।
ಒಂದಿಸೊ ಬಗೆ ನಿನ್ನ ಒಂದಾದರು ಆನರಿಯೆ ।
ಕುಂದು ಮನುಜ ನಿನ್ನಾನಂದ ನೋಡೆನೆಂಬೊ ।
ಛಂದುಳ್ಳ ಬಹುದಿವಸದಿಂದ ಲೆನ್ನ ಆಸೆಯು ।
ಮಂದರ ಧರ ಎನ್ನ ಮನದ ಭೀಷ್ಟೆ ಪೂರೈಸು ।
ಸಂದೇಹ ಮಾಡದಿರು ಸಾಧು ಜೀವರ ಪಾಲ ।
ವೃಂದಾವನದ ಗೋವಿಂದ ಸಿರಿ ಕೃಷ್ಣ ।
ಮಂದಾಕಿನಿಯ ಜನಕ ಗೋಪಾಲ ವಿಠ್ಠಲ ।
ಬಂದೆನ್ನ ರಕ್ಷಿಸಯ್ಯಾ ಭಕುತವತ್ಸಲ ದೇವ ॥ ೧ ॥

ಮಟ್ಟತಾಳ

ಕೊಡುವದು ಹಿಡಿವದು ಬಿಡುವದು ಇಡುವದು ।
ನಡೆವದು ನುಡಿವದು ಆಡಗೋದು ಮಡಗೋದು ।
ಒಡಲೊಳು ಪೋಗುವದು ತಡೆವದು ಅಲ್ಲಲ್ಲಿ ।
ಸಡಗರದಲಿ ತಿಳಿಸಿ ಕಡೆಹಾಯಿಸು ಭವದ ।
ಕಡಲ ಎನ್ನನ್ನು ಬೇಗ ಮಡದಿಯರು ಮಕ್ಕಳು ।
ಒಡವೆಗಳಲಿ ಮನವು ಕಡಕ ವಿಲ್ಲದೆ ಎಳೆದು ।
ಬಡಬಾರದ ಭಂಗ ಬಡಿಸಿದ ಕಾಲಕ್ಕು ।
ದೃಢ ನಿನ್ನ ಜ್ಞಾನಕೊಡು ಎನಗಲ್ಲೆಲ್ಲಿ ।
ವೃಡ ಸಖನೆ ಚಲ್ವ ಗೋಪಾಲ ವಿಠ್ಠಲ ಎನ್ನ ।
ಹಿಡಿದಾಡಿಸೊ ಧೊರಿಯೆ ಬಿಡದಿರು ಎನ್ನ ಕರವ ॥೨॥

ತ್ರಿವಿಡಿ ತಾಳ

ಆನಂದ ಕೊಡುವದು ನಿನ್ನಂದ ಮಾತ್ರದಿ ।
ಆನಂದ ಕೊಡುವದು ನಾನಂದ ಮಾತ್ರದಿ ।
ಆನಂದವೆಂಬ ಸಭೆಯು ಆನಾಡಲಿಲ್ಲವೆಂದು ।
ಆನಂದ ಮೂರುತಿ ಹರಿ ಆಡಿಸಿದನೆಂತೆಂದು ।
ಆನಂದನಾಗಿ ಶ್ರೀ ಮದಾನಂದ ತೀರ್ಥರ ।
ಆನಂದ ಉಕ್ತಿಯ ಆನಂದದಲಿದ್ದರೆ ।
ಆನಂದ ಕೊಡುವದು ಆನಂದ ಮೂರ್ತಿಯು ।
ಆನಂದವೆಂಬೋದು ನಿನ್ನನೋಳ್ಪವದೆ ।
ಆನಂದವೆಂಬೊದಿನ್ನೊಂದು ಅರಿಯೆನು ।
ಆನಂದ ಗುಣ ಪೂರ್ಣ ಗೋಪಾಲ ವಿಠಲ ।
ಈ ನಿಮಿಷವೆ ಸಾಕು ನಿನ್ನ ತಿಳಿವವಧನ್ಯ । ॥೩॥

ಅಟ್ಟತಾಳ

ದೋಷದೂರನೆ ನಿನ್ನ ಸ್ಮರಿಸುವರಿಗೆ ದೋಷದ ।
ರಾಶಿ ಇನ್ನಾಶ್ರೈಸಲಿ ಬೇಕೆ ।

ನಾಶ ಮಾಡೆನ್ನಘ ರಾಶಿಗಳೆಲ್ಲನು ।
ಮೋಸ ಗೊಳಿಸಬೇಡ ದಾಸರ ಪ್ರಿಯನೆ ।
ಹೇಸಿಕ್ಕುಟ್ಟಿಸು (ಹೇಸಿಕೆ ಹುಟ್ಟಿಸು) ದುರಾಸಿಗೆ ಮನವನು ।
ಆಸೆ ತೋರಿಸು ನಿನ್ನ ಪಾದ ಕಮಲಾನಂದ ।
ಈಷನ್ಮಾತ್ರವನ್ನು ದಾಸತ್ವ ಎನ್ನಲ್ಲಿ ।
ವಾಸವಾಗಿ ಯಿತ್ತೆ ಪೋಷಿಸು ಶ್ರೀಹರಿ ।
ಈಶ ನೀ ನೆಂಬೊದು ದಾಸನಾನೆಂಬಂಥ ।
ಈ ಸಮಯದಿ ಅಲ್ಲ ಅನಾದಿ ಕಾಲದಲಿಂದ ।
ಶ್ರೀಶಬಾ ಎನ್ನಯ್ಯಾ ಗೋಪಾಲ ವಿಠ್ಠಲ ।
ಮಾನಿಸಾಡೆ ಎನ್ನ ಮನದವಳಗೆ ನಿಲ್ಲು । ॥೪॥

ಆದಿತಾಳ

ಒಂದು ದಿನದ ಗೆಳೆಯ ತಾನು ।
ಹೊಂದಿದವನು ಅಂದು ಅವಗೆ ದು:ಖ ।
ಚಂದದಿ ತರಿವನು ಕುಂದು ನಿಂದೆ ಆದರೆ ।
ನೊಂದುಕೊಂಬೊನು ಮನದಿ ಒಂದಾಗುವರು ತಮ್ಮನಂದಾಗಲಿ
ಇಂದಿರೇಶನೆ ಎನಗೆ ನಿನಗೆ ಗೆಳೆಯತನ ।
ಇಂದಾದದಲ್ಲ ಅನಾದಿ ಕಾಲದಲಿಂದ ।
ಹೊಂದಿಕೊಂಡಿದ್ದಮೇಲೆ ಬಂದು ಎನಗೆ ದೋಷ ।
ನಿಂದಿರತಂತೆ ಮಾಡಬೇಕಲ್ಲದೆ ನೀ ಎನ್ನ ।
ಬಂಧನದೊಳಘಾಕಿ ಬರಿದೆ ದಣಿಸುವರೆ ।
ತಂದಿಯಮೇಲೆ ಸ್ನೇಹ ಛಂದಾದುಂಟಾದದ್ದೆಮ್ಮ ।
ತಂದಿಯು ತಂದೆ ಕೇಳೊ ಬಂದೆ ನಾನದರೊಳು ।
ಹೊಂದಿದವ ನಿಮ್ಮ ಕಂದನ ಮತವನು ।
ಮಂದ ಮತಿಯು ಮಾತು ಮಾರಮಣ ಮನ್ನಿಸು ।
ವೃಂದಾರಕ ಪಾಲ ಗೋಪಾಲ ವಿಠಲ ।
ಬಂಧು ಎನಗೆ ಭವದಿಂದಾಟಿಸು ಜೀಯಾ ॥ ೫ ॥

ಜತೆ

ಭಕುತಿಯು ನೀ ಎನಗೆ ಯುಕುತಿಯಿಂದಲಿ ನಿನ್ನ ।
ಉಕುತಿಲಿ ಪಾಡುವಂತೆ ಮಾಡು ಗೋಪಾಲ ವಿಟ್ಠಲ ॥ ೬ ॥

## ಸುಳಾದಿ ೩೪

ರಾಗ ಭೈರವಿ ಧ್ರುವ ತಾಳ

ಸೊಲ್ಲು ಸೊಲ್ಲಿಗೆ ನಿನ್ನ ಪಲ್ಲುದೆರೆದು ಮನ ।
ಬಿಲ್ಲಾಗಿ ನಿನ್ನ ಪಾದದಲಿಟ್ಟು ಬೇಡಿದರೆ ।
ಎಲ್ಲ್ಯೋ ನಿನ್ನ ಮೊಗ ಆವಲ್ಲಿ ನೋಡುತಲಿದ್ಯೋ ।
ಎಲ್ಲ ನಡೆಯೊಡೆ ನಿನ್ನ ಬಲ್ಲವರ ಮುಂದಿನ್ನು ।
ನಿಲ್ಲದೆ ನವ ಮನದಲ್ಲಿದ್ದ ಭೀಷ್ಟೆಗಳ ।
ಸಲ್ಲಿಸಿ ಪೋಗೆಂದರೆ ಮೆಲ್ಲನೆ ಜರಿವದು ।
ಒಳಿತಲ್ಲವೋ ನೀನೆಲ್ಲಿ ಪೋಗಲಿ ಬಲ್ಲ್ಯೋ ।
ಸಲ್ಲದು ನಿನಗೆ ಭಕುತರಲಿಂಥ ಮಾಯಗಳು ।
ಎಲ್ಲ ಕಾಲವು ನಮ್ಮನೆಲ್ಲರ ಪೊರಿವಂಥ ।
ಬಲ್ಲಿದ ಬಿರಿದು ಬೇಕಲ್ಲವೋ ನಿನಗಿನ್ನು ।
ಹುಲ್ಲು ಮನುಜನೆಂದು ಚಲಿಸದೆ ದೂರ ।
ದಲ್ಲಿಂದ ನೋಡಿದರೆ ಎಲ್ಲ ನಿನ್ನ ಕಡಿಯೆ ।
ಗುಲ್ಲ ಎಬ್ಬಿಸಿ ಇಳೆ ಎಲ್ಲರು ತಿಳಿವಂತೆ ।
ಸೊಲ್ಲಿಂದ ಚಲ್ಲಾಡುವೆ ಪಳ್ಳಿಯೊಳಗೆ ನೀನು ।
ಎಲ್ಲ ಮಕ್ಕಳ ಕೂಡಿ ಕಳ್ಳತನದಿ ಮನಿಗಳೆಲ್ಲಪೊ ।
ಗಲಾಗಿನ್ನು ಗೊಲ್ಲ ವನಿತೆಯರು ಮೆಲ್ಲನೆ ಪಿಡಿದು ನಿನ್ನ ।
ಗಲ್ಲವ ೧ ಸಸಿದಿನ್ನು ವಲ್ಲೆ ಎಂದೆಂದು ಇಂಥ ।
ಗೊಲ್ಲ ಎಂತೆಂದು ಕೋಲೆ ಕೋಲಿಲಿಡರು ನಿನ್ನ ।

---

೧ ಹಿಂಜಿ, ಕೀಳಿ.

ಅಲ್ಲಿದ್ದ ತನಗಳು ಎಲ್ಲ ಕಾಣ ಬಲ್ಲೆನು ।
ಬಲ್ಲರೆ ಅಜಭವರೆಲ್ಲ ಸುರರು ಇನ್ನು ।
ನಿಲ್ಲದೆನೇಕ ಬಗೆಯಲ್ಲಿ ಪೂಜಿಸಲಾಗಿ ।
ಫುಲ್ಲಲೋಚನನೆ ಸಾಕಲ್ಯ ಗೈವರಿಗೆ ।
ಎಲ್ಲ ತೋರಿದೆ ತೋರಿದೆನೊ ಗೋಕುಲದೊಳಗೆ ನೀನು ।
ಬಳ್ಳಿ ತಲಿಗೆ ಸುತ್ತಿ ಗುಲ್ಲಿ ಚೀಲವು ಹೆಗ ।
ಲಲ್ಲಿ ಕಂಬಳಿ ಕರದಲ್ಲಿ ೧ ಬಚ್ಚಣಾಗ್ರಲು (ಬಚ್ಚಣಗೋಲು) ।
ಕಲ್ಲಿನೊಳಗೆ ಬುತ್ತಿ ಮೆಳ್ಳೂರಿಗೆಯನುಟ್ಟು ।
ಗುಳ್ಳಾಟಗಳು ಇನ್ನೆಲ್ಲಿ ಕಲಿತೆರಂಗ ।
ಮಲ್ಲ ಮರ್ದನ ಗೋಪಾಲ ವಿಟ್ಠಲ ನೀನು ।
ಬಲ್ಲಿದರಿಗೆ ಬಲ್ಲಿದ ಬಲ್ಲವಗತಿ ಸುಲಭ ॥ ೧ ॥

ಮಟ್ಟತಾಳ

ಕರಿರಾಜನಂತೆ ನಿನ್ನ ಕರೆದು ಗಂಭಡಿ ಮಾಡಿ ।
ಗಿರಿಯ ಸಹಿತ ಬಿಟ್ಟು ಮರುಳುಗೊಳಿಸಲಿಲ್ಲ ।
ವರ ಭೃಗು ಮುನಿಯಂತೆ ಸರನೆ ಎದಿಯಲೊದ್ದು ।
ಹರಿ ನೀನಹುದೆಂದು ಪರೀಕ್ಷಿಸಬೇಕೊ ನಿನ್ನ ।
ಭರದಿ ಮಡುವಿನೊಳು ಸರನೆ ಕಾಳಿಂಗನಂತೆ ।
ಹರಿ ಸರ್ವೋತ್ತಮನೆಂದು ಕರೆದ ಕ್ಷಣದಲ್ಲಿ ।
ನರ ಮೃಗ ರೂಪಾಗಿ ತೆರಿಸಲಿಲ್ಲವೋ ಬಾಯಿ ।
ಧರಿಯಲ್ಲವು ನೋಡುವಂತೆ ಕರುಣಾ ।
ಕರ ರಂಗ ಗೋಪಾಲ ವಿಟ್ಠಲ ।
ಕರುಣಾಳೆಂಬೊದು ಅರಿಯದಲೆ ನಾ ನಿನ್ನ ॥ ೨ ॥

ತ್ರಿವಿಡಿ ತಾಳ

ನರನಂತೆ ನಿನ್ನ ಕೈಯ್ಯ ರಥವನ್ನೊಡಿಸಬೇಕು ।
ಸಿರಿ ದ್ರೌಪದಿಯಂತೆ ಶಾಖ ಮೆಲ್ಲಿಸಬೇಕು ।

---

೧ ಬಣ್ಣದ ಕೋಲು.

ಸುರ ನದಿ ಸುತನಂತೆ ಭರದಿ ನಸುಲಲಿ ಬಾಣ ।
ಧುರದಿ ಎಚಿಸಬೇಕು ಪಂವು ಮಾಡದೆ ನಿನ್ನ ।
ತರುಳ ಪುಂಡಲೀಕನಂತೆ ಹರಿಯೆ, ಬಂದರೆ ನಿನ್ನ ।
ತಿರಿಗಿ ನೋಡದೆ ತಾನು ಚರಣವು ತೊಳೆಯುತ್ತ ।
ಉರುಟ ಇಟ್ಟಗಿ ಮೇಲೆ ಹರುಷದಿಂದಲಿ ಕು ।
ಳ್ಳಿರಿಸಬೇಕಯ್ಯಾ ನಿನ್ನ ಗರುವತನದಲ್ಲಿನ್ನು ।
ಪರಮ ಸಂತೋಷದಿ ಉಗ್ರಸೇನನಂತೆ ।
ಸ್ಥಿರ ಪಟ್ಟ ಗಟ್ಟಿನ್ನು ಪರಿಪರಿಯುಲಿ ನಿನ್ನ ।
ಪರಿಚಾರಕನ ಮಾಡಿ ವರ ಉಡ್ಡೋಲಗಿಂದಲಿ ।
ಕರವೆತ್ತಿ ಧೊರೆಯೊಂದು ಮುತ್ಯನಿಗೆ ।
ಪರಾಕೆನಿಸಬೇಕು ಮರುತನಂತೆ ನೀ ಉಣಕುಳಿತೆಡೆಯು ।
ಸರನೆ ಎತ್ತಿಕೊಂಡು ದೂರ ಓಡಲಿಬೇಕು ।
ಮರಳಿ ಜಾಂಬವನಂತೆ ಎರಡ್ಪತ್ತೊಂದು ದಿನ ।
ತಿರುಗಿ ನಿನ್ನಕೂಡ ಭರದಿ ಕಾದಲಿ ಬೇಕು ।
ಪರಮ ದಯಾಳುವೆ ಗೋಪಾಲ ವಿಟ್ಠಲ ।
ಮರಳಿದವರಿಗೆ ಮೂರು ಜನ್ಮಕ್ಕಿತ್ತಿಲೊ ಮುಕ್ತಿ ।

ಅಟ್ಟತಾಳ

ಯಂಜಲ ಫಲ ಮೆದ್ದು ಗಂಜಿಯ ಕುಡಿದಿನ್ನು ।
ಅಂಜಿ ಧನಂಜಯುಗೆ ಸಂಜಿ ಆಗದ ಮುನ್ನ ।
ಸಂಜಿ ಮಾಡಿದೆ ನೀನೇ ಅಂಜನಿ ಸುತನ ಕೂಡ ।
ಭುಂಜಿಸಿ ಭೋಜನ ಯಂಜಲುಣ ಕಲಿಸಿದ ನಮ್ಮಹನುಮಂತ ।
ಕಂಜಾಕ್ಷ ನಮ್ಮ ಗೋಪಾಲ ವಿಟ್ಠಲ ವಜ್ರ ।
ಪಂಜರ ನಿನ್ನ ನಾಮ ೧ ಅಂಚೆ ದೊರಕಿತೆನಗೆ ॥ ೪ ॥

---

೧ ಅಂಚೆ— ದಾರಿ

ಆದಿತಾಳ

ಆಡಿಹೆ ನೀನು ಎನಗೆ ನೀಡಿದ ಸಥೆಯಿಂದ |
ನೋಡಿದರೆಲ್ಲ ನೀನು ಮಾಡಿದ್ದೆ ಸತ್ಯವಯ್ಯಾ |
ಬೇಡುವದಕ್ಕೆ ನಿನ್ನ ಕಾಡುವದಕ್ಕೆ ನಾನು |
ಆಡಿದೆ ನಿನ್ನ ಬಿಡಿ ನುಡಿಗಳು ನಿನಗೆ |
ಬೇಡಿದ ವರವ ನೀ ನೀಡುವ ದೈವ ಎಂದು |
ಮಾಡುವೆ ಸಥಿಯನ್ನು ಮೂಡಲಾದ್ರಿನಿಲಯ |
ರೂಢಿಗೊಡೆಯ ನಮ್ಮ ಗೋಪಾಲ ವಿಟ್ಠಲ |
೨ ಬೇಡಿಸಿ ನಿನ್ನ ಕೊಂಡಾಡುವೆ ಬಿಡದೆ || ೫ ||

ಜತೆ

ನೇಮಾ ಭಕ್ತರ ಪೊರೆವ ಪ್ರೇಮಾ ನಿನ್ನಗುಂಟು |
ಸಾಮಜ ವರದ ಗೋಪಾಲ ವಿಟ್ಠಲ ಬಂಧು || ೬ ||

## ಸುಳಾದಿ ೩೫

ರಾಗ ನೀಲಾಂಬರಿ ಧ್ರುವ ತಾಳ

ಏಸೇಸು ಜನ್ಮಂಗಳು ಎನಗೆ ಬಂದು ಪೋದವು |
ನಾಶವಾಗಲಿಲ್ಲ ಮನದ ಆಶೆ |
ಬೇಸರವಾಗಲಿಲ್ಲ ವಿಷಯಂಗಳಿಂದ ಬುದ್ಧಿ |
ಸಾಸಿರದೊಳಗೊಂದ ಪಾಲಾದರೂ |
ನಾಶಗೈಸಿತು ಹೀಗೆ ನಾನಾ ಹಿಂದಿನ ಜನ್ಮ |
ಈ ಶರೀರವು ಧರಿಸಿ ಇಲ್ಲೆ ಬಂದೆ |
ಭೂಸುರರ ಜನ್ಮದಿ ಬಂದೆ ಬಹು ಸುಕೃತ |
ರಾಶಿ ಪುಣ್ಯಗಳು ಕೆಡಲಾಗಿ |

೨ ಬೇಡಿಸಿ— ಸಂಕೋಲೆ ಹಾಕಿ, ಭಕ್ತಿಪಾಶದಿಂದ ಕಟ್ಟಿ

ವಾಸೆ ಮತ್ತೇನಿದಕೆ ಬಾಳಿದದಕೆ ವಿಷಯ |
ರಾಸಿ ಫಳಿಸಿ ಉಂಡದ್ದೆ ಮಹಾ ಫಲವೇ |
ದೇಶ ಕಾಲ ನೋಡಲು ಅನುಕೂಲವಾಗಿಹದು |
ವಾಸುದೇವನೆ ನಿನ್ನ ಇಚ್ಛೆ ಒಂದೇ |
ಏಸು ಮಾತು ನಾನು ಆಡಿದರೇನು ನಿನ್ನ |
ದಾಸರ ದಾಸತನ ಉಂಟಾಗಿತ್ತೆ |
ಈ ಸಮಯವೆ ನೋಡು ಎನ್ನ ಉದ್ಧರಿಸಲಿ |
ದೋಷ ರಹಿತ ಜ್ಞಾನಾನಂದ ಪೂರ್ಣ |
ಲೇಶವಾದರು ಎನಗೆ ನಿನ್ನ ತಿಳಿಯೊ ವಿಷಯದಲ್ಲಿ |
ಸಂಶಯ ಎಂಬೊದುಂಟೇನು ಸರ್ವೇಶ್ವರಾ |
ಸಂಶಯ ಮಿಶ್ರ ಜ್ಞಾನಿ ಆ ನಲ್ಲಹುದಲ್ಲವೊ |
ವಿಶೇಷವಾಗಿ ನೀನು ಅರಿಯದಿದ್ದೇ |
ನೀ ಸ್ವತಂತ್ರನು ನಿನಗೆ ಬೇಕು ಬೇಡಂಬರಿಲ್ಲ |
ಈ ಸಭೆ ಮಾತು ನೀನು ಕೊಟ್ಟದಲ್ಲೆ |
ಈಷಣ ತ್ರಯದಲ್ಲಿ ಗೆಲಿವದೆನ್ನ ಮನ ಸ |
ರ್ವೇಶ ನಿನ್ನ ಕಡೆ ಮಾಡಬಹುದೋ |
ನಾಶರಹಿತ ಶ್ರೀಶ ಗೋಪಾಲ ವಿಟ್ಠಲ |
ಶಾಶ್ವಿತವಾಗಿ ವಾಸವಾದ ಮೂರ್ತಿ ॥ ೧ ॥

ಮಟ್ಟತಾಳ

ಕಾಣೆನೊ ಕಾಣೆನೊ ಕಡೆಗಟ್ಟಿಸುವರ |
ಜ್ಞಾನ ಪೇಳುವರ ಕಾಣೆ ಖೂನವರಿತು ಇನ್ನು |
**ಗೇಣು ಮುಂದಕೆ ಸಾಗಿ ಮೊಳ ಹಿಂದಾಗುವದು |**
**ಕಾಣಿ ಪೋದರೆ ಎನ್ನ ಪ್ರಾಣ ಒಪ್ಪಿಸುವೇನೊ |**
ಹೀನ ಜಯಾದಿಗಳೇನು ತಿಳಿಯಲಿಲ್ಲ |
ಶ್ವಾನ ಬುದ್ಧಿಯವನೊ ನಾನು ಕುಯೋಚಿಸುವೆ |
ಜ್ಞಾನವಂತರ ಸಂಗ ಏನೆಂತಾಗುವದೋ |

ಗೋಣು ಹಿಸಕುವ ಜನರ ಸಂಗವು ಬಹಳ ।
ಶ್ರೀನಿವಾಸ ಶ್ರೀಶ ಗೋಪಾಲ ವಿಠ್ಠಲನಾ ।
ನಿನ್ನನರವನೊ ಏನು ಮಾಡಿಸಿದರೂ ॥ ೨ ॥

ರೂಪಕ ತಾಳ

ಇಂದ್ರಿಯಂಗಳನಿತ್ತೆ ಅದಕೆ ವಿಷಯಂಗಳಿತ್ತೆ ।
ಒಂದರ ಸಾಧನಗಳು ಒಂದಕ್ಕಾಗುವೆ ಅಯ್ಯಾ ।
ಚಂದದಿ ನಿನ್ನ ಕಥೆಯು ಕೇಳ್ವ ಕರ್ಣ ।
ಮಂದಿಯ ವಾರ್ತೆ ಕೇಳಲಿ ಮರುಳಾದವೊ ।
ಸುಂದರ ನಿನ್ನ ಮೂರ್ತಿಯನೋಳ್ಪ ಅಕ್ಷಿಗಳು ।
ಸೌಂದರ್ಯ ಸ್ತ್ರೀಯರ ನೋಡ ತಿರುಗಿದವಯ್ಯಾ ।
ಇಂದಿರಾಪತಿ ಮುಡಿದ ಗಂಧ ನಿರ್ಮಾಲ್ಯ ಬಿಟ್ಟು ।
ಇಂದೀವರ ಮುಖಿಯರ ಮೊಗಕೆ ಗಂಧೇಂದ್ರಿವೆರಗಿತು ।
ಹೊಂದಿ ನಿನ್ನಾ ಲಿಂಗನಮಾಳ್ಪ ಸ್ಪರಿಶೇಂದ್ರಿಯು ।
ಮಂದ ಸ್ತ್ರೀಯರ ವ್ಯೈಯಾಲಿಂಗನಿಗೆಳೆವದು ।
ಅಂದಾದಿ ಸುಜನರರ್ಪಿಸಿ ಅನ್ನಂಗಳ ಬಿಟ್ಟು ।
ಮಂದ ಜನರ ಮನೆಯ ರಸಂಗಳ ಬಯಸುವೆ ।
ಇಂದ್ರಿಯಂಗಳು ಎಲ್ಲ ಈ ಪರಿ ವೆಚ್ಚಾಗೆ ।
ಮುಂದೆನ್ನ ಗತಿಯೇನು ಮುಕ್ಕುಂದನೆ ।
ಕಂದರ್ಪ ಜನಕ ಗೋಪಾಲ ವಿಟ್ಠಲರೇಯಾ ।
ಬಂಧು ಕರುಣ ಸಿಂಧು ಗತಿನೀನೆ ಎಂದೂ ॥ ೩ ॥

ಝಂಪೆ ತಾಳ

ಮದುವೆ ಆಗುವದಕೆ ಮಾಡಿದ ಸಾಧನವು ।
ವಧೆಯ ನಂತರ ಉತ್ತರ ಕ್ರಿಯಕೆ ಆದಂತೆ ।
ಉದರಗೋಸುಗ ಮಾಡಿ ಇಟ್ಟ ಅನ್ನವನೊಯ್ದು ।
ಉದರದ ಮೇಲೆ ಇಡಲು ಕ್ಷುಧೆ ಪೋಪದೇ ।

ಬಧಿರನ ಮುಂದೆ ಗಾಯನವ ಮಾಡಿದಂತೆ |
ಬದುಕು ಎನ್ನದಯ್ಯಾ ಕೊನೆಗೆ ನೋಡಾ |
ಒದಗಿ ಬಾಹೊ ಪಯಣದ ಗತಿ ತಪ್ಪದು |
ಉದಯ ರಾತ್ರಿಯ ಮಧ್ಯ ಆವದರಿಯೋ |
ಇದೆ ಸಮಯ ಮೀರಿದರೆ ಮುಂದ್ಯಾರು ಅನ್ಯರು (ಆನ್ಯಾರು) |
ನದಿಗಳ ಥೆರೆಯಂತೆ ಜನನ ಮರಣ |
ವಿಧಿ ಕುಲವು ಸುಮ್ಮನೆ ಬಾಹೋದಿಲ್ಲವೊ |
ವಿಧಿ ಜನಕನನ್ನ ತಿಳುವದು ಇಲ್ಲವೆ |
ಸುದರಶನ ಪಾಂಚಜನ್ಯ ಚಕ್ರಪಾಣಿ |
ಮಧುಸೂದನ ಮಹದಾದಿ ದೈವ |
ಕದನ ಕರ್ಕಶ ಮಲ್ಲರ ವೈರಿ ಹೃಷಿಕೇಶ |
ಅದುಭೂತ ಮಹಿಮನೆ ಅಲೌಕಿಕ |
ಬುಧ ಜನ ಪ್ರೀಯ ಗೋಪಾಲ ವಿಟ್ಠಲ |
ವಿಧಿ ನಿಷೇಧಕೆ ನೀನೆ ನಿಯಾಮಕ ‖ ೪ ‖

ತ್ರಿವಿಡಿ ತಾಳ

ಚಿಂತಾಮಣಿಗಾದರು ಬೆಲೆಯ ಕಂಡವರುಂಟು |
ಕಂಥಿಗೆ ಬೆಲೆಯುಂಟೆ ನಾನಾ ಛಿದ್ರ |
ಕಂಥಿಯೊಳಗೆ ಮಣಿಯು ಕಟ್ಟಿದ ಕಾರಣ |
ಸಂತ ಜನರು ಬಂದಿದೇನೋಳ್ಪರು |
ಸಂಥಿಯ ಜನರೆಲ್ಲ ಕಂಥಿಯನೋಳ್ಪರ |
ಸಂತರು ನೋಳ್ಪಂತೆ ನೋಡುವರು |
ಕಂಥಿ ಬಿಡಿಸಿ ಮಣಿಯ ಕಡೆಗೆ ಮಾಡಿದರೆ |
ಚಿಂತೆ ಯಾಕೆನ್ನ ಚಿಂತಾಮಣಿ ಚಿಂತಿಪದು |
ಕಂಥೆಯಲ್ಲ್ಯೆಭಿಮಾನ ಎನಗಿದ್ದ ಕಾರಣ |
ಸಂತೆ ಜನರು ಇಟ್ಟ ಬೆಲೆಗೆ ಬಳಲುವರಯ್ಯಾ |
ಅಂತರ್ಮುಖರೇ ಅದರ ನಿಜ ಬಲ್ಲರಲ್ಲದೆ |

ಚಿಂತಿತವಾಗುವದೆ ಸರ್ವರಿಗು |
ಶಾಂತ ಮೂರುತೆ ಶ್ರೀಶ ಗೋಪಾಲ ವಿಟ್ಠಲ ನೀ |
ನಿಂತಲ್ಲಿ ಸಕಲ ನಿಧಾನವುಂಟು || ೫ ||

ಅಟ್ಟತಾಳ

ಚೇತನನ್ನ ನೀನು ಜಡ ಮಾಡುವಿ ಅ |
ಚೇತನ ಪಿಡಿದಿನ್ನು ಚೇತನ ಮಾಡುವಿ |
ಪಾತಕ ಪಾವನ ಎರಡು ನಿನ್ನಾಧೀನ |
ಯಾತರವನು ಅಲ್ಲ ಎಲ್ಲ ನಿನ್ನಾಧೀನ |
ಕೋತಿಯು ಮರಿ ತಾನು ಕಚ್ಚಿಕೊಂಡಿದ್ದಂತೆ |
ಆ ತೆರವೆ ಆಯ್ಯಾ ನಿನ್ನ ಹಿಡತ ಬಲು |
ಪ್ರೀತಿ ಬಡಿಸು ಬಲು ಯಾತನೆ ಬಿಡಿಸಿನ್ನು |
ಖ್ಯಾತಿ ವಿಖ್ಯಾತಿಯು ನಿನ್ನದೊ ಸರ್ವೇಶ |
ಸ್ವಾತಿ ಹನಿಗೆ ಕಪ್ಪಚಿಪ್ಪು ಬಯಿಸಿದಂತೆ |
ಆ ತೆರದಿ ನಿನ್ನ ಕರುಣಾ ರಸದ ಬಿಂದು |
ಯಾತರಿಂದಾಗಲಿ ಎರವದೆಂದೆನ್ನಲ್ಲಿ |
ಆತುರನಾಗಿ ಕೈ ಸೋತು ನಿಲ್ಲಿಸಿ ಇಪ್ಪೆ |
ಜ್ಯೋತಿರ್ಮಯ ಮೂರ್ತಿ ಗೋಪಾಲವಿಟ್ಠಲ ನೀ |
ಪ್ರೀತನಾಗುವ ಸಾಧನವ ನ್ಯಾತರಿಂದಲಿ ತೋರೊ || ೬ ||

ಆದಿತಾಳ

೧ ಕೊರುವವನಾಗಿನ್ನು ಕಾಣಲಿಲ್ಲ |
ಕರವು ತುರುವು ಆಗಿ ಕಾಣಲಿಲ್ಲ |
ಮರದಿದ್ದ ಮದಡರಿ (ಡೇರಿ) ಕಾಣಲಿಲ್ಲ |
ಎರಡು ಪಕ್ಕದಿ ಹಾರಿ ಕಾಣಲಿಲ್ಲ |
ಮರವಾಗಿ ಮನೆಯಾಗಿ ಕಾಣಲಿಲ್ಲ |

---

೧ ಕಟ್ಟಿಗಿ ಕೊರೆಯುವ ಹುಳ

ಎರಳ್ಯಾಗಿ ಕಪಿಯಾಗಿ ಕಾಣಲಿಲ್ಲ |
ನೊರಜಾಗಿ ನೆಗಳಾಗಿ ಕಾಣಲಿಲ್ಲ |
ಪುರ ನಿರ್ಮಿಸಿ ನಿನ್ನ ಕಾಣಲಿಲ್ಲ |
ಗಿರಿ ಗುಹೆಗಳ ಶಾಕಿ ಕಾಣಲಿಲ್ಲ |
ಪರಿ ಪರಿ ವ್ರತ ಉಪವಾಸಂಗಳ ಮಾಡಿ |
ಬರಿದೆ ದಂಡಿಸಿ ತನು ಕಾಣಲಿಲ್ಲ |
ಬರಿದೆ ಪೋದವು ನಾನಾ ಜನ್ಮಂಗಳು |
ಮರಳು ಅಹಂಕಾರದಿ ಮಾಯಕ್ಕೆ ಸಿಲ್ಕಿನ್ನು |
ಅರಿದವ ನೀನಲ್ಲ ನೀನಾರೊ ಅನ್ಯಾರೊ |
ಮರುಳಂಗೆ ಶೈವ (ವಾ) ಚರಣಿಗೆರಗಿ ಇನ್ನು |
ತಿರುಗಿ ಶ್ರೀ ಚರಣಕ್ಕೆರಗಿ ನಡದೆನಲ್ಲ |
ತರುಳನ ಅಪರಾಧ ತಾಳಿದೆ ನಿನಗಿನ್ನು |
ಸರಿ ಉಂಟೆ ಸರಿ ಉಂಟೆ ಕರುಣಾ ನಿಧೆ |
**ಎರಡು ವಿಂಶತಿ ವತ್ಸರವಾಯಿತು ಈ |**
**ಹರಣ ಧರಿಸಿ ಕರುಣಾಕರನೆ |**
ಇರುವ ಬಗೆಗೆ ಎಚ್ಚರಿಸಿದದಕೆ ಎನ್ನ |
ಬರಿದೆ ಕಾಲವು ಪೋಗಗೊಡಲಾಗದು |
ಗುರು ದೇವತಾ ಪ್ರೀತಿ ಆಗಿ ಸಕಲಕರ್ಮ |
ಚರಣಿಯುಮಾಡಿಸೊ |
ಹರೆ ಹರೆ ಪರಮ ದಯಾನಿಧೆ ಗೋಪಾಲ ವಿಟ್ಠಲ |
ಇರಳು ಹಗಲು ನಿನ್ನ ಸ್ಮರಣೀಯ ನೀಡೊ ॥ ೭ ॥

ಜತೆ

ಸಕಲಕ್ಕು ನಿನ್ನ ಬೇಡುವದೇನು ವಿಷಯದಾ |
ಸಕುತಿಗೆ (ಯ) ಬಿಡಿಸೊ ಗೋಪಾಲ ವಿಟ್ಠಲರೇಯಾ ॥ ೮ ॥

## ಸುಳಾದಿ ೩೭

ರಾಗ ಪಂತುರಾವಳಿ ಧ್ರುವ ತಾಳ

ಸಾಕಾರ ಹರಿಗೆ ನಿರಾಕಾರನೆಂಬಿ ನೀನು |
ಯಾಕೊ ಕುವಾದಿ ಗರುವಿಕೆ ತನವು ಏನೊ |
ಏಕವಾಗಿ ಸುರರು(ರಾ) ಸುರರು ಕೊಂಡಾಡಿ(ಕೂಡಿ) ಕೊಂಡು ಇನ್ನು |
ಆ ಕಲಶದಮೃತ ನೀ ಕೂಡಿ ತಾ ಕೂಡೆಂಬೊ |
ಆ ಕಾಲದಲ್ಲಿನ್ನು ಸ್ತ್ರಿಯಾಕಾರವಾಗೆ ಹರಿ |
ಆಕಾರಕ್ಕೆ ಸುರರು ಮೋಹಾಕರಾಗಲಿಲ್ಲವೆ |
ಸಾಕಲ್ಯ ಗುಣನಿಗೆ ನಾಲ್ಕೆರಡು ಗುಣವೆಂಬ |
ಯಾಕೆ ನಿನ್ನದು ಇಂಥ ಪೋಕತನವು ಬಿಡಿ |
ಲೋಕದೊಳಿದ್ದಂಥ ನಾನಾಕು ಪದಾರ್ಥದಿ |
ಆಕಾರ ಹರಿಗುಣ ನೀ ಕೇಳೋ ಮೂರ್ಖ ಜೀವ |
ಸಾಕಲ್ಯ ನಿರ್ದೋಷಗೆ ನೀ ಕಲ್ಪಿಸಿ ವಿದೋಷ |
ನೀ ಕಲಿ ರಾವಣನ್ನ ಕೊಂದ ಈ ಕಲ್ಪಣದೋಷ |
ತಾ ಕಳೆವನೆಂದು ರಾಮ ಬೇಕಾಗಿ ಲಿಂಗವನ್ನು |
ಆಕಾರ ಮಾಡಿದೆನೆಂಬಿ ಈ ಕುಟಿಲತನಗಳ್ಯಾಕೊ ನಿನಗೆ ಇನ್ನು
ಬೇಕಾಗಿಲ್ಲೆ ನಿನಗೆ ಲೋಕಪಾಲಕನಕೂಡ ಈ ಕಠಿಣುತ್ರಗಳು
ಈ ಕಲಿಯುಗವೆಲ್ಲ ಅಪಾಕೃತದಲ್ಲಿ |
ತಾ ಕಳದ್ದೆಲ್ಲರನ್ನಿ ಏಕಮೇವನಾಗಿಪ್ಪ |
ಸಾಕಲ್ಯ ಸುಖನಿಗೆ ತಾ ಕಳಕೊಂಡು ಸೀತೆ |
ಆಕಾರ ಕಾಣನೆಂದು ಶೋಕಿಸಿದನೆಂತೆಂಬೊ |
ಈ ಕಪಟತನವು ಸಾಕು ಮಾಡಲಾರಿಯಾ |
ಸೋಕಿದ ಮಾತ್ರ ಶಿಲಿ ಆಕಾರಾದಳು ಅಹಲ್ಯಾ |
ಪಾಕೃತನೆಂಬಿ ನೀ ಅಪ್ರಾಕೃತ ಹರಿಯನ್ನ |
ಜೋಕೆಲಿ ನೀನು ಬದುಕಲಾರಿಯಾ ಹೇಗೆ |
ಆ ಖಳನು ಕಂದನ ತಾ ಕೊಲ್ಲುತಿರಲಾಗಿ |

ಪಿ ಕಾಯೊ ಹರಿ ಎನ್ನೆ ತಾ ತಿಳಿದಾಕ್ಷಣದಿ ।
ಹೂಕರಿಸಿ ಕಂಭದಿಂದ ತಾ ಪ್ರಕಟಿಸಿತು ನಾದಾ ।
ನೀ ಕಾಣಲಿಲ್ಲ ಚಾರ್ವಾಕ ಅಯೋಗ್ಯ ಭ್ರಷ್ಟ ।
ಸಾಕಲ್ಯ ಬಲಾಢ್ಯನ್ನ ಆ ಕಂಸ ಕುಬಜಿಯನ್ನು ।
ಗೋಕುಲ ಪ್ರೊಕ್ಕನೆಂಬಿ ಈ ಕಪಟತನವೇನೋ ।
ಆಕಾರವನು ಹರಿಯು ನೀ ಕರಿಸಲಾಗಿನ್ನು ।
ತಾಕರದಿ ಶಸ್ತ್ರಿಲ್ಲದೆ ಆ ಕಿರಿಟೇಗೆವೆ ತಾನೆ ಸಾಕಾರವಾಗಿ ಹರಿ ।
ಆಕಳು ಗಳಸಿದ ಪಾಕಶಾಸನನು ಗರು ।
ವಿಕೇತನದಲಿ ಆಕಳ ಕಾಯುವನೆಂದ ।
ನೇಕ ವೃಷ್ಟಿಗರಿಯೆ ತಾ ಕಾಣುತಲೆ ಬೆರಳ ।
ನಖದಿಂದಲಿ ಗಿರಿಯು ಆಕಾಶಕ್ಕೆ ಮೀಟಿದ್ದು ।
ಸಾಕಿದ ಬಾಲಕರ ಸಾಕಲ್ಯ ಜ್ಞಾನಭರಿತ ಗೋಪಾಲವಿಟ್ಠಲ
ಅನನ್ಯಾ ।
ಕಾಲ ದೈವ ಕಾಣೊ ಶೋಕರಹಿತ ರಂಗಾ ॥ ೧ ॥

ಮಟ್ಟತಾಳ

ಹರಿ ಸರ್ವೋತ್ತಮ ಸಿರಿ ಆತನ ರಾಣಿ ।
ಪರಮೇಷ್ಠಿ ಮಗನು ಹರ ಮೊಮ್ಮಗ ಹರಿಗೆ ।
ಉರಗ ಮಂಚವು ಇನ್ನು ಗರುಡ ಏರೋರಥವು ।
ಪುರಹೂತ ಸುರರೆಲ್ಲ ಪರಿವಾರವು ಹರಿಗೆ ।
ಮರಳಿ ಮೂರು ದಿನ ಮರಿಯದಿದ್ದರೆ ನೀರು ।
ನರಕ ನಾರುವ ಮನುಜ ಹರಿ ನೀನಾಗುವ್ಯಾ(ನೀಗಾಗುವಿಯಾ)।
ಬರ ಬಂದರೆ ನೀನು ಬರಿದೆ ಮೂರಾರು ದಿನ ।
ದೊರಿಯದಿದ್ದರೆ ಅನ್ನವರಲಿ ಸಾಯುವಂಥ ।
ಮರಳು ಮಾನವ ನೀನು ಹರಿಗೆ ನೀ ಸರಿಯಂತೊ ।
ಅರಿತು ನೀನು ಬದಕೊ ನರಕವ ಬೀಳಬೇಡ ।
ಹರಿ ದ್ರೋಹಿಗಳ ಕಂಡು ಥರಿಸನು ಯಮತಾನು ;

ದುರಿತ ಸಂಹಾರಕ ಗೋಪಾಲ ವಿಟ್ಠಲನ್ನ ।
ಘೊರಯೆಂದು ತಿಳಿದು ಧರಿಯು ಮೇಲಿರು ಇನ್ನು ॥ ೨ ॥

ತ್ರಿವಿಡಿ ತಾಳ

ಮರುಳು ಮಾನವ ಕೇಳೊ ಸರಿಯಾದರೆ ನೀ ಇನ್ನು ।
ಹರಿ ಚರಿತೆ ನಿನ್ನಲ್ಲಿ ಇರ ತೋರಿಯಾ ನೀನೊಂದು ।
ಕರಿಯು ನಕ್ರಗೆ ಸಿಲುಕಿ ಮೊರೆ ಇಡಲಾಗಿನ್ನು ।
ಹರಿ ವೇಗನೆ ಪೋಗನ್ನು ಶರಿಯು ಬಿಡಿಸಿದನು ।
ಸರನೆ ನೀನು ಒಂದು ನೆರಮನೆ ಝುಗಡವ ।
ಹರಿದು ಬರಲಾ ಭಯ ಮರುಳು ಮನುಜನೆ ನೀ ।
ಹರಿ ಕಾಳಿಂಗನ ಏರಿ ಭರದಿಂದ ಕುಣಿದನು ।
ತಿರುಗಿ ನೀನು ಒಂದು ಉರಗನ್ನ ಪಿಡಿವಿಯಾ ।
ಹರಿ ಪೊಕ್ಕಳಿಂದಲಿ ಹಿರಣ್ಯ ಗರ್ಭನ ಪೆತ್ತಾ ।
ನರನೆ ನೀನು ಒಂದು ಇರಿವಿಯು ಪೆತ್ತಿಯಾ ।
ಹರಿಯು ರಾಣಿಯು ಸಿರಿ ಧರಿ ಎಲ್ಲ ಪೊರೆವಳು ।
ತಿರುಗಿ ತಿರುಗಿ ನೀನು ಕುರುಡನಾಗಿ ಕುಳ್ಳಿರೆ ।
ಮರಳಿ ನಿನ್ನರಸಿನ್ನು ತಿರುಕೆ ಬೇಡುವಳಲ್ಲೊ ।
ಶರಧಿ ಮಥನದಲ್ಲಿ ಗರಳ ಹೊರಡಲಾಗಿ ।
ಹರಿಯು ಮಗನು ವಾಯು ಭರದಿಂದ ಮೆದ್ದನು ಕಾಣೊ ।
ಮರಳೆ ನಿನ್ನ ಮಗನು ಸರ್ರನೆ ವೃಶ್ಚಿಕಕ್ಕೆ ।
ಹೊರಳಿ ಹೊರಳಿದಿಂಡುರುಳಿ ಆಳುವನಲ್ಲೊ ।
ಹರಿಯು ಮಂಚವು ಇನ್ನು ಧರಿಯೆಲ್ಲ ಹೊತ್ತಿತು ।
ಮರಳೆ ನೀನೊಂದು ಸತ್ತ ಕರುವಿನ ಹೊತ್ತೀಯಾ ।
ಉರಿಗೆ ಅಂಜುವ ಮನುಜ ಹರಿ ನೀನಾಗಲಿ ಬಲ್ಲ್ಯಾ ।
ಮರಳೆ ಕಣ್ಣಿಗೆ ನಿದ್ರೆ ಬರುವದು ಅರಿ ನೀನು ।
ಹರಿ ನಾನೆಂಬೊಂಥ ಪರಿ ಆವದು ತೋರೊ ।
ಥರವಲ್ಲ ನಿನಗಿದು ೧ ಕುರಿ ಹಿಂಗಾದೆ ।

---

೧ ಕುರಿ= ಯೋಚಿಸು, ಉದ್ದೇಸಿಸು.

ಪರಮ ದಯಾಳು ಗೋಪಾಲ ವಿಟ್ಠಲರೆಯಾ ।
ಸ್ವರಮಣ ಶ್ರುತಿಪಾದ್ಯಜರಾ ಮರಣರಹಿತ ॥ ೩ ॥

ಅಟ್ಟತಾಳ

ಹರಿ ದ್ರೋಹಿಗಳು ಜರಾಸಂಧ ಹಿರಣ್ಯಾಕ್ಷ ।
ದುರ್ಯೋಧನರೆಲ್ಲ ತೆರರೇನಾದರು ನೋಡು ।
ಹರಿಯ ಕೂಡ ಕರಿಯು ಮರಳಿ ವಕ್ಕರಿಸಲು ।
ಇರುವುದೊಂದು ಇನ್ನು ಧರಿಯಮೇಲೆ ತಾನೀಗ ।
ಬರಿದೆ ನೀನು ವ್ಯರ್ಥ ನಿರಯವ ಹೊಗಬೇಡ ।
ಹರಿಯನ್ನೆ ಭಜಿಸಿದವರ ಭಾಗ್ಯವ ನೋಡು ।
ಹರಿ ಸರ್ವೋತ್ತಮನೆಂದ ತರುಳ ಪ್ರಹಲ್ಲಾದಂಗೆ ।
ಸರ್ರನೆ ಹಿಗ್ಗುತ ತವುರ ಮನೆಯಾಗಿ ಪೊರೆದಾ ।
ಹರಿಭಕ್ತರಾದಂಥ ಕದಿರಾಜ ಧ್ರುವರಾಯ ।
ವರ ವಿಭೀಷಣ ಭೃಗು ಸುರಮುನಿ ನಾರದ ।
ಪರಿ ಪರಿಯಲ್ಲಿ ಇನ್ನು ಹರಿಯನ್ನೆ ಕೊಂಡಾಡಿ ।
ಸಿರಿ ಸಂಪತ್ತುಗಳುಳ್ಳ ಧೊರೆ ಆದರು ನೋಡೊ ।
ಹರಿಗೆ ಭೃತ್ಯನೆಂದು ಸ್ಮರಿಸಿದ ಮನುಜಂಗೆ ।
ಪರಗತಿ ಸಾಧನ ದೊರಕೊಂಬುವದು ಕಾಣೊ ।
ಹರಿಯು ನಾನು ಎಲ್ಲ ಸರಿಯೆಂದವರಗಿನ್ನು ।
ನರಕ ತಪ್ಪದು ಎಂದು ಶ್ರುತಿ ಸಾರುತಲಿದೆ ।
ಕರುಣಾಕರ ರಂಗ ಗೋಪಾಲ ವಿಟ್ಠಲನ್ನ ।
ಸ್ಮರಣೆ ಮಾತ್ರಲಿಂದ ದುರಿತ ದೂರಹದೊ ॥ ೪ ॥

ಆದಿ ತಾಳ

ಬಹಳ ಪರಿ ತಿಳಿಹೇಳಿದರನ್ನ ನಿನ್ನ ।
ಖೂಳ ಮತವ ಬಿಡಿ ಬಾಳಲಾರಿಯೊ ನೀನು ।
ಕಾಳರು ನಿನ್ನ ಯಮನಾಳು ಕಂಡರೆ ಇನ್ನು ।

ಸೀಳೋರು ಜಿಹ್ವೆಯ ಕೀಳೋರು ಕಣ್ಣನು ।
ಹೋಳು ಮಾಡೋರು ತಲೆ ಅಳಾಗದಂತೆ ನಿನ್ನ ।
ಹೂಳೋರು ಕ್ರಿಮಿಕೊಂಡದೊಳು ನಿನ್ನೊಯಿದು ।
ಕೇಳದೆ ಎನ್ನ ಮಾತು ಏಳಲ ಮಾಡಿದರೆ ।
ಹಾಳಾಗಿ ಹೋಗು ನಿನ್ನ ಕಾಲ ಮುಂದಾಗಿ ಬೇಗ ।
ಸೂಳೆ ಶೃಂಗಾರ ದೇಹ ವೇಳೆ ಮೀರಿದ ಮೇಲೆ ।
ಕಾಲ ಅರಘಳಿಗೆ ಇಳೆಯೊಳಿರದಿನ್ನು ।
ಘಾಳಿಯಂತಲಿ ತಿಂದು ಆಳೊಧೊರಿಗೆ ಸಮ ।
ನಾಳು ಎಂಬೊದು ಹೀಯಾಳಿತನವು ಏನೋ ।
ಗೋಳು ತಪ್ಪದು ನರಕ ಬೀಳೋದು ನೀ ಸತ್ಯ ।
ಘಾಳಿ ದೇಹವ ನೆಚ್ಚಿ ಖೂಳ ಕೆಡಲಿಬೇಡ ।
ಕಾಳಿ ಮರ್ದನ ರಂಗ ಗೋಪಾಲ ವಿಟ್ಠಲಂಗೆ ।
ಊಳಿಗನಾಗಿನ್ನು ಬಾಳೆಲೊ ಮನುಜ ॥ ೫ ॥

ಜತೆ

ಹರಿ ಸರ್ವೋತ್ತಮ ಮರುತರೆ ಗುರುವೆನ್ನು ।
ಸ್ವರೂಪ ಸುಖವ ಕೊಡುವ ಗೋಪಾಲ ವಿಟ್ಠಲ ॥ ೬ ॥

## ಸುಳಾದಿ ೩೭

ರಾಗ ಕಾಂಬೋದಿ ಧ್ರುವತಾಳ

ವೈರಾಗ್ಯ ಮಾರ್ಗ ಕೇಳು ದಾರಿದ್ರ ಮಾರ್ಗ ಕೀಳು ।
ಶ್ರೀರಾಮನ ಪಾದ ಆರಾಧಿಸುವದಕ್ಕೆ ।
ನಾರಿಯು ಧಾರುಣಿಯು ಧನವ ಬಿಟ್ಟರಾಯಿತೆ ।
ವೈರಾಗ್ಯವಲ್ಲ ಕಂಡ್ಯಾ ಧೀರರಿಗೆ ।
ಶಾರೀರಕೆ ಭಸುಮ ಪಾರವಾಗಿ ಧರಿಸಿ ।
ಚೀರ ವಸ್ತ್ರವನುಟ್ಟು ತಿರುಗಿದರೆ ।
ಆರಾದರು ಅವನ ಅವಧೂತನೆಂತೆಂದು ।

ಸಾರಿ ಸಾರಿಗೆ ಇನ್ನು ಕರೆವರಯ್ಯಾ ।
ವೈರಾಗ್ಯವೆಂಬುವಂಥ ವಾರುತಿ ಒಂದಲ್ಲದೆ ।
ನಾರಾಯಣಗೆ ಇದು ಪ್ರೀಯುವಲ್ಲ ।
ನಾರಿ ಸುತರುಗಳ ಶಾರೀರ ಸಂಬಂಧಿ ।
ಗಾರು ಎಂತೆಂದು ಅರಿದಿರಲಿಬೇಕು ।
ನೀರು ಪೊಳಗೆ ಇನ್ನು ಕನುಲವಿದ್ದಂತೆ ।
ಕಾರಣನಾಗಿ ಕಾರ್ಯವಿಲ್ಲದಲಿರಬೇಕು ।
ಮಾರ ಜನಕ ನಮ್ಮ ಗೋಪಾಲ ವಿಟ್ಠಲನು ।
ತೋರಿಕೊಟ್ಟ ವೈರಾಗ್ಯವನು ತೋರುವೆ ॥ ೧ ॥

ಮಟ್ಟತಾಳ

ಸ್ವಾಯೋಗ್ಯತೆಯೊಳಗೆ ಆಯಿತವಾದದ್ದು ।
ನೋಯದಲೆ ಉಣುತಲೆ ಈವದೆ ವೈರಾಗ್ಯ ।
ಸ್ನೇಹದಿ ಹರಿಕೊಟ್ಟ ಕರ್ತೃತ್ವವು ತನಗೆ ।
ನೀ ಇಲ್ಲದೆನ್ನಿಂದಾಗದು ಎನುತಲಿ ।
ತಾ ಇಪ್ಪುವದೆ ನ್ಯಾಯುದ ವೈರಾಗ್ಯ ।
ಆಯಾಸವು ಬಡದೆ ಪರರ ಶ್ರೀಯುಸ್ಸು ನೋಡಿ ।
ಶ್ರೀಯುರಸನಿತ್ತದೆಂಬದೆ ವೈರಾಗ್ಯ ।
ಮಾಯಾ ರಹಿತ ದೇವ ಗೋಪಾಲ ವಿಟ್ಠಲನ್ನ ।
ಪ್ರೀಯುದಿ ನೆಚ್ಚಿ ಅನ್ಯಕ್ಕೆರಗದ್ದೆ ವೈರಾಗ್ಯ ॥ ೨ ॥

ತ್ರಿವಿಡಿ ತಾಳ

ಧನವ ಪರಿತ್ಯಾಗವನು ಮಾಡಿದಡಾಯಿತೆ ।
ಘನವಾದ ವೈರಾಗ್ಯವಲ್ಲ ನೋಡಿ ।
ಧನವ ಬಿಟ್ಟಿರವೆ ದನಗಳು ಅನುದಿನ ।
ಘನವೇನು ಇವಕೆ ಅವಗೆ ನೋಡಲು ।
ಜನರ ಬಿಟ್ಟೇಕಾಂತವನು ಕುಳಿತಡಾಯಿತೆ ।

ಘನವಾದ ವೈರಾಗ್ಯವಲ್ಲ ನೋಡಿ |
ಜನರ ಬಿಟ್ಟರದೇನು ಅನುಗಾಲ ಗೂಗಿಯು |
ಘನವೆಂದು ಕರೆನರೆ ಜ್ಞಾನಿಗಳು |
ತನುಮನದಭಿಮಾನವನು ಬಿಟ್ಟರಾಯಿತೆ |
ಘನವಾದ ವೈರಾಗ್ಯವಲ್ಲ ನೋಡಿ |
ತನುಮಾನದಭಿಮಾನವನು ಬಿಟ್ಟು ಕುನ್ನಿತಾ |
ಮನೆ ಮನೆ ತಿರುಗದೆ ಅನುಗಾಲವೋ |
ಘನ ಮಹಿಮ ಚಲುವ ಗೋಪಾಲ ವಿಟ್ಠಲನ್ನ |
ನೆನೆದು ಸಕಲ ಸುಖದಿ ನಾ ವುಣವದೆ ವೈರಾಗ್ಯ || ೩ ||

ಅಟ್ಟ ತಾಳ

ರೋಗ ಭೋಗಂಗಳು ಅಗಲಿ ಈ ದೇಹಕ್ಕೆ |
ಯಾಗಂಗಳು ಮಾಡಿ ಹರಿಗೆ ಅರ್ಪಿಸಿ ಪರಿ |
ತ್ಯಾಗವ ಮಾಡದೆ ಸುಖ ದುಃಖವು ಸಮ |
ಭಾಗ ವೆರಡು ಹರಿಯಿಂದ ಆದುದು ಎಂದು |
ಭೋಗಿಸುತಿಪ್ಪುದೆ ವೈರಾಗ್ಯ ವೈರಾಗ್ಯ |
ಕಾಗಿಯಂತೆ ವೈಯ ಕರ್‍ರಗೆ ಮಾಡಿನ್ನು |
ರೋಗ ಬಂದೆಮ್ಮೆಯಂತೆ ನಾಮುವ ಬರಕೊಂಡು |
ಭೋಗದ ವಸ್ತುವು ಪರಿತ್ಯಾಗವು ಮಾಡಿನ್ನು |
ಆಗುವ ಕಾರ್ಯವು ಆಗುತಲಿರೆ ಅಂತ್ರ (ಅಂತರಂಗ) |
ಹಾಗೆ ಜನರು ಕಾಂಬ ಹಾಗೆವೆ ಬಾಹಿರ ವೈ |
ರಾಗವನು ಮಾಡೆ ವೈರಾಗ್ಯವಲ್ಲವು |
ನಾಗ ಶಯನ ಗೋಪಾಲ ವಿಟ್ಠಲ ಸಮ್ಮ |
ತಾಗಿ ಉಣಿಸೋದುಂಡು ಈಹದೆ ವೈರಾಗ್ಯ || ೪ ||

ಆದಿತಾಳ

ಧನವ ಕಟ್ಟಿದ ಚೀಲ ಧಾನ್ಯ ತುಂಬಿದ ಗೋಣಿ |
ಪುನಗು ಬೆಕ್ಕಿನಂತೆ ಪುಣ್ಯಾತ್ಮರಘದಂತೆ |

ನುಣ್ಣಗಿದ್ದ ಗೋಡಿಗೆ ಹರಳು ಹಚ್ಚಿದಂತೆ |
ಉಣುವ ಜಿಹ್ವೆಗೆ ಕೈ ಅನುಕೂಲವಾದಂತೆ |
ಮನಸಿಗೆ ಹರುಷವು ಮಾಧವ ಮಾಡಿದ್ದು |
ತನುವಿಗೆ ಸುಖವೆಂದು ತಿಳಿದು ಕೆಡದಲೇವೆ |
ಗುಣಿಸುತ್ತ ಅಲ್ಲಲ್ಲಿ ಗುಣಗಳು ಹರಿಯು |
ನೆನಿಸಿ ನೆನಿಸಿ ಅನುಭೋಗಿಸಿ ಆದದ್ದು |
ದಿನಗಳ ಕಳೆವದೆ ಘನ ವೈರಾಗ್ಯವೊ |
ಸನಕಾದಿಗಳೊಡಿಯು ಗೋಪಾಲ ವಿಟ್ಠಲನು |
ಇನಿತು ಪರಿಯಾಗಿದ್ದು ಪೊರೆವನೊ || ೫ ||

ಜತೆ

ಅರಿಯದೆ ವೈರಾಗ್ಯ ಹರಹಿಕೊಂಬದಕ್ಕಿಂತ |
ಅರಿತು ವೊರೆಯು ಹೋಗಿರೊ ಗೋಪಾಲ ವಿಟ್ಠಲನ್ನ || ೬ ||

## ಸುಳಾದಿ ೩೮

ರಾಗ ಕಾಂಬೋದಿ ಧ್ರುವತಾಳ

ಮಡಿ ಮಾಡಲಿ ಬೇಕು ಒಳ್ಳೆನಡತೆ ಕಲಿಯಬೇಕು |
ದೆಡಹಿ ಮುಗ್ಗುತ ನೀರ ಮಡುವಿನಲ್ಲಿಗೆ ಪೋಗಿ |
ಬುಡ ಗುಳ್ಳಿಯಂತೆ ಮಿಂದು ಗುಡು ಗುಡು ಗುಟ್ಟುತಲಿ |
ನಡುವೆ ಮಂತ್ರಂಗಳು ಕಡುವೇಗ ಪಟ್ಟೆನಾವು |
ಬಡದು ಮುದ್ರಿಯು ಪಚ್ಚಿ |
ಜಡ ದೇಹ ತೊಳೆದು ನಾ ಮಡಿವಂತ ನೆನಿಸುವೆ |
ಬಡಿವಾರ ತನದಲ್ಲಿ ಒಡಲೊಳು ಕಾಮಕ್ರೋಧ |
ಅಡಿಗಡಿಗೆ ಮಲಮೂತ್ರ ಜಡಿತ ರಕ್ತ ಮಾಂಸ |
ಕಡುಘೋರ ಇಂದ್ರಿಯಂಗಳು ಕೊಡದೊಳು ಮದ್ಯತುಂಬಿ |
ಮಡಕಿಗೆ ಮಾಲೆ ಹಾಕಿ ಜಡಿತವಾಗಿ ಪರಿಮಳ ದ್ರವ್ಯವುಪೂಸಿ|
ನಡುಬೀದಿಯೊಳಗಿಟ್ಟು ಬೆಡಗು ತೋರಿಸಿದಂತೆ |

ಮಡಿ ಮಾಡಿದರದು ಮಡಿ ಎನಿಸುವದೆ ಕಂಡ |
ಕಡೆಯಲ್ಲಿ ವ್ಯಾಪ್ತ ಗೋಪಾಲ ವಿಟ್ಠಲನೆಂದು |
ದೃಢವಾಗಿ ತಿಳಿದೊಂದು ನುಡಿ ಮಾತ್ರ ನುಡಿದವ
ಮಡಿವಂತ ಮಡಿವಂತನೊ || ೧ ||

ಮಟ್ಟತಾಳ

ಮಡುವಿನೊಳಗಿದ್ದ ಕರಿರಾಜನ ನೋಡು |
ದೃಢ ಛಲ ಭಕುತ ಪ್ರಲ್ಹಾದನ ನೋಡು |
ಅಡವಿಯೊಳಗೆ ನಡೆದ ಧ್ರುವರಾಯನ ನೋಡು |
ಪೊಡವಿಯ ಮೇಲೆ ದ್ರೌಪದಿಯ ದೃಷ್ಟಾಂತ ನೋಡು |
ಕಡುಪಾತಕಿಯಾದ ಅಜಮಿಳನ ನೋಡು |
ನಡುರಣದೊಳಗೆ ನುಡಿದ ನರನ ನೋಡು |
ಪ್ಡುಡನ ಭಾಗ್ಯವ ನೋಡು ಜಡೆನಾರದನ ನೋಡು |
ಎಡೆಯ ಕೊಂಡೋಡಿದ ಹನುಮಂತನ ನೋಡು |
ಕಡೆ ಮೊದಲಿಲ್ಲದ ಮುನಿಗಳನ ನೋಡು |
ಕಡಲಶಯನ ಗೋಪಾಲ ವಿಟ್ಠಲನ್ನ |
ನುಡಿದವರಲ್ಲದೆ ಮಡಿಮಾಡಿದವರಾರೊ | || ೨ ||

ತ್ರಿವಿಡಿ ತಾಳ

ಗುರು ಮುಖವಿರಬೇಕು ಹರಿದೈವವೆನಬೇಕು |
ಅರಿಗಳ ಗೆಲಬೇಕು ವರಜ್ಞಾನವಿರಬೇಕು |
ಪರಧನ ಪರಸತಿ ಉರಿಯಂತೆ ನೋಡಬೇಕು |
ಹರಿ ಕಥಾ ಶ್ರವಣವು ನಿರುತ ಕೇಳಲಿಬೇಕು |
ಹರಿಯರ ಚರಣಕ್ಕೆ ಎರಗಬೇಕಾವಾಗ |
ಪರ ಉಪಕಾರವು ಇರಬೇಕು ಪ್ರತಿಕ್ಷಣ |
ಹರಿ ಸಚ್ಚರಾಚರ ಪ್ರೇರಕನೆಂದರಿಯಬೇಕು |
ಪರಮೇಷ್ಠಿ ಶಿವ ಸುರರು ಹರಿ ಭೃತ್ಯರೆನಬೇಕು |

ಹರಿಗೆ ಜೀವಗೆ ಭೇದವೆಂದು ತಿಳಿಯಬೇಕು |
ಗುರು ಮಧ್ವಮತವೆ ಸಿದ್ಧಾಂತವೆಂದೆನಬೇಕು |
ಪರಮಾಣು ಸ್ಥೂಲದಿ ಹರಿವ್ಯಾಪ್ತನೆನಬೇಕು |
ಪರರು ತನ್ನವರು ಸಮರೆಂದೆನಲಿಬೇಕು |
ಹಿರಿದು ಹಿಗ್ಗದೆ ತಾ ಅಸ್ವತಂತ್ರನೆನಬೇಕು |
ಹರಿ ಸರ್ವ ಬಹಿರ ಅಂತರ ವ್ಯಾಪ್ತನೆನಬೇಕು ಈ |
ಪರಿ ತಿಳಿದಡ್ದೆ ಮಡಿ ಅವನೆ ಮುಕ್ತಿಯೋಗ್ಯ |
ಹರಿಯು ಪ್ರೇರಿಸದಿರೆ ಆವದಾಗದು ಒಂದು |
ಸಿರಿಯ ರಮಣ ಗೋಪಾಲ ವಿಟ್ಠಲ ನಿನ್ನ |
ಕರುಣಕ್ಕೆ ಪಾತ್ರನಾದವನೆ ಇದನರಿವಾ || ೩ ||

ಅಟ್ಟತಾಳ

ನಿತ್ಯ ಸಂಸಾರಿಗೆ ಅತ್ಯಂತ ದೂರವು |
ಮತ್ತೆ ದೈತ್ಯರಿಗೆ ಸ್ವಪ್ನದಲ್ಲಿ ನಾಸ್ತಿ |
ಸತ್ವ ಜೀವರಿಗೆ ಹರಿ ಕರುಣವ ಮಾಡಿ |
ತತ್ವಾಭಿಮಾನಿ ದೇವತೆಗಳಿಗೆ ಪೇಳಿ |
ಉತ್ತಮವಾದ ಕರ್ಮಗಳನೆ ಮಾಡಿಸಿ |
ಮತ್ತವರಲಿ ತಾನಿತ್ತು ಮಾಡಿಸಿದಫ |
ಕಿತ್ತಿ ಒಗೆದು ದೋಷ ಕಲಿಯಾಧೀನವ ಮಾಡಿ |
ಸತ್ಯ ಲೋಕಾಧಿಪನ ಕಲ್ಪಾಂತರದಲ್ಲಿ |
ಸತ್ವ ಜೀವರು ವಿರಜೆಯಲಿ ಬೊಮ್ಮನ ಸಹ |
ಮುಕ್ತಿನೈದುವರು ಶಕ್ತ್ಯಾನುಸಾರ ವಿಧ |
ಮುಕ್ತಿದಾಯಕ ಗೋಪಾಲ ವಿಟ್ಠಲ ನಿನ್ನ |
ಚಿತ್ತ ಬಂದಂತೆ ವಿಚಿತ್ರ ಚರಿತನೆ || ೪ ||

ಆದಿತಾಳ

ಎತ್ತ ಪೋದರೆ ಏನು ಎಲ್ಲಿ ನಿಂತರೆ ಏನು |
ಚಿತ್ತ ಬಂದಂತೆ ಜಿಗಿದಾಡಿದರೇನು |

ಚಿತ್ತದಲ್ಲಿ ಹರಿಯ ಕಾಂಬುವ ಭಕುತರಿಗೆ |
ಚಿತ್ತ ಬಂದಂತೆ ಬಂದಂತೆ ಸಂಚಾರವಯ್ಯಾ |
ಮತ್ತೆ ಇತರ ಜನರವರಿಗೆ ಸರಿಯೆ |
ಮತ್ತೆ ವ್ಯಾಘ್ರವ ನೋಡಿ ನರಿವ್ಯೆ ಸುಟ್ಟಿಕೊಂಡಂತೆ ನಿನ್ನ |
ಚಿತ್ತಕೆ ಬಂದವರಿಗೆ ಆರ ಗಣನೆ ಏನೋ |
ಉತ್ತಮೋತ್ತಮ ನಮ್ಮ ಗೋಪಾಲ ವಿಟ್ಠಲನ್ನ |
ಚಿತ್ತಾನುಸಾರ ನಡೆವನೆ ಧನ್ಯನೊ || ೫ ||

ಜತೆ

ಆವಾವ ಕರ್ಮಗಳು ದೇವಗರ್ಪಿತವೆಂದ |
ಜೀವರೇ ಧನ್ಯರೊ ಗೋಪಾಲ ವಿಟ್ಠಲ || ೬ ||

## ಸುಳಾದಿ ೩೯

ರಾಗ ರೇಗುಪ್ತಿ ಧ್ರುವ ತಾಳ

ಎನಗಿಂದುತ್ತಮರಿಲ್ಲವೆಂಬೊದೊಂದು ದೋಷ |
ಎನಗಿಂದ ನೀಚರೊಡ್ಡವನೆಂಬೊದೊಂದು ದೋಷ |
ತನಗಿಂದಧಿಕನ್ನ ಸಮಾನವೆಂಬೋದು ದೋಷ |
ತನ್ನಿಂದ ಭಿನ್ನ ವಸ್ತು ತನ್ನದೆಂಬೋದು ದೋಷ |
ತನಗೆ ತಾನರಿಯ ಅನ್ಯ ಬಲ್ಲೆನೆಂಬೊದು ದೋಷ |
ತನಗೆ ತಾ ತುತಿಸಿಕೊಂಡು ಧನ್ಯನೆಂಬೊದು ದೋಷ |
ತನಗೆ ಶಕುತಿ ಇದ್ದು ಕರ್ಮಬಿಟ್ಟು ಕೊಡುವದೆ ದೋಷ |
ತನಗಿಲ್ಲದ ಕರ್ತೃತ್ವ ತಾನು ಎಂಬೊದು ದೋಷ |
ಇನಿತು ದೋಷಂಗಳೆಲ್ಲ ಎಣಿಸಿದರಾಯಿತು ಇನ್ನು |
ತನಗೆ ಈಶಗೆ ಐಕ್ಯ ಪೇಳುವದದಕ್ಕಿಂತ ದೋಷ |
ಸನಕಾದಿಗಳ ಒಡೆಯ ಗೋಪಾಲ ವಿಟ್ಠಲನ್ನ |
ನೆನೆಸದಲಿದ್ದವಗೆ ದೊಡ್ಡದೋಷ || ೧ ||

ಮಟ್ಟತಾಳ

ಬ್ರೊಮ್ಮಾಂಡ ವ್ಯಾಪ್ತನ್ನ ಬಯಲು ಎಂಬೊದು ದೋಷ |
ಬ್ರೊಮ್ಮನ ಸೃಜ್ಜನ ಪುಟ್ಟಿದನೆಂಬೊದು ದೋಷ |
ಬ್ರೊಮ್ಮಾಂಡ ಸಂಹಾರಗೆ ಲಯ ಪೇಳ್ವದೆ ದೋಷ |
ಬ್ರೊಮ್ಮನ ಪಿತನಲ್ಲದೆ ಇನ್ನೊಂದೆಂಬೊದೆ ದೋಷ |
ಸುಮ್ಮನಸರ ಪ್ರೀಯ ಗೋಪಾಲ ವಿಟ್ಠಲಂಗೆ|
ಸಮ ಉಂಟೆಂಬವಗೆ ಸರಿಯಿಲ್ಲದ ದೋಷ ॥ ೨ ॥

ರೂಪಕತಾಳ

ಮಾಡಬೇಕು ಮಂದೆಲ್ಲ ಸಾರುತಿರಲು |
ಮಾಡದೆ ಇದ್ದದು ಮುಖ್ಯವಾದ ದೋಷ |
ಬೇಡಬೇಕೆಂದು ಜಗವೆಲ್ಲ ಪೇಳುತಿರಲು |
ಬೇಡದಲಿಪ್ಪದು ಅಗತ್ಯವಾದ ದೋಷ |
ನೋಡಬೇಕೆಂದು ಲೋಕವೆಲ್ಲ ಪೇಳುತಿರಲು |
ನೋಡದಲಿಪ್ಪೆಂದು ನೋವಾಗುವದೆ ದೋಷ |
ಕೂಡಿ ಆಡಿ ತನ್ನಲ್ಲಿ ಫಲವನರಿಯದೆ |
ನಾಡ ದೇವತಿಗಳಿಗೆ ಹಾರೈಸುವದೆ ದೋಷ |
ರೂಢಿಗೊಡಿಯ ನಮ್ಮ ಗೋಪಾಲ ವಿಟ್ಠಲನ್ನ |
ನೋಡಿ ಪೂಜಿಸದವಗೆ ನಿತ್ಯ ದೋಷ ॥ ೩ ॥

ಝಂಪೆತಾಳ

ಆವಾವನು ಈ ಜಗಕೆ ದೇವನೆಂದರಿಯದೆ |
ಆವನಿಂದ ಈ ಜಗಕೆ ಸೃಷ್ಟಿ ಎಂದರಿಯದೆ |
ಆವನಿಂದ ಈ ಜಗವು ಪಾಲಣೆಂದರಿಯದೆ |
ಆವನಿಂದೀ ಜಗವು ಲಯವು ಎಂದರಿಯದೆ |
ದೇವರಿಗೆ ಜೀವರಿಗೆ ವಿಲಕ್ಷಣರಿಯದ |
ಆವಾವನು ಕರ್ಮ ಅನಂತ ಮಾಡಿದರು |

ಆವನಿಗೆ ಅನಂತ ದೋಷಾಗಿ ತೋರುವದು |
ಆವ ಕರ್ಮವು ಕಡೆಯು ಗೆಲಿಸಲರಿಯುವು |
ಜೀವ ಜಡ ಭಿನ್ನ ಗೋಪಾಲ ವಿಟ್ಠಲರೇಯು |
ಆವನಿಗೆ ತಾ ಒಲಿವ ಅವನೆ ಅರಿವಾ | || ೪ ||

ತ್ರಿವಿಡಿ ತಾಳ

ಅನ್ಯ ದೈವರಿಯುದೆ ಅನ್ಯಕ್ಕೆ ಎರಗದೆ |
ತನ್ನನ್ನೆ ನೆರೆನಂಬಿ ಚಿಂತಿಪರ |
ತನ್ನವ ನೆಂತೆಂದು ತನ್ನ ತಿಳಿಸಿ ಕೊಟ್ಟು |
ಘನ್ನ ಪದವಿಗೇರಿಸಿನ್ನು ತಾ ಸಲಹುವ |
ಅನ್ಯ ಆಶೆಯು ಉಳ್ಳ ಜೀವರೆಲ್ಲರಿಗೆ |
ಅನ್ಯನಂತವರಿಗೆ ತೋರುತಿಪ್ಪ |
ತನ್ನವ ಅನ್ಯನೆಂಬ ವೈಷ್ಯಮ್ಯ ನೈರ್ಘಣ್ಯ |
ಇನ್ನಿಲ್ಲ ಇನ್ನಿಲ್ಲ ಈಶಗನ್ನು |
ಭಿನ್ನ ಜೀವರ ಗತಿ ಅರಿತು ಪಾಲಿಸುವನು |
ಇನ್ನೊಬ್ಬರಿಗೆ ಪೂರ್ಣ ಲಭ್ಯನಲ್ಲ |
ಘನ್ನ ಮಹಾ ಮಹಿಮ ಗೋಪಾಲ ವಿಟ್ಠಲ |
ತನ್ನ ತಿಳಿವರನು ತನ್ನವನೆಂತೆಂಬ || ೫ ||

ಅಟ್ಟ ತಾಳ

ಇವನಂತ ವಸ್ತುವು ಇಂದ್ರರೊಳಗೆ ಇಲ್ಲ |
ಇವನಂತ ವಸ್ತುವು ರುದ್ರಾದಿಯೊಳಗಿಲ್ಲ |
ಇವನಂತ ವಸ್ತುವು ಬೊಮ್ಮಾದಿಯೊಳಗಿಲ್ಲ |
ಇವನ ಸತಿಯುಳಾಗಿ ಸಿರಿದೇವಿ ವಾಲೈಸೆ |
ಅವರ ಪಾಡೇನಜ ಭವಾದಿಗಳಿವನ |
ನವವಿಧ ಭಕುತಿಂದ ಸೇವಿಸುತಿಪ್ಪರು |
ಭವನಾಶ ಭಯ ಹಾರಿ ಗೋಪಾಲ ವಿಟ್ಠಲ |
ಭುವನೆರಡೇಳಕ್ಕೆ ಒಡಿಯ ಕಾಣೋ || ೬ ||

ಆದಿತಾಳ

ಒಳಗುಂಟು ಹೊರಗಿಲ್ಲ ಒಳಗಿಲ್ಲ ಹೊರಗುಂಟು ।
ತಿಳಿಯದಿಪ್ಪನು ನಾನಾ ಸ್ಥಳದಿ ವ್ಯಾಪುತನಾಗಿ ।
ಬೆಳಕು ಕತ್ತಲು ಇನ್ನು ಸ್ಥಳ ಎರಡೆನ್ನದೆ ।
ಬಲು ಸುಂದರಾಂಗ ಸಂಥೊಳೆವುತಲಿಪ್ಪನು ।
ಸುಲಭ ಭಕುತರಿಗೆ ಗೋಪಾಲ ವಿಟ್ಠಲರೇಯ ।
ನೆಲೆಯಾಗುವನು ತನ್ನ ತಿಳಿದರ್ಚಿಪುವಗೆ ॥ ೭ ॥

ಜತೆ

ಹಿರಿದು ಕಾರ್ಯಕೆ ಇವನೆ ಕಿರಿದು ಕಾರ್ಯಕೆ ಇವನೆಂ ।
ದರಿದು ಭಜಿಸಿರೊ ಗೋಪಾಲ ವಿಟ್ಠಲ ಒಲಿವ ॥ ೮ ॥

## ಸುಳಾದಿ ೪೦

ರಾಗ ಭೈರವಿ ಧ್ರುವತಾಳ

ಹರಿಯ ಭಕುತನಾಗು ಹರುಷದಿಂದಲಿ ಇನ್ನು ।
ಹರಿಯನ್ನೆ ತಿಳಿಯೊ ಸರ್ವಂತರದಿ ।
ಧರಣಿ ಆಕಾಶ ಸಲಿಲಗಿರಿ ಅಗ್ನಿ ವಾಯುಮಿಕ್ಕ ।
ತರಣಿಯಲಿನ್ನು ಬಿಡದೆ ಹರಿಯು ಇಪ್ಪಾ ।
ಸ್ಥಿರವಾಗಿ ಅವರವರ ಗುಣ ಕರ್ಮಾದಿಗಳೆಲ್ಲ ।
ಹರಿಯೆ ವ್ಯಕುತಿ ಮಾಡಿಕೊಡುತಲಿಪ್ಪ ।
ಹರಿ ನಡದಂತೆ ನಡೆವದು ಈ ಜಗವೆಂದು ।
ಅರಿಯೊ ಮುಖ್ಯವಾಗಿ ಮನದೀಶಗೆ ।
ಸಿರಿ ಅಜ ಭವಾದ್ಯರು ಹರಿಗೆ ಪರಿವಾರವೆಂದು ।
ತರತಮ್ಯ ಮುಖ್ಯ ಮೂರುತಿಗಳಗುಣಿಸು ।
ಎರಡು ದಾರಿಯ ಮಾರ್ಗವನ್ನು ಯೋಚಿಸುತ್ತ ।
ಸ್ಥಿರ ಅಸ್ಥಿರ ಆವದೆಂದು ನೋಡು ।

ಸುರಯಾನ ಪಿತುರಯಾನ ಪರಿ ಪರಿ ಮಾರ್ಗ ಉಂಟು |
ಅರಿಯೊ ನಿನಗೆ ಮುಖ್ಯ ಸುರ ಮಾರ್ಗವು |
ಬರಿದೆ ಕರ್ಮಠ ಜನರು ಎರಗೊರು ಪಿತರಯಾನ |
ಸ್ಥಿರವಲ್ಲ ಆದರಿಂದ ದೊರೆತ ಫಲವು |
ಪರಮ ಜ್ಞಾನಿಗಳು ಪಥವ ಯ್ದೈದುವಂಥ ವಿ |
ವಿರವ ಪೇಳಲೇನು ಹರಿಯ ಪ್ರೇರಣೆಯಂತೆ |
ಪರಮ ದಯಾಳು ಶ್ರೀ ಗೋಪಾಲ ವಿಟ್ಠಲನ್ನ |
ಕರುಣ ಸಂಪಾದಿಸುವ ಭಕ್ತರಿಗೆ || ೧ ||

ಮಟ್ಟತಾಳ

ಏಕ ಪತ್ನಿವ್ರತವು ಜೋಕೆಯಿಂದಲಿ ಮಾಡು |
ಕಾಕು ಆಗದಿರು ಕಂಡನರಿಗೆಲ್ಲ |
ವ್ಯಾಕುಲವನು ಬಿಡು ವ್ಯಾಜ್ಯರಹಿತನಾಗು |
ಸ್ವೀಕರಿಸು ಇನ್ನು ಸಿದ್ಧವಾದುದನ್ನು |
ಬೇಕು ಎಂದೆನಿಸಿಕೊ ಭಕ್ತ ಜನರಿಗೆ |
ನೀಕರಿಸು ನೀಚ ವಿಷಯುಗಳೆಲ್ಲ |
ಪಾಕ ಶಾಸನ ವಿನುತ ಗೋಪಾಲ ವಿಟ್ಠಲ |
ಸಾಕುವನು ನಿನ್ನ ಸರ್ವಸ್ಥಳದಲಿದ್ದು || ೨ ||

ರೂಪಕ ತಾಳ

ಗುಪ್ತ ದರ್ಶನೆ ಮಾಡು ವ್ಯಾಪ್ತನಾದ ಹರಿಯ |
ಆಪ್ತರೊಳು ಕೂಡಿ ಆಲೋಚಿಸಿ |
ಶಪ್ತವ ಮಾಡು ಒಬ್ಬರ ಸಂಗವಲ್ಲೆಂದು |
ತಪ್ತ ಶೀತಕ್ಕಿನ್ನು ಸಮನು ಆಗು |
ಕ್ಲಿಪ್ತ ಬಿಡದು ಎಂದು ಸುಖ ದುಃಖಗಳನ್ನುಂಡು |
ತೃಪ್ತಿ ಬಡಿಸು ನಿನ್ನ ಮನದಿ ಹರಿಯ |

ಸಪ್ತತ್ರಯ ಕುಲ ನಿನ್ನದುದ್ಧಾರವಾಗೋದು
ಆಪ್ತವಾದ ತತ್ವ ಅರಿದುಕೊ ನೀ |
ಸುಪ್ತಿ ಜಾಗ್ರತಿ ಸ್ವಪ್ನಾವಸ್ಥಿ ಕರ್ಮ ನಿ |
ರ್ಲಿಪ್ತ ಮಾರ್ಗ ಹಿಡಿದು ಹರಿಗರ್ಪಿಸು |
ಸಪ್ತದ್ವಯ ಭುವನೇಶ ಗೋಪಾಲ ವಿಟ್ಠಲ |
ಕುಪ್ತರೋಳು ನಿನ್ನ ಕೂಡಿಸದಲೆ ಪೊರೆವಾ ||೩||

ಝಂಪೆತಾಳ

ದರಿದ್ರನೆನಿಸಿಕೋ ಭಿನ್ನ ವಿಷಯ ಉಂಬಲ್ಲಿ |
ಸಿರಿವಂತನೆನಿಸಿಕೋ ನಿನ್ನ ಸುಖ ನೀನುಂಡು |
ಹೊರಗಿನ ವಿಷಯಗಳ ಕಂಡು ಮೋಸ ಹೋಗದೆ |
ಎರಡು ನಿನಗೆ ಮುಖ್ಯ ವಿಷಯ ಶ್ರೀ ಹರಿಯೆಂದು |
ದೊರೆವದಕೆಮಗೆ ಈ ಸಾಧನೋಪಾಯ |
ಗುರುದ್ವಾರ ಪ್ರಸಾದವನ್ನು ಘಳಿಸು |
ಎರಡು ಗುಣ ನಿನ್ನಗಿಂದಧಿಕರ ಮೊದಲುಮಾಡಿ |
ಪರಮೇಷ್ಟಿ ಪರಿಯಂತ್ರ ತರತಮ್ಯಾನುಸಾರ |
ಅರಿದು ಅವರವರ ಪ್ರಸಾದ ಘಳಿಸಿ |
ದೊರೆವದು ನಿನಗೆ ಇದರಿಂದ ಸುಫಲವು |
ಪರಮ ದಯಾಳು ಸಿರಿಗೋಪಾಲ ವಿಟ್ಠಲನ್ನ |
ಚರಣ ಸಾಧಿಸುವರ್ಗೆ ಇದೆ ಇದೆ ಮಾರ್ಗ ||೪||

ತ್ರಿವಿಡಿತಾಳ

ಇಂದ್ರಿಗಳೆಂಬವು ನಿನ್ನ ಸುಖವು ಬಡಿಸು |
ಬಂದಿಲ್ಲ ನೋಡು ನೀಗೊಳಕ ಚಿಂತಿಸೆ |
ಅಂದ ಬಡಲಿ ಬೇಡ ಅಭಿಮಾನ ಮದದಿಂದ |
ಕುಂದು ಮಾಡೋದು ನಿನ್ನಾನಂದ ವ್ಯಕ್ತಿಗೆ ಇನ್ನು |
ಬಂದ ಬಂದಂತೆ ವಿಷಯಂಗಳಿಗೆಳೆದೊಯ್ದು |

ತಂದಪ್ಪವು ಪುನಹಾ ಜನನ ಮರಣಗಳು ।
ದ್ವಂದ್ವ ಜೀವರುಗಳು ಅಭಿಮಾನಿಗಳು ಆಗಿ ।
ಒಂದೊಂದು ಇಂದ್ರಿಯಲಿಪ್ಪವರು ।
ಚಂದದಿ ತ್ರಿವಿಧ ಜೀವರಗತಿ ಅರಿತು ಮು ।
ಕುಂದ ಕರ್ಮಗಳ ಮಾಡಿಸಿ ಫಲವನ್ನು ।
ತಂದೀವ ತತ್ವಾಭಿಮಾನಿಗಳಲ್ಲಿದ್ದು ।
ಇಂದಿರಾಪತಿ ನಿರ್ದೋಷನಾಗಿ ।
ಸಂದೇಹವಿಲ್ಲದೆ ಸರ್ವ ಉತ್ತಮ ಹರಿ ।
ಎಂದು ನಿನ್ನ ಮನದಿ ನಿಂದಿರಿಸು ।
ಇಂದ್ರಿ ನಿಯಾಮಕದೈವ ಗೋಪಾಲ ವಿಟ್ಠಲ ।
ಬಂಧಕ ತರಿದು ಭಕುತನೆಂದೆನಿಸುವಾ ॥ ೫ ॥

ಅಟ್ಟತಾಳ

ಯಾಚನೆಯನು ಮಾಡು ಊಚರಲ್ಲಿ ಪೋಗಿ ।
ಯೋಚಿಸಿ ಹರಿಯಲ್ಲಿ ಆಚಾರ ಮಾರ್ಗದಿ ।
ನೀಚ ಗತಿಗೆ ಕೈಯ ಚಾಚಿ ಕುಗ್ಗದೆ ಕಾ ।
ಲೋಚಿತವೆನ್ನದೆ ಸೂಚನೆ ಇಂದಲಿ ।
ನಾಚಿಕೆಯನು ಬಿಟ್ಟು ಬೀ(ನಾ) ಚದೆ ಅವರಲ್ಲಿ ।
ಆಚರಣೆಯು ಮಾಡುವಾಚಾ ವ ನಕಾಯಾ ।
ನೀಚ್ಯಾ ಸಂಗವೆಂಬ ಶೌಚಶುದ್ಧಿಯನ್ನು ।
ಊಚ ಸಂಗ ಉದಕ ಆಚಮನವು ಮಾಡು ।
ಶ್ರೀ ಚಕ್ರಧರನ ನೀ ವಿಚಾರಿಸುವ ತತ್ವ ।
ಯಾಚನೆಯನು ಮಾಡು ಭೂಚಕ್ರದೊಳಗೆಲ್ಲ ।
ಕೀಚಕಾರಿಗೀಶ ಗೋಪಾಲ ವಿಟ್ಠಲನ್ನಾ ।
ಲೋಚನೆ ಮಾಡನ್ಯ ಲೋಚನೆಯ ಬಿಟ್ಟು ॥ ೬ ॥

ಆದಿತಾಳ

ಧನದ ವಳಗೆ ಧನ ಹುಡುಕು ।
ಗುಣಗಳೊಳಗೆ ಗುಣಿಯ ಹುಡುಕು ।

ವಿನೆಯದೊಳಗೆ ವಿನಯ ಹುಡುಕು ।
ದಣಿವಿನೊಳಗೆ ಧಣಿಯ ಹುಡುಕು ।
ಎಣಿಸಿ ನಾನಾಗುಣ ಶಕುತಿಯು ಮನಸಿನಲಿ ।
ನೆನೆದು ನೆನೆದು ತನುವಿನಾಶಿ ತೊರೆದು ದುಷ್ಟ ।
ಗುಣ ಅಂಕುರ ವಣಗಿಸಿನ್ನು ।
ವನಜನಾಭನೆಂಬ ಸುಖ ಗುಣಾಂಬುಧಿಯ ಸ್ಮರಿಸಿ ।
ಗುಣ ತ್ರಯದ ಕರ್ಮಬೀಜವು ದಹನವ ಮಾಡು ಜ್ಞಾನದಿಂದ ।
ಘನಮಹಿಮ ಚಲುವ ಗೋಪಾಲ ವಿಟ್ಠಲನು ತನ್ನ ।
ನೆನೆದ ಹಾಗೆ ಎಲ್ಲ ನಿನ್ನ ಅನುಭವಕ್ಕೆ ಕಾಣಿಸುವ ॥ ೭ ॥

**ಜತೆ**

ಭಕುತ ಭಕುತನಾಗು ಶಕ್ತನಾನಲ್ಲವೆನ್ನು ।
ಮುಕ್ತಿದಾಯಕ ಗೋಪಾಲ ವಿಟ್ಠಲವೊಲಿವಾ ॥ ೮ ॥

## ಸರ್ವವ್ಯಾಪ್ತಿ ಸುಳಾದಿ ೪೧

ಈ ಸುಳಾದಿ ಜಾತಾಪರೋಕ್ಷಿಗಳಾದ ಭಾಗಣಿ ದಾಸರು ಅಂಕಿತಪೂರ್ವದಲ್ಲೆ ವೆಂಕಟಕೃಷ್ಣ ಅಂಕಿತದಿಂದ ಮಾಡಿದ್ದು.

ರಾಗ ಮಾರವಿ ಧ್ರುವತಾಳ

ಎಲ್ಲಿ ನೋಡಲು ನೀನಿಲ್ಲದ ಸ್ಥಳವಿಲ್ಲ ।
ಎಲ್ಲರಂತರ್ಯಾಮಿ ಎಲ್ಲ ಪೂರ್ಣನು ನೀನೆ ।
ಹುಲ್ಲು ಕಾಷ್ಟ ಅಚೇತನಗಳಲ್ಲಿ ನೀ ।
ನಿಲ್ಲದಿಲ್ಲವೆಂದು ಎಲ್ಲ ಸಾರುತಲಿದೆ ।
ಸಲ್ಲದ ಮನುಜ ನಿನಗೆ ತನಗೆ ಭೇದ ।
ವಿಲ್ಲವೆಂಬುವಾಗ ನೇ ನಂಬಿ ಹರಿಯೆ ಉ ।
ತ್ಪಲಾ ಕಮಲ ನೀರೊಳಗಿದ್ದು ಲೇಪನ ।
ವಿಲ್ಲದ ಸಾಮ್ಯ ಪೇಳುವುದಯ್ಯ ನಿಮಗೆ ।
ಎಲ್ಲಾರಲ್ಲಿ ನೀನು ಎಲ್ಲಾ ಆನಂದವಿತ್ತು ।

ಎಲ್ಲಾಕೆ ಭೇದ ಎಲ್ಲಾ ನಿರ್ಲೇಪ ।
ಚಿಲ್ಲರ ದೈವದ ಗಂಡ, ವೆಂಕಟಕೃಷ್ಣ ।
ನಿನ್ನ ಬಲ್ಲವ ಬಲ್ಲ, ಬಲ್ಲಾರು ಪೂರ್ಣವರಿಯ ॥ ೧ ॥

ಮಟ್ಟತಾಳ

ವಿಶ್ವತೋ ಮುಖ ನೀನೆ ವಿಶ್ವತೋ ಚಕ್ಷುನೀನೆ ।
ವಿಶ್ವತೋ ಬಾಹು ನೀನೆ ವಿಶ್ವಕರ್ನನು ನೀನೆ ।
ವಿಶ್ವತೋ ಶ್ರವಣನೆ ವಿಶ್ವಾಧಾರನೆ ।
ವಿಶ್ವ ವ್ಯಾಪಕ ಸರ್ವವಿಶ್ವ ಮಯನೆ ।
ವಿಶ್ವ ಕರ್ತೃತ್ವ ಮಹೇಶ್ವರಗುಂಟೆಂಬ ಆ ।
ವಿಶ್ವಾಸ ಘಾತಕಿಗೇನಂಬೇನು ಹರಿಯೆ ।
ವಿಶ್ವನಾಮಕ ಸಿರಿವೆಂಕಟ ಕೃಷ್ಣ ।
ವಿಶ್ವಾಸ ಕೊಡೊ ನಿನ್ನ ವಿಶ್ವ ಚರಣದಲಿ ॥ ೨ ॥

ತ್ರಿವಿಡಿ ತಾಳ

ಅಂಗುಟ ಮಾತುರ ಪರಿಮಾಣು ಮೂರುತಿ ನೀನೆ ।
ರಂಗಾ ಆತುಮ ಅಂತರಾತ್ಮ ಮೂರುತಿ ನೀನೆ ।
ಲಿಂಗ ದೇಹವು ಭಂಗವಾಗುವದಕ್ಕೆ ಸಾಧು ।
ಸಂಗಾದಿಂದಲ್ಲಿ ಸಾಧನಾಂತರದಲ್ಲಿ ।
ಶೃಂಗಾರದಿಂದಲಿ ಒಂದೆ ಜನ್ಮವುನಿಲ್ಲೆ ।
ಕಂಗಳಿಗೆ ಕಾಣಿಸಿಕೊಂಬ ಬಿಂಬ ಮೂರುತಿ ನೀನೆ ।
ಹಿಂಗದೆ ಮುಕ್ತಿ ಯೋಗ್ಯ ಜೀವಂಗಳು ಕರ್ಮ ಫ ।
ಲಂಗಳನುಭವಿಪ ವಾಸನಾ, ಮೂರುತಿ ನೀನೆ ।
ಲಿಂಗದೇಹವು ನಿತ್ಯಸಂಸಾರಿಗಳಿಗೆ ।
ಭಂಗವಿಲ್ಲದೆ ಸ್ವರ್ಗ ನರಕ ನೀಡುವವ ನೀನೆ ಉ ।
ತ್ತುಂಗ ಮಹಿಮನೆ ತಾಮಸ ಜನರಿಗೆ ದುಷ್ಕ—
ರ್ಮಂಗಳಮಾಡಿಸಿ ತಮಸ ನೀಯುವವ ನೀನೆ ।

ಗಂಗಾದಿ ತೀರ್ಥದಲ್ಲಿದ್ದು ಸುಜನರ ದೋ—
ಷಂಗಳ ಕಳೆವ ಮಂಗಳಾತ್ಮಕ ನೀನೆ ತು ।
ರಂಗ ವದನ ಸಿರಿ (ವೆಂಕಟ ಕೃಷ್ಣ) ಗೋಪಾಲವಿಠ್ಠಲ ವಿ ।
ಹಂಗವಾಹನ ನೀನೆ ಭುಜಂಗಶಯನನೆ ॥ ೩ ॥

ಅಟ್ಟತಾಳ

"ಅಥಃ ಪುರುಷೋಹ ವೈನಾರಾಯಣೋ ಕಾಮಯಂತಾ"
ಸಿರಿಯಲ್ಲಿ ನೀನೆ, ಪರಮೇಷ್ಠಿಯಲ್ಲಿ ನೀನೆ ।
ಮಾರುತವಾಣಿ ಭಾರತಿಯರಲ್ಲಿ ನೀನೆ ।
ಉರಗನಲ್ಲಿ ನೀನೆ ಗರುಡನಲ್ಲಿ ನೀನೆ ।
ಹರನಲ್ಲಿ ನೀನೆ ಸೌಪರಣಿಯಲ್ಲಿ ನೀನೆ ।
ಗಿರಿಪತಿಯ ಸುತಳಲ್ಲಿ ಪೂರ್ಣ ನೀನೆ ।
ಸುರಪತಿ ಕಾಮಾದಿ ಸುರರಲ್ಲಿ ನೀನೆ ।
ನಾರದ ತುಂಬುರ ಗಂಧರ್ವರಲ್ಲಿ ನೀನೆ ।
ಸುರ ಸಿದ್ಧ ಸಾಧ್ಯ ಕಿನ್ನರರಲ್ಲಿ ನೀನೆ ।
ಶರಧಿಯಲ್ಲಿ ನೀನೆ ಗಿರಿಗುಹ್ಯಗಳಲ್ಲಿ ।
ಕರೆದರೆ, ಓ ಎಂಬ ಪ್ರತಿಶಬ್ದ ನೀನೆ ।
ಪರುಶರಾಮನಾಗಿ ಪಾವಕನಲ್ಲಿ ನೀನೆ ಬಾ ।
ಹಿರಾ ಅಂತರದಶದಿಕ್ಕುಗಳಲಿ ।
ಪರಿಪೂರ್ಣವಾಗಿದ್ದ ಪರಮಾತ್ಮನು ನೀನೆ ।
ನೊರಜು ಗಜ ಸಿಂಹ ಶಾರ್ದೂಲ ಮೊದಲಾದ ।
ಸುರುವ ಜೀವರಲ್ಲಿ ಪರಿಪೂರ್ಣ ನೀನೆ ।
ಮುರ ಮಧು ಮಾಗಧ ಮೊದಲಾದ ಖಳರಲ್ಲಿ ।
ಕುರುಮಾನೆಂದು ದುಷ್ಕೃತ ಪ್ರೇರಕ ನೀನೆ ।
ಧುರವಿಕ್ರಮ ನಾಮನೆ ವೆಂಕಟಕೃಷ್ಣ ।
ದೂರಾದೂರಾನೆ ಅತಿದೂರತರನೆ ॥ ೪ ॥

ಆದಿತಾಳ

ನಿಗಮ ತಂದವನೀನೆ ನಗಧರನೀನೆ ।
ಜಗವನು ತಂದ ಅಸುರಾಂತಕ ನೀನೆ ।
ಮೃಗರೂಪ ನರರೂಪ ತಾಳಿದ ನರಸಿಂಹ ನೀನೆ ।
ಮಗುವಾಗಿ ಗಗನ ಮೀರಿದ ತ್ರಿವಿಕ್ರಮ ನೀನೆ ।
ಮಗನಾಗಿ ಮಾತೆ ಘಾತಿಸಿದ ಭಾರ್ಗವ ನೀನೆ ।
ಜಗವನರಿಯೆ ರಾವಣಾಂತಕ ನೀನೆ ।
ನಗುತ ಪೂಥಣಿ ಅಸುಪ್ಹೀರಿಶಗಟನೊದ್ದು ।
ಹಗೆ ಕಂಸನ ಕೊಂದ ಕೃಷ್ಣನೀನೆ ।
ಮೃಗಧರಗೊಲಿದು ಬತ್ತಲೆನಿಂದು ತ್ರಿಪುರವ ।
ಬಗಿದು ಮೆರೆವ ಬೌದ್ಧಾವತಾರನು ನೀನೆ ।
ಸೊಗಸಾಗಿ ಹಯನೇರಿದ ಕಲಿಕಿ ನೀನೆ ।
ಮಿಗೆ ಅನಂತಾನಂತ ಅವತಾರನೆ ।
ಜಗಜ್ಜನ್ಮಾದಿ ಕಾರಣನೆ ವೆಂಕಟಕೃಷ್ಣ ॥
ನಿಗಮಗೋಚರ ಅಘಶೂನ್ಯಪಾವನನೆ ॥ ೫ ॥

ಜತೆ

ಸರ್ವಾಧಾರನೆ ಸರ್ವನಿರ್ಲೇಪನೆ ।
ಸರ್ವದರ್ಶನ ನಾಮ ವೆಂಕಟ ಕೃಷ್ಣ ॥ ೬ ॥

ಶ್ರೀಗುರು ಮಧ್ವೇಶ ಶ್ರೀ ಕೃಷ್ಣಾರ್ಪಿತವು.

## ಜ್ಞಾನ ಸಾಧನ ಸುಳಾದಿ ೪೨

ರಾಗ ಭೈರವಿ ಧ್ರುವತಾಳ

ಅನಂತ ಜೀವ ಮುಕ್ತಿಯೋಗ್ಯರ ವೊಳಗೆಲ್ಲ ।
ಅನೊಬ್ಬ ನೀಚ ಚೇತನನು ಕಾಣೊ ।
ನೀನೆ ಬಲ್ಲೆಯ್ಯಾ ಸ್ವಾಮಿ ಎನ್ನ ಸ್ವರೂಪವನು ।
ನಾನಾ ಯೋನಿಗಳಲ್ಲಿ ಹಾಕುವನೆ ।

ಜ್ಞಾನ ಮುಂತಾದ ಜೀವರೆಲ್ಲರು ತಮ್ಮಗತಿ ।
ಅನೇಕ ಯೋನಿಗಳು ಐದಿ ಐದಿ ಮಾನವ ।
ಯೋನಿಯು ಮುಂತಾದ್ದೆಲ್ಲೆಲ್ಲಿ ಬಂದು ।
ನಾನಾ ಪರಿ ಸಾಧನಗಳು ಮಾಡಿ ಕಾಣಿಸಿಕೊಂಡು ।
ನಿನ್ನ ಆತ್ಮಾ(ತಮ್ಮಾ)ನಂದ ಸುಖವನು ಭುಂಜಿಸುವರು
ಅಂತ್ಯದಲ್ಲಿ
ಜ್ಞಾನ ಭಕ್ತಿ ಎಂಬೋದು ಎಲ್ಲ ಜೀವರಿಗೆ ಬೇಕು ।
ನ್ಯೂನ ಅಧಿಕ ತಾರತಮ್ಯವಾಗಿ ।
ನೀನೆ ಗತಿಯೊ ಸ್ವಾಮಿ ಇನ್ನು ಬರಲಿಲ್ಲವೆಂದು ।
ತಾನು ಇಹುವ ಜೀವ ಸಾಮಾನ್ಯನೆ ।
ಏನು ಎನಗೆನ್ನ ನಿನ್ನ ಮೂರ್ತಿವೆಂದರೆ ।
ತಾನು ಪುಟ್ಟುವದಯ್ಯಾ ಮಮತೆ ಮನಸಾ ।
ಪ್ರಾಣಿ ಒಬ್ಬ ಯಃಕಶ್ಚಿತ ತಿಳಿವದಕ್ಕೆ ನಿನ್ನ ।
ನಾನಾ ಭಕುತರ ಕರುಣ ಅವಗೆ ಬೇಕು ।
ಏನು ಫಳಿಸಿದರನ್ನ ಫಳಿಸುವ ಹರಿ ನಿನ್ನ ।
ಜ್ಞಾನ ದೊರಕುವದಿನ್ನು ಬಹು ದುರ್ಘಟಾ ।
ಜಾಣ ಚನ್ನಿಗರಾಯ ಗೋಪಾಲ ವಿಟ್ಠಲ ನಿನ್ನ ।
ಕಾಣುವದಕ್ಕೆ ಜ್ಞಾನ ಚೇತನ ಬೇಕೊ ॥ ೧ ॥

ಮಟ್ಟತಾಳ

ಶ್ರುತಿ ಓದಲಿಬೇಕು ಸ್ಮೃತಿ ತಿಳಿಯಲಿಬೇಕು ।
ಇತರಾರ್ಥಗಳೆಲ್ಲ ನಿರಾಕರಿಸಲಿಬೇಕು ।
ಮತ ಅಭಿಮಾನ ಬೇಕು ಜಪತಪವು ಬೇಕು ।
ಪ್ರತಿ ಪ್ರತಿ ಕ್ಷಣದಲ್ಲಿ ಹರಿಯ ಸ್ಮರಣೆ ಬೇಕು ।
ಪೃಥ್ವಿ ಉದಕ ವಾಯು ಅಗ್ನಿ ಆಕಾಶವು ।
ಇತರ ದಶೇಂದ್ರಿಯ ತನ್ಮಾತ್ರಗಳೈದು ।
ಚಿತಮನ ಅಹಂಕಾರ ಮಹತತ್ವವಿನ್ನು ।
ಚತುರವಿಂಶತಿ ತತ್ವತದಾಭಿಮಾನಿಗಳು ।

ಸತತ ಹರಿಯು ತಾನು ಸರ್ವದ್ವಾರದಿ ತನಗೆ ।
ಗತಿಗೆ ನಿಯಾಮಕನೆಂಬೋಸ್ಮೃತಿಬೇಕು ।
ಪತಿತಪಾವನ ಗೋಪಾಲ ವಿಠ್ಠಲ ಲಕ್ಷ್ಮೀ ।
ಪತಿ ಸರ್ವ ಸ್ಥಳದಿ ವ್ಯಾಪ್ತನೆಂದರಿಯಬೇಕು ॥ ೨ ॥

ರೂಪಕತಾಳ

ಮಾಡಬೇಕು ನಾನು ಮಾಡಿಲ್ಲ ವೆನಬೇಕು ।
ಆಡಬೇಕು ನಾನು ಆಡಿಲ್ಲವೆನಬೇಕು ।
ನೀಡಬೇಕು ನಾ ನೀಡಿಲ್ಲವೆನಬೇಕು ।
ನೋಡಬೇಕು ಕರ್ಮ ಮಾಡಿಸುವದು ತನಗೆ ।
ಬೇಡಿಕೊಂಬದಕಿನ್ನು ವಿಹಿತಾವಿಹಿತಗಳಿಗೆ ।
ಕೇಡು ಲಾಭಗಳಿಗೆ ಹಿಗ್ಗಿ ಕುಗ್ಗದಲೆ ।
ಓಡಿದರೆ ಬಹುಮುಂದಿ ವಿಷಯಕ್ಕೆ ನಾ ।
ಓಡಿದೇನೆಂತೆಂಬೊ ನೋಡು ಶ್ರುತಿ ಇರಲು ।
ಮಾಡಬೇಕಾದರೆ ಒಂದು ಕರ್ಮ ಎಲ್ಲ ।
ಕೂಡಿದರೆ ಆಗುವದೆಂದು ಅರಿದುಕೋ ।
ಪಾಡಿದವರ ಪ್ರಾಣಗೋಪಾಲವಿಠಲನ್ನ ।
ಮಾಡಿಪ್ಪ ಕರ್ಮ ಮುಖ್ಯವೆಂದರಿತುಬಾಳೊ ॥ ೩ ॥

ಝುಂಪೆತಾಳ

ಒಬ್ಬನ ಕರ್ಮ ಅನಂತ ಜನರ ಕರ್ಮ ।
ಒಬ್ಬನ ದೋಷಕ್ಕನಂತ ಜನರ ಸಹಾಯ ।
ಒಬ್ಬರ ಪುಣ್ಯಕ್ಕನಂತಜನರ ಸಹಾಯ ।
ಒಬ್ಬನ ಸೃಷ್ಟಿಗಾನಂತ ಜನರ ಸೃಷ್ಟಿ ।
ಒಬ್ಬನ ಬಂಧಾಲಯ ಎಲ್ಲರಿಗೂ ಬಂಧಾಲಯ ।
ಒಬ್ಬೊಬ್ಬರ ಗತಿ ಇನ್ನು ಬೇರೆ ಉಂಟು ಇನ್ನು ।
ಒಬ್ಬರ ಕರ್ಮಗಳಿಗೆ ಕಡೆಮೊದಲಿಲ್ಲ ।
ಅಬ್ಜ ಸಂಭವಪಿತ ಗೋಪಾಲವಿಟ್ಠಲ ।
ಜಬ್ಬರ ಮೂರ್ತಿ ಹೀಗೆ ಅರಿದವರಿಗೆ ಸಾಧ್ಯ ॥ ೪ ॥

ತ್ರಿವಿಡಿತಾಳ

ಜ್ಞಾನಉಳ್ಳವನಾಗಿ ಮಾಡಿದ ಪಾಪಕ್ಕೆ ।
ಜ್ಞಾನ ರಹಿತನಾಗಿ ಮಾಡಿದ ಪಾಪಕ್ಕೆ ।
ಏನು ಇದಕ್ಕೆ ಪ್ರಾಯಶ್ಚಿತ್ತವೆಂದರೆ ।
ಶ್ರೀನಿವಾಸನ ಸ್ಮರಣೆ ಮುಖ್ಯವಯ್ಯಾ ।
ನಾನೆಲ್ಲಿ ಕಾಣೆನೋ ಹರಿಯ ಸ್ಮರಣೆಯಿಂದ ।
ತಾನಾಗೋ ಸುಖಕ್ಕೆ ಇನ್ನೊಂದು ಕರ್ಮ ।
ಅನಂತಾನಂತ ಮಾಡಿದ ಕಾಲಕ್ಕೂ ।
ಪ್ರಾಣಿಗಳಿಗೆ ಸುಖ ದೊರೆಯದಿನ್ನು ।
ಏನಾದರು ಏನು ಸಕಲಕ್ಕೂ ಹರಿ ಮುಖ್ಯ ।
ತಾನು ತಾರಕನಾಗಬೇಕು ಮುಖ್ಯ ।
ದೀನ ಜನ ಬಂಧು ಗೋಪಾಲ ವಿಟ್ಠಲ ।
ಜ್ಞಾನಿಗಳಲ್ಲಿ ನಿತ್ಯವಾಸವಾಗಿಪ್ಪಬಿಡದೆ ॥ ೫ ॥

ಅಟ್ಟತಾಳ

ಭಯಭಕುತಿ ಕರ್ಮ ಅನಂತ ಮಾಡಲು ।
ಸವೆಯದ ಪದವಿಯು ದೊರಿಯದು ದೊರಿಯದು ।
ಜಯವು ಕೊಡದು ಅದು ತ್ರಯಲೋಕದೊಳಗಿನ್ನು ।
ಲಯವಾದ ಜ್ಞಾನ ಭಕುತಿ ಪುಟ್ಟಿಸದು ಅದು ।
ಪ್ರಿಯವಲ್ಲ ಆ ಕರ್ಮ ಮಾಡೆ ಹರಿಗೆ ಏನು ।
ಭಯವುಳ್ಳ ಸ್ಥಳದಲ್ಲಿ ಸುಯೋಗ್ಯನ ಮಾಳ್ಪ ।
ಭಯ ನಿವಾರಣ ಸ್ವಾಮಿ ಗೋಪಾಲ ವಿಟ್ಠಲ ।
ಭಯ ರಹಿತ ಮಾಳ್ಪಾ ಭಯ ಬಿಟ್ಟರ್ಚಿಸಲು ॥ ೬ ॥

ಆದಿತಾಳ

ನಿತ್ಯ ನೈಮಿತ್ಯಕ ಮತ್ತೆ ತೀರ್ಥ ಯಾತ್ರೆ ।
ಹೊತ್ತು ಅರಿತು ಅಗ್ನಿಹೋತ್ರ ಅತಿಥಿಯ ।
ಹೆತ್ತತಾಯಿ ತಂದೆ ಪೂಜೆಯು ನಾನಾ ।

ಶ್ರುತ್ಯರ್ಥಗಳಲ್ಲಿ ಹೇಳಿದ ಕರ್ಮವು ।
ನಿತ್ಯ ಮಾಡದೆ ಹೋದರೆ ಭಯವಿಂತೆಂದು ।
ನಿತ್ಯ ಮಾಡಿದರೇನು ಇಷ್ಟವೆ ದೊರಿಯದು ।
ಭಕ್ತಿಪೂರ್ವಕವಾಗಿ ಭಯ ರಹಿತನಾಗಿ ।
ಮತ್ತವರ ಕರ್ಮವ ಮಾಡಲು ।
ಹತ್ತಿ ಕೊಡುವ ಒಂದಾನಂತವಾಗಿ ।
ತುತ್ತು ಮಾಡಿದಂತೆ ಸಾಧನವೆಲ್ಲ ।
ಭಕ್ತವತ್ಸಲಸ್ವಾಮಿ ಗೋಪಾಲ ವಿಟ್ಠಲ ।
ಎತ್ತಲಾದರು ಏನು ಭಕ್ತಿಗೆ ಸಿಲುಕುವ ॥ ೭ ॥

ಜತೆ

ಜ್ಞಾನ ಭಕ್ತಿ ವಿರಕ್ತಿಯೇ ಸಾಧನ ।
(ಮೇಣು) ಇಲ್ಲದೆ ಇಲ್ಲ ಗೋಪಾಲ ವಿಟ್ಠಲ ॥ ೮ ॥

## ಸುಳಾದಿ ೪೩

ರಾಗ ಧ್ರುವತಾಳ

ಅನ್ಯಾತರವ ನೈಯಾ ಅಲ್ಪ ಅತ್ಯಂತ ನಿರುತ ।
ಕಾಣೆನಾ ಒಂದಾದರು ನಿನ್ನ ಹೊರತು ದೇವಾ ।
ರೇಣುಮಾತ್ರವಾದರು ನಿನ್ನ ಹೊರತು ।
ಜ್ಞಾನ ಅಜ್ಞಾನ ನಮಗೆ ಆಗುವದೆ ।
ನಾನೆ ಮಾತ್ರವು ಅಲ್ಲ ಸಿರಿ ಅಜಭವಾದಿಗಳು ।
ನೀ ನಡೆಸದಿರುವದು ನಿಶ್ಚೇಷ್ಟದಿ ।
ಅನಾದಿ ಕರ್ಮ ಬಂಧನಾಗಿ ಇಪ್ಪುವ ನಾನು ।
ಏನು ಬಲ್ಲೆನೋ ನಿನ್ನ ಮಹಿಮೆಯ ।
ಕಾಣೆ ನಾ ಒಂದಾದರು ನಿನ್ನ ಸ್ವಾತಂತ್ರ್ಯ ವಿನಹಾ ಮನದಿ ।
ನಾನೆ ಸ್ವಾತಂತ್ರನೆಂದು ಹಿಗ್ಗಿ ಹಿಗ್ಗಿ ।
ನಾನಾ ಯೋನಿಗಳಲ್ಲಿ ಜನಿಸಿ ಜನಿಸಿ ಬಂದು ।

ಏನು ಬಟ್ಟೆ ಭವಣೆ ನೀನರಿಯೆ ।
ಖೂನ ವರಿಯದಪ್ಪಂದೆ ಒಳಗಿದ್ದು ।
ನಾನಾ ಚೇಷ್ಟೆಗಳೆಲ್ಲ ನೀನೆ ಮಾಡಿ ।
ಪ್ರಾಣಿಗಳಿಗೆ ಸುಖ ದುಃಖವುಣಿಸಿ ಒಡನೆ ಇದ್ದು ।
ನೀನು ನಿರ್ಲಿಪ್ತನಾಗಿ ನಿತ್ಯವಾಗಿ ।
ಜಾಣ ಚನ್ನಿಗರಾಯ ಗೋಪಾಲ ವಿಟ್ಠಲ ।
ಕಾಣದೇ ನಿನ್ನ ನಾ ಬಲು ದಣಿದೆ ॥ ೧ ॥

ಮಟ್ಟತಾಳ

ದಾರಿದ್ರವೇ ಸಿರಿಯು ಸಿರಿಯೇ ದಾರಿದ್ರವು ।
ಆರೋಗ್ಯವೇ ರೋಗ ರೋಗವೆ ಆರೋಗ್ಯ ।
ಬಾರದೆ ಬಂದದ್ದು ಬಂದದ್ದೆ ಬಾರದ್ದು ।
ಸೇರದ್ದೆ ಸೇರಿದ್ದು ಸೇರಿದ್ದೆ ಸೇರದ್ದು ।
ತೋರದ್ದೆ ತೋರಿದ್ದು ತೋರಿದ್ದೆ ತೋರದ್ದು ।
ಕಾರಣ ಕಾರಣ ವಾರಣ ಎಲ್ಲವು ।
ನಾರಾಯಣನು ಒಲಿದ ನರನಿಗೆ ।
ಈರೀತಿ ಮಾಡಿ ಅನುಭವಕೆ ಇನ್ನು ।
ತೋರಿಗೊಡುತಲಿ ಕ್ಷಣಕ್ಷಣಕೆ ಬಿಡದೆ ।
ಈರೀತಿ ತಿಳಿಸಿದ್ದು ಒಳಹೊರಗೆ ।
ಭಾರ ಕರ್ತನಾಗಿ ಬಹುವ್ಯಾಪ್ತ ಸ್ವಾಮಿ ।
ಆರು ಇದರ ವಿವರ ಅರುವರೋ ಎನಗೆ ।
ಶ್ರೀರಮಣ ಚಲುವ ಗೋಪಾಲ ವಿಟ್ಠಲ ।
ತಾರದವನೆ ಕೆಟ್ಟ ಅನುಭವಕೆ ನಿನ್ನ ॥ ೨ ॥

ರೂಪಕತಾಳ

ಕಂಡದ್ದೆ ಕಾಣದ್ದು ಕಾಣದ್ದೆ ಕಂಡದ್ದು ।
ಉಂಡದ್ದೆ ಉಣ್ಣನೆ ಉಣ್ಣನು ಉಂಡದ್ದು ಮರುಳೆ ।
ದಂಡಣವೇ ಸುಖವು ಸುಖವೇ ದಂಡಣವು ।
ಕೆಂಡ ಶೀತವು ಸಮವು ಆಗುವದಲ್ಲದೆ ।

ಪುಂಡರೀಕಾಕ್ಷನ ಕಂಡ ಮೇಲಕ್ಕೆ ನಿನ್ನ ।
೧ಮುಂಡಿಯುವು ಬಾರದು ಮತ್ತೆ ಮನುಜಗೆ ।
ಪಾಂಡವ ಪ್ರಿಯ ಗೋಪಾಲ ವಿಟ್ಠಲರೇಯಾ ।
ಕಂಡದ್ದಲ್ಲದೆ ಪಾರ್ಥಗೊಲಿದ ಮಹಾ ಮಹಿಮ ॥ ೩ ॥

ಝಂಪೆತಾಳ

ಆರನುದ್ಧರಿಸುವೇನೆಂದು ಮನದಿ ಮಾಳ್ಪಿ ।
ತೋರಿಕೊಡುವುವೆ ಶಕಲ ಸಾಧನಗಳವಗೆ ।
ಬಾರದಿದ್ದರೆ ಮನಕೆ ಅವಗೆ ಚನ್ನಾಗಿ ನಿಜ ।
ಪ್ರೇರಿಸುವಿ ವಿಧಿಯು ವಿಹಿತಾ ಚರಣಗಳಿನ್ನು ।
ಬಾರಿ ಬಾರೀಗೆ ಸ್ಮೃತಿಯು ತಂದಿತ್ತು ।
ದೂರನೆ ಮಾಳ್ಪಿ ದುರಿತಗಳ ಅಪಾರ ಇದ್ದರನ್ನ ।
ಕ್ರೂರ ನರರಿಂದ ಒಂದು ಧರ್ಮವಾದರು ಇನ್ನು ।
ಪ್ರೇರಿಸಿ ಕೆಡಿಸೆ ಕೊಡುವಿ ಇನ್ನವರಿಗೆ ।
ಮಾರನಯ್ಯಾ ಚಲುವ ಗೋಪಾಲ ವಿಟ್ಠಲ ।
ಬಾರೊ ನಿನಗಿನ್ನು ಈಡಾರೋ ಪ್ರಭುವೆ ॥ ೪ ॥

ತ್ರಿವಿಡಿತಾಳ

ಯೋಚನ್ಯಾತಕ್ಕೆ ದೇವಾ ಎನ್ನಪೊರೆವದಕ್ಕೆ ।
ಸೂಚನಾ ತೋರಿ ಸುಮ್ಮನಾಗಲಿ ಬೇಡ ।
ನೀಚ ನಾನು ನಿತ್ಯದಲ್ಲಿ ನಿನ್ನ ಮರತು ।
ಯೋಚನೆ ಮಾಡುವೆ ಕಂಡವರ ।
ಚ್ಯಾಚಿ ಚ್ಯಾಚಿ ಕರಗಳು ಬೇಸತ್ತವು ।
ವಾಚ್ಯಾ ತುತಿಸಿ ವದನವೆಲ್ಲಕೆಟ್ಟಿತಯ್ಯಾ ।
ನಾಚಿಕೆಯಿಲ್ಲ ಇನ್ನೆ ಈ ಮನಸಿಗಿನ್ನು ।
ಮೋಚಕ ಮಾರ್ಗವು ಪಿಡಿಯುದಿನ್ನು ।
ಮೋಚಕ ಮಾರ್ಗವ ವಿಚಿತ್ರ ಮಹಿಮ ನೀ ।
ಯೋಚಿಸು ಎನಗಾಗಿ ಊಚಗತಿಯು ಸಾಧನದ ಮಾರ್ಗಕ್ಕೆ ।

೧ ವಾತಾದಿರೋಗದ-ವಿಸ್ಮರಣೆ.

ನೀಚ ವಿಷಯುಗಳಿಗೆ ನೀ ಎನ್ನ ಶಳದರೆ ।
ಯಾಚಕ ಎನ್ನಿಂದಲೇನಾಹದೋ ।
ಖೇಚರ ವಾಸಿನೀ ನೀಚಸಾವಾಸಿನಾ ।
ಆಚ್ಯಾರವೇನೋ ನೀ ಅರಿಯದಿದ್ದ ।
ಶ್ರೀ ಚಕ್ರಪಾಣಿ ಗೋಪಾಲ ವಿಟ್ಠಲ ಕೇಳೊ ।
ನೀಚ ಎಂದರೆ ಎನ್ನ ಪೊರೆವರಾರೋ || ೫ ||

ಅಟ್ಟತಾಳ

ನೀ ನೊಲಿಯಲು ಅಜ ಭವಾದಿಗಳು ವೊಲಿವರು ।
ನೀ ನೊಲಿಯಲು ಅಸುರರು ಎಲ್ಲ ಕರೆವರು ।
ನೀ ನೊಲಿಯಲು ಅವನಿಯರೆಲ್ಲವೊಲಿವರು ।
ನೀ ನೊಲಿಯಲು ಒಂದು ಬಾರದ್ದು ಎನಗಿಲ್ಲ ।
ದಿನವೆ ಒಂದು ಯುಗ ನಿನ್ನ ಕಾಣದ ।
ಘನ ಯುಗ ಒಂದಿನ ನಿನ್ನ ಕಾಣುವನಿಗೆ ।
ಕನಸೇ ಜಾಗ್ರವು ಮತ್ತೆ ಜಾಗ್ರವೇ ಕನಸಿನ್ನು ।
ಧನವೇ ನಿಧನವಯ್ಯಾ ಮನವೆರಗಿದವಗೆ ।
ನೆನೆದರೆ ಆಗೋದು ಸಕಲ ಸುಖವೆಲ್ಲ ।
ಇನಿತು ಇನಿತು ಎಂದು ವಿವರ ಪೇಳಲಿಸಲ್ಲ ।
ಧನ ವಸನವು ಪಶುವನಿತೆ ಸುತರು ಮತ್ತೆ ।
ತನು ಆರೋಗ್ಯ ತಂದೆ ಜನನಿ ಸಹಿತಿನ್ನು ।
ಇನಿತು ಸುಖವುಯೆಲ್ಲ ಏಕವಾಗಿದವಗೆ ।
ಇನಿತು ಸುಖವು ಉಂಟು ।
ಇನಿತು ಸದೃಶ್ಯ ಸ್ವಲ್ಪ ನೆನೆವ ಸುಖದ ಭೋಗ ।
ಅನುಭೋಗ್ಯನೆ ಬಲ್ಲ ಮನುಜನೇನು ಬಲ್ಲ ಮಂದಬುದ್ಧಿಯುವ ।
ಘನ ದಯಾನಿಧೆ ಗೋಪಾಲ ವಿಟ್ಠಲ ।
ನಿನಗೆ ನೀ ಕರುಣಿಸಿ ನಿನ್ನವರವನೆನ್ನೊ || ೬ ||

ಆದಿತಾಳ

ಸಾಧನವೆ ಸಾಧ್ಯಾ ಸಾಧ್ಯ ಸಾಧನವು ।
ಕ್ರೋಧವೆ ಭಕುತಿಯು ಭಕ್ತಿಯು ಕ್ರೋಧವು ।
ಆದಿಯು ಅಂತ್ಯವು ಅಂತ್ಯವೇ ಆದಿಯು ।
ಭೇದವೇ ಅಭೇದವು ಅಬೇಧವೇ ಭೇದವು ।
ನಾದದೊಳಗೆ ರೂಪ ರೂಪದೊಳಗೆ ನಾದಾ।
ಸ್ವಾದದೊಳಗೆ ಸ್ವಾದಸ್ವಾದದೆರೊಳಗೆಸ್ವಾದ ।
ಮಾಧುರ್ಯದೊಳಗೆಲ್ಲ ಮಾಧುರ್ಯ ವಸ್ತುವು ।
ಆದಿ ಮೂರುತಿ ದೇವ ನಿನ್ನನು ಭೋಗಿಸೆ ।
ಬಾಧೆ ಆವರು ತೋರರೊಂದಾದರವಗೆ ।
ಆದರಿಸುತ ಅಲ್ಲಿ ಇದ್ದ ಬಳಿಕ ಸ್ವಾಮಿ ।
ಕ್ರೋಧ ರಹಿತರಾಮ ಗೋಪಾಲವಿಟ್ಠಲ ।
ಹಾದಿ ತೋರಿಸು ಪಥ ಯಾವದು ಸಾಧನ ॥೭॥

ಜತೆ

ದಿನದಿನಕೆ ಅಭಿವೃದ್ಧಿ ಆಗಿ ನಿನ್ನಲಿ ಎನಗೆ ।
ಘನಜ್ಞಾನ ಭಕುತಿ ಕೊಡೊ ಗೋಪಾಲ ವಿಟ್ಠಲ ॥೮॥

## ಸುಳಾದಿ ೪೪

ರಾಗ ಧ್ರುವತಾಳ

ಕಚ್ಚಲೆನಗೆ ಕಾಮಕ್ರೋಧಗಳೆಂಬ ಕುನ್ನಿಗಳು ।
ಪೆಚ್ಚಿತಯ್ಯಾ ಮೋಹ ಮದವೆಂಬೊ ಮತ್ಸರವು ।
ಅಚ್ಚ ವಿಷಯಗಳೆಂಬೊ ಕಿಚ್ಚಿನೊಳಗೆ ಕೆಡಹಿ ।
ಹುಚ್ಚುಗೊಳಿಸುವದಯ್ಯಾ ಎಚ್ಚರಿಸದಲಿನ್ನು ।
ನಿಚ್ಚಳ ದಾರಿಯನು ಮುಚ್ಚಿಸಿ ಕಾಣದಂತೆ ।
ಮೆಚ್ಚು ಆಯಿತು ಮನವು ಕುತ್ಸಿತ ಭೋಗದಲ್ಲಿ ।
ಅಚ್ಯುತ ನಿನ್ನಪಾದ ಅರ್ಚಕರಾದವರು ।
ಬೆಚ್ಚಿಸಿದಡಾಯಿತೆ ಉಚಿತವೆ ನಿನಗೆ ।

ನೆಚ್ಚಿದವನ ಪರರ ಇಚ್ಛೈಸಿದರೆ ಎನ್ನ ।
ವಾಂಛ್ಯ ನಿನ್ನದೊ ಅಲ್ಲೊ ವತ್ಸಾಸುರ ಮರ್ದನ ।
ಕಿಚ್ಚಿನ ಗಡಿಗೆವ್ಯಾ ಹುಚ್ಚುವೋರೆಯು ಮರಿಗಿ ।
ಗಚ್ಚಿನ ಪ್ರೋತರಾಜ ರಚ್ಚ ಕಟ್ಟೆಯುಯೆಲ್ಲಿ ।
ಬಿಚ್ಚಾಳೆ ಪಲ್ಲಿ ಶಡವಿ ಬನದ ಶಂಕರಿಯುಃ ।
ಕಶ್ಚಿತ ದೇವತಿಗಳ ಇಚ್ಛೈಸಲಿಲ್ಲವಯ್ಯಾ ।
ಮತ್ಸ್ಯಕೂರ್ಮ ವರಹ ನಿಚ್ಚಳ ನಾರಸಿಂಹ ।
ಮೆಚ್ಚಿ ಭಕ್ತರ ಬಾಗಿಲು ಕಾಯ್ದ ತ್ರಿವಿಕ್ರಮ ।
ಹೆಚ್ಚಿನ ಪರಶು ಪಿಡಿದ ಭಾರ್ಗವ ದೇವೋತ್ತಮ ।
ಸಚ್ಚಿದಾನಂದ ರಾಮಾ ಕೃಷ್ಣಭೌದ್ಧ ಕಲ್ಕಿಯೆ ।
ಮತ್ಸ್ಯಾವತಾರ ಮೂಲ ರೂಪ ಐಕ್ಯನಾದ ।
ಸುಚ್ಚಿತ್ರ ಚರಿತ್ರ ಜ್ಞಾನಾನಂದ ಗುಣಪೂರ್ಣ ।
ಇಚ್ಛೆ ಮಾತ್ರದಿ ಜಗವ ಸೃಷ್ಟಿಸ್ಥಿತಿ ಲಯವ ಮಾಳ್ಪೆ ।
ಕಶ್ಯಪ ಸುತನಾದ ಭಕ್ತ ವತ್ಸಲದೇವಾ ।
ಮೆಚ್ಚಿದೆ ನಿಮ್ಮ ಪಾದ ಗೋಪಾಲ ವಿಟ್ಠಲ ।
ನುಚ್ಚು ಮಾಡಯ್ಯಾ ಕಾಮ ಕ್ರೋಧಗಳೆಂಬೊವು ಬೇಗ ॥ ೧ ॥

ಮಟ್ಟತಾಳ

ಅನಂತ ಸಾಧನೆಯೊಳು ಆನೊಂದುನಾನರಿಯೆ ।
ಅನಂತ ದೋಷಗಳು ಮುನ್ನಮುನ್ನ ಮಾಡಿದಲ್ಲದೆ ।
ಇನ್ನು ಅದೆ ಹಾದಿಗೆ ಎನ್ನನು ಶಳದೊಯಿದು ।
ಹುಣ್ಣು ಹುಣ್ಣನು ಮಾಡಿ ಎನ್ನಕೊಲ್ಲಿಸಿದರೆ ।
ಇನ್ನಾರಿಗೆ ಪೇಳುವೆ ಘನ್ನದಯಾನಿಧೆ ಎನ್ನಯುತ್ನವೇನು ।
ನಿನ್ನದಯಾ ರಸಕೆ ಚಿನ್ನನ ಬಾಯಿತೆರದು ।
ಚನ್ನಾಗಿ ಮಾತೆ ಮಣ್ಣು ಬೆಣ್ಣೆ ಸಮವನ್ನು ಮಾಡಿ ಉಣಿಸೆ ।
ಇನ್ನು ಅರಿಯುದವಳಾವನ್ನು ಒಂದೇ ರೂಪ ।
ಮುನ್ನಲೇನು ಆಗೋ ಪುಣ್ಯಪಾಪಂಗಳು ।
ನಿನ್ನ ಆಧಿನವು ಎನ್ನ ಫಲಾಫಲವು ನಿನ್ನ ಸಂಕಲ್ಪಕ್ಕೆ ।

ಇನ್ನು ನಾಶವೀಗಿಲ್ಲ ನಿನ್ನ ಇಚ್ಛೆ ಬಂದಂತೆ ಮಾಡೊರಂಗ ।
ಚಿನ್ಮಯ ಮೂರುತಿ ಗೋಪಾಲ ವಿಟ್ಠಲ ।
ಎನ್ನ ಮನೋಕಾರ್ಯವನ್ನೆ ನೀನೆ ಬಲ್ಲಿ ॥೨॥

ತ್ರಿಪುಟ ತಾಳ

ದೇವ ನಿನ್ನಲ್ಲಿ ದ್ವೇಷವ ಮಾಡುವನಿಗೆ ।
ಆವಕಾಲಕ್ಕೆ ದುಃಖ ಭೋಗವೆ ಸಾಕ್ಷಿ ।
ಕೋವಿದರು ನಿನ್ನಲಿ ಸ್ನೇಹ ಮಾಡುವರೀಗೊ ।
ಆವದಾದರು ಸುಖವ ತೋರುವದಯ್ಯಾ ।
ನೀ ಪೊಲಿದವರಿಗೆ ಆವಾಗ ಸ್ಮರಿಣೀಗೆ ।
ದೇವ ಇನ್ನು ಬಾಹುವದೆ ಸಾಕ್ಷಿಯು ।
ಆವ ದೇಶದಲ್ಲಿ ಅವ ದಿಕ್ಕಿನಲ್ಲಿ ಆವಾಪ ಜನರಲ್ಲಿ ।
ಆವ ಕಾರ್ಯಗಳಲ್ಲಿ ಯಾವತ್ತರಲ್ಲಿ ನೀ ವ್ಯಾಪಕನಾಗಿನ್ನು ।
ಆವಾವ ಬಗೆ ಕಾರ್ಯವ ಮಾಡಿಸುವಂಥ ।
ಭಾವನೆ ಒಂದೇ ತಿಳಿಸುವದು ।
ನಾ ಒಂದೊಲ್ಲೆನೊ ನಿನ್ನ ಸೇವೆ ಮಾತ್ರದಿನ್ನೀಯೊ ।
ಜೀವರಿಗೆ ಕರ್ಮವ ಅನುಭವವುಂಟು ।
ದೇವಾ ನೀ ನಿರ್ಲಿಪ್ತ ಆವಲ್ಲಿದ್ದರನ್ನ ।
ಆವಾವರಲ್ಲಿ ನೀ ಈಪ ವ್ಯಾಪ್ತವು ಇನ್ನು ।
ದೇವ ನಿನ್ನ ಗುಣಗಳೀವೆ ಮಣಿಗಳು ।
ಭಾವ ಶುದ್ಧರೀ ಜ್ಞಾನವೆಂಬೊ ತಂತಿಯಲಿ ।
ಆವಾಗ ಪೋಣಿಸುತಿರುವಂತೆ ಮಾಡೆನ್ನ ।
ನಾವೊಲ್ಲೆ ಇನ್ನೊಂದು ಈ ಉಪಾಯಕ್ಕಿನ್ನು ।
ಕೋವಿದರ ಮನೆ ದ್ವಾರವು ಕಾವಂತೆ ।
ಆ ಊಳಿಗನ್ನ ಮಾಡಿ ಆವಲ್ಯಾದರು ಇಡಿಸು ।
ದೇವಾದಿ ದೇವರೊಡಿಯ ಗೋಪಾಲ ವಿಟ್ಠಲ ।
ಕಾವುವಾತನೆ ನೀನು ಆವಲ್ಲಿದ್ದರೆನ್ನ ॥೩॥

### ಅಟ್ಟತಾಳ

ಅರಿಯದೆ ನಾ ಇನ್ನು ನರರ ಬೇಡಿದರೆ ।
ನರರಲ್ಲಿ ನೀ ಇನ್ನು ಪರಿಪೂರ್ಣನಲ್ಲವೆ ।
ಅರಿಯದೆ ಅನ್ಯ ದೇವರ ಭಜಿಸಿದರೆ ।
ಹರಿಯೆ ನೀ ಅಲ್ಲಿನ್ನು ಇರುವದು ಮಿಥ್ಯವೆ ।
ಇರವು ನೋಣ ಎಂಭತ್ತುನಾಲ್ಕು ಲಕ್ಷ ।
ಪರಿಜೀವರಲ್ಲಿ ಪರಿಪೂರ್ಣಮಯ ನೀನು ।
ಬರಿದೆ ನಮ್ಮನೇನು ಮರುಳುಗೊಳಿಸಬೇಡ ।
ಅರಿದು ನೋಡಲು ಸರ್ವರಂತರದಲ್ಲಿ ನೀನೆ ।
ಮರಳೆ ಆವಾವ ಜನಂಗಳಲಿ ಇನ್ನು ।
ಪರಿ ಪರಿ ಜೀವರಾಧಿಸಿದದೆಲ್ಲ ।
ಅರಿದು ಮನದೊಳು ಹರಿಯೆ ನಿನಗಿನ್ನು ।
ಕರವ ಮುಗಿದು ನಿಂದು ಭರದಿ ಅರ್ಪಿಸುವೆನೊ ।
ಕರುಣಾಕರ ರಂಗ ಗೋಪಾಲ ವಿಟ್ಠಲ ।
ಶರಣು ಹೊಕ್ಕೆನು ಕಾಯೊ ಬಿರಿದುಳ್ಳದೈವವೆ ॥೪॥

### ಆದಿತಾಳ

ಕ್ಷೀರ ಉಕ್ಕಿದರು ನೀರು ಎರೆವರಯ್ಯಾ ।
ನೀರು ಉಕ್ಕಲು ಹರಗೋಲು ಹಾಕುವರಿನ್ನು ।
ಈ ರೇಳು ಧರಿಯೊಲ್ಲ ಮೇರೆ ತಪ್ಪಿಬರಲು ।
ಸೇರಿಸುವರಾರೊ ಧಡಿಗೆ ಮಾರ ಜನಕನೀನೆ ।
ಭಾರಿ ಭಾರಿಗಿನ್ನು ಭಕ್ತರಿಗೆ ಬಂದ ದೋಷ ।
ಹಾರಿಸುವದಕಿನ್ನು ಕಾರಣ ಕರ್ತ ನೀನೆ ।
ಆರು ನಿನ್ನಂತೆ ಮತ್ತಾರು ಪೊರೆವರಿಲ್ಲ ।
ಕಾರುಣ್ಯ ಮೂರುತಿ ಕರಿರಾಜ ವರದರಂಗ ।
ಮಾರುತ ವಂದ್ಯ ಪಾದ ಗೋಪಾಲ ವಿಟ್ಠಲ ।
ಅರಿಷಡ್ವರ್ಗಗಳ ದೂರ ಮಾಡೈಯ್ಯ ಬೇಗ ॥೫॥

ಜತೆ

ಪರಿಮಿತಿ ಇಲ್ಲದ ದುರಿತ ದೋಷವನಕೆ |
ಪರಶು ನಿನ್ನ ನಾಮ ಗೋಪಾಲ ವಿಟ್ಠಲ ||೬||

## ಸುಳಾದಿ ೪೫

ರಾಗ ಧ್ರುವತಾಳ

ಚಿನುಮಯ ಮೂರುತಿ ಚಿತ್ರವಿಚಿತ್ರನೆ |
ಘನ ಮಹಿಮ ಗಂಭೀರಕೀರ್ತಿ ದೋಷ ದೂರ |
ಅನಿಮಿತ್ತ ಬಂಧು ದ್ರೌಪದಿ ಮಾನದೊಡಿಯ |
ಗುಣಗಣಭರಿತ ಸೃಷ್ಟ್ಯಾದಷ್ಟಕರ್ತನೆ |
ಸನಕಾದಿಗಳೊಡಿಯ ಜ್ಞಾನಾನಂದ ಪೂರ್ಣ |
ದಿನಕರ ಶತತೇಜ ದೀನಜನರ ಪಾಲ |
ದನುಜ ಮರ್ದನರಂಗ ಧರ್ಮಜನುತ ಪಾಲ |
ತನು ಮನದೊಡಿಯ ಏ ತಾತ ಭಕ್ತವತ್ಸಲ |
ಅಣೋ ರಣಿಯಾನ್ ಎಂಬೋ ಶ್ರುತಿ ಪಾದ್ಯ ಅಪ್ರಾಕೃತ |
ಜನನ ಮರಣ ರಹಿತ ಜಾನಕಿ ರಮಣನೆ |
ಕೊನೆಗಾಣರು ನಿನ್ನ ಗುಣ ಎಣಿಸಿ ಅಜಭವರು |
ಇನಿತು ವರ್ಣಿಸೆ ನಿನ್ನ ಎನಗಳವಲ್ಲವು |
ನಿನಗೆ ನೀ ಕರುಣಿಸಿ ನಿನ್ನ ಭಕ್ತರನ್ನ |
ಘನತೆ ಮಾಡುವೆ ಎಣೆಯಾರು ನಿನಗಿನ್ನು |
ದಿನಕರ ಶಶಿಗಳು ನಿನ್ನ ಆಜ್ಞೆಯಿಂದ |
ದಿನವ ಚರಿಸುತಲಿ ನಿನ್ನ ಸೇವಿಸುವರೋ |
ನಿನಗೆ ಸಮವಸ್ತು ಇಲ್ಲ ಗೋಪಾಲ ವಿಟ್ಠಲ |
ನಿನಗೊಬ್ಬರು ಸಮರಿಲ್ಲ ಸರ್ವೋತ್ತಮ || ೧ ||

ಮಟ್ಟತಾಳ

ಭಕ್ತವತ್ಸಲ ನೀನೆಂಬೊವದಕ್ಕಿನ್ನು |
ಭಕ್ತರು ಕರಿಯೆ ಬಂದೊದಗೋದೆಸತ್ಯ, |
ಸಕಲ ದೋಷ ದೂರ ನೀನೆಂಬುವದಕ್ಕಿನ್ನು |

ಸಕಲದೋಷಿ ಅಜಮಿಳನ ಕಾಯ್ವದೆ ಸತ್ಯ |
ಸಕಲ ಜ್ಞಾನ ಭರಿತ ನೀನೆಂಬುವದಕ್ಕೆ |
ಭಕ್ತ ವಾಲ್ಮೀಕನ್ನ ಉಕುತಿನಿತ್ತದ್ದೆ ಸತ್ಯ |
ಸಕಲ ಸಮರ್ಥನು ನೀನೆಂಬುವದಕ್ಕೆ |
ಭಕ್ತ ಕುಬ್ಜಿಯನ್ನ ಚಕಿತ ಮಾಡಿದ್ದೆ ಸತ್ಯ |
ಸಕಲ ಸುಖ ಪೂರ್ಣ ನೀನೆಂಬುವದಕ್ಕೆ |
ಸಕಲ ಪದಾರ್ಥದಿ ಸಾರ ತೋರೋದೆ ಸತ್ಯ |
ಲಕುಮಿ ರಮಣ ನಮ್ಮ ಗೋಪಾಲ ವಿಟ್ಠಲ |
ಭಕ್ತರಿಚ್ಛೆಯುಗಾರಾ ಭಕ್ತರ ಮಾನದೊಡಿಯಾ | ॥ ೨ ॥

ತ್ರಿವಿಡಿತಾಳ

ಇನ್ನಾವ ಜನ್ಮದ ಎನ್ನ ಸಾಧನಿಯೊ |
ಇನ್ನಾವ ಜನ್ಮದ ಸಜ್ಜನ ಸಂಗತಿಯೊ |
ಇನ್ನಾವ ಜನ್ಮದ ಶ್ರವಣ ಮನನದ ಫಲವೊ |
ಇನ್ನಾವ ಜನುಮದ ದಾನ ಧರ್ಮದ ಫಲವೊ |
ಇನ್ನು ನಿನ್ನನು ಏನು ಅರಿಯದಲಿದ್ದೆನ್ನ |
ಘನ್ನ ಮಾಡಿನ್ನ ಅರಿದು ನಿನ್ನಪಾದ ಸುಖವನ್ನು ಸೇವಿಸುವ |
ಚನ್ನದಾಸರ ಮನೆ ಕುನ್ನಿ ಎನಿಸಿ ಎನ್ನ |
ನಿನ್ನ ಅಂಕಿತವಿತ್ತೆ ನಿನ್ನ ಕರುಣರಸಕ್ಕಿನ್ನು ಸರಿ ಉಂಟೆ |
ಎನ್ನಪ್ಪ ಎನ್ನಯ್ಯ ಎನ್ನ ಸಾಕುವ ಧೊರಿಯೆ |
ನಿನ್ನ ಪಾದದ ಮೇಲೆ ಎನ್ನ ಶರೀರವನ್ನು ನಿವಾಳಿಸೆ |
ಇನ್ನು ಬಿಡುವೆನಯ್ಯಾ ನಿನ್ನಂತೆ ಸಾಕುವರಿನ್ನೊಬ್ಬರಿಲ್ಲವೊ |
ನಿನ್ನ ತೊತ್ತಿಗೆ ತೊತ್ತು ತೋಂಡನಾನಾಗುವೆ |
ಇನ್ನುಆಜನು ನಿನ್ನನಾಮ ಬಲದಮೇಲೆ ನಿನ್ನತೊತ್ತುಕೊಂಬೆ |
ಅನ್ಯರನಲ್ಲಾಳು ಅನ್ನಭಕ್ಷವುಳ್ಳವಮನೆಯಿಂದಯಬ್ಬಿಟ್ಟೆ |
ಕಣ್ಣೆಯ ಕಟ್ಟೊರಮನೆಯ ಹೊಗಿಸಬೇಡ |
ನಿನ್ನ ಪಾದವನಂಬೆ ಅನ್ಯರಿಗಿತ್ತರೆ |
ನೆನ್ನದೆ ಬರಿದಿನ್ನು ಎನ್ನದೇನಾಯಿತು |

ಪುಣ್ಯೋತ್ತಮ ನಮ್ಮ ಗೋಪಾಲ ವಿಟ್ಠಲರೇಯ |
ಬೆನ್ನು ಬಿದ್ದೆನೊ ಬಲು ಬಣ್ಣಗೆಟ್ಟಿತೊತ್ತು || ೩ ||

ಅಟ್ಟತಾಳ

ಭೂತ ಹತ್ತಿದ ವಯಾತ್ಯಾತರೊಳಗಿನ್ನು |
ನೀತವರಿಯದಲೆ ತಾ ತಿರುಗಿದಂತೆ |
ನಾತ ಹತ್ತಿದ ಶ್ವಾನ ಜೋತು ಮುಖವು ಇರೆ |
ಪಥ ಬೀಡೆನ್ನ ಮಾತು ಕೇಳುವದೆ |
ವಾತಜಾತನ ಪ್ರೀತಿ ನಿನ್ನಲ್ಲಿ ಶಾಶ್ವಿತ ವಾದವ ನಿನ್ನ |
ಆ ತೆರದಿ ಬಿಡುವೇನೆ ಕೌತುಕವಲ್ಲವುನೋವಾಕ್ಯಾಯುದಿ ಮಾಡಿಪ್ಪ |
ದಾತರದಾತ ಎನ್ನುತ್ತಮ ಮೂರುತಿ |
ಈ ತೆರದಿ ನೀ ಪ್ರೇರಕನಾಗಿ ಅನ್ಯಥಕ್ಕೆರಗೀಸುವದು |
ನೀತವಲ್ಲವೊ ದೇವ ಬಾತೀಗೆ ಒರದಿನ್ನ್ಯಾತಕ್ಕೆ ಜನ್ಮವು |
ತಾ ತೆಗೆದಕೊದನ್ನ ಈ ದೇಹ ನಿನ್ನಲ್ಲಿ |
ಪ್ರೀತಿ ಒಂದಿದ್ದರಾಯಿತೆ ಸಾಕು ಶಾ |
ಶ್ವಿತ ದೈವವೆ ಗೋಪಾಲ ವಿಟ್ಠಲ |
ಸೋತೇನೊ ವಿಷಯದ ಯಾತನೇ ಬಿಡಿಸೊ ||೪||

ಆದಿತಾಳ

ನಿನ್ನಲ್ಲಿ ಭಕುತಿಯು ಇನ್ನು ನಿಯ್ಯದಲೇವೆ |
ಅನಂತ ಭಾಗ್ಯವು ನಿತ್ತರೆ ನಾನೊಲ್ಲೆನೊ |
ನಿನ್ನಲ್ಲಿ ಭಕುತಿಯು ಚನ್ನಾಗಿ ಇತ್ತಿನ್ನು |
ಅನ್ಯರಿಲ್ಲದ ಅರಣ್ಯದೊಳಿಡುಲೇಸು |
ಮನ್ನಣೆ ಮಾಡಿಸು ನಿನ್ನ ಬಲ್ಲವರಿಂದ |
ಮನ್ನಣೆ ಆನೊಲ್ಲೆ ನಿನ್ನರಿಯದವರಿಂದ |
ಹೊನ್ನು ಹೆಣ್ಣು ಮಣ್ಣು ಸಮವು ಮಾಡಿದಂಥ |
ಪುಣ್ಯಾತ್ಮರ ಮನೆಯ ಕುನ್ನಿ ಎಂದೆನಿಸು |
ಪನ್ನಗ ಶಯನ ಗೋಪಾಲ ವಿಟ್ಠಲರೇಯ |
ನಿನ್ನನಾ ಬಿಡೆನಯ್ಯಾ ಅನಂತ ಕಾಲದಲ್ಲಿ ||೫||

ಜತೆ

ಅನಂತ ಜನ್ಮಕ್ಕೆ ಅನಂತ ಮೂರ್ತಿಗೂ |
ಅನಂತ ನೀನೆಗತಿ ಗೋಪಾಲ ವಿಟ್ಠಲಾ ||೬||

## ಸುಳಾದಿ ೪೭

ರಾಗ ಧ್ರುವತಾಳ

ಸಿರಿದೇವಿ ಅರಸನೆ ಶ್ರೀ ಕೃಷ್ಣ ನಮೊ ನಮೊ |
ಸರಸಿಜಾಸನ ಪಿತ ನಿನಗೆ ನಮೊ |
ಹರನಂತರ್ಗತ ಮೂರ್ತಿ ಸಂಕರ್ಷಣನೆ ನಮೊ |
ಪುರಹೂತ ಪಾಲಕ ಉಪೇಂದ್ರ ನಮೊನಮೊ |
ತರಣಿಯಂತರ್ಗತ ಶ್ರೀ ನಾರಾಯಣನೆ ನಮೊ |
ವರ ಶಶಿ ಅಂತರ್ಗತ ದಧಿವಾಮನ ನಮೊ |
ಸಿರಿ ಭಾಗೀರಥಿ ಪೆತ್ತ ವಾಸುದೇವನೆ ನಮೊ |
ಸುರರ ಭೂಸರ ರೊಡೆಯ ಶ್ರೀ ಹರಿ ನಮೊ ನಮೊ |
ಕರುಣಾಕರ ರಂಗ ಗೋಪಾಲ ವಿಟ್ಠಲ ನಿನ್ನ |
ಪರಿವಾರ ಮೂರ್ತಿಗಳಿಗೆ ನಮೊ ನಮೊ ನಮೊ ಎಂಬೆ ||೧||

ಮಟ್ಟತಾಳ

ಜನನಿ ಎಂದು ಒಮ್ಮೆ ಕರೆವೆ ಆನಯ್ಯಾ ನಿನ್ನ |
ಜನಕನೆಂದು ಒಮ್ಮೆ ಕರೆವೆನಯ್ಯಾ |
ನಿನ್ನ ಭ್ರಾತೃನೆಂದು ಒಮ್ಮೆ ಕರೆವೆನಯ್ಯಾ |
ನಿನ್ನ ಸೋದರನೆಂದು ಒಮ್ಮೆ ಕರೆವೆನಯ್ಯಾ |
ನಿನ್ನ ಬಂಧುನೆಂದು ಒಮ್ಮೆ ಕರವೆನಯ್ಯಾ |
ನಿನ್ನ ದಾತನೆಂದು ಒಮ್ಮೆ ಕರೆವೆನಯ್ಯಾ |
ಎನ್ನ ಇಷ್ಟದೈವ ಗೋಪಾಲ ವಿಟ್ಠಲ |
ನಿನ್ನನ್ನು ಎನ್ನವಯವಗಳಿಗೆ ನೆನೆವೆ ||೨||

ರೂಪಕತಾಳ

ನಿನ್ನ ನ್ನೇವೆ ಎನ್ನ ಶಿರಸು ಎಂದು ಕರೆವೆ |
ನಿನ್ನ ನ್ನೇವೆ ಎನ್ನ ನಯನವೆಂದು ಕರೆವೆ |

ನಿನ್ನ ನ್ನೇವೆ ಎನ್ನ ಕರ್ಣವೆಂದು ಕರೆವೆ ।
ನಿನ್ನನ್ನೇವೆ ಎನ್ನ ನಾಶಿಕವೆಂದು ಕರೆವೆ ।
ನಿನ್ನ ನ್ನೇವೆ ಎನ್ನ ವದನಾ ಎಂದು ಕರೆವೆ ।
ನಿನ್ನ ನ್ನೇವೆ ಎನ್ನ ಜಿಹ್ವೆ ಎಂದು ಕರೆವೆ ।
ನಿನ್ನ ನ್ನೇವೆ ಎನ್ನ ಭುಜವು ಎಂದು ಕರೆವೆ ।
ನಿನ್ನ ನ್ನೇವೆ ಎನ್ನ ಬಾಹು ಎಂದು ಕರೆವೆ ।
ನಿನ್ನ ನ್ನೇವೆ ಎನ್ನ ಕರಗಳೆಂದು ಕರೆವೆ ।
ನಿನ್ನ ನ್ನೇವೆ ಎನ್ನ ಹೃದಯು ಎಂದು ಕರೆವೆ ।
ನಿನ್ನ ನ್ನೇವೆ ಎನ್ನ ಊರು ಜಾನು ಎಂದು ಕರೆವೆ ।
ನಿನ್ನ ನ್ನೇವೆ ಎನ್ನ ಪಾದಾವೆಂದು ಕರೆವೆ।
ನಿನ್ನನ್ನೇವೆ ಎನ್ನ ಸರ್ವವ್ಯಾಪಕನೆಂದು ।
ಬಣ್ಣಿಸಿ ಬಗೆ ಒಗೆಯುಲಿ ನಾ ತಿಳಿಯುವೆ ।
ಚಿನ್ಮಯ ಮೂರುತಿ ಗೋಪಾಲ ವಿಟ್ಠಲ ।
ನಿನ್ನನ್ನು ಎನ್ನವಯವಂಗಳಲ್ಲಿ ನೆನೆವೆ ।
ನಿನ್ನವರ ಸಹಿತಾಗಿ ಎನ್ನಲ್ಲಿ ಪರಿಪೂರ್ಣಾ ॥೩॥

ಝಂಪೆ ತಾಳ

ಸಪ್ತಾವರಣ ಕಾಯಾ ಪ್ರಾಕಾರ ಮನೆಯಲ್ಲಿ ।
ಸಪ್ತಮುದ್ವಾರಂಗಳಲ್ಲಿ ನೀನು ।
ಸಪ್ತಮರೂಪದಿ ತನ್ನಿಯಾಮಕನಾಗಿ ।
ವ್ಯಾಪ್ತಿಸಿ ಅಲ್ಲಿ ಗುಪ್ತನಾಗಿ ।
ತಪ್ತಕಾಂಚನದಂತೆ ಪೊಳೆವುತ್ತ ಸಿರಿಸಹಿತ ।
ಗುಪ್ತತಾ ಗುಣಬಂಧನಂತೆ ನೀನು ।
ಶಪ್ತ ಮಾಡಿ ಸೃಷ್ಟಿ ಸ್ಥಿತಿ ಲಯಗಳನು ನೀನು ।
ಕ್ಲಿಪ್ತ ಮೀರದ ತೀವೆ ಮಾಡಿಸುವಿ ।
ಸುಪ್ತ ಜಾಗ್ರುತ ಸ್ವಪ್ನಾವಸ್ಥ ಕಾಲಂಗಳಲ್ಲಿ ।
ಆಪ್ತನಾಗಿ ಆದರಿಸಿ ಎನ್ನ ।

ಸಪ್ತೆರಡು ಭುವನದೊಡಿಯ ಗೋಪಾಲ ವಿಟ್ಠಲ ।
ಕುಪಿತದೊಳಗೇ ಎನ್ನ ಕೂಡಿಸದೆ ಪೊರೆಯೊ ||೪||

ತ್ರಿವಿಡಿ ತಾಳ

ನಿನ್ನ ಮತ್ಸ್ಯರೂಪ ಎನ್ನರಿಷ್ಟವಕಳಿವಿ ।
ನಿನ್ನ ಕೂರ್ಮರೂಪ ಎನ್ನ ಭಾರಪೊಹಿಸುವಿ ।
ನಿನ್ನ ವರಹ ರೂಪ ಎನಗೆ ವರವಾಗಲಿ ।
ನಿನ್ನ ನರ ಮೃಗ ರೂಪ ಎನ್ನ ಅರಿಗಳ ಶೀಳಲಿ ।
ನಿನ್ನ ವಾಮನ ರೂಪ ಎನ್ನ ಸೇವೆಗೊಳಲಿ ।
ನಿನ್ನ ಭಾರ್ಗವ ರೂಪ ಎನ್ನ ಅಷ್ಟಮದ ಕಡಿಯಲಿ ।
ನಿನ್ನ ರಾಮ ರೂಪ ಎನ್ನ ಸ್ಮರಣೆಗೊದಗಲಿ ।
ನಿನ್ನ ಕೃಷ್ಣ ರೂಪ ಎನ್ನಭೀಷ್ಟನೀಯಲಿ ।
ನಿನ್ನ ಬೌದ್ಧ ರೂಪ ಎನ್ನ ವಿಷಯ ಬಿಡಿಸಲಿ ।
ನಿನ್ನ ಕಲ್ಕಿ ರೂಪವು ಎನ್ನಮನ ನಿಲ್ಲಿಸಲಿ ।
ನಿನ್ನಾನಂತ ರೂಪವು ಎನ್ನನುದ್ಧರಿಸಲಿ ।
ಚಿನ್ಮಯ ಮೂರುತಿ ಗೋಪಾಲ ವಿಟ್ಠಲ ।
ನಿನ್ನ ತಿಳಿವ ಧನ್ಯ ಇನ್ನು ಮಾಡಿದ್ದು ಪುಣ್ಯ । ||೫||

ಅಟ್ಟತಾಳ

ಕಣ್ಣು ಮಾಡುವ ಕಾರ್ಯ ಕರ್ಣ ಮಾಡುವವೊ ನಿನ್ನ ।
ಕರ್ಣ ಮಾಡುವ ಕಾರ್ಯ ಕಣ್ಣು ಮಾಡುವವಯ್ಯಾ ।
ಬೆನ್ನು ಮಾಡುವ ಕಾರ್ಯ ವದನ ಮಾಡುವದು ।
ನಿನ್ನ ವದನ ಮಾಡುವ ಕಾರ್ಯ ಬೆನ್ನು ಮಾಡುವದು ।
ನಿನ್ನ ಚರಣ ಮಾಡುವ ಕಾರ್ಯ ಕರವು ಮಾಡುವದು ।
ನಿನ್ನ ಕರವು ಮಾಡುವ ಕಾರ್ಯ ಚರಣ ಮಾಡುವದಿನ್ನು ।
ನಿನ್ನ ಅವಯವಂಗಳು ಎಲ್ಲಿ ನೋಡಲು ಅಕ್ಷಿ ।
ನಿನ್ನ ಅವಯವಂಗಳು ರೂಪ ಅನಂತಾನಂತವಾಗಿ ತೋರುವವು।
ಇನ್ನು ಮೊದಲು ಕೊನೆ ಬಣ್ಣಿಸಿ ನೋಡಲು ।
ಎನ್ನಿಂದ ಲೊಶವೆ ಚಿನ್ಮಯ ಚಿದ್ರೂಪ ।

ಅನಂತ ಮಹಿಮ ಗೋಪಾಲ ವಿಟ್ಠಲರೇಯಾ |
ನಿನ್ನ ನೋಡುವರೊಳಗೆ ಎನ್ನನು ಇಡಿಸೊ || ೬ ||

ಆದಿತಾಳ

ಅನಂತ ಜನರು ನಿನ್ನ ನೋಡಲು |
ನ್ಯೂನವಾಗದು ನಿನ್ನ ಕಾಂತಿಗೆ |
ಅನಂತ ಜನರು ನಿನ್ನ ಪಾಡಲು ನ್ಯೂನ್ಯವಾಗದು ನಿನ್ನ ನಾಮಕ್ಕೆ|
ಅನಂತ ಜನರು ನಿನ್ನ ಬೇಡಲು ನ್ಯೂನ್ಯವಾಗದು ನಿನ್ನ ವೇಷಕ್ಕೆ |
ಅನಂತ ಜನರು ನಿನ್ನ ಸೇವಿಸೆ |
ನ್ಯೂನ್ಯವಾಗದು ನಿನ್ನ ಸೇವಿಯು |
ಅನಂತ ಜನಕೆ ವರವಿತ್ತರೆ |
ನ್ಯೂನ್ಯವಾಗದು ನಿನ್ನ ಬಲಕೆ |
ಅನಂತನೆಂದು ಕರೆದವರಿಗೆ |
ಅನಂತವಾಗಿ ತೋರುತಲಿಪ್ಪ |
ಅನಂತ ಜನಕೆ ಅನಂತ ಕರ್ಮ |
ಅನಂತ ಜನಕ ಅನಂತ ಫಲವು |
ಅನಂತ ಗುಣನಿಧಿ ಗೋಪಾಲ ವಿಟ್ಠಲ |
ಅನಂತ ಕಾಲಕ್ಕೆ ನೀನೇ ಗತಿಯೋ || ೭ ||

ಜತೆ

ನಿನಗೆ ನಿನ್ನ ಪರಿವಾರ ಮೂರ್ತಿಗಳಿಗೆ |
ವಿನಯದಿ ನಮಿಸಿದೆ ಗೋಪಾಲ ವಿಟ್ಠಲಕಾಯೊ || ೮ ||

## ಸುಳಾದಿ ೪೭

ರಾಗ ಧ್ರುವತಾಳ

ಒಬ್ಬನೆ ಪೋಷನೆಂದು ಆಡಲ್ಯಾತಕೆ ಮನುಜ |
ಒಬ್ಬ ನಾನಹುದೆ ನೋಡಿ ಎಲ್ಲಾ್ಯದರು |
ಒಬ್ಬೊಬ್ಬರೊಳಗೆ ಅನಂತ ಜನರಿಪ್ಪರು |
ಹಬ್ಬಿಕೊಂಡಿಪ್ಪರು ಪರಸ್ಪರ ಭೇದವಾಗಿ |

ತಬ್ಬಿಬ್ಬುಗೊಂಬರಲ್ಲ ಬಹು ಕುಶಲರು |
ಒಬ್ಬನ ಕರ್ಮವಿನ್ನು ಅನಂತ ಜನರ ಕರ್ಮ |
ಒಬ್ಬನ ಕರ್ಮಕನಂತ ಜನರ ಸಹಾಯು |
ತುಂಬಿದ್ದ ಪಟ್ಟಣದೊಳುಳ್ಳಿಯ ಮಾರುವಂತೆ |
ಒಬ್ಬನಾ ಯುಃಕಶ್ಚಿತ ಬಿದ್ದಿಹನೋ |
ಒಬ್ಬನೆ ಈ ದೇಹಕ್ಕೆ ಕರ್ತನೆಂದರೆ ಸೌಖ್ಯ |
ಗುಬ್ಬೆ ಕೊರಳಿನಲ್ಲಿ ಗೋದಿಕಲ್ಲು ಕಟ್ಟಿದಂತೆ |
ಉಬ್ಬಸವಲ್ಲದೆ ಉರಳುವ ನಿರಯದಿ |
ಗರ್ಭಧಾರಣ ಮರಣ ಬಿಡಲರಿಯುವು |
ಕಬ್ಬು ಬಿಲ್ಲಿನ ಜನಕ ಗೋಪಾಲ ವಿಟ್ಠಲನಂಘ್ರಿ |
ಅಬ್ಜ ಎಂಬೋದು ಕಾಣ ಅವನೆಂದೆಂದೂ ॥ ೧ ॥

ಮಟ್ಟತಾಳ

ಜನಕನಲ್ಲಿಗೆ ಬಾಹನಾಗ ಒಬ್ಬನಲ್ಲ |
ಜನನಿಯ ಜಠರದಿಂದ ಜನಿಸಲೊಬ್ಬನಲ್ಲ |
ಜನನನಂತರದಿ ಒಬ್ಬನೆಂಬುವದಲ್ಲ |
ತನುನಾಶವಾಗೆ ಒಬ್ಬನಂಬುವದಲ್ಲ |
ತನು ಸಂಬಂಧಿಗಳು ತೊಲಗೆ ಒಬ್ಬನಲ್ಲ |
ತನುವು ತನ್ನದಲ್ಲ ತನುವಿಗೆ ತಾನಲ್ಲ |
ಅನುವಾಗಿ ಇದ್ದರೆ ಆಪ್ತರು ಸರ್ವರು |
ಕನಸಿನಂದದಿ ಕಾಣೊ ಕಂಡದ್ದು ಎಲ್ಲವು |
ಮನಸು ಮಾಡಬೇಡ ಮಮತೆ ಇವುಗಳಲ್ಲಿ |
ಕನಸು ಜಾಗರ ಸುಪ್ತಿ ಘನ ಪಾತಾಳ ಸ್ವರ್ಗ |
ಜನ ರಹಿತ ಸ್ಥಾನ ವನ ಕಾನನಗಳಲ್ಲಿ |
ನಿನಗೆ ಗೆಳೆಯನಾಗಿ ಗೋಪಾಲ ವಿಟ್ಠಲ |
ಅನಿಮಿತ್ತ ಬಾಂಧವನಾಗಿ ಕ್ಷಣಬಿಡದಲೆ ಕಾವಾ ॥ ೨ ॥

ರೂಪಕ ತಾಳ

ಇಷ್ಟು ಮಂದ್ಯಾಡಿಸಲು ಆಡುವಿ ವಚನಗಳು |
ಸ್ಪಷ್ಟವಾಗಿ ನೋಡು ನಿನ್ನೊಳಗೆ |
ಎಷ್ಟು ಮಂದಿ ಆಡಿ ಇಟ್ಟರೆ ನೀ ಇಡುವಿ |
ಗಟ್ಯಾಗಿ ನೋಡು ಚಲನಿಲ್ಲದೆ |
ಎಷ್ಟು ಮಂದಿ ಯೋಚಿಸಲು ನೀ ಯೋಚಿಸುವಿ |
ನಿಷ್ಠೆಯಿಂದಲಿ ತಿಳಿಯೊ ನಿನ್ನೊಳಗೆ |
ಕಟ್ಟಿಗೆ ಸಾದೃಸ್ಯ ಕಾಣೊ ನೀ ಇವರೆಲ್ಲಿ |
ಚೇಷ್ಟಾ ಮಾಡಿಸದೆ ಸುಮ್ಮನಿರಲೂ |
ಇಷ್ಟರು ಬಹು ಮಂದಿ ಉಂಟು ನಿನ್ನೊಳಗೆ |
ದುಷ್ಟರು ಬಹು ಮಂದಿ ಉಂಟು ನಿನ್ನೊಳಗೆ |
ಇಷ್ಟಾನಿಷ್ಟ ಕ್ರಿಯಾ ಇವರಿಗೆ ಪ್ರೇರಕರಾಗಿ |
ಇಷ್ಟನಾಗಿ ಗೋಪಾಲ ವಿಟ್ಠಲನೆ ಮಾಡಿಪಾ ||೩||

ಝಂಪಿ ತಾಳ

ವಾಸುದೇವನಾಗಿ ಒಳಗಿದ್ದು ತಾ ಹೃಷಿ |
ಕೇಶನಾಗಿ ಇಂದ್ರಿಯಂಗಳಿಗೆ ಪ್ರೇರಕನು ಹ |
ಯಾಸ್ಯನಾಗಿ ಒಳಗೆ ಜ್ಞಾನ ಪುಟ್ಟಿಸುವ ಮಹಿ |
ದಾಸನಾಗಿ ವಿಷಯ ವಿರಕುತಿನೀವ |
ವ್ಯಾಸನಾಗಿ ಉಪದೇಶಗಳ ಮಾಳ್ಪ |
ಪೋಷಕನಾಗಿಹ ಪ್ರದ್ಯುಮ್ನನಾಗಿನ್ನು |
ಬೇಸರದೆ ಸೃಜಿಸುವ ಸಂಕರುಷಣನಾಗಿ |
ಮೋಸಗೊಡ ಜ್ಞಾನ ಮತ್ಸ್ಯನಾಗಿ ಒಳಗಿದ್ದು |
ಬೇಸರದೆ ಹೊರುವ ಕೂರ್ಮನಾಗಿ |
ಕ್ಲೇಶಗಳು ಪರಿಹರಿಪ ಒಳಗೆ ವರಹನಾಗಿ |
ದ್ವೇಷ ಪುಟ್ಟಿಸುವ ದೈತ್ಯರ ಮೇಲೆ ನರಸಿಂಹ |
ಕಾಸು ಕಾಸಿಗೆ ಕೂಡಿ ಹಾಕಿಸುವ ವಾಮನಾ |

ಭೂಸುರರಿಗೆ ತ್ಯಾಗ ಮಾಡಿಸುವ ಭಾರ್ಗವ ।
ವಾಸ ಮಾಡುವ ಬುದ್ಧಿ ನೀವ ಒಳಗೆ ರಾಮಾ ।
ಮೊಸಲ ಭೋಗಗಳು ಕೊಂಬ ಮನಸಿಗೆ ಕೃಷ್ಣ ।
ನಾಶ ಮಾಡುವ ಪರರ ಮೋಹಿಸುವ ಬೌದ್ಧ ।
ದೇಶಗಳು ತಿರಗುವಾಗ ಮನ ಕೊಡುವ ಒಳಗೆ ಕಲ್ಕಿ ।
ಬೇಸರದೆ ಬಹುರೂಪನಾಗಿ ಗೋಪಾಲ ವಿಟ್ಠಲ ।
ಪೋಷಿಸುವ ನಿರ್ವ್ಯಾಜದಿಂದ ನಿತ್ಯಾ ॥ ೪ ॥

ತ್ರಿವಿಡಿತಾಳ

ವರಣ ಪ್ರತಿಪಾದ್ಯ ಐವತ್ತೊಂದು ।
ಇರವು ನಿಯಾಮಕ ಕೇಶವಾದಿಗಳು ।
ಎರಡೊಂದು ಅವಸ್ಥಾಪ್ರದ ಮೂರ್ತಿಗಳು ।
ಎರಡೊಂದು ವರ್ಣ ಮೂರ್ತಿಗಳು ಇನ್ನು ।
ಪರಿ ಪರಿ ಕೃದ್ಧೋಲ್ಕ ಆತ್ಮಾದಿ ಮೂರ್ತಿಗಳು ।
ಎರಗಿ ರೋಮ ರೋಮ ತುಂಬಿಹ ಮೂರ್ತಿಗಳು ।
ಹೊರಗೆ ಒಳಗೆ ವ್ಯಾಪ್ತಗೋಪಾಲ ವಿಟ್ಠಲ ।
ತಿರಗುವ ಎನ್ನೊಡನೆ ಪರಿ ಪರಿ ರೂಪನಾಗಿ ॥೫॥

ಅಟ್ಟತಾಳ

ಏಕ ಮೂರುತಿ ಚತುರ ಮೂರುತಿ ।
ಏಕ ಸಪುತ ಮೂರ್ತಿ ಏಕದಶಮೂರುತಿ ।
ಏಕ ಶತ ಮೂರುತಿ ಏಕಷ್ಟಮೂರುತಿ
ಏಕ ಸಾಸಿರ ಮೂರ್ತಿ ।
ಏಕಾಧಿಕ ಎಪ್ಪತ್ತೊಂದು ಸಾವಿರ ಮೂರ್ತಿ ।
ಏಕ ಅಷ್ಟ ಕೋಟಿ ರೂಪನಾಗಿಪ್ಪ ಮೂರ್ತಿ ।
ಏ ಕಾರ್ಣವದಲ್ಲಿ ಏಕಮೇವನದ್ವಿತಿಯ ಮೂರ್ತಿ ।
ಈ ಕಡ್ಯಾಕಡೆ ಸವ್ಯಾಪಸವ್ಯ ಮೂರ್ತಿ ।
ಸಾಕಾರ ಮೂರ್ತಿಗಳು ಸರ್ವಜ್ಞ ಪರಿಪೂರ್ಣ ।

ಸಾಕುವ ಸರ್ವತ್ರ ಗೋಪಾಲವಿಟ್ಠಲನಿರೆ ।
ನಾ ಕಾಣೆ ಎನಗಿನ್ನು ಏಕಾಂತವೆಂಬುವದು ॥೬॥

ಆದಿತಾಳ ಜತೆ. ಸಿಕ್ಕಿಲ್ಲ

## ಸುಳಾದಿ ೪೮

ರಾಗ ಧ್ರುವತಾಳ

ಆವ ಕರ್ಮಗಳಿನ್ನು ಆವ ಧರ್ಮಗಳಿನ್ನು ।
ಆವ ತೀರ್ಥ ಯಾತ್ರೆಯು ಆವಾವ ವ್ರತಂಗಳು ।
ಆವಾವ ಸಜ್ಜನರ ಸಹವಾಸಂಗಳು ಎಲ್ಲ ।
ಆವಾವ ವೇದಶಾಸ್ತ್ರ ದೇವಾರ್ಚನೆಗಳೆಲ್ಲ ।
ದೇವ ನಿನ್ನ ಒಲಿಸುವ ಉಪಾಯಂಗಳು ।
ಆವಾವ ಪರಿ ಸಾಧನಂಗಳು ಎನ್ನು ಈ ವಿಧಸಾಧನಗಳಿನ್ನು ।
ತಾವೊಪ್ಪಿಸೀಗಾಸಾಧನವ ಪೋಗಲಾಡಿಸಿತೊ ।
ನಾ ಒಂದರಿಯದಾದೆ ದೇವ ದೇವಾ ।
ಗೋವು ಕರದು ಪಾಲು ಹಾವಿಗೆರದಂತೆ ।
ಸಾವಿರ ಬಗೆ ಸಾಧನಂಗಳು ಎಲ್ಲ ।
ಈ ಉದ್ಧಾರಕ್ಕುಪಾಯುವ ದಾವದಯ್ಯಾ ।
ನೀ ವೊಲಿವ ಬಗೆ ಇನ್ನಾವದು ನಾನರಿಯೆ ।
ಭೂ ವಲ್ಲಭ ನಮ್ಮ ಗೋಪಾಲವಿಟ್ಠಲರೇಯಾ ।
ಭಾವ ಶುದ್ಧದಿ ನಿನ್ನ ಸೇವಿಸದೆ ॥೧॥

ಮಟ್ಟತಾಳ

ಮನವು ಧನದಲ್ಲಿಟ್ಟು ಎಣಿಸಲು ಜೀವಂಗಳು ।
ಹಣವೆಣಿಕೆಲ್ಲದೆ ನಿನ್ನ ಎಣಿಸಲಿಲ್ಲ ।
ನೊಣನು ಅನ್ನದಲಿಟ್ಟು ಉಣಕಲಿತರೆ ಇನ್ನು ।

ಗುಣ ಕೊಡಬಲ್ಲದೆ ದಣಿಸದೆ ಬಿಡತನಕ ।
ಮನುಜ ಜಡ ನಾನು ಕುಣಿಯು ಕಾಣದೆ ಬಿದ್ದು ।
ಎಣಿಸುತಲಿದ್ದಂತೆ ಧನದ ವ್ಯಾಕುಲವಯ್ಯಾ ।
ಮಣಿ ಕಾಂಚನ ಮೃಣ್ಮಯ ಸಮವೆಂದು ।
ಮನದೊಳು ಮಾಡದೆ ಮನಸಿಜನಯ್ಯನೆ ।
ಎನಗೆ ನೀನೊಲಿಯೆ ಬೋಧೆನಿತ್ತು ಇನಿತು ಕಾಣೆ ।
ನಿನಗೆ ನೀನೆ ಬಲ್ಲಿ ಎನಗಾವ ಸಾಧನೆಯು ।
ಕೊನೆ ಮೊದಲು ಕಾಣೆ ಗುಣಪೂರ್ಣ ಕಾಮನೆ ।
ಫಣಿಶಾಯಿ ನಮ್ಮ ಗೋಪಾಲ ವಿಟ್ಠಲ ।
ತನು ಮನದೊಡಿಯ ಅನುವರಿತು ಪೊರಿಯೊ ॥೨॥

ತ್ರಿವಿಡಿತಾಳ

ವಿಷಯಂಗಳಿಲ್ಲ ಇನ್ನು ವಿಷವೆಂದರಿದು ದು ।
ರ್ವಿಷಯಕ್ಕೆರಗುವೆನೊ ದಶಗೆಟ್ಟು ಬರಿದೆ ।
ಹಸಿದು ಪೋಗಿ ಇನ್ನು ಅಸುರತನದಲೀಗ ।
ನಸುಗುಂದಿ ಕಾಯಿಯು ಮಸಳಿ ಮೆದ್ದರೆ ।
ತೃಷಿ ಹೋಗಬಲ್ಲದೆ ರಸ ಉಣ್ಣದನಕ ।
ಹಸಿಯ ವಸ್ತ್ರವ ಮೈದು ಕೆಸರೊಳು ತುಳಿದರೆ ।
ಹಸನಾಗ ಬಲ್ಲದೇ ವಸನ ವೇಗ ।
ಬಿಸಿಜಾಕ್ಷ ನಿನ್ನ ಕರುಣ ।
ರಸವೆಂಬ ಮಡಿವಿನೊಳು ಶಾರೀರತೊಯಿದು ।
ಬಿಸಿಜ ಚರಣವ ತೋರೊ ಕಸವಕಿತ್ತಿಯು ಕಾಮಕ್ರೋಧಂಗಳಿಲ್ಲ ।
ಉಸರಿದೆ ನಿನಗೆ ನಾ ಅಸುರಮರ್ದನರಂಗ ।
ವಸುದೇವ ಸುತ ನಮ್ಮ ಗೋಪಾಲವಿಟ್ಠಲ ।
ವಿಷಯ ದಾಸಿಗೆ ಮನ ವಶ ಮಾಡದಿರೊ ॥೩॥

ಅಟ್ಟತಾಳ

ಮಾಡದೆ ಭಕುತಿಯ ಬೇಡದೆ ಮುಕುತಿಯ ।
ನೀಡಬಲ್ಲೆಯೋ ದೇವ ನೋಡವರ ಪುಣ್ಯ ।

ಕಾಡಿಗಿ ಮಸಿ ಕನ್ನಡಿಗೆ ಪೂಸಿ ಇನ್ನು ।
ನೋಡಲು ಮೊಗವನ್ನು ಪಾಡಾಗಿ ತೋರೊದೆ ।
ಗಾಡೀಕಾರನು ತನ್ನೊಡಲಾಶೆಗೆ ।
ನಾಡೊಳಗಿಲ್ಲದಾಟಾಡಿ ಜನ ಮರುಳು ।
ಮಾಡಿ ಧನವನ್ನು ಕೂಡಿಸಿದಂದದಿ ।
ಆಡಿ ಪಾಡಿ ಹರಿದಾಸನೆಂದು ಜನರ ।
ಬೇಡುವದಕೆ ದ್ರವ್ಯ ಮಾಡುವೆ ಭಕುತಿಯು ।
ನೋಡುವಂತೆ ಜನರು ರೂಢಿಯೊಳೆನ್ನಂಥ ।
ಮೂಢನಿಲ್ಲೆಲೊ ದೇವ ಈಡಾರೊ ಎನಗಿನ್ನು ।
ಮಾಡೆ ಮನದವಗೆ ಮಾಡಲೆಂತೊ ಕೃಪೆ ।
ಬಾಡಿಗಿ (ಉಳ್ಳ) ಮನೆ ದೇಹಬಿಡಾರ ಸ್ಥಿರವಲ್ಲ ।
ನಾಡ ದೈವರ ಗಂಡ ಗೋಪಾಲ ವಿಟ್ಠಲ ।
ಗೋಡಿ ಮರಿಯು ಭಕ್ತಿ ಮಾಡಿದರೊಲಿಮೆಯಿಲ್ಲ ॥೪॥

ಆದಿತಾಳ

ಇಂತು (ಇಷ್ಟು) ನಾನಾಪರಿ ಚಿನ್ನ ಅಲಂಕಾರ ।
ಉಟ್ಟ ಪೀತಾಂಬರ ತೊಟ್ಟ ಪಟ್ಟಾವಳಿ ।
ಅಷ್ಟು ಸಂಪತ್ತಿನ ಧಿಟ್ಟ ಕನ್ನಿಕೆಯನು ।
ದೃಷ್ಟಿಯೊಳಗೆ ಸಮವಿಲ್ಲದ ಬಾಲಿಗೆ ।
ನೆಟ್ಟನೆ ಮೊಗದಲ್ಲಿ ಕುಷ್ಟವು ಇದ್ದರೆ ।
ನಷ್ಟ ಚಲುವಿಕೆ ಇನ್ನ್ಯಾತಕ್ಕಯ್ಯಾ ।
ಕೃಷ್ಣ ನಿನ್ನಲಿ ಭಕುತಿ ಪುಟ್ಟದಲೇವೆ ಇನ್ನು ।
ವೈಷ್ಣವನಾಗಿ ಉಳ್ಳಷ್ಟು ಕರ್ಮ ಮಾಡಲು ।
ಭ್ರಷ್ಟ ಜನ್ಮಂಗಳು ಹೋಗಬಲ್ಲವೇನಯ್ಯಾ ।
ಹುಟ್ಟಿದರು ಗೌಡ ಹೆಸರು ಇಕ್ಕವಲೆ ।
ಕೆಟ್ಟ ಕಬ್ಬಲಿಗಗೆ ಕೊಟ್ಟರೆ ತಾಳೋನೆ ।
ಸೃಷ್ಟಿಗೊಡಿಯ ನಮ್ಮ ಗೋಪಾಲ ವಿಟ್ಠಲ ।
ನಿಷ್ಠಿಲಿ ಕೊಡು ನಿನ್ನ ಮುಟ್ಟಿ ಪೂಜಿಸಲಿ ॥೫॥

ಜತೆ

ಜ್ಞಾನವೆ ಭಕುತರಿಗೆ ನೀನೊಲಿಯೊ ಎನಗಿನ್ನು ।
ದಾನವಾಂತಕ ರಂಗ ಗೋಪಾಲ ವಿಟ್ಠಲ ||೬||

## ಸುಳಾದಿ ೪೯.

ರಾಗ ಧ್ರುವತಾಳ

ಅನಂತ ಅಪರಾಧ ಎನ್ನಲ್ಲಿ ಉಂಟೊ ದೇವ ।
ಇನ್ನು ಮುಂದೆ ಆಗೋವು ಅನಂತವಿದ್ದರನ್ನ ।
ಮುನ್ನೆ ನಿನ್ನ ಆ ನಾಮವನ್ನು ನೆನೆಯದೆ ।
ಅನಂತ ಅಪರಾಧಗಧಿಕಾರಿ ಆನಾದೆನೊ ।
ನಿನ್ನ ನಾಮದಿಂದ ಹೋಗುವಷ್ಟು ದೋಷ ।
ಎನ್ನಿಂದ ಮಾಡಲಿ ಇನ್ನಳವಲ್ಲವು ।
ಇನ್ನು ತಿಳಿದು ಹೋಗೆ ಎನ್ನ ಮನವು ।
ನಿನ್ನನೆನೆಸದನ್ಯಕೆರಗುತದೆ ।
ಕಣ್ಣಲಿ ಕಂಡರೆ ಕರ್ನದಿ ಕೇಳಿದರೆ ।
ಇನ್ನೆಂಥ ವೈರಾಗ್ಯವನ್ನು ನಾ ತೋರುವೆ ।
ಕುನ್ನಿ ಸ್ವಪ್ನದಿ ಜ್ಞಾನವನ್ನು ತಂದುಕೊಂಡು ।
ಸನ್ನುತ ಪರರನ್ನವ ತಿಂದಂತೆ ।
ಎನ್ನದಾಸತ್ವವು ಇನ್ನಿಚ್ಛೈಸಲಿ ಕೈಯ್ಯ ।
ಅನಂತಪರಿಯಲಿ ಶಾಸ್ತ್ರಂಗಳೆಲ್ಲ ತಿಳಿದು ।
ತನ್ನ ಸತಿಯನು ಅನ್ಯರಿಗೊಪ್ಪಿಸಿ ।
ಹೆಣ್ಣು ಶಿಶುವು ಪಡೆದು ಕನ್ಯಾದಾನವ ಮಾಡಿ ।
ಪುಣ್ಯ ಗಳಿಸಿದಂತೆ ಎನ್ನಧರ್ಮವಯ್ಯಾ ।
ನಿನ್ನ ದಾಸನಾಗಿ ನಿನ್ನ ಮುದ್ರೆಯ ಧರಿಸಿ ।
ನಿನ್ನ ಹಾಡಿ ಪಾಡಿ ನಿನ್ನನ್ನು ಒಲಿಸದೆ ।
ಹೊನ್ನು ಉಳ್ಳವನಲ್ಲಿ ಚನ್ನಾಗಿ ಪೋಗಿನ್ನು ।

ನಿನ್ನಂಥ ದಾತನ ಇನ್ನೆಲ್ಲಿ ಕಾಣೆನಿಂ ।
ದುನ್ನತ ಪರಿಯಲ್ಲಿ ಬಣ್ಣಿಸಿಕೊಂಡಾಡಿ ।
ಹೊನ್ನು ಗಳಿಸಿ ತಂದು ಅನ್ನದಾನವ ಮಾಡಿ ।
ಘನ್ನತೆ ಪಡೆದೆನೊ ನಿನ್ನನೊಯಿದು ಬಿರಿ ।
ಇನ್ನೆನಾಯಿತಂಬೊ ಪುಣ್ಯ ಪಾಪಂಗಳು ।
ಮುನ್ನೆ ಮಾಡಿದದೆಲ್ಲಿ ಇನ್ನು ಮಾಡುತಲಿಪ್ಪೆ ।
ಸನ್ನುತ ಮುನಿ ಪ್ರಿಯ ಗೋಪಾಲವಿಟ್ಠಲ ।
ಎನ್ನ ದೇಹ ಬಲು ಭಂಗಗೆಟ್ಟಿತ್ತಲ್ಲೊ ॥೧॥

ಮಟ್ಟತಾಳ

ಆಶೆ ಎಂಬೋದು ದೊಡ್ಡ ದೋಷವೆಂಬೊದು ತಿಳಿದು ।
ರಾಶಿ ನರಕದೊಳು ವಾಸ ಮಾಡುವೆನಯ್ಯಾ ।
ಹೇಸಿ ಜಂಬುಕ ತಾನು ಗ್ರಾಸಕಕ್ಕಿಯ ।
ವಾಸೆ ಎಂದು ತಿಳಿದು ಘಾಸೆಬಟ್ಟತೆರದಿ ।
ಮೋಸ ಹೋಗಿದು ರಾಶಿಗೆರಗಿ ಇನ್ನು ।
ಮೀಸಲದ ಪುಣ್ಯ ಹ್ರಾಸ ಮಾಳ್ಪೆನಯ್ಯಾ ।
ಈ ಸಮಸ್ತ ದೋಷರಾಶಿ ವೊಪ್ಪಿಸಿನ್ನು ।
ಜೇಸಂದಲೆ ಶ್ರೀವಾಸುದೇವ ನಿನ್ನ ಸಾಸಿರನಾಮವು ।
ಸೂಸಿ ವೃಷ್ಟಿಗರೆದು ನಾಶಮಾಡು ಅಘ ।
ಪಾಶ ಕಡಿಯೊ ಬೇಗಶೇಷಶಾಯಿ ಗೋಪಾಲ ವಿಠ್ಠಲ ನಿಜ ।
ದಾಸರಲಿ ಭಕುತಿ ಲೇಸು ಆಗಿನೀಯೊ ॥೨॥

ತ್ರಿವಿಡಿತಾಳ

ಆವಾವ ಕಾಲಕ್ಕು ಜೀವ ಯೋಗ್ಯತೆ ಅರಿದು ।
ದೇವ ನೀನು ಫಲವನು ನೀವುತಲಿರೇ ।
ಆ ಒಂದು ಪರಿಯ ತನವ ಮಾಡಿ ನಿನ್ನ ।
ಸೇವಿಗೆ ಅನ್ಯಥ ವಾಗುವೆನೊ ತನುವಿನ ಗ್ರಾಸವು ।
ಕಾವು ವಾತನೆ ಬಲ್ಲ ಹಾವು ಬಲ್ಲದೆ ವೃಥಾ ಧಾವತಿ ಅಲ್ಲದೆ ।

ಹೇವ ಇಲ್ಲದೆ ಮಾನ ಈ ವಿಧಯೆಳೆದು |
ಸಾವು ಕೊಲ್ಲುತಲಿದೆ ದೇವ ಕೇಳೊ |
ಆವದಾದರು ನಿಷ್ಠುರಆಡಿದಡೆ ದೇವನೆ ಪ್ರೇರಕನೆಂದುಅರಿಯದಲೆ|
ನೋವಾಗುವೆನೊ ನಿನ್ನ ಭಾವಾರ್ಥ ತಿಳಿಯದೆ |
ಆವ ಕಾರ್ಯದಲ್ಲಿ ಆವ ಕರ್ಮಗಳಲ್ಲಿ |
ಆವಾವರಲ್ಲಿನ್ನು ಯಾವತ್ತರಲ್ಲಿ ನೀವ್ಯಾಪಕನಾಗಿನ್ನು |
ಜೀವರ ಕೈಯ್ಯ ವ್ಯಾಪಾರ ಮಾಡಿಸಿ ಇನ್ನು |
ಆ ಉದಕದಿ ಕಮಲವು ಇದ್ದಂತಾ |
ಈ ಉಪಾಸನೆಯನ್ನು ಸಾವಧಾನದಿ ಮಾಳ್ಪ |
ಜೀವರಿಗೆ ಇನ್ನು ನೀವರಿಯೆ ರಂಗ |
ದೇವಕಿ ನಂದನ ಗೋಪಾಲವಿಟ್ಠಲ |
ಆವರಲ್ಲಿ ಇದ್ದರನ್ನ ಕಾವಭಾರ ನಿನ್ನದೊ || ३ ||

ಅಟ್ಟತಾಳ

ಸಾಕು ಸಾಕು ದುರ್ವಿಷಯಕೆರಗಿಸದೆ |
ಸೋಕ (ನೂಕ) ಬೇಡವು ನರಕದ ಜನುಮಕ್ಕೆ |
ನೂಕು ನೂಕು ದುರಿತ ಕುಪಥಗಳೆಲ್ಲ |
ನೂಕಿಸ ಬೇಡದೆ ದಿನವಕಳಿಯದೆ ವ್ಯರ್ಥ |
ಬೇಕು ಎನಿಸು ನಿನ್ನ ಶರಣರ ಸಹವಾಸ |
ಸಾಕು ಸಾಕೆಂಬಂತೆ ಸಾಲದೆ ನಿನ್ನ ನಾಮ |
ವಾಕು ಎನಗೆಯಿತ್ತು ಸಹಕರವಾಗಿನ್ನು |
ನೀಕಾಯ ಬೇಕೆನ್ನ ಸಾಕಲ್ಯ ಗುಣನಿಧಿ |
ಲೋಕ ರಕ್ಷಕ ರಂಗ ಗೋಪಾಲವಿಟ್ಠಲ |
ವ್ಯಾಕುಲ ಗೊಳಿಸು ನಿನ್ನ ಕಳವಳಿಕಿಯೊಳು || ४ ||

ಆದಿತಾಳ

ಧರೆಯೊಳು ಅಜ್ಞಾನವೆಂಬ ಕತ್ತಲಿಗಿನ್ನು |
ಹರಿ ನಿನ್ನ ಚರಣ ಸ್ಮರಣೆ ದೀಪನಿಲ್ಲಿಸೆ |
ಇರಬಲ್ಲದೆ ತಾ ತಮವು ಹರಿದು ಪೋಗುವದಯ್ಯಾ |

ಕರುಣಾಂಕರನೆ ಸ್ಮರಣೆ ಪಾಲ ಉಳ್ಳವರಿಗೆ |
ಕರಿ ಎಂಬ ದೋಷಿನ್ನು ಹರಿಯು ಕಂಡತೆರದಿ |
ಅರಿಯೆ ನಾನಾಪರಿ ಸಾಧನ ದೊಳಗೆ |
ಹರಿ ನಿನ್ನ ಸ್ಮರಣೆಗೆ ಇನ್ನೊಂದು ನಾಕಾಣೆ |
ಪರಮ ಮೂಢನು ನಾನು ಕರವಡ್ಡಿ ಬೇಡಿಕೊಂಬೆ |
ವರವು ಪಾಲಿಸು ದೇವ ಕರುಣಾಕರ ಕೃಷ್ಣ |
ದುರಿತ ಬಂದರಾಗಲಿ ಹರುಷ ಬಂದರಾಗಲಿ |
ಇರುಳು ಹಗಲು ನಿನ್ನ ಸ್ಥಿರ ಬಕುತಿ ಸ್ಮರಣೆಯಿತ್ತು |
ಪೊರಿಯನ್ನ ಬಿಡದಲೆ ಗೋಪಾಲವಿಟ್ಠಲ ||೫||

ಜತೆ

ನಿನ್ನ ವೃಕ್ಷದ ಹಣ್ಣು ಅನ್ಯರು ಮೈದರೆ |
ಪುಣ್ಯ ನಿನ್ನದು ಕಾಣೊ ಗೋಪಾಲವಿಟ್ಠಲ ||೬||

## ಸುಳಾದಿ ೫೦

### ( ಅಹೋಬಲ ನೃಸಿಂಹ ದೇವರ ಸ್ತೋತ್ರ )

ರಾಗ– ಭೈರವಿ ಧ್ರುವ ತಾಳ

ಅನಂತನ್ನ ನೋಡಿ ಅಗಣಿತ ಗುಣಗಣನ |
ಅನಂತನ್ನ ಪಾಡಿ ಆಗಮಾದಿ ವಿನುತನ |
ಅನಂತನ್ನ ಬೇಡಿ ಅನಿಮಿತ್ಯ ಬಾಂಧವನ |
ಅನಂತನ್ನ ತಿಳಿರಿ ಅಧಿಕಾರಾನುಸಾರ |
ಅನಂತ ಜನರ ಪೊರಿವಾ ಅನಂತರೂಪನಾಗಿ |
ಅನಂತನೇವೆ ಅಹೋ ಬಲನಾರಸಿಂಹನಾಗಿ |
ಅನಂತ ಪರಿಯು ತುತಿಪೊ ಆ ಮಾರ್ಕಂಡೇಯಗೊಲಿದು |
ಅನಂತ ಮೂರ್ತಿ ತೋರಿ ಆತನವ್ರತವ ಗೆಲಿಸಿ |
ಅನಂತ ಸಿರಿ ಅಜಭವಾದ್ಯರಿಂದಲಿನ್ನು |
ಅನಂತ ಪರಿಯಲ್ಲಿ ಸ್ಮರಿಸಿಕೊಳುತ(ತಿ)ಲಿಪ್ಪ |

ಅನಂತ ಗಿರಿವಾಸ ಗೋಪಾಲ ವಿಟ್ಠಲ |
ಅನಂತ ನಿಂದಲಿ ಅನಂತ ತೀರ್ಥಉಂಟು ॥ ೧ ॥

ಮಟ್ಟತಾಳ

ಭವ ನಾಶನ ಮಾಳ್ಪಭಾಗೀರಥಿ ಜನಕ |
ಭವ ನಾಶಿನಿ ತೀರ್ಥದಲ್ಲಿ ತಾನೆ ನಿಂದು |
ಅವನಿಯೊಳಗೆ ಒಬ್ಬ ಚಂಡ ಶಾಸನನು ಎಂ |
ಬವನು ತಾನು ಬಲು ಕವಿಗಳದೂಷಿಸುತ |
ಭವ ಪೀಡಿತನಾಗಿ ಬಹು ವಿಪ್ರರ ದ್ರೋ |
ಹವನು ತಾಕಿ ಶವನು ಆಗಿ ಬೀಳೆ |
ಜವನ ದೂತರು ಬಂದು ಜಬರಿಸಿ ವಯ್ಯುವ ಸಮಯ |
ಕ್ಕವನ ಅಂಗುಟ ಬೆರಳು ಭವನಾಸಿಲಿ ಬೀಳೆ |
ಭವ ತರಿದು ಅನುಭವಕೆ ತಂದುಯಿತ್ತು |
ಭುವನದೊಳಗೆ ದಶರಥ ರಾಯನೆ ಆದಾ |
ಭವರೋಗದ ವೈದ್ಯ ಗೋಪಾಲ ವಿಟ್ಠಲನು |
ಪವನಂತರ ನಿಂತು ಪಂಡಿತರನು ಪೊರೆವಾ ॥ ೨ ॥

ರೂಪಕ ತಾಳ

ಸಿರಿ ದೇವಿ ಪೆಸರಿನ ತೀರ್ಥ ಇಲ್ಲುಂಟು |
ಗರುಡ ತೀರ್ಥಉಂಟು ಉರುಗ ತೀರ್ಥಉಂಟು |
ನರರ ಉದ್ಧರಿಸಲಿ ವಾಯು ತೀರ್ಥಉಂಟು |
ಪರಿ ಪರಿ ಪೆಸರಿನ ತೀರ್ಥಗಳಿಲ್ಲ್ಯುಂಟು |
ನರಹರಿ ತಾನೆ ಒಂದೊಂದು ತೀರ್ಥದಿ ಇದ್ದು |
ಧರಿ ಮೇಲಿದ್ದ ಜನರ ಪೊರೆವ ತಿಳಿದವರಿಗೆ |
ಕರುಣಾಕರ ದೇವಾ ಗೋಪಾಲ ವಿಟ್ಠಲ ತನ್ನ |
ಶರಣರ ಪೊರಿಯಲಿ ಇರುತಿಪ್ಪುವನಿಲ್ಲಿ ॥ ೩ ॥

ಝಂಪಿತಾಳ

ಸಿರಿವತ್ಸ ಕೌಸ್ತುಭ ಸಿರಿಗಂಧ ಕೊರಳ |
ಅರಳಿದ ಪೂಮಾಳೆ ಅವುದರ ಮೇಲೊಲಿಯೆ |

ಕರಣ ಕುಂಡಲ ಕಸ್ತುರಿ ನೊಸಲ ಥಳಥಳಿಸೆ ।
ಕಿರಿದಂತ ಕಪ್ಪುರದ ಕರಡಿಗೊದನ ।
ಸಿರಿ ಕಿರೀಟವು ಸಿರಿನಾಮ ಕಸ್ತುರಿ ತಿಲುಕ ।
ಕರ ಚತುರ್ಭುಜ ಶಂಖ ಚಕ್ರಾಯುಧ ।
ವರನಾಭಿಯಿಂದ ವೊಪ್ಪೊ ವಢ್ಯಾಣ ಕಟಿ ।
ತರ ಮೇಲೆ ಉಡಿಗೆ ಕಿಂಕಿಣಿಯು ಘಂಟಿ ।
ಊರು ಜಾನು ಜಂಘೆ ಜಘನ ।
ಶರಣರ ಮೋಹಿಪ ರೂಪ ಸಿರಿನಾರೇಯಣ ಶೃಂ ।
ಗಾರ ಮೂರ್ತಿ ಗರುಡ ವಾಹನ ಗೋಪಾಲ ವಿಟ್ಠಲ ।
ಪರಿವಾರದೊಡೆಯ ಪರಬೊಮ್ಮ ಕಾಣೊ ॥ ೪ ॥

ತ್ರಿವಿಡಿ ತಾಳ

ಇಲ್ಲಿ ಉಂಟು ಅಲ್ಲಿ ಇಲ್ಲ । ಅಲ್ಲಿ ವುಂಟು ಇಲ್ಲಿ ಇಲ್ಲ ।
ಸೊಲ್ಲ ನಾಡ ಸಲ್ಲಾದಿನ್ನು ಬಲ್ಲವರಿಗಲ್ಲೆ ಕೈವಲ್ಯಾ ।
ಬೆಲ್ಲದಚ್ಚು ಆವ ಕಡೆಯಿಂದಾದರು ತಿನ್ನಲು ।
ಬೆಲ್ಲ ಒಂದು ಕಡಿಯಾಗಿ ಕಲ್ಲು ವೊಂದಕಡ್ಯಾಗೊದೆ ।
ಎಲ್ಲಿ ನೋಡಾ ಹರಿ ಇರಲು ಇಲ್ಲಿಗೆ ಬಂದದ್ಯಾಕೆನಲು ।
ಸುಲ್ಲಭದಿ ತಿಳುವ ಸ್ಥಳದಲ್ಲಿ ಮಹಾತ್ಮೆ ಉಂಟು ।
ಅಲ್ಲಿಂದ ಬಂದದು ಯೇನಾ ।
ಇಲ್ಲಿಂದ ಕೊಂಡೊಯಿದದೇನು ।
ಬಲ್ಲ ಜ್ಞಾನಿಗಳು ಮನದಲ್ಲಿದು ಗುಣಿಸಿ ನೋಡಿ ।
ಮಲ್ಲರ ಮರ್ದನ ರಂಗ ಗೋಪಾಲ ವಿಟ್ಠಲ ।
ಎಲ್ಲಿ ನೋಡಲು ವಿಶ್ವಮೂರ್ತಿ ತಾ ಪೊಳೆವಾ ॥ ೫ ॥

ಅಟ್ಟ ತಾಳ

ನೋಡುವ ತನ್ನ ತಾ ಒಬ್ಬರಲ್ಲಿ ನಿಂತು ।
ಬೇಡುವ ತನ್ನ ತಾ ಒಬ್ಬರಲ್ಲಿ ನಿಂತು ।
ಮಾಡುವ ತನ್ನ ತಾ ಒಬ್ಬರಲ್ಲಿ ನಿಂತು ।
ನೀಡುವ ತನಗೆ ತಾ ಒಬ್ಬರಲ್ಲಿ ನಿಂತು ।

ಕೇಡು ಲಾಭಂಗಳ ಕೂಡಿ ಉಣಿಸುವನು |
ಗೂಡು ಮಾಡಿಟ್ಟಂಥ ಜಡ ಜೀವರಿಗೆ |
ಗಾಡಿಕಾರ ದೇವಾ ಗೋಪಾಲ ವಿಟ್ಠಲ |
ಕೂಡಿ ಆಡುತ ನಮ್ಮೊಡನೆ ಸುತ್ತುತಲಿಪ್ಪಾ ||೬||

ಆದಿ ತಾಳ

ಇಲ್ಲೆ ಅನಂತಾನಂತವಾಗಿ ಮೆಲ್ಲನೆ ತಾ ತೋರುತಿಪ್ಪ |
ಇಲ್ಲೆ ಅನಂತಾಯುಧಗಳು ಬಲ್ಲವರಿಗೆ ತೋರುತಿಪ್ಪಾ |
ಇಲ್ಲೆ ಅನಂತ ರೂಪಗಳು ಬಲ್ಲವರಿಗೆ ತೋರುತಿಪ್ಪಾ |
ಇಲ್ಲಿ ಒಂದು ಕರ್ಮವು ಮಾಡೆ ಅನಂತ ಮಾಡಿ ಅವರಿಗೀವಾ |
ಎಲ್ಲಿ ನೋಡಾ ತೀರ್ಥಗಳು ಎಲ್ಲಿ ನೋಡಾ ದೇವತೆಗಳು |
ಎಲ್ಲಿ ನೋಡಾ ಮುನಿಗಳು ಎಲ್ಲಿ ನೋಡಾ ತಾಪಸಿಗಳು |
ನಿಲ್ಲಿಸಿಪ್ಪರೊಂದು ಒಂದು ಬಳ್ಳಿ ವೃಕ್ಷ ರೂಪದಿಂದ |
ಪಲ್ಲವಿಸುತ ನಾನಾ ಪಕ್ಷಿ ಜಾತಿ ರೂಪದಿಂದ |
ಹುಲ್ಲು ಕಾಷ್ಟಗಳನ್ನು ಇಲ್ಲಿ ಛೇದಿಸುವದಕೆ |
ಮೆಲ್ಲನೆ ತಿಳಿದು ಹರಿಗಲ್ಲಿ ಇನ್ನರ್ಪಿಸಬೇಕು |
ಎಲ್ಲ ಪುಷ್ಪ ಫಲವು ಶ್ರೀ ವಲ್ಲಭನ್ನ ಸೇವಿಸುತ್ತ |
ಇಲ್ಲ ಇರುತಿಪ್ಪವು ಬಲ್ಲವರು ತಿಳಿದು ನೋಡಾ |
ಎಲ್ಲರಂತರ್ಯಾಮಿಯಾದ ಬಲ್ಲಿದ ಗೋಪಾಲ ವಿಟ್ಠಲ |
ಅಲ್ಲಿ ಪ್ರಲ್ಹಾದಗೊಲಿದು ಇಲ್ಲಿ ಬಂದ ದೈವನೋಡಿ |

ಜತೆ

ಅನಂತನ ನೋಡಿ ಅನಂತನ ಬೇಡಿ |
ಅನಂತ ಒಂದೆ ದೈವ ಗೋಪಾಲ ವಿಟ್ಠಲನೆನ್ನಿ ||೮||

## ಸುಳಾದಿ ೫೧

(ಉಡುಪಿ ಶ್ರೀಕೃಷ್ಣನ ಅಭೂತೋಪಮೆ ಸ್ತೋತ್ರ)

ರಾಗ ಭೈರವಿ ಧ್ರುವತಾಳ

ಆವ ಲೀಲೆಯೊ ನಿನ್ನ ನಾವಾವವರ್ನಿಪ |
ದೇವ ನಿನ್ನ ನಿಜ ಸ್ವಭಾವ ಗುಣ |

ಆವ ಜನುವು ರಹಿತದಾವ ನೀನು ಇನ್ನು |
ದೇವಕ್ಕಿ ಜಠರದಿ ಜನನವೇನೊ |
ಆವ ಜಗವೆಲ್ಲ ಬಂಧಕವ ಮಾಡಿಪ್ಪಶಕ್ತ |
ಗೋವತ್ಸ ಹಗ್ಗದಿಂದ ನೀವೇಗ ಸಿಕ್ಕೋದೇನೊ |
ಆವ ನಿತ್ಯತೃಪ್ತನಾದವ ನೀ ಇನ್ನು ಪೋಗಿ |
ಆವಾವ ಮನಿ ಬೆಣ್ಣಿ ಕದ್ದು ಮೆದ್ದದೇನು |
ದೇವ ಸ್ವರಮಣನಾದ ಇನ್ನು ಪೋಗಿ |
ಆವ ಗೋಪಿಕರೊಡನಾಟವು ಕ್ರೀಡೆಗಳೇನೊ |
ಶ್ರೀ ವೈಕುಂಠವಾಸವಾಗಿವ ಅಪ್ರಾಕೃತನೆ |
ಈ ಉಡುಪಿನಲ್ಲಿ ನೀ ಇಪ್ಪಬಗೆಯು ಏನೋ |
ಗೋವಳರೊಡಿಯು ಗೋಪಾಲವಿಟ್ಠಲರೇಯಾ |
ನಿವಾಸ ಮಧ್ವಮುನಿ ಮಂದಿರ ಸರ್ವೇಶ ॥ ೧ ॥

ಮಟ್ಟ ತಾಳ

ಮುಕ್ತ ಬೊಮ್ಮಾದಿಗಳು ತುತಿಸೆ ಕಾಣದೆ ಸರ್ವ |
ಶಕ್ತರಲ್ಲವೆಂದು ಸುಮ್ಮನಿರುವದೇನು |
ಸೊಕ್ಕಿನಿಂದಲಿ ಗೋಮಕ್ಕಳ ಕೈಯಿಂದ |
ಭಕ್ತವತ್ಸಲನೆ ಬಯಸಿ (ಬೈಸಿ) ಕೊಂಡದದೇನು |
ಮುಕ್ತಿ ಪ್ರದಾತನೆ ನಿನಗೆ ಯಮುನಾದೇವಿ |
ಘಕ್ಕನೆ ಮಾರ್ಗವ ನಿತ್ತಳೆಂಬೊದೇನೊ |
ಮುಕ್ತ ನಿಯಾಮಕನೆ ನೀ ಕೌರವ ಸಭೆಗೆ |
ಚಕ್ಕನೆ ಸಂಧಾನಕ್ಕಿನ್ನು ಪೋದದು ಏನೋ |
ಭಕ್ತ ವತ್ಸಲ ಕೃಷ್ಣಾ ಗೋಪಾಲ ವಿಟ್ಠಲ |
ಮಕ್ಕಳಾಟಕೆ ನಿನ್ನ ಮಹಿಮೆಗೆ ನಮೋ ನಮೊ ॥೨॥

ತಾಳ ತ್ರಿವಿಡಿ

ಅಂಗನೆ ದ್ರೌಪದಿಗಕ್ಷಯ ವಸನವು |
ಹಿಂಗದೆ ಇತ್ತಂಥ ಹಿತ ದೈವವೆ |
ಶೃಂಗಾರಾದೀಪುರದ ರಜಕನ್ನ ಬಿಡದಲೆ |

ಭಂಗಬಡಿಸಿ ವಸ್ತ್ರನುಟ್ಟುಕೊಂಡದ್ದು ಏನೊ ।
ಹಿಂಗದೆ ಅಜಭವರಿನ್ನು ಅರ್ಚಿಸಲಾಗಿ ।
ಕುಂಗಿದ್ದ ಕುಬುಜಿ ಅರ್ಚನಿಗೆ ಮೆಚ್ಚಿದ್ದದೇನೊ ।
ಅಂಗನೆ ಲಕುಮಿ ಅಲಂಕರಿಸುತಲಿರೆ ।
ರಂಗಪೂಗಾರನ ಮಾಲೆ ಕೊಂಡದು ಏನೊ ।
ತುಂಗ ಮಹಿಮ ಗೋಪಾಲ ವಿಟ್ಠಲ ಕೃಷ್ಣ ।
ಡಿಂಗರಿಗರ ಪ್ರಿಯ ದೀನ ಜನರ ಬಂಧು ॥೩॥

ಅಟ್ಟ ತಾಳ

ದುಃಖಸಾಗರದ ಸಿಕ್ಕು ಬಿಡಿಪನೆ ದೇ ।
ವಕ್ಕಿಯು ಶರಿಯು ಬಿಡಿಸಿದನೆಂಬುವದೇನೋ ।
ಅಕ್ಕರದಲಿ ವದನ ತೆರದು ಇನ್ನು ।
ಘಕ್ಕನೆ ಹದಿನಾಲ್ಕು ಲೋಕ ತೋರಿದನೆ ಗೋ ।
ಮಕ್ಕಳ ಕೂಡಾಡಿ ಅಡಿಗಿಕೊಂಬುವದೇನೊ ।
ಮುಖ್ಯಮುಕುತರು ನಿನ್ನನ್ನು ಕೊಂಡಾಡುತ್ತಲಿರೆ ।
ಉಖ್ಖಾ ಅಮ್ಮಾ ಎಂದು ಅಕ್ಕೆ ಮಾಡಿದದೇನೊ ।
ಭಕ್ತವತ್ಸಲದೇವ ಗೋಪಾಲವಿಟ್ಠಲ ವಿ ।
ರಕ್ತರ ಮನದಲ್ಲಿ ಬಿಡದೆ ಇಪ್ಪುವ ಸ್ವಾಮಿ ॥೪॥

ಆದಿತಾಳ

ಜಾರ ಚೋರ ದೋಷಗಳು ಆರು ಆರು ಮಾಡಿ ನಿನ್ನ ।
ಸಾರಿ ತುತಿಸಿ ಸಾರೆ ಅವರಾಪಾರ ಓಡವು ।
ಜಾರ ಚೋರ ಗುಣಗಳೆಲ್ಲ ನಿನಗೆ ಒಪ್ಪಿತಯ್ಯಾ ಸರ್ವ ।
ಕಾರಣಕ್ಕೆ ನೀನೆ ಮುಖ್ಯ ಕಾರಣಾದ ಕಾರಣವು ।
ಮಾರುತೀಶ ಚಲುವ ಗೋಪಾಲ ವಿಟ್ಠಲರೇಯಾ ।
ಆರು ಬಲ್ಲರಯ್ಯಾ ನಿನ್ನಪಾರ ಮಹಿಮೆ ಪೂರಣವು ॥೫॥

ಜತೆ

ಉಡುಪಿನವಾಸ ಶ್ರೀಕೃಷ್ಣ ಗೋಪಾಲವಿಟ್ಠಲ ।
ಬಿಡದೆ ನಂಬಿಸೊ ನಿನ್ನ ಚರಣ ಕಮಲವ ॥೬॥

## ಸುಳಾದಿ ೫೨

### ಶ್ರೀ ಉಡುಪಿ ಕೃಷ್ಣ ದೇವರ ಸ್ತೋತ್ರ.

ರಾಗ ಭೈರವಿ ಧ್ರುವತಾಳ

ಎತ್ತಣ ಶಬ್ದವಿದು ಎನ್ನ ಕರ್ಣಕಿದು ಯುವ್ವ ।
ಎತ್ತಣ ಸ್ಪರ್ಶವಿದು ಎನ್ನ ಅಂಗಕಿದು ಯುವ್ವ ।
ಎತ್ತಣ ರೂಪವಿದು ಎನ್ನ ನಯನಕಿದು ಯುವ್ವ ।
ಎತ್ತಣ ರಸವಿದು ಎನ್ನ ಜಿಹ್ವೆಗೆ ಇದು ಯುವ್ವ ।
ಎತ್ತಣ ಗಂಧವಿದು ಎನ್ನ ನಾಸಿಕಿದು ಯುವ್ವ ।
ಸುತ್ತಿಹ ಶಿರದಿ ನಾನಾಲತೆಯು ಎಳೆದಳಿರು ।
ರತುನ ಮುಕುಟ ಪಣೆಯು ಕಸ್ತೂರಿ ಕಮಲ ನಯನ ।
ವೃತ್ತ ವದನವು ಮಂದಸ್ಮಿತ ಚಲ್ವಕಿರಿದಂತ ।
ತತ್ಥಳಿಪ ಕಪೋಲ ಚಲತ್ತು ಮಕರ ಕುಂಡಲ ।
ಉತ್ತಮದ ಕಂಬು ಕಂಠ ಉರದಲ್ಲಿ ಶ್ರೀವತ್ಸ ।
ಶ್ರೀ ತುಲಸಿ ಮಾಲ ಶೃಂಗಾರಿತ್ತವಾದ ಭುಜಕೀರ್ತಿ ।
ತಿತ್ತಿರಿಮಪೂರಿ ಕೊಳಲೂದುತ್ತ ಸ್ವರವೆತ್ತಿಗಾನ ।
ಕುತ್ತಿಗಿಯು ಬಾಗಿ ತಾಳ ಕಿಕ್ಕಿ ತೋಳ ಕರವನ್ನು ।
ಗುತ್ತಿ ಗುಲಗಂಜಿ ದಂಡೆ ಚಿತ್ರೆ ಹೊನ್ನುಂಗರ ಬೆರಳ ।
ಲೊತ್ತಿವೇಣು ಮೀಟುತ್ತ ಮತ್ತೆ ಸರಿಗಮದಿಂದ ।
ಚಿತ್ತಜ ನೈಯ್ಯ ಜಗದ್ಭರಿತ ಉದರ ತ್ರಿವಳಿಯು ।
ಸುತ್ತಿದ ಕಟಿಯು ಕಾಂಚಿದಾಮ ಗುಲ್ಲಿಯ ಚೀಲ ।
ಬುತ್ತಿಯು ಚಿಕ್ಕವು ಬಚ್ಚಣಿಯು ಕೋಲು ಬಲಸೆಕ್ಕಿ ।
ಎತ್ತಿ ಎತ್ತಿ ಮೆಲ್ಲನೆ ಪಾದೆತ್ತಿ ಹೆಜ್ಜೆನಿಡುತ್ತ ।
ಮತ್ತೆ ಮಹ ಅರ್ಥಿಗಿನ್ನು ಪೃಥ್ವಿ ಆತುರಳಾಗಿ ।
ಇತ್ತ ವಿಭವು ಮುಂದತ್ತ ಚಿಂತಿಸುತಿಪ್ಪಳೊ ।
ಸತ್ಯ ಸಾಕಾರ ಸರ್ವಜ್ಞ ಗೋಪಾಲ ವಿಟ್ಠಲ ।
ಮತ್ತೆ ಈ ಉಡುಪಿನ ಕೃಷ್ಣ ಸುತ್ತು ಸುಳಿದು ಸಲಹೆನ್ನ ॥ ೧ ॥

ಮಟ್ಟತಾಳ

ಸುಖ ಪೂರ್ಣ ಜ್ಞಾನ ಪೂರ್ಣ ಸುಖತೀರ್ಥರ ಪ್ರಿಯ।
ಭಕುತ ವತ್ಸಲದೇವ ಬಂಧಕ ಮೋಚಕ ।
ಶಕುತ ಲಕುಮಿ ಮನೋಹರ ರಾಜರಾಜೇಶ್ವರ ।
ಮುಕುತಿದಾಯಕ ಮೂಲ ಅವತಾರ ಅಭೇದ ।
ನಖ ಶಿಖ ಪರಿಪೂರ್ಣ ನರಸಖ ನಿರ್ದೋಷ ।
ಸಕಲರಲ್ಲಿ ವ್ಯಾಪ್ತ ಸಕಲ ಸಾರಭೋಕ್ತ ।
ಭಕುತಿಯಿಂದ ಲಭ್ಯ ಬಡವ ಬಲ್ಲಿದನೆನ್ನ ।
ಮಕ್ಕಳ ಮಾಣಿಕ್ಯ ದೇವಕ್ಕಿ ಪುಣ್ಯೋದಯ ।
ರಕ್ಕಸಾಂತಕ ರಾಮ ಪ್ರಾಕೃತರಹಿತ ।
ಸಕಲ ಗುಣ ಪೂರ್ಣ ಗೋಪಾಲ ವಿಟ್ಠಲ ।
ಶ್ರೀ ಕೃಷ್ಣ ಉಡುಪಿ ನಿವಾಸ ಸಲಹೋನಮ್ಮ ॥ ೨ ॥

ರೂಪಕತಾಳ

ದ್ವಾಪರದಲಿ ಅಂದು ಅವತರಿಸಿದ ಹರಿಯೆ ।
ಗೋಪಾಲರೊಡ ನಿನ್ನು ಆಡಿ ವಿಶಾಳಕಾಯ್ದ ।
ಅಪ್ರಮೇಯ ಪೂರ್ಣ ಪೂರ್ಣಮಾಡಲಿಬೇಕು ಎಂತೆಂದು ।
ಈ ಪೃಥ್ವಿಯಲ್ಲಿ ಈ ಸ್ಥಳದಲ್ಲಿ ನಿಂತಿನ್ನು ।
ಗೋಪಾಲಕರೆ ಗೋವುಗಳ ಅಂದಾದವರ ।
ಸುಪರಮ ಸನ್ಯಾಸಿಗಳ ಮಾಡಿ ಸೃಷ್ಟಿಸಿ ।
ತಾ ಪೂಜಿ ಇವರಿಂದ ನಿರತ ತೆಗೆದುಕೊಂಡು ।
ಶ್ರೀಪತಿ ಇವರಿಂದ ಸರ್ವಸಾಧನಗಳನ ।
ತಾ ಪಾಲಿಸುವ ಸಂಭಾಷ ಸಂದರಶನದಿ ।
ನಾ ಪ್ರತಿ ಕಾಣೆ ಈ ಕ್ಷೇತ್ರಕ್ಕೆ ಮಿಗಿಲೊಂದೂ ।
ಶ್ರೀ ಪುರುಷೋತ್ತಮ ಉಡುಪಿನ ಸಿರಿಕೃಷ್ಣ ।
ಅಪಾರ ಮಹಿಮ ಗೋಪಾಲ ವಿಟ್ಠಲ ।
ಈ ಪರಿ ಇರುತಿಪ್ಪ ಇಲ್ಲಿ ಪಾಲಿಸುತ್ತ ॥ ೩ ॥

### ಝಂಪೆ ತಾಳ

ಅಣು ಮೂರುತಿಯಿದೆ ಘನ ಮೂರುತಿಯಿದೇ ।
ಅಣುಘನ ಪರಿಪೂರ್ಣ ಮೂರುತಿ ಇದೆ ।
ವನಜ ಭವಾದಿಗಳ ಮನಕೆ ಧೇಯವು ಇದೇ ।
ಸನಕಾದಿಗಳ ಮನಕೆ ಒಪ್ಪುವದಿದೇ ।
ಅಣಿಮಾದಿ ಅಷ್ಟಾಂಗ ಯೋಗ ಸಾಧನವುಳ್ಳ ।
ಮುನಿಗಳ ಮನಕೆ ಪೊಳೆಯುತಲಿಹದಿದೆ ।
ಕನಸು ಜಾಗ್ರತೆ ಸ್ವಪ್ನ ಸುಷುಪ್ತಿ ವ್ಯಾಪಾರ ।
ದಿನಗಳನು ನಡೆಸುವ ಮೂರ್ತಿ ಇದೇ ।
ಫಣಿ ಫಣದಲ್ಲಿ ನಾಟ್ಯವಾಡಿ ಭಕ್ತರ ಕಾಯ್ದ ।
ಮನುಜ ರೂಪವ ತಾಳ್ದ ಮೂರ್ತಿ ಇದೆ ।
ಜನನಿಗಾಟವ ತೋರಿ ಜನರ ತೋಷ ಬಡಿಸಿದ ।
ಘನ ಕರುಣಾಕರ ಮೂರ್ತಿ ಇದೇ ।
ವನಧಿ ತೀರವಾಸ ಗೋಪಾಲ ವಿಟ್ಠಲ ।
ಚಿನುಮಯ ಮೂರ್ತಿ ಸುಖ ।
ಮುನಿಮನ ಮಂದಿರ ನಿವಾಸಾ ॥ ೪ ॥

### ತ್ರಿವಿಡಿ ತಾಳ

ಚಿತ್ತಜನಯ್ಯ ಕಾಣೋ ಚಿಂತನಿಗೆ ।
ಭಕ್ತವತ್ಸಲ ಕಾಣೋ ಅಭಿಮುಖಕೆ ।
ನಿತ್ಯ ವ್ಯಕ್ತನು ಕಾಣೊ ನಿರುಪಾಧಿಕರಿಗೆಲ್ಲ ।
ಸತ್ಯ ಅವ್ಯಕ್ತ ವಿಷಯಾಸಕ್ತರಿಗೆ ।
ಸತ್ಯ ರೂಪನು ಕಾಣೊ ಭೃತ್ಯಜನರಿಗಿನ್ನು ।
ವ್ಯತ್ಯ ರೂಪನು ಕಾಣೊ ದೈತ್ಯಜನಕೆ ।
ಮತ್ತೆ ಮಧ್ಯಮರಿಗೆ ಮನುಜರೂಪದಿ ತೋರ್ಪ ।
ಮತ್ತಾ ಜಾರ ಸ್ತ್ರೀಯರಿಗೆ ಜಾರ ।
ಸುತ್ತ ಆಡಿದ ಗೋಪಾಲಕರಿಂಗೆ ಗೋವಳ ।

ತತ್ತ್ವದಾಕಾರವು ಪೊಂದರಲ್ಲೀ ।
ಪ್ರತ್ಯೇಕ ಅವರವರಿಷ್ಟ ರೂಪಕನಾಗಿ ।
ನಿತ್ಯ ತೋರುವ ನಿಲಕೆ ಜೀವರಿಗೆ ।
ಮುಕ್ತಿದಾಯಕ ಕೃಷ್ಣ ಗೋಪಾಲವಿಟ್ಠಲ ।
ಪ್ರತ್ಯಕ್ಷ ನೋಡಿಲ್ಲಿ ಬಲ್ಲವರಿಗೆ ||೫||

ಅಟ್ಟತಾಳ

ಇದೇ ಸ್ವೇತದ್ವೀಪ ಇದೇ ಅನಂತಾಸನ ।
ಇದೇ ಶ್ರೀ ವೈಕುಂಠ ಇದೇ ಮುಕ್ತಭಾಗ ।
ಇದೇ ಮಧ್ವಸರೋವರ ವಿಧಿಯಿಂದ ಮಾಡಿದ್ದು ।
ವಿಧಿ ಕಾಣೋ ವಿರಜಾನದಿಯು ಸ್ನಾನಕೆ ಮುಂದೆ।
ಪದುಮೆಯಿಂದರ್ಥಿಲಿ ಪೂಜಿತ ಮೂರ್ತಿದು ।
ವಿಧಿಯಿಂದ ನಿರ್ಮಿತವಾದ ಮೂರ್ತಿಯುನೋಡಾ ।
ಅಧಿಕಧಿಕವಾಹ ಮೂರ್ತಿ ಅಪ್ರತಿ ಈ ಕ್ಷೇತ್ರ ।
ಬುಧರೇವೆ ಬಲ್ಲರು ವಿಧಿಸಿ ನೋಡಲು ಇನ್ನು ।
ಮದನ ನಯ್ಯ ಚಲ್ವ ಗೋಪಾಲ ವಿಟ್ಠಲ ।
ಸದಾನಮ್ಮ ಸಲಹೋ ಶ್ರೀ ಉಡುಪಿನ ಕೃಷ್ಣ ||೬||

ಆದಿತಾಳ

ನಮೊ ನಮೊ ಪಾಂಡವ ಪಕ್ಷಪಾತಿಯೆ ।
ನಮೊ ನಮೊ ಅಗಣಿತ ಗುಣಗಣಾಂಬುಧೆ ।
ನಮೊ ನಮೊ ನಿರ್ದೋಷ ನಿಜ ಆನಂದ ।
ನಮೊ ನಮೊ ಪ್ರಾಕೃತಗಂಧ ವಿದೂರನೆ ।
ನಮೊ ನಮೊ ನಿತ್ಯನಿರಂಜನ ಪೂರ್ಣ ।
ನಮೊ ನಮೊ ಸ್ವಗತ ಭೇದವಿವರ್ಜಿತ ।
ನಮೊ ನಮೊ ನಿರ್ಜಿತ ಮಾಯ ಸುವರ್ಗ ।
ನಮೊ ನಮೊ ಕಾರುಣ್ಯ ಕಾಪಟ್ಯರಹಿತ ।
ನಮೊ ನಮೊ ವಿಷ್ಣು ಸಾಕಾರ ಚಲುವ ।
ನಮೊ ನಮೊ ನಿತ್ಯ ತೃಪ್ತ ನಿರಾಶ್ರಯ ।

ನಮೊ ನಮೊ ಸಿರಿ ಅಬುಜ ಭವವಂದಿತ ।
ನಮೊ ನಮೊ ಸರ್ವಜೀವ ಜಡವ್ಯಾಪ್ತ ।
ನಮೊ ನಮೊ ಸೃಷ್ಟ್ಯಾದಿ ಅಷ್ಟಕರ್ತರಾಜ ।
ನಮೊ ನಮೊ ಸುರನದಿ ಜನಕ ಹೇ ತಾತ ।
ನಮೊ ನಮೊ ಗೋಪಾಲ ವಿಟ್ಠಲ ಮೂರುತಿ ।
ನಮೊ ನಮೊ ಜಯ ಜಯ ಉಡಪಿನ ಸಿರಿಕೃಷ್ಣ ॥೭॥

ಜತೆ

ನೋಡಿದವನಲ್ಲ ನಾನಿನ್ನ ನಿಜರೂಪ ।
ನೋಡಿಸೊ ಕರುಣದಿ ಗೋಪಾಲವಿಟ್ಠಲ ॥೮॥

## ಸುಳಾದಿ ೫೩

## ಶ್ರೀ ಲಕ್ಷ್ಮೀ ಸ್ತೋತ್ರ

ರಾಗ ಭೈರವಿ ಧ್ರುವತಾಳ

ಇಂದಿರಾ ದೇವಿ ಮಾತೇ (ಮತ್ತೆ) ತಂದೆ ವಿಟ್ಠಲನರ ।
ವಿಂದ ಚರಣಕ್ಕಿನ್ನು ಅಂದಿಗಿ ಗೆಜ್ಜೆ ಆದ ।
ಹೊಂದಿಕೆಯಾದ ಊರು ಜಾನು ಕೈಯ ಮೇಲೆ ।
ಚಂದಾದ ಸ್ವರೂಪ ಪೀತಾಂಬರೊಡ್ಯಾಣಾದೆ ।
ಮಂದರಧರ ನೊಕ್ಷ ಸ್ಥಳದಲಿ ನೀ ನಿಂದ ।
ಕಂದರದಲಿ ಚಿತ್ರ ವೈಚಿತ್ರ ಪರಿ ।
ಗಂಧವು ಪದಕ ಹಾರಂಗಳು ಪುಷ್ಪ ತುಲಸೀ ।
ಇಂದೊಪ್ಪುವ ಅಲಂಕಾರ ನಂದ ಶೋಭಿತಳಾದೆ ।
ಒಂದೊಂದು ಹಸ್ತದಲ್ಲಿ ಆಯುಧಗಳಾದೆ ।
ಚಂದುಳ್ಳ ಕಡಿಯ ತೋಳ್ಬಂದಿ ಭುಜಕೀರ್ತಿ ।
ಕುಂದು ಇಲ್ಲದೆ ಕರನ ಕುಂಡಲ ನಾನಾ ಪರಿ ।
ಅಂದವಾದರಳೆಲೆ ಸುಂದರ ಕಿರೀಟವು ।
ಸಂದಿ ಸಂದಿಗೆ ನಾನಾ ಭರಣಾಲಂಕಾರಳಾದೆ ।
ಇಂದಿರೇಶನ ಪ್ರತಿ ಅವಯವಗಳಲಿ ಇನ್ನು ।
ಇಂದಿರೇ ಪ್ರತಿ ಪ್ರತಿ ವಸ್ತುವಾದೆ ।

ಕಂದರ್ಪ ನಯ್ಯನ ಆನಂದದಿ ಬೆರೆದು ಸುಖ ಸುರಿದೆನೀ ।
ಒಂದರಘಳಿಗೆ ಅಗಲಾದೆ ಇನ್ನು ಕಂದಬೊಮ್ಮನು ಮತ್ತೆ ।
ನಂದಿವಾಹನ ಅಮರೇಂದ್ರ ಸನಕಸನಂದರಿಂದಲಿನ್ನು ।
ಕುಂದಿಲ್ಲದೋಲಗವನಂದಾದಿ ಕೊಳುತ ಮುಕ್ತ ।
ರಿಂದ ಸೇವಿತಳಾಗಿ ಎಂದೆಂದು ಬಿಡದಲೆ ।
ಸಂದೇಹವಿಲ್ಲದೆ ಗೋಪಾಲ ವಿಟ್ಠಲನ್ನ ।
ಪೊಂದಿ ಸುಖದಲಿ ಚಂದದಿ ಮೆರದೆ ॥೧॥

ಮಟ್ಟತಾಳ

ಹರಿ ಅನಿರುದ್ಧನಾಗೆ ಸಿರಿ ಶಾಂತಿದೇವಿ ಆದೆ ।
ಹರಿ ಪ್ರದ್ಯುಮ್ನನಾಗೆ ಸಿರಿ ಕೃತಿ ದೇವಿ ಆದೆ ।
ಹರಿ ಸಂಕರುಷಣನಾಗೆ ಸಿರಿ ಜಯದೇವಿ ಆದೆ ।
ಹರಿ ವಾಸುದೇವನಾಗೆ ಸಿರಿ ಮಾಯಾದೇವಿ ಆದೆ ।
ಎರಡೆರಡ ಅವತಾರಕ್ಕೆಮರಳಿ ಮರಳಿಚತುರವತಾರಗಳು ಆದೆ
ಪರ ಪರಿ ಅವತಾರಕ್ಕೆ ಹರಿ ಪರಿ ರೂಪಳಾದೆ ।
ಶರಣರ ಪಾಲಕ ಗೋಪಾಲ ವಿಟ್ಠಲನ್ನ ।
ಚರಣ ಕಮಲವನ್ನು ಪರಿಪರಿ ಸೇವಿಸುತ ॥೨॥

ತ್ರಿವಿಡಿತಾಳ

ಧರಿಯ ರೂಪದಿ ಹರಿಗೆ ಕುಳ್ಳಿರ ಗದ್ದಿಗೆಯಾದೆ ।
ಮೆರೆವ ಅವ್ಯಾಕೃತಗಗನವೆ ಕೊಡೆಯಾದೆ ।
ಎರಡೆರಡೊಂದು ರೂಪದಿ ಹರಿ ಇತ್ತಲು ರಮಾ ।
ಮರಳಿ ಶ್ರೀರೂಪದಿ ಹರಿಯಿಂದ ಬೆರೆದು ।
ಸ್ವರಮಣನ ರಮಿಸಿ ಯೋಗನಿದ್ರೆಯ ಮಾಡೀ ।
ಹರಿ ಇಚ್ಛೆದಿಂದ ಅಂಭೃಣಿ ರೂಪಳಾದೆ ।
ಪರಿ ಪರಿ ಶ್ರುತಿಯಿಂದ ಸೃಷ್ಟಿಯ ರಚಿಸೆಂದು ।
ಹರಿಯ ಕೊಂಡಾಡಿದೆ ಹರುಷದಿ ನಲಿದೆ ।
ಹರಿಯ ನಾಭಿಯಲಿನ್ನು ಸರಸಿಜರೂಪದಿ ।
ವಿರಿಂಚಿಯನ ಪಡದೆ ಕರುಣಾಕರ ಮತ್ತೆ ।

ಅರಿವಂತೆ ಅಜಗಿನ್ನು ತಪ ತಪವೆಂದು ।
ಅಶರೀರಹಿತ ನುಡಿದೆ ಅವ್ಯಾಕೃತಕೆ ಅಭಿಮಾನಿ ।
ಪರಿಪೂರ್ಣ ಗುಣಭರಿತ ಗೋಪಾಲ ವಿಟ್ಠಲನ್ನ ।
ಕರುಣದಿಂದೆರಡೆರಡು ಸೃಷ್ಟಿಯ ರಚಿಸಿದೆ ॥೩॥

ಅಟ್ಟತಾಳ

ಹರಿ ಆಜ್ಞೆದಿಂದಲಿ ಜಡ ಪ್ರಕೃತಿ ದೆಶೆಯಿಂದ ।
ವರ ತ್ರಿಗುಣಾತ್ಮಕವಾದಂಥ ಮಹತತ್ವದ ।
ದರಿಂದ ವೈಕಾರಿಕ ತೈಜಸ ತಾಮಸವನ್ನು ।
ಭರಿತವಾದಂಥ ಅಹಂಕಾರ ತತ್ವ ಪರಿ ಪರಿ ಸೃಷ್ಟಿಸಿದೆ ।
ವರ ಮಾಯಾ ನೋವಿಲ್ಲದೆ ।
ಪರಮ ದಯಾಳು ಗೋಪಾಲ ವಿಟ್ಠಲನು ।
ಕರುಣಿಸುವನು ಸೀ ಕರ ವಿಡಿವವರ ॥ ೪ ॥

ಆದಿತಾಳ

ಮಹತತ್ವ ದಶೆಯಿಂದ ಬೊಮ್ಮನ ಸೃಷ್ಟಿಸಿದೆ ।
ಅಹಂಕಾರ ವೈಕಾರಿಕದಿಂದ ಮನಸು ಇಂದ್ರಿಯಗಳಭಿಮಾನಿ ದೇವತೆಗಳನ್ನು ।
ಅಹಂಕಾರ ಪಂಚ ತನ್ಮಾತ್ರಿಯನು ಸೃಷ್ಟಿಸಿದೆ ।
ಅಹಂಕಾರ ತೈಜಸದಿಂದ ಚಕ್ಷುರಾದಿ ಇಂದ್ರಿಯಗಳನು ಎಲ್ಲ ಸೃಷ್ಟಿಸಿದೆ ।
ಅಹಂಕಾರ ತಾಮಸದಿಂದಲಿ ಪಂಚಮಹಾಭೂತಂಗಳ ಸೃಷ್ಟಿಸಿದೆ
ಮೋಹದಿಂದ ಸಕಲ ತತ್ವೇಶರ ಸೃಷ್ಟಿಸಿದೆ ।
ಆ ಹರಿ ಕರುಣಾ ಪೂರ್ಣ ಕಟಾಕ್ಷದಿ ಈ ।
ಮಹಾ ಜಗಕೆಲ್ಲ ಪ್ರೇಮದಿ ಸಲಹುವೆ ।
ಮೋಹನ್ನ ಮೂರುತಿ ಗೋಪಾಲ ವಿಟ್ಠಲನ್ನ ।
ಸಹಸಾವಿಲ್ಲದೆ ರಹಸ್ಯ ಪೂಜಿಪೆ ॥ ೫ ॥

ಜತೆ

ನಮೊ ನಮೊ ನಿನ್ನ ಪಾದ ಕಮಲವೆ ಮೊರೆಹೊಕ್ಕೆ ।
ಮಮತಿ ಪುಟ್ಟಿಸೆನಗೆ ಗೋಪಾಲ ವಿಟ್ಠಲನಲ್ಲಿ ॥ ೬ ॥

## ಸುಳಾದಿ ೫೪

### ರಾಗ ಸಾರಂಗ ಧ್ರುವತಾಳ

ಒಂದು ನಿನ್ನ ಮೂರುತಿ ಬೊಮ್ಮಾಂಡದಿ ಇಪ್ಪದು ।
ಒಂದು ನಿನ್ನ ಮೂರುತಿ ಬೊಮ್ಮಾಂಡ ಸುತ್ತಿಹ್ಯದು ।
ಒಂದು ನಿನ್ನ ಮೂರುತಿ ಬೊಮ್ಮಾಂಡದ ಹೊರಗೆ ।
ಗಂಧಾಪೂಸಿದಂತೆ ಅವ್ಯಾಕೃತವ್ಯಾಪಿಸಿ ।
ಇಂದಿರೆ ಅಭಿಮಾನಿ ಆತತ್ವಾನಿತ್ಯಾವಸ್ತ ।
ಎಂದಿಗೆ ಅಲ್ಲಿ ಬಿಡದೆ ಇಪ್ಪಾ ಮಹಾಮೂರುತಿ ।
ವಂದೆ ನಿನ್ನ ಮೂರುತಿ ಮೂಲಾವತಾರ ಐಕ್ಯಾ ।
ಒಂದೇ ಬಲಜ್ಞಾನ ಆನಂದ ನಿರ್ದೋಷ ।
ಎಂದಿಗೂ ಜೀವ ಜಡದಿಂದ ಅಗಲದೇ ಇಪ್ಪ ।
ಸುಂದರ ವಿಗ್ರಹ ಗೋಪಾಲ ವಿಟ್ಠಲ ।
ನಿಂದು ಭಕುತಾರಲ್ಲಿ ಇಪ್ಪಕರುಣಿ ॥ ೧ ॥

### ಮಟ್ಟತಾಳ

ಸರ್ವಾಪರೋಕ್ಷಿ ಸರ್ವಜ್ಞಾನೆ ।
ಸರ್ವಾನಂದಾಗುಣಗಣ ಪರಿಪೂರ್ಣ ।
ಸರ್ವೋತ್ತಮಾ ಸಾಕ್ಷಾತಕಾರಾ ।
ಸರ್ವವಿ ವ್ಯಾಪ್ತಾ ಸರ್ವ ಚೇಷ್ಟಾ ।
ನಿರ್ವಿಕಾರಾ ನಿತ್ಯ ತೃಪ್ತಾ ।
ಗರ್ವಹರಾ ಗರುಡಗಮನಾ ।
ನಿರ್ವಧಿಕ ಅಂತರ್ಯಾಮಿ ರೂಪಾ।
ಘನದಲ್ಲಿ ಅಣು ಅಡಕ ಮೂಲರೂಪದಿ ।
ಅಣು ಘನಕಾರ್ಯಗಳು ನಿನ್ನ ಭಕುತರಿಗಾಗಿ ।
ದಿನ ದಿನಗಳಲ್ಲಿ ಮಾಡುತಲಿ ಇಪ್ಪೆ ।
ಘನ ಅಣು ಪರಿಪೂರ್ಣಾ ಗೋಪಾಲವಿಟ್ಠಲಾ ।
ನಿನಗಲ್ಲಾದೀಶಕುತಿ ಭಣಗುಗಳಿಗುಂಟೇ ॥ ೨ ॥

ತ್ರಿವಿಡಿ ತಾಳ

ನಿಷೇಧಾ ವಿಶೇಷ ವಿಭಾಗ ಮಾಡಲಾಗಿ ।
ನಿಷೇಧಾ ವಿಶೇಷ ವಸ್ತುನೀನೆ ।
ವಿಶೇಷಾ ನಿಶೇಷಾ ವಿಭಾಗ ಮಾಡಲಾಗಿ ।
ವಿಶೇಷಾ ನಿಷೇಧಾ ವಸ್ತುನೀನೆ ।
ಸಾಸಿರಕೆ ಬೆಲೆ ನೀನೆ ಕಾಸಿಗೆ ಬೆಲೆ ನೀನೆ ।
ಲೇಸಃ ಹ್ರಾಸಕೆ ಎಲ್ಲಾ ಶೇಷನೀನೆ ।
ದೋಷರಹಿತ ಭಕ್ತ ಪ್ರೋಷ ಅವಲ್ಲಿದ್ದರು ।
ಕೇಶವಾಚ್ಯುತಾನಂತಾ ನಾಶರಹಿತ ।
ವಾಸುದೇವ ಮುಕುಂದ ಗೋಪಾಲವಿಟ್ಠಲದಾಸಾ ದಾಸದಾಸರ
ಪೊರವ ಭಾರ ನಿನ್ನದೊ ದೇವ ॥ ೫

ಅಟ್ಟತಾಳ

ಗೋವಿಂದ ಗೋಪಾಲ ಗೋವರ್ಧನಧರ ।
ಗೋವಳರೊಡಿಯಾನೆ ಗೋವುಗಳ ಪಾಲ ।
ಜೀವಜಡದಿ ಭಿನ್ನ ಪಾವನ್ನ ಮೂರುತಿ ।
ಈಪ ಕಾವಯಿಷ್ಟಾ ಯಾವತ್ತರಲಿವ್ಯಾಪ್ತಾ ।
ಕಾವಕರುಣಾಂಗ ಗೋಪಾಲವಿಟ್ಠಲ ।
ಕೋವಿದರಿಗೆ ನಿನ್ನ ಕುರಹಾ ತೋರಿರ್ವಿ ॥ ೬ ॥

ಆದಿತಾಳ

ನಿನ್ನ ಇಚ್ಛೆಯಿಂದಲಿ ಜಗವಸೃಷ್ಟಿಸುವಿ ।
ನಿನ್ನ ಇಚ್ಛೆಯಿಂದಲಿ ಅವತಾರ ಮಾಡುವಿ ।
ನಿನ್ನ ಇಚ್ಛೆಯಿಂದಲಿ ಜಗವ ಪಾಲಿಸುವಿ ।
ನಿನ್ನಾ ಇಚ್ಛೆಯಿಂದಲಿ ಜಗವಸಂಹರಿ ಸುವಿ ।
ನಿನ್ನಗೆ ನೀನೆ ಪ್ರೇರಣೆ ಮಾಡುವಿ ।
ನಿನ್ನಿಂದ ನೀನೆ ಆನಂದ ಬಡುವಿ ।
ಭಿನ್ನ ವಸ್ತುವಿನಿಂದ ಯಿನ್ನಾಪೇಕ್ಷಿಯು ।
ಇನ್ನಿಲ್ಲ ಯಿನ್ನಿಲ್ಲ ಚಿನ್ನುಮಯ ನಿನಗೆ ।
ಇನ್ನು ಅವಾವ ಜೀವರುಗಳಿಗೆ ।

ಉನ್ನಾಹ ವ್ಯಕುತಿ ಮಾಡುವ ನೀನೆ |
ಘನ್ನ ದಯಾನಿಧಿ ಗೋಪಾಲವಿಟ್ಠಲ |
ನಿನ್ನ ಮಹಿಮೆಗೆ ನಾನನಮೊನಮೊಯೆಂಬೆ || ೭ ||

**ಜತೆ**

ಸ್ವಾತಂತ್ರ ಸ್ವಾಧೀನಪಾರಾ ತಂತ್ರಾದಿದೂರ |
ಆತಂತ್ರರಾ ಪೊರೆಯೊ ಗೋಪಾಲವಿಟ್ಠಲಾ || ೮ ||

ಶ್ರೀ ಗುರು ಮಧ್ವೇಶಾರ್ಪಿತವು.

## ಸುಳಾದಿ ೫೫

ಸಕಲ ಸಾಧನ ಶ್ರೀಹರಿಯ ಅಧೀನ ತಿಳಿವುದೇ ಸಾಧನದಲ್ಲಿಯು
ಮುಖ್ಯಾಂಶ ಇದನ್ನರಿತವರಿಗೆ ಶ್ರೀಹರಿಯುವೊಲಿವ.

ರಾಗ ಕಾಂಬೋದಿ ಧ್ರುವತಾಳ

ಹರಿಯ ಸೇವಿಸುವವ ಆವ ಪಾಮರನೆ ? ಮರದು |
ಹರಿಯ ಸೇವಿಸುವವ ಆವ ಪಾಮರನು ಅಲ್ಲೆ |
ಹರಿಯ ತಿಳಿದವನು ಅವನು ಜ್ಞಾನಿಯೆ ನೋಡಾ |
ಹರಿಯ ತಿಳಿದವ ಪೂರ್ಣ [illegible]ವನು ಜ್ಞಾನಿಯೆ ನೋಡಾ |
ಹರಿಯೆ ಕರ್ತಾ ನಾ ಕರ್ತನಲ್ಲಾನೆಂದವ ಜ್ಞಾನಿ |
ಹರಿಕರ್ತ ನಾನು ಕರ್ತನೆಂದವನು ಜ್ಞಾನಿಯೆ ? |
ಹರಿಯೆ ಸ್ವಾತಂತ್ರನಾನಲ್ಲವೆಂದವ ಜ್ಞಾನಿಯೆ |
ಹರಿಯೆ ಸ್ವತಂತ್ರ ನಾನು ಸ್ವತಂತ್ರನೆಂದವ ಜ್ಞಾನಿಯೆ ? |
ಹರಿ ಮಾಡಿಸಲು ಮಾಡಿದೆನೆಂಬೊವ ಜ್ಞಾನಿಯೆ |
ಹರಿ ಮಾಡಿ ಮಾಡಿಸಲು ಮಾಡಿದೆಂದವ ಜ್ಞಾನೆ |
ಹರಿ ಮಾಡೆನ್ನೆ ಮಾಡಿದೆನೆಂದವನು ಜ್ಞಾನಿಯೆ |
ಹರಿ ಮಾಡಿದರೆ ನಾಮಾಡೇನೆಂದವ ಜ್ಞಾನೆ |
ಹರಿಯು ಕೂಡಾ ನಾನು ಮಾಡಿದೆಂಬವ ಜ್ಞಾನೆ |
ಹರಿಯೆ ಮಾಳ್ಪವ ನಾನ್ಯಾತಕಲ್ಲೆಂದವ ಜ್ಞಾನೆ |

ಹರಿಯನರಿಯದವ ಆವನು ಒಬ್ಬ ಜ್ಞಾನಿಯೆ |
ಹರಿಯ ಬಲ್ಲೆನೆಂದವ ಆವನು ಒಬ್ಬ ಜ್ಞಾನಿಯೆ |
ಹರಿಯೆ ಸರ್ವ ಚೇಷ್ಟಪ್ರದ ಗೋಪಾಲ ವಿಟ್ಠಲ ನರ |
ಹರಿ ಎಂದರಿದವನು ನರನೆ ನರನೆ ನೋಡಾ || ೧ ||

ಮಟ್ಟತಾಳ

ಮಂತ್ರ ಮಾಡಿದರೇನು ತಂತು ತೋರಿದರೇನು |
ಎಂತೆಂತು ಕರ್ಮ ನಿರಂತರ ಮಾಡಲೇನು |
ಚಿಂತನೆ ಹರಿ ಸ್ವತಂತ್ರ ಪರತಂತ್ರ |
ಇಂತು ಜೀವೇಶರ ವಿವೇಕನರಿಯದಾ |

ನಂತ ಜನುಮಗಳು ಆಗಿ ಬಂದಿದ್ದರು |
ಸಂತೋಷವು ಕೊಡವು ಸಾಧನ ಕರ್ಮಗಳು |
ದಂತಿಮಜ್ಜನ ಕಾಣೋ |
ಹರಿಯ ತಿಳಿಯದ ಕರ್ಮ |

ಗ್ರಂಥಿ ಬಿಡುವದಲ್ಲ ಅಜ್ಞಾನದ ಸರಕು (ಸುರಕು) |
ನಿಂತು ನಿದ್ರೆಮಾಳ್ಪನಂತೆ ಕೊನಿಗೆ ಸೌಖ್ಯ |
ಚಿಂತತ ಫಲದಾತ ಗೋಪಾಲ ವಿಟ್ಠಲ |
ನೆಂತೆಂತುಪಾಸ್ಯರಂತಂತೆ ಫಲವೀವ || ೨ ||

ರೂಪಕ ತಾಳ

ಚೇತನರೆ ಸರಿ ಜೀವ ಚಲನೆ ಮಾಡಿಸೆ ಹರಿ |
ಚೇತನವೆ ಜಡ ತುಲ್ಯ ಚಲನೆ ಮಾಡಿಸದಿರಲು |
ಚೇತನಾಚೇತನಕೆ ಸಾಮ್ಯವೆ ಸರಿ ಹರಿ ವಿನಹ |
ಯಾತರಿಂದಲಿ ನೋಡು ಜ್ಞಾನಿಚೆ ಪ್ರಯತ್ನವು |

ಪಾತಕ ಪುಣ್ಯಕ್ಕೆ ಹರಿಯೆ ಪ್ರೇರಕನೆಂದು |
ತಾ ತಿಳಿದು ಇಪ್ಪಪಗೆಯಾತನೆಂಬದು ಎಲ್ಲೋ ? |
ತಾ ತಿಳಿಯದಲೆ ಪುಣ್ಯ ಮಾತುರಕೆ ನಾನೆನಲು |
ಪಾತಕವವನೆ ಮಾಡಿ ಪುಣ್ಯವಾದರು ನೋಡ |

ಪತಿವೃತಿ ಸ್ತ್ರೀ ತನ್ನ ಪತಿ ಆಜ್ಞದಿಂದ ವಿ |
ಜಾತಿ ಪುರುಷನ್ನ ಅನುಸರಿಸೆಂದು ಆಜ್ಞ ಕೊಡೆ |
ಮಾತು ಪತಿಯದು ನಡಿಸೆ ಪಾತಕವಳಿಗೆವುಂಟೆ ? |
ಯಾತನಿಗೆ ಸರಿ ಯೋಗ್ಯ ಕರ್ಮ ಮಾಡಿದರಾಗೆ |
ಪಾತಕಿಲ್ಲವು ನೋಡು ನೋಡಿ ನೋಡು |
ಜ್ಯೋತಿರ್ಮಯ ಮೂರ್ತಿ ಗೋಪಾಲ ವಿಟ್ಠಲ |
ಯಾತರವ ನಾನಲ್ಲ ಎಲ್ಲ ನಿನ್ನಾಧೀನ || ೩ ||

ಝುಂಪೆ ತಾಳ

ಹರಿ ಮಾಡೆನಲು ಮಾಡೆನೆಂಬುವಗೆ ಸಂಸಾರ |
ಹರಿಯೆಂಬುವದು ಲಕ್ಷ ಹರುದಾರಿ ಜಲವುದ್ದ |
ಶರಧಿಂದ ಕಡೆ ಬೀಳಲರಿಯಾನವನೆಂದಿಗು |
ಹರಿಯು ತೋರದು ಅವಗೆ ಎಂದೆಂದಿಗು |
ಹರಿ ಕೂಡ ನಾನು ಮಾಡಿದೆನೆಂಬುವಗೆ |
ಶರಧಿ ಹರಗೋಲು ಹುಟ್ಟಿಲ್ಲಧಾಕಿದಂತೆ |
ಹರಿ ಮಾಡಿಸಲು ಮಾಡೆನೆಂಬುವಗೆ ಭವಶರಧಿ |
ಹರಗೋಲಿಟ್ಟು ಹುಟ್ಟು ಹಾಕಿದಂತೆ |
ಹರಿ ಮಾಡಿಸಲು ನಾನು ಮಾಡಿದೆನೆಂಬುವನಿಗೆ |
ಶರಧಿ ಅರಕಾಲು ಪರಿಮಾಣ ಜಲವು |
ಹರಿಯ ಕರ್ತೃತ್ವವು ಅರಿದಹಾಗೆಲ್ಲ ಭವ |
ಶರಧಿ ಬತ್ತುವದಿನ್ನು ಅರಿದವರಿಗೆ |
ಹರಿ ಮಹಾರಾಜ ಗೋಪಾಲ ವಿಟ್ಠಲ ತನ್ನ |
ಅರಿದಂತೆ ಅರಿವ ಅರಿದಿರುವುವರಿಗೆ || ೪

ತ್ರಿವಿಡಿ ತಾಳ

ಮರದು ಮಾಡಿದ ಕರ್ಮ ಮಹಾಮಹತ್ತಾದರು |
ಹುರದು ಬೀಜವು ಬಿತ್ತಿ ಫಲ ಅಪೇಕ್ಷಿಸಿದಂತೆ |
ದೊರಕಿಸಿಕೊಡದಿನ್ನು ಯೋಗ್ಯ ಗತಿಯು ನೋಡಾ |
ಮರಳಿ ಸಂಸಾರದಿ ತಂದಿಡುವದು |

ಅರಿದು ಮಾಡಿದ ಕರ್ಮ ಅಲ್ಪವಾದರು ನೋಡು |
ಪರಮುತ್ಕೃತ್ತಮವಾದ ಫಲಗಳ ಕೊಡುವದು |
ಸರಿ ಬಿಡು ಹರಿ ಅರಿದು ಕುಕರ್ಮವನ್ನೆ ಮಾಡೆ |
ಮರದವಾನಂತೆ ಮರಳಿ ಫಲಯ್ಯೈದ |
ಕುರುಡ ಜನ್ಮಾರಭ್ಯ ಕುರಿತು ಅವಗೆ ಒಂದು |
ಗುರುತ ಪೇಳಲಿನ್ನೆ ಅದರ ಕುರುಹ ನರಿವಾನೆ |
ಅರಿದು ಬಹುದಿನ ನಾನಾ ಅರ್ಥವು ಮಧ್ಯ |
ಕುರುಡನಂತಿಪ್ಪನ ಕುರಿತು ಅಣಕಿಸಿ ಒಂದು |
ಗುರುತು ತೋರಿ ಅದರ ಕುರುಹ ಪೇಳಿನ್ನೆ ಹುಟ್ಟು |
ಗುರುಡನಂದದಿ ತಾನು ಹುಡಿಕ್ಯಾಡುವನೆ ನೋಡ |
ಶರಣ ಜನರ ಪಾಲಾ ಗೋಪಾಲ ವಿಟ್ಟಲ ತನ್ನ |
ಅರಿದವರ ಹಿಂದೆ ತಿರಗುವ ಕ್ಷಣ ಬಿಡದೆ |

ಅಟ್ಟ ತಾಳ

ಕರ್ತೃತ್ವವೆಂಬದು ಜೀವಸ್ವರೂಪವು |
ಹತ್ತಿ ಇಪ್ಪದು ನೋಡು ಅನಾದಿಯಿಂದಲಿ ನಿತ್ಯ |
ದತ್ತವಾಗಿದೆ ಈಶನಿಂದವೆಂಬಮಾತು |
ಅರ್ತನೋಡಿ ಹರಿಗು ಹೊರ್ತು ಆಗುವದಲ್ಲ |
ಮರ್ತರೆ ಮರೆವುವ ಅರ್ತರೆ ಅರುವುವಾ |
ಕರ್ತು ಕಾರ್ಯ ತಾ ಸರ್ವ ಸ್ವಾತಂತ್ರ ಹರಿ ತಾನು |
ಸೂತ್ರ ನಾಟಕ ಸರ್ವ ಚೇಷ್ಟಿ ತಾ ಮಾಡಿಸೆ |
ಕೀರ್ತಿ ಅಪಕೀರ್ತಿ ಜೀವರ್ಗೆ ತಂದೀವ |
ಸ್ವಾರ್ಥ ಪಾರರಹಿತ ಗೋಪಾಲ ವಿಟ್ಠಲ |
ಆರ್ತಿತರಿವ ಅರಿದ ಭಕ್ತರ ಮನದ || ೬ ||

ಆದಿತಾಳ

ಮಾಡಲಿಬೇಕು ಎಲ್ಲ ಮಾಡಿಲ್ಲವೆನಬೇಕು |
ನೋಡಲಿಬೇಕು ಎಲ್ಲ ನೋಡಿಲ್ಲವೆನಬೇಕು |
ಬೇಡಲಿಬೇಕು ನಾನೆ ಬೇಡಿಲ್ಲವೆನಬೇಕು |

ಓಡಲಿಬೇಕು ನಾನೆ ಓಡಲಿಲ್ಲೆನಬೇಕು |
ಆಡಲಿಬೇಕು ನಾನೆ ಆಡಿಲ್ಲವೆನಬೇಕು |
ನೀಡಲಿಬೇಕು ನಾನೆ ನೀಡಿಲ್ಲವೆನಬೇಕು |
ಕೇಡು ಲಾಭಕೆ ಮನವ ಕೆಡಿಸದೆ ಒಂದೇ ರೀತಿ |
ನೋಡಿದವರಿಗೆ ಉನ್ಮದನಂತೆ ತೋರುತ್ತ |
ಗೂಢನಾಗಿ ಹರಿಯ ಗುಣಗಳ ಕೊಂಡಾಡುತ್ತ |
ರೂಢಿಲಿ ಈವಪುವನ್ನು ಮಾಡಿದೆಲ್ಲ ಸಾಧನ |
ಪಾಡಿದವರ ಪ್ರಾಣ ಗೋಪಾಲ ವಿಟ್ಠಲ ತಾನು |
ನೋಡು ಈ ಪರಿ ಇದ್ದವಗೆ ಮಾಡುವಗತಿಗೆ ಹವಣಿ ||೭||

ಜತೆ

ಸಕಲ ಸಾಧನ ಹರಿಯಾಧೀನ ತಿಳಿವದೆ ಸುಖ |
ವೃಕೋದರನೊಡಿಯ ಗೋಪಾಲ ವಿಟ್ಠಲವೊಲಿವಾ || ೮ ||

## ಸುಳಾದಿ ೫೭

ಕಲ ಕರ್ಮವಿಚಾರ ತಿಳಿದು ನೋಡಿ ಮಾಡು ಅಂದರೆ ಶ್ರೀ ಹರಿ ಕರ್ತನೆಂದು ತಿಳಿದು ಫಲರಾದಿತ್ಯನಾಗಿ ಮಾಡುವದು. ಶ್ರೀಹರಿಯಂಘ್ರಿ ಸೇವಾವಿನಾ ಇನ್ನೊಂದು ಬೇಡಬಾರದು.

ರಾಗ ಮಧ್ಯಾಮಾವತಿ ಧ್ರುವ ತಾಳ

ಹರಿ ಮಾಡಿದಂತೆ ಎಲ್ಲ ಮಾಡುವೆನಯ್ಯಾ ನಾನು |
ಹರಿ ನೋಡಿಸಿದದೆಲ್ಲ ನೋಡುವೆನಯ್ಯಾ ನಾನು |
ಹರಿ ಕೇಳಿಸಿದರಿನ್ನು ಕೇಳುವೆನಯ್ಯಾ ನಾನು |
ಹರಿ ಉಂಡರಾಯಿತಿನ್ನು ಉಣುವೆನಯ್ಯಾ ನಾನು |
ಹರಿ ನುಡಿಸಲಾಗಿನ್ನು ನುಡಿವೆನಯ್ಯಾ ನಾನು |
ಹರಿ ಪಿಡಿದರೆ ನಾನು ಪಿಡಿವೆನಯ್ಯಾ ನಾನಾಕು |
ಹರಿ ಕೊಡಿಸಿದಡೆ ಆನು ಕೊಡುವೆ ಏನಾದದ್ದು |
ಹರಿ ನಡಿಸಿದಾಡಾನು ನಡಿವೆ ನಾನಾ ಕಡಿಗೆ |

ಹರಿ ನಿಂತಡಾಯಿತೆ ನಿಲ್ಲುವೆನಯ್ಯಾ ನಾನು |
ಹರಿಯು ಮನಸುಮಾಡೆ ಮನಸು ಮಾಡುವೆ ನಾನು |
ಹರಿಯು ದ್ವೇಷವುಮಾಡೆ ಆನು ದ್ವೇಷವು ಮಾಳ್ಪೆ |
ಹರಿ ಮೋಹಿತನಾಗೆ ಆನು ಮೋಹಿಪೆನಯ್ಯಾ |
ಹರಿ ಜಾಗೃತನಾಗೆ ಆನು ಜಾಗೃತನಾಹೆ |
ಹರಿ ಮರದಡಾಯಿತೆ ಮರವುವೆನಯ್ಯಾ ನಾನು |
ಹರಿ ನೆನಿಸಲ್ಕೆನಗೆ ನೆನವು ಆಗುವದು |
ಹರಿ ಕಾಮನಮಾಡೆ ಆನು ಕಾಮನಮಾಳ್ಪೆ |
ಹರಿ ಇಚ್ಛೆ ಗೊಂದಕನ್ನ ಪ್ರತಿಕೂಲನಲ್ಲ ನಾನು |
ಹರಿ ಪೂರ್ಣ ಶಕ್ತಿ ಗುಣ ಶರಧಿ ಕಾಣಯ್ಯ ನಿರುತ |
ಹರಿ ನಿರ್ದೋಷ ಜ್ಞಾನಾನಂದಾ ಪರಿಪೂರ್ಣ ದೇವ |
ಹರಿ ಪೂರ್ಣ ಕಾಮಾ ಆನು ಅತ್ಯಂತ ಅಲ್ಪ ನೀರ |
ಹರಿಯು ಹೋದಾಗೆಯೆಲ್ಲ ತೃಣವು ಪೋಗುವದಯ್ಯಾ |
ಹರಿಯೆ ಸ್ವಾತಂತ್ರ ಆನು ಅಸ್ವಾತಂತ್ರ |
ಹರಿ ಸರ್ವ ವ್ಯಾಪ್ತಮೂರ್ತಿ ಗೋಪಾಲ ವಿಟ್ಠಲ |
ಹರಿಯೆ ಭಕುತರ ಮನದ ಸಿರಿಯೆಹೇ ಎನ್ನ ಧೊರಿಯೆ ॥ ೧ ॥

ಮಟ್ಟತಾಳ

ಕರ್ತುನಾನೆಂದರೆ ಹರಿಯು ಹೊರತಾಗಿನ್ನು |
ವ್ಯರ್ಥ ನೋಡು ಏನು ಮಾಡಿದ ಕರ್ಮವು !
ಮೃತ್ಯು ತನಗೆ ತಾನು ತಂದುಕೊಂಡುವನಾಹಾ |
ಆರ್ತಿ ಅವನಿಗೆ ನಾಶವಾಗದಿನ್ನು |
ಕರ್ತು ನಾನಲ್ಲವೆನೆ ಸಾಧನಕೆ ಫಲವೇನು !
ಪ್ರತ್ಯಕ್ಷಕೆ ಬಾಧೆ ಮಿಥ್ಯಾಜ್ಞಾನಿಯು ಆವ |
ಕರ್ತೃತ್ವವೆಂಬೋದು ಜೀವನಿಷ್ಟವು ನೋಡು |
ಶ್ರುತ್ಯರ್ಥಗಳಲ್ಲಿ ಸಿದ್ಧವಾಗಿದೆ ನೋಡು |
ಮರ್ತು ಹರಿಯ ಮಹಿಮೆನರಿಯದೇ ಜೀವನು |
ಸ್ಫೂರ್ತಿಯಿಲ್ಲದ ಅಪಕೀರ್ತಿವಂತನಾಹ |

ಕರ್ತೃ ಕಾರ್ಯತಾ(ಕಾರಯಿತಾ)ವಿಷ್ಣು ಗೋಪಾಲ ವಿಟ್ಠಲನ್ನು
ಅರ್ತವ ಧನ್ಯನೊ ಕರ್ತನೆಂಬದರೊಳಗೆ || ೨ ||

ರೂಪಕತಾಳ

ಪೃಥಿವಿಮೇಲೆ ಒಂದು ರಥವೇರಿ ಬರಲಾಗಿ |
ರಥ ಬರುತಿದೆ ನೋಡು ಎಂಬರು ಜನರೆಲ್ಲ |
ರಥರಥಿಕರಿಬ್ಬರಿಗಾವಾಧಾರವು ಎಂಬ |
ಮತಿ ಮನದಲ್ಲಿ ಉಳ್ಳರಾಗಿದ್ದರು ಸರಿಯೆ |
ಪೃಥಿವಿಯೆ ರಥ ಹೊತ್ತು ಬಾಹದನರ್ರ್ಯಾತಕ್ಕೆ |
ಪ್ರತಿತ ತೋರಿದರ್ಥ ಎತಾರ್ಥವೆನಬೇಡಿ |
ಮತಿ ಎರಡು ಪ್ರಕಾರ ಕರ್ತೃತ್ವದೊಳಗಾಗಿ |
ಸ್ಥಿತಿ ಅರಿತುನೋಳ್ಪರು ಜ್ಞಾನಿಗಳು |
ಖತಿಗೊಳದಿರಿ ಇನ್ನು ಕರ್ತೃತ್ವವೆಂಬದು |
ಜಿತವಾಗಿ ಜೀವ ಜಡಗಳಿಗನಾದಿ ಸಿದ್ಧ |
ಮತಿವುಳ್ಳ ಕರ್ತೃತ್ವ ಚೇತನ ನಿಷ್ಟವು ಇನ್ನು |
ಮತಿರಹಿತ ಕರ್ತೃತ್ವ ಜಡದ ಸ್ಥಿತಿ |
ಸತತ ಜಡ ಚೇತನಕೆ ಕರ್ತನೆನಿಸಿ ಹರಿಯು |
ಗತಿ ಅರಿತು ಅವರವರ ಪಥದಲಿಡುವ |
ಪತಿತ ಪಾವನ ರಂಗ ಗೋಪಾಲ ವಿಟ್ಠಲ |
ಚತುರ ಕ್ರೀಡೆಯು ಮಾಳ್ಪ ಸರ್ವರೊಳಗೆ ನಿಂತು || ೩ ||

ಝಂಪೆ ತಾಳ

ಆತ್ಮ ಪರಮಾತ್ಮನ ವಿವೇಕ ಜ್ಞಾನವು |
ಸೋತ್ತಮರ ಕರುಣದಿಂದಾಗಬೇಕು |
ಸೋತ್ತಮರ ಪ್ರಾಸಾದವೆಂಬುವದು ಗತಿಗಿನ್ನು |
ಮತ್ತೆ ತ್ರಿರಾವರ್ತಿ ಆಗಬೇಕು |
ಉತ್ತಮ ಮಧ್ಯಮ ಅಧಮವಾಗಿ ಪ್ರಸಾದದಿಂ |
ಉತ್ತಮವಾದಗತಿ ಪೊಂದಿಸುವದು |

ಆತ್ಮ ತನ್ನ ಸ್ವರೂಪ ಜ್ಞಾನನೀವನೊ |
ಮತ್ತದೆ ಅಧಮ ಪ್ರಸಾದವೆನ್ನು |
ಸತ್ತ ಕರ್ಮಗಳಲ್ಲಿ ಪ್ರವರ್ತನ ಮಾಳ್ಪ |
ಮತ್ತೆ " ಏನಂ ಮೋಚಯಾಮಿ " ಎಂದು |
ನಿತ್ಯ ಅನಿತ್ಯ ಜ್ಞಾನ ಆವಾಗ ಪುಟ್ಟುವದು |
ಮತ್ತೆ ಅವನೀಗ ಯಾತಕೆ ಸಲ್ಲ |
ಸೋತ್ತಮ ಗುರುವುಪದೇಶವೆಂಬುವದು ಅವನಿಗೆ |
ಮತ್ತೆ ಅಶರೀರವಾಕ್ಯದಿ ಆಹುದು |
ಪ್ರತ್ಯಕ್ಷ ಪೇಳರು ಅವನಿಗೆ ಇದು ನೋಡು ವಾಚಾ |
ಪ್ರಸಾದವೆಂದು ಕರಸೋದು |
ಸತ್ಯಸಂಕಲ್ಪ ಗೋಪಾಲ ವಿಟ್ಠಲ ತನ್ನ |
ಭಕತರ ಬಲ ಮಾಡದವರಿಗೊಲಿಯಾ || ೪ ||

ತ್ರಿವಿಡಿತಾಳ

ಒಂದು ಕರ್ಮವು ಮಾಡೆ ಅವರಿಗೆ ಆದರಲ್ಲಿ |
ಇಂದಿರೆ ಅಜಭವ ಪರಿವಾರ ಸಹವಾಗಿ |
ನಿಂದು ತನಗೆ ಕರ್ಮ ಮಾಡಿಸಿದರೆಂಬ |
ಚಂದದ ಸ್ಮೃತಿಯಿನ್ನು ಬಂದುಪ್ಪೊದಗಿದರೆ |
ಸಂದೇಹಸ್ಥನಾಗಾ ಸಂಸಾರಕೆ ದೂರಾ |
ಬಂಧಮೋಚಕ ಅದೆ ಮಧ್ಯಮ ಪ್ರಸಾದ |
ಸಂದರ್ಶನ ಪೂರ್ವ ಸ್ವಚ್ಛಾದಕಿಂತಲಿ |
ಹಿಂದಾಗುವವು ಸಂಚಿತಾಗಾಮಿ ಕರ್ಮವು |
ಮುಂದಮುಕ್ತಿಯುನಾಶ ಮೊದಲಿಕಿಂತ |
ಹಿಂದಾಗ ಈ ಮೇಲೆ ಹರಿಯ ದರಶನದಲ್ಲಾಕ್ಯ |
ನಂದಾಭರಿತನಾಗಿ ಸಂಚರಿಸುವಾ |
ಮುಂದೆ ಮುಂದತಿಶಯ ಸಮಾಧಿ ಸಾಧನ |
ಪೊಂದಿ ಕೂಡ್ರುವನಾಹ ಜಡನಂದದಿ

ನಿಂದಿರದ ಬಾಹಿರ ಸ್ಮೃತಿಭೇರಿ ತಾಡಣವಾಗೆ ।
ಒಂದೆ ಅವನ ವ್ಯಾಪಾರ ವೃತ್ತಿನಾಶ ।
ಸಂದೇಹವಿಲ್ಲದಕೆ ಸದ್ಗುರು ಪ್ರಸಾದ ।
ಛಂದವಗಾಯಿತೆಂದು ಅರಿನದು ।
ವೃಂದಾರಕೇಂದ್ರ ಶ್ರೀ ಗೋಪಾಲ ವಿಟ್ಠಲ ।
ಒಂದು ಮಾತ್ರವು ಇಟ್ಟು ಸಕಲ ಸುಖ ಕೊಡುವ ॥ ೫ ॥

ಅಟ್ಟತಾಳ

ಉತ್ತಮ ಪ್ರಸಾದ ಮತ್ತೆ ಲಕ್ಷಣ ಕೇಳು ।
ಪ್ರತ್ಯಕ್ಷವು ನೋಡು ಆವಾವ ವಿಷಯದಿ ।
ತತ್ವ ಸಂದೇಹವಿಲ್ಲ ಪ್ರಾರಬ್ಧ ಕರ್ಮವು ।
ಅತ್ಯಲ್ಪವಾಗಿನ್ನು ಕಡಿಗೆ ಆಗುವದು ।
ಹತ್ತಿದ ಲಿಂಗವು ಆಕಾರ್ಯ ಕಾರ್ಯವು ।
ಎತ್ತನೋಡಿದರು ಹರಿಯ ರೂಪಗಳೆಂಬ ।
ಚಿತ್ತವ್ಯಾಕುಲನಾಗ ಅಖಂಡ ಧ್ಯಾನದಿ ।
ಸತ್ಯಲೋಕದಿ ವಾಸವಾಗಿ ಅನಂತರ ।
ಮುಕ್ತನಾಗುವ ತಾನು ಹಿಂದೆ ನಾನಾಜನ್ಮ ।
ಸುತ್ತಿ ಬಂದದನೆಲ್ಲ ನೆನೆದು ತನ್ನ ಮನೋ ।
ವೃತ್ತಿ ನಾನಾಪರಿ ವ್ಯಭಿಚರಿಸಿದದೆಲ್ಲ ।
ಉತ್ತಮರ ಕೂಡ ಸುಖಪೇಳಿಕೊಳ್ಳುತ ।
ಉತ್ಕಟವಾಗಿ ತಮಗಿಂದ ವರರಿಗೆ ।
ಮತ್ತೆ ತಮ್ಮೊಡನೆ ಭಕ್ತಿಯು ವೆಗ್ಗಳವ ಮಾ ।
ಡುತ್ತ ಆನಂದಭರಿತವಾಗುವನಾವ ।
ಸತ್ಯ ಸಂಕಲ್ಪ ಗೋಪಾಲ ವಿಟ್ಠಲನ್ನ ।
ಭಕ್ತರಲ್ಲಿ ಭಕ್ತಿ ಮುಕ್ತಿಸಾಧನವೆ ॥೬॥

ಆದಿತಾಳ

ಹರಿಪರನೆನ್ನು ಹರಿವಾರ್ತೆಯು ಕೇಳು ಹರಿಮಾತುಗಳಾಡು।
ಹರಿಮೂರ್ತಿಯ ನೋಡು ಹರಿಪೂಜೆಯ ಮಾಡು ।

ಹರಿಗಡ್ಡವ ಬೀಳು ಹರಿಪರನಾಗು ।
ಹರಿಭಕ್ತರ ಕೂಡು ಹರಿಯನ್ನೇ ಬೇಡು ।
ಹರಿಯ ಹೊರತಿನ್ನು ಹರಿಗೆ ಬೀಳದಿರು ।
ಹರಿಯ ಮಾಯದಿನ್ನು ಹರಿಗುಣವ ತಿಳಿ ।
ಹರಿಯ ಭಕುತರಿಂದ ಹರಿಯ ಮರೆದರಫಳಿಗೆ ಇರಸಲ್ಲ ।
ಹರಿಗರ್ಪಣ ಮಾಡು ಹರಿಮಾಡಿಸಿದ್ದೆಲ್ಲ ।
ಹರಿಯನ್ನು ತಿಳಿ ಗುರುಗಳಲಿನ್ನು ।
ಹರಿಧೇನಿಸಿ ಗುರುವಿನ ಗುರುತುಮಾಡು ।
ಹರಿ ಸರ್ವ ಕರ್ತು ಗೋಪಾಲ ವಿಟ್ಠಲನ್ನ ।
ಸ್ಮರಣೆಯು ಕ್ಲೇಶ ಹರ ಸುಖಕರ ॥ ೭ ॥

ಜತೆ

ನೋಡಿ ಮಾಡು ಕರ್ಮ ಫಲದಿ ವಿರಕ್ತನಾಗಿ ।
ಬೇಡು ಗೋಪಾಲ ವಿಟ್ಠಲನಂಘ್ರಿಗಳ ಸೇವಾ ॥

## ಸುಳಾದಿ ೫೭

ಹರಿ ಸಕಲ ಕರ್ತನೆಂದು ಮಹಾಮಹಿಮೆಯನ್ನು ಅನೇಕ ಉಪಮೆ
ಗಳೊಂದಿಗೆ ಶ್ರೀ ಹರಿಯ ಸ್ವಾತಂತ್ರ್ಯ ವರ್ಣನೆ.

ರಾಗ ಭೈರವಿ ಧ್ರುವತಾಳ

ನೀನು ಪುಟ್ಟಿಸಲು ಪುಟ್ಟುವ ಜೀವ ನಾನೈಯ್ಯಾ ।
ನೀನು ಪೋಷಿಸಲು ಪೋಷಿಸಿಕೊಂಬ ನಾನಯ್ಯ ।
ನೀನು ಚಲಿಸಲು ಚಲಿಸುವೆನಯ್ಯಾ ನಾನು ।
ನೀನು ತಡಹಲು ತಡಹುವೆನಯ್ಯಾ ನಾನು ।
ನೀನು ನುಡಿಸಲು ನುಡಿವದು ನಾಲಿಗಿ ।
ನೀನೆ ವ್ಯಾಪ್ತನು ಸ್ಥೂಲ ಸೂಕ್ಷ್ಮ ದೇಹಗಳಲ್ಲಿ ।
ನೀನೆ ಕರ್ತಾ ಭೋಕ್ತಾ ನೀನೆ ಆಧಾರನು ।
ನೀನೆ ನೇಮಿಸಿದಂತೆ ಲಾಭ ನಷ್ಟಂಗಳು ।

ನೀನೆ ಸರ್ವ ಚರಾಚರ ಪ್ರೇರಕ ನೀನೆ ।
ನೀನೆ ಸ್ವಾತಂತ್ರ ಸ್ವಾತಂತ್ರ ಸ್ವಪ್ರಕಾಶ ।
ನೀನೆ ವ್ಯಾಪಕ ಸರ್ವ ಜೀವ ಜಗತ್ತಿನಲ್ಲಿ ।
ನೀನೆ ನೀನೆ ನೀನೆ ಗೋಪಾಲ ವಿಟ್ಠಲ ॥ ೧ ॥

ಮಟ್ಟತಾಳ

ನಾನಾ ಯೋನಿಗಳಲ್ಲಿ ಜನಿಸಿ ಬರಲಿಕ್ಕೆ ।
ನಾನು ಸ್ವಾತಂತ್ರನೇನೊ ಪೇಳಲೊ ಹರಿಯೆ ।
ನೀನೆ ಸೃಷ್ಟಿಸುವೆ ಕರ್ಮನೆವನ ಮಾಡಿ ।
ಏನೊ ಕರ್ಮಕೆ ಸ್ವಾತಂತ್ರ ನಿನ್ನ ವಿನಹ ಉಂಟೆ ।
ನೀನೆ ಕಾರಣ ಯೋಗ್ಯತ ನಿನ್ನಾಧೀನ ।
ಏನಾದ ಕರ್ಮದ್ರಯು ನೀನೆ ಮಾಡಿಪುವಿ ।
ನೀನೆ ಮಾಡಿದೆಂದು ನಿನಗೆ ಸಮರ್ಪಿತವು ।
ನಾನು ನಿನ್ನಾಧೀನ ಗೋಪಾಲ ವಿಟ್ಠಲ ॥ ೨ ॥

ರೂಪಕ ತಾಳ

ಪೃಥಿವಿಪತಿ ಒಂದು ರಥವ ನಿರ್ಮಾಣವು ಮಾಡಿ ।
ಅತಿ ಉತ್ತಮವಾದ ವಾಜಿಗಳನ್ನು ಕಟ್ಟಿ ।
ಮಥನಿಸಿ ಸೂತನೊಬ್ಬನಮಾಡಿ ಆಕ್ಷಣ ।
ರಥದ ಮಧ್ಯದಲ್ಲಿ ತಾ ಕುಳಿತು ಕಂದನಸಹ ।
ಪಥವನರಿತು ನಡಿಸೆಂದು ಸೂತಗೆ ಪೇಳೆ ।
ಯಥಾಯಥಾ ಮನದಿಚ್ಛೆ ಬಂದಂತೆ ನಡಿಸೋರು ।
ರಥಕೆ ಸ್ವಾತಂತ್ರ ಆವದು ಪೇಳೊ ಹರಿಯೆ ।
ರಥ ಎನ್ನ ದೇಹವು ಪೃಥಿವಿ ಪತಿ ನೀನು ।
ರಥಿಕರೆ ತಾತ್ವಿಕರು ಕಂದನಂದದಿ ನಾನು ।
ಅತಿ ಉತ್ತಮ ವಾಜಿಗಳೆ ಇಂದ್ರಿಯಗಳು ।
ಜತನಾಗಿ ಪಿಡಿದ ಹಗ್ಗವೆ ಎನ್ನ ಮನಸು ।
ಖತಿಯಿಂದ ಪಿಡಿದಟ್ಟುವ ಮಣಿಯೆ ಕರ್ಮಂಗಳು ।

ಆ ರಥಕೆ ಈ ರಥಕೇನು ಭೇದ ಉಂಟೊ |
ಹಿತದಿಂದ ಪೇಳೆಲೊ ರಥಾಂಗಪಾಣಿಯೇ ಪಾ |
ರಥನ ಪಾಲಕನೆ ಗೋಪಾಲ ವಿಟಲ ಕೇಳೊ |
ಸತತ ನೀ ಪ್ರೇರಕ ಸಥೆ ನಿನ್ನದೊ || ೩ ||

ಝಂಪಿ ತಾಳ

ಪತಿಯು ತಾನಾಗಿ ತನ್ನ ಸತಿಗೆ ಪಾಪ ಪುಣ್ಯದ |
ವ್ರತವ ಮಾಡೆಂದು ಸ್ವರೂಪ ಕೊಡಲು ಇದೇ |
ಶ್ರುತಿ ಸ್ಮೃತಿ ನಿರ್ಣಯುಗಳು ಪೇಳುತಲಿವೆ |
ಪತಿ ನೀನು ಎನಗೆ ಸತಿಯು ನಿನಗೆ ನಾನು |
ಪತಿತ ಪಾವನ ಪಾಪನಿರ್ಲೇಪನಹುದು ಜಗ |
ತ್ಪತಿ ಎಂದೆನಿಸಿಕೊಂಬ ಅತಿಶಯವು ನಿನಗಯ್ಯಾ |
ಹಿತದಿಂದ ಕೇಳೊಂದು ದೃಷ್ಟಾಂತರವು ಎನ್ನ |
ಮತಿ ನೀ ಪ್ರೇರಿಸಿದಂತೆ ಪೇಳುವೆನೊ ಹರಿಯೆ |
ಅತಿ ಸೀತ ಬಾಧಿಸೆವಹ್ನಿ ಆಶ್ರೈಸುವರೊ |
ಜಿತವಾಗಿ ಸೀತವಹ್ನಿಗ ಲೇಪಿಸುವದೇ |
ಪತಿತ ಪಾವನ ಪಾಪನಿರ್ಲೇಪ ನೀ ಸತ್ಯ |
ದಿತಿಜಮರ್ದನನೆ ಗೋಪಾಲ ವಿಟ್ಠಲ ನಿನ್ನ |
ಕೃತಿ ಅತಿ ಆಶ್ಚರ್ಯವು ಹಿತವೊ ಭಕ್ತರಿಗೆ || ೪ ||

ತ್ರಿವಿಡಿ ತಾಳ

ತರಣಿ ಉದಿತನಾಗೆ ತಮವು ನಿಲ್ಲುವದೆ |
ಗರುಡನೆದುರಿಗೆ ಉರಗ ಸರಸನಾಡುವದೆ |
ಹರಿಯು ಕೂಡ ಕರಿ ತಿರುಗಿ ಕಾದುವದೆ |
ಹರಿನಿನ್ನ ಕರುಣವಾಗಲು ದುರಿತದ ಭಯವೆ |
ಸುರಪತಿ ವಜ್ರಕ್ಕೆ ಗಿರಿ ಪ್ರತಿನಿಧಿಯೆ |
ಪರಮ ಬಲಾಢ್ಯನಿಗೆ ಹೇಡಿ ಅಂಜಿಕಿಯೆ |
ಉರಿವ ಮಾರಿಗೆ ತೃಣವು ಅಣಕವಾಡುವದೆ |
ಪರಮ ಪುರುಷ ನಿನ್ನ ಸ್ಮರಣೆ ಬಲವಿರಲಿಕ್ಕೆ |

ದುರಿತಕಂಜೆನೊ ಜವನರದಂಡಕಂಜೆನೊ।
ಪರಮ ದಯಾಳು ಗೋಪಾಲ ವಿಟ್ಠಲ ನಿನ್ನ।
ಕರುಣಬಲಕಿನ್ನು ಮಿಗೆ ಬಲವಿಲ್ಲವೊ ॥ ೫ ॥

ಅಟ್ಟತಾಳ

ನಿತ್ಯ ಪತ್ನಿಭಾವ ಲಕುಮಿಗಿತ್ತವ ನೀನು ।
ಸತ್ಯಲೋಕಾಧಿಪತ್ಯ ಬೊಮ್ಮಗಿತ್ತೆಲೊ ದೇವಾ ।
ಮೃತ್ಯುಂಜಯಗೆ ಕೈಲಾಸ ವಿತ್ತವ ನೀನು ।
ಭೃತ್ಯ ಇಂದ್ರಗೆ ತ್ರಿವಿಷ್ಟಪಕೊಟ್ಟೆಯ್ಯಾ ಈ ।
ಮರ್ತ್ಯಲೋಕದ ಸಂಪದವಿಗಲ್ಲನೆ ಏಕ ।
ಛತ್ರಾಧಿಪತಿಗೆ ಒಂದು ಅಸ್ತಿನಾಸ್ತಿಗಳುಂಟೆ ।
ಅತ್ಯುನ್ನತ ನೀನು ಅಹಿರಾಜತಲ್ಪನೆ ।
ಮತ್ತವೆ ರೋಮ ರೋಮಕೆ ಕೋಟಿ ಬ್ರಹ್ಮಾಂಡ ।
ನಿತ್ಯ ಖಗನು ವಾಹನನೇನೋ ನಿನ್ನ ।
ಕೃತ್ಯ ನೋಡಲು ಅತ್ಯಾಶ್ಚರ್ಯ ತೋರುತಲಿದೆ ।
ಸತ್ಯ ಸಂಕಲ್ಪನೆ ಗೋಪಾಲ ವಿಟ್ಠಲ ।
ಉತ್ತಮರಿಗೆ ಸುಲಭ ಭೃತಪಾಲಕನೆ ॥ ೬ ॥

ಆದಿತಾಳ

ಜಲಧಿ ಪೊಕ್ಕರು ಬಿಡೆ ಜಲದಲಡಗೆ ಬಿಡೆ ।
ನೆಲದ ಮರಿಯುಲಿ ಪೊಕ್ಕರೆ ನಿನ್ನ ಬಿಡೆನೊ ।
ಬಲುಘೋರ ರೂಪತನದಲಂಜಿಸಲು ಬಿಡೆ ।
ಸುಲಭದಿ ಗತಿಯಿಲ್ಲ ಯಾಚಕನೆನೆಬಿಡೆ ।
ಬಲವಂತಿಕೆಯುಲಿ ಪರುಶ ತೋರಲು ಬಿಡೆ ।
ತಲೆ ಜಡೆಗಟ್ಟಿ ತಪಸಿಯಾದರು ಬಿಡೆ ।
ಕುಲಹೀನನಾಗಿ ದನಗಾಯದರು ಬಿಡೆ ।
ಬಲು ಅರ್ಭಕನೆಂದು ಬತ್ತಲಾದರು ಬಿಡೆ ।
ಸಿಲುಕದೆ ವಾಜಿಯನೇರಿ ಓಡದಂತೆನ್ನ ।
ತಲೆ ನಿನ್ನ ಕಾಲಿಗೆ ಕಟ್ಟಿ ಕೆಡಹುವನೊ ।

ಖಳರವಂಚಿಕೆ ವೇಷಗಳು ಬಲ್ಲೆನೊ ನಾನು ।
ಸುಲಭದಿಂದಲಿ ಕಾಯೊ ಗೋಪಾಲ ವಿಟ್ಠಲ ॥೭॥

ಜತೆ

ಗಿರಿಯನೆತ್ತುವನಿಗೆ ಹರಳು ಭಾರವೆ ದೇವ ।
ಪೊರಿ ಎನ್ನ ಕರುಣಾಳೆ ಗೋಪಾಲ ವಿಟ್ಠಲ ॥೮॥

## ಸುಳಾದಿ ೫೮

ಸಕಲವು ಅನಿತ್ಯ ಅಸಾರ ಡೊಂಬನ ಗೂಡಿನಂತೆ ಇರುವುದನ್ನು ನಂಬ ಬೇಡ. ಸಕಲವೂ ಹರಿಯಾಧೀನ ಚಿಂತಿಸು.

ರಾಗ ಮಧ್ಯಮಾವತಿ ಧ್ರುವ ತಾಳ.

ಎಲ್ಲಿಗೇಹ ಎಲ್ಲಿದೈಯ್ಯಾ ವೃತ್ತಿ ಕ್ಷೇತ್ರ ।
ಎಲ್ಲಿದಯ್ಯಾ ಗ್ರಾಮ ಸ್ಥಳವು ಎಲ್ಲಿದಯ್ಯಾ ದೇಶವಾಸ ।
ಎಲ್ಲಿದಯ್ಯಾ ಧನವು ಧಾನ್ಯ ಎಲ್ಲಿದಯ್ಯಾ ಸತಿಯು ಸುತರು ।
ಎಲ್ಲಿದಯ್ಯಾ ವಸನ ಪಶುವು ಎಲ್ಲಿದಯ್ಯಾ ಬಂಧುಬಳಗ ।
ಎಲ್ಲಿದಯ್ಯಾ ಒಡಿವಿಗಳು ಎಲ್ಲಿದಯ್ಯಾ ಕರಿ ಉಷ್ಟ್ರಗಳು ।
ಎಲ್ಲಿದಯ್ಯಾ ಆಳು ವೇಳ್ಯಾ(ವ್ಯಾಳೆ) ।
ಎಲ್ಲದಯ್ಯಾ ಕೂಪತಟಾಕ ಎಲ್ಲಿದಯ್ಯಾ ಸಿಲಿ ವೃಕ್ಷಗಳು ।
ಎಲ್ಲಿದಯ್ಯಾ ಮುತ್ತು ಮಾಣಿಕ್ಯಾ ।
ನಿಲ್ಲದೆ ಪೋಗೊ ನೀರ ಗುಳ್ಳಿಯಂತೆ ದೇಹಕ್ಕೆ ।
ಇಲ್ಲದ ಕರ್ತೃತ್ವ ಇನ್ನೆಲ್ಲಿಂದ ಪಚ್ಚಿಕೊಂಬಿ ।
ಸಲ್ಲದು ನಿನಗೀವಾಕು ಎಲ್ಲಿ ಪೋದರು ಅನ್ಯ ।
ಗೆಲ್ಲಲಾರಿಯೊ ಜೀವ ಬಲ್ಲವಿಕೆಲ್ಲ ನಿನಗೆ ।
ಎಲ್ಲ ನನ್ನದೆಂಬೊದು ಒಳಿತಲ್ಲವೊ ನಿನಗೆ ।
ನಿಲ್ಲಿಸಿ ನಿನ್ನ ಮುಂದೆ ಎಲ್ಲವು ಹೋಹಾಗಲಿ ।
ಕಲ್ಲು ಹೊಡೆದಂತೆ ನೀ ಮೆಲ್ಲನೆ ನೋಡುತಿಪ್ಪೆ ।
ನಿಲ್ಲದೆ ನೀನು ಬಿಟ್ಟು ಚಲ್ಲಿಹೋಗುವಾಗಲಿ ।

ಹುಲ್ಲುಕಡ್ಡಿಯನ್ನ ನೀ ಬಾಯಲ್ಲಿ ಕೊಂಡು ಹೋಗುವ್ಯಾ |
ಎಲ್ಲ ರೂಪದಲ್ಲಿ ಶ್ರೀ ವಲ್ಲಭ
ಅಲ್ಲಲ್ಲಿ ತಾನೆ ಇದ್ದು ಜೀವನೆಲ್ಲರ ಪಾಲಿಸಿನ್ನು
ಗುಲ್ಲು ಎಬ್ಬಿಸಿ ಪ್ರಳಯದಲ್ಲಿ |
ಎಲ್ಲರ ನುಂಗೊ ಬಲ್ಲಿದ ರಂಗ ನಾವು |
ಗೆಲ್ಲಿರಿಗೊಡಿಯ ಕಾಣೊ |
ಮಲ್ಲ ಮರ್ದನ ರಂಗ ಗೋಪಾಲ ವಿಟ್ಠಲ ತಾ |
ಬಲ್ಲದೆ ಮಾಡಿಸುವ ಎಲ್ಲ ಕಾಲದಲಿನ್ನು ||೧||

ಮಟ್ಟತಾಳ

ಖಣದವೊಳಗೆ ಧಾನ್ಯವಣಗಹಾಕಿದರೆ |
ಮನಿಗೆ ತರಲಾಗಿ ಖಣದಲಿ ಉಳಿದ (ವೆ) ಅಷ್ಟು |
ವನಕಿಯಿಂದಲಿ ಧಾನ್ಯ ಘನವಾಗಿ ಕುಟ್ಟಿದರೆ |
ವನಕಿ ನುಂಗಿದವೆಷ್ಟು ಆನವರಿತು ನೋಡಿ |
ಶುಣಕಗೆ ಪುಷ್ಕರಣಿ ಮಲ್ಕರ್ಣಿ ಇರಲು |
ದಣಿ ಕುಡುವದೆ ಉದಕ ಕೊನೆನಾಲಿಗಿ ಎಲ್ಲದೆ |
ಮಣಕಕೆ ಸೇರು ತುಪ್ಪ ಮನಿಯೊಳಗಾದರೆ |
ಮಣಕಕೆ ಬಂದದೇನು ಮಡಿಯ ಮಾತ್ರವು |
ಕನಸಿನೊಳಗೆ ಹಣವು ಕಂಡ್ಹಾಗೆ ಕೊಟ್ಟರೆ |
ಎಣಿಸಿ ಕೊಡಬಲ್ಲ್ಯಾಖಣದವಬೇಡಿದರೆ |
ಮುನಸುಗುಟ್ಟಿದವನ ಮುದ್ದಾಡಿದರಿನ್ನು |
ಮನಸಿಗೆ ಹರುಷತ್ವ ಮದಡ ಜೀವವೆ ಕೇಳು |
ಧನತೂಗೋ ತಕ್ಕಡಿ ಮನಿಯೊಳಗಿರಲಿಕ್ಕೆ |
ಧನ ಹೋದರೆ ತಕ್ಕಡಿನ್ನ ಕೇಳೊರುಂಟೆ |
ಗುಣಹೀನ ಜೀವ ನಿನಗೆ ಅಲ್ಲದವೆಲ್ಲ ನನಗೆ |
ನನ್ನದೆಂಬೊದೆನಿತು ನೀತಿಯು ಕಾಣೋ |
ಸನಕಾದಿಗಳೊಡಿಯ ಗೋಪಾಲ ವಿಟ್ಠಲನ್ನ |
ಅನುವಾಗಿ ನೀ ತಿಳಿದು ಗುಣವುಪಾಸನೆ ಮಾಡು ||೨||

ತ್ರಿವಿಡಿ ತಾಳ

ಆರಿಗೆ ವಶವಲ್ಲದ ಲೆಂಕಿಯು ಕಟ್ಟಿದ ।
ಧೀರರಾದಂಥ ಸುರರಿಂದ ಪೂಜೆಯುಗೊಂಡ ।
ಆ ರಾವಣನನು ಕಡಿಗೆ ಆದ ತೆರನು ನೋಡು ।
ಆರಾದರು ಅವಗೆ ಆಯುಷ್ಯವಿತ್ತರೆ ।
ಆರಿಂದ ಮರಣವು ಆಗಲಿಕ್ಕಿಲ್ಲವೆಂದು ।
ಆ ರುದ್ರನಿಂದ ವರವನು ಪಡಿದಿದ್ದಂಥ ।
ಆ ರಕ್ಕಸ ಹಿರಣ್ಯಕರಾದರುಳಹಿದರೆ ।
ಆರಿಗೆ ಆರಿಲ್ಲಾ ಹಾರದಿರಲೊ ಬರಿದೆ ।
ಕ್ರೂರ ಕಂಸನ ನೋಡು ದುರಿಯೋಧನರ ನೋಡು ।
ಆರು ಇವರಿಗೆ ತನ್ನವರು ಇದ್ದಿಲ್ಲವೇ ।
ದೂರು ಮಾತ್ರವೆ ತನ್ನವರು ತನ್ನದೆಂಬೋದು ।
ಆರಿಗಾರಿಲ್ಲ ವಿಚಾರವ ಮಾಡಲು ।
[illegible] ಸದ ಭಾಗ್ಯ ಸ್ಥಿರವೆಂದು ನಂಬಿನೀ ।
[illegible] ಕರ್ತನ ಮರಿಯದಿರು ।
[illegible] ಈಶನ ವರದ್ವಾರದ ಬಳಿಯಲ್ಲಿ ।
ಕಾರುಣ್ಯದಿ ಪಾಲಿಸುವ ಕರುಣಾಕರ ರಂಗ ।
ಮಾರ ಜನಕ ಚಲುವ ಗೋಪಾಲ ವಿಟ್ಠಲನ್ನ ।
ಆರುಮೂರು ಭಕ್ತಿಲಿ ಬಾರಿಬಾರಿಗೆ ಸ್ಮರಿಸೊ ॥ ೩ ॥

ಅಟ್ಟತಾಳ

ನಷ್ಟವೆಂಬೊದು ನನ್ನದೆಂಬೊದು ಬಲು ನಷ್ಟ ।
ಇಷ್ಟರೊಳಗೆ ಕೃಷ್ಣನೀನೆ ಎಂಬೋದು ।
ನಿಷ್ಟ ಕಷ್ಟದೊಳಗೆ ಪುನಃ ಹುಟ್ಟಿಹೋಹೊದೆ ಕಷ್ಟ ।
ನಿಷ್ಠೆಯೊಳಗೆ ಹರಿಸ್ಮರಣೆ ಮಾಡೋದೆ ನಿಷ್ಠಾ ।
ಅಷ್ಟಕರ್ತೃತ್ವವು ಶ್ರೀಹರಿ ಆಧೀನವು ಎಂದು ।
ಭ್ರಷ್ಟ ಸಂಸಾಸವು ದಾಟುವವನೆ ಧಿಟ್ಟ ।

ಸೃಷ್ಟಿಗೊಡಿಯನಾದ ಗೋಪಾಲ ವಿಟ್ಠಲ ।
ಮುಟ್ಟಿ ಪೂಜಿಸುವರ ಬಿಟ್ಟೆನೆಂದರು ಬಿಡ ॥ ೪ ॥

ಆದಿ ತಾಳ

ಧರಿಯೊಳು ಇದ್ದಂಥ ಈ ಪರಿಪರಿ ಪದಾರ್ಥ ।
ಹರಿಯಿಂದ ನಿರ್ಮಿತಕರವಾದವು ಎಲ್ಲ ।
ಅರಿದುನೋಡಿ ಇನ್ನು ಕರಕರೆಗಳು ಬಿಟ್ಟು ।
ಕರಣ ಶುದ್ಧಿಯಲಿನ್ನು ಕರವಡ್ಡಿಕೊಂಡು ನಿಂದು ।
ವರ ಉದಕದಲಿಂದ ಹರಿಗರ್ಪಿತವೆಂದು ।
ಹರುಷದಲಿತಿನ್ನು ಸ್ಥಿರ ಪದವಿಯು ಪಡಿ ।
ಬರಿದೆ ನನ್ನದು ಎಂಬೊ ಮರುಳ ಕರ್ತೃತ್ವವ ।
ಮರದು ದುರ್ವೃತ್ತಿಯ ತೊರೆದು ಲೌಕೀಕವ ।

ಕರುಣಾಕರ ರಂಗ ಗೋಪಾಲ ವಿಟ್ಠಲನ್ನ ।
ಶರಣರ ಮರೆಬಿದ್ದು ನೆರೆ ಒದುಕನುಗಾಲಾ ॥ ೫ ॥

ಜತೆ

ಡೊಂಬನ ಗೂಡಿನಂತೆ ನಂಬದೀರೀದೇಹ ।
ನಂಬು ಗೋಪಾಲ ವಿಟ್ಠಲನಂಬುಜ ಚರಣ ॥ ೬ ॥

## ಸುಳಾದಿ ೫೯

**ಅನೇಕ** ಜಡಚೇತನರ ನಾನಾಬಗೆ ವ್ಯಾಪಾರ ಹರಿಯಾಧೀನ ಚಿಂತನೆ, **ಅಹಂಕರ್ತೃ**ತ್ವಾಭಿಮಾನಬಂಧಕವು, ಬಂಧನಿವೃತ್ತಿಗೆ **ಸೂತ್ರ**ಧಾರನ ವ್ಯಾಪಾರ **ತಿಳಿ.**

ರಾಗ ಭೈರವಿ ಧ್ರುವ ತಾಳ

ಪ್ರಸ್ತವ ಮಾಡುವಂತೆ ಕರ್ತನಾನಲ್ಲವಯ್ಯ ।
ವಸ್ತು ಬೇರೆ ಇದ್ದಾನೆ ಒಳಗೊಳಗೆ ನೋಳ್ಪದು ।
ಪುಸ್ತಕವಲ್ಲವಿನ್ನು ಬಿಚ್ಚಿ ತೋರಿಸಲು ।
ವಿಸ್ತರಿಸಿ ನೋಡಿರಿ ವಿವೇಕರು ।

ಅಸ್ತಮಾನತನಕ ಆದಸೇವೆಗೊಂಬೊ ಗ್ರ।
ಹಸ್ತ ನಮಗೆಲ್ಲರಿಗೊಡೆಯ ಕಾಣೊ।
ಹಸ್ತಕನ ಪಿಡಿದು ಕರ್ತೃ ಎನಗೆಂದರೆ ।
ಹುಸ್ತು (ಹುಸಿದು) ಹೋದವು ನಿಮ್ಮ ವಚನಂಗಳು।
ಹೊಸ್ತಲಮುಂದೆ ನಿಂತು ಗೋವಿಂದನೆಂದರೆ।
ವಸ್ತುವೆನಿಸೊದೆ ತಾ ನಮಸ್ಕಾರಕ್ಕೆ ।
ಕಸ್ತೂರಿ ಭರಣಿವಳಗೆ ಪರಿಮಳಯೆಚದರೆ।
ವಸ್ತು ಇದೆ ಎಂಬೊರೆ ಭರಣಿಯನು।
ದುಸ್ತರ ಎಮಗೆ ಇದು ಆಸ್ತಿಕತನದಿ ನೋಡಿ।
ಸ್ವಸ್ಥದಲಿ ಇಪ್ಪೋದು ಯೋಚಿಸದೆ।
ಮಸ್ತವಾಹನ್ನ ಗೋಪಾಲ ವಿಟ್ಠಲನೆ ಸ।
ಮಸ್ತಮಾಡಿ ಮಾಡಿಸುವ ಬಗೆಯ ಕೇಳಿ ॥ ೧ ॥

ಮಟ್ಟತಾಳ

ಒಂದು ಜೀವರಲ್ಲಿ ಕರ್ತನಾಗುವನು ।
ಒಂದು ಜೀವರಲ್ಲಿ ಭೋಕ್ತನಾಗುವನು ।
ಒಂದೊಂದು ಪದಾರ್ಥದಲ್ಲಿ ತಾನೇ ನಿಂದು।
ಒಂದೊಂದು ರೂಪದಿ ಒಂದು ಆಗಿ ಬಂದು।
ಒಂದಕ್ಕೊಂದು ಭೇದ ಒಂದು ವಿಷಯದಲ್ಲಿ ।
ಒಂದೆ ಒಂದಾಗುವ ಒಂದರಲ್ಲಿ ನೋಡೆ।
ಒಂದರ ದ್ವಾರದಿ ಒಂದಕ್ಕೆ ಫಲವಿತ್ತು।
ಒಂದರ ದ್ವಾರದಿ ಒಂದಕ್ಕೆ ಉಣಿಸುವ ।
ಒಂದರಲ್ಲಿಪ್ಪ ಒಂದರಲ್ಲಿ ಇಲ್ಲ।
ಎಂದು ಆಡಲು ಸಲ್ಲ ಇಂದಿರೆ ಅರಸನ್ನ।
ಒಂದೆ ದೈವ ನಮ್ಮ ಗೋಪಾಲ ವಿಟ್ಠಲ।
ವಂದಿಸಿ ತಿಳಿವರಿಗೆ ಆನಂದಬಡಿಸುವಾ ॥ ೨ ॥

ರೂಪಕ ತಾಳ

ತಾ ಯೆಂದೆನಿಸಿಕೊಂಡು ತಾನೆ ತಾಹೂವಾನು (ತರುವನು)।
ಬಾ ಎಂದೆನಿಸಿಕೊಂಡು ತಾನೆ ಬಾಹೂವಾನು (ಬರುವನು) ।
ಓ ಎಂದೆನಿಸಿಕೊಂಡು ತಾನೆ ಓಗ್ಗುಟ್ಟುವಾ ।
ಕೋ ಎಂದೆನಿಸಿಕೊಂಡು ತಾನೆ ಕೊಂಬುವನು ।
ಅ, ಎಂದು ಕ್ಷ, ಎಂದು ಐವತ್ತೊಂದಕ್ಷರ ।
ಬಾಯಿಂದ ಉಚ್ಚರಿಸಿ ಕಾಯ ಶುದ್ಧಿಯ ಮಾಡಿ ।
ಮಾಯ ಪೊಂದಸದಂತೆ ತತ್ವಗಳ ತೋರಿಸಿ ।
ನ್ಯಾಯದಿಂದಲೇವೆ ಕರ್ಮಗಳ ಮಾಡಿಸಿ ।
ತಾ ಯಿಸುಕೊಂಬವ ತಡವಿಲ್ಲದೆ ಭಕುತಿ ।
ಬಾಯಬಡಿಯ ಭಕ್ತರಿಂದ ಮಾಡಿದ ಕರ್ಮ ।
ಬಾಯ ಬಿಡುವ ಭಕ್ತರಲ್ಲದವರದಿನ್ನು ।
ನಾಯಕನಾಗಿ ಸರ್ವರಂತರದಿ ನಿಂತು ।
ನಿಯಾಮಕನಾಗಿ ನಿತ್ಯಕುಣಿಸ್ಯಾಡುವ ।
ಮಾಯಾರಹಿತ ದೇವ ಗೋಪಾಲ ವಿಟ್ಠಲ ।
ತಾಯಿ ಆಲಿಸಿದಂತೆ ತನ್ನವರನು ಪೊರೆವ ॥ ೩ ॥

ಝಂಪೆ ತಾಳ

ನಾನೆ ಕರ್ತನೆಂದು ನಾಲ್ಕು ದಿಕ್ಕುಗಳಿಂದ ।
ನಾನಾ ಪದಾರ್ಥಗಳನ್ನು ತರಿಸಿ ।
ಜ್ಞಾನವಿಲ್ಲದೆ ಯಜ್ಞ ಸ್ನಾನ ಗೋದಾನ ಭೂ ।
ದಾನ ಹಿರಣ್ಯ ಭೂಸುರರಿಗುಣಿಸಿ ।
ನಾನಾವ್ರತ ಚಾಂದ್ರಾಯಣಾದಿ ತಪಸುಗಳಿನ್ನು ।
ಗಾನ ಗಾಯತ್ರಿ ಜಪ ಮೌನಗಳು ।
ಏನು ಏಸೊಂದು ಪರಿಕರ್ಮಗಳು ಮಾಡಿದರು ।
ಶ್ರೀನಿವಾಸನು ಇದರಿಂದೊಲಿವನೇ ।
ಏನು ಮಾಡಿದುದೆಲ್ಲ ವಿಧಿಯು ಆಶ್ರಮ ಧರ್ಮ ।

ಕಾಣದಿದರೊಳಗೆ ಹರಿ ಕಾಣಿಸುವದು |
ಕಾಣದ ಕರ್ಮ ಅನಂತ ಮಾಡೊದಕ್ಕಿಂತ |
ಜ್ಞಾನ ಪೂರ್ವಕದಿ ಗೆಲುವ ಯೋಚನೆ |
ತಾನು ತನ್ನರಿತು ತವಕವ ಬೀಳದಲಿ |
ಮಾನಸದಲಿ ಹರಿಗೆ ಮೊರೆಯ ಹೊಕ್ಕು |
ನೀನು ಎನ್ನ ಸ್ವಾಮಿ ನಾನು ಭೃತ್ಯನೆಂದು |
ಖೂನವರಿದನ ಕುಡತಿ ಜಲವ ಪಿಡಿದು |
ದೀನ ರಕ್ಷಕನೆಂದು ದೈನ್ಯಬಟ್ಟಿತ್ತರೆ |
ಏನೇನು ಇದಕೆ ಸಮಾನ ಉಂಟೇ |
ದಾನವಾಂತಕನು ಗೋಪಾಲ ವಿಟ್ಠಲನನ್ನ |
ನೀನೆ ಗತಿ ಎಂದವಂಗೆ ನಿಜವ ತಿಳಿಪುವ ||೪||

ತ್ರಿವಿಡಿ ತಾಳ

ನಿತ್ಯದಿ ನಿಷ್ಕಾಮಕ ಕರ್ಮವ ಮಾಡೆ |
ಪ್ರತ್ಯಕ್ಷನಾಗಿ ತಾನಿತ್ಯುಳ್ಳ ಫಲವೀವ |
ಸತ್ಯ ಅದಕೆ ಫಲವಿತ್ತರೆ ತಪ್ಪನು |
ಭಕ್ತರಿಚ್ಛಿಗನಾಗಿ ಬಹುವೇಗ ವೊಲಿವುವ |
ಮತ್ತೊಂದು ಫಲಕಾಗಿ ಮತ್ತೆ ಕರ್ಮವು ಮಾಡೆ |
ದೈತ್ಯರ ದ್ವಾರದಿ ಫಲವನೀವಾ |
ನಿತ್ಯವಲ್ಲವು ಅದು ತತ್ಕಾಲಕೆ ಸುಖ |
ಚಿತ್ತಜನಯ್ಯನ ಚರಿತೆ ಹೀಗೆ |
ಭಕ್ತರಾದರು ಇಂಥ ಕರ್ಮ ಮಾಡಿದರೆ |
ಕ್ಲಪ್ತಕೆ ಕಡಿಮಿಲ್ಲ ಅಧಿಕಾನಂದವು ಹ್ರಾಸಾ |
ಉತ್ತಮ ಅಪರೋಕ್ಷ ಆದಮೇಲಕೆ ಇನ್ನು |
ಆತುಮಾರ್ಥವಾಗಿ ಹಿಂದೆ ಮಾಡಿದ ಕರ್ಮ |
ಜತ್ತಾಗಿ ಪ್ರಾರಬ್ಧವಾಗಿ ಉಣಿಸುವದು |
ಮತ್ತೆ ಅದರಿಂದಲಿ ಮೀರಲೋಶವೆ |

ಸತ್ಯಸಂಕಲ್ಪ ಗೋಪಾಲ ವಿಟ್ಠಲನ್ನ |
ಭಕ್ತರಿಗೆ ಕೇಡಿಲ್ಲ ಭಯವು ಇಲ್ಲ | ||೫||

ಅಟ್ಟತಾಳ

ಒಂದು ಫಲವು ಒಬ್ಬನಿಂದ ಆದರೆ ಇನ್ನು |
ಎಂದಿಗವನ ಉಪಕಾರವಯರಿಯದು |
ಬಂಧಕ ಎಮಗೆ ಅನಾದಿಕಾಲದಲಿಂದ |
ಇಂದದ್ದು ತನ್ನ ಛಂದುಳ್ಳನೋಟದಿ |
ಛಿಂದಿಸಿ ನಮ್ಮ ಆನಂದವ ಬಡಿಸುತ |
ಹಿಂದೆ ಮುಂದೆ ಅನಿಮಿತ್ಯ ಬಂಧು ಆಗಿ |
ಇಂದಿರಾಪತಿ ದಯಸಿಂಧು ಕರುಣಾಳು |
ಕಂದರ್ಪ ಜನಕ ಗೋಪಾಲ ವಿಟ್ಠಲನ್ನ |
ಎಂದಿಗೆ ಮರಿಯೆ ನಾ ಮನಮಂದಿರದೊಳಗೆ | ||೬||

ಆದಿತಾಳ

ನೋಡಿ ಬಲ್ಲೆವಂದರಿಂದಲಿ ನೀಡಿ ಬಲ್ಲೆವಂದರಿಂದಲಿ |
ಮಾಡಿ ಬಲ್ಲೆವಂದರಿಂದಲಿ ಬೇಡಿಬಲ್ಲೆವಂದರಿಂವ |
ನೋಡಿದದಕೆ ಇನ್ನು ಸರಿ ದೈವವಿನ್ನು ಯಲ್ಲಿಗಾಣೆ |
ನೀಡಿದದಕೆ ಈತನಿತ್ತ ಫಲಕು ಇನ್ನು ಸರಿಯುಗಾಣೆ |
ಮಾಡಿದದಕೂ ಈತ ತಿಳುವಂತೆ ದೈವಿನ್ನೊಂದು ಕಾಣೆ |
ಬೇಡಿದದಕೆ ತಾನೆಪ್ಪೊಲುವ ಗಾಡಿಕಾರ ಗೋಪಾಲ ವಿಟ್ಠಲ||೭||

ಜತೆ

ಕರ್ತೃ ಎನಿಸುವ ನಮ್ಮ ಕರ್ತೃ ಮಾತ (ತ್ರ) ನಾಗಿ |
ಸೂತ್ರಧಾರಕ ದೇವ ಗೋಪಾಲ ವಿಟ್ಠಲ ||೮||

## ಸುಳಾದಿ ೬೦

ಹರಿ ಸ್ವಾತಂತ್ರ ಜೀವ ಪರತಂತ್ರನೆಂದು ತಿಳಿದವಗೆ ಪರತಂತ್ರ
ದೂರನಾದ ಶ್ರೀಹರಿಯು ಒಲಿವನು.

ರಾಗ ಮಧ್ಯಮಾವತಿ ಧ್ರುವ ತಾಳ

ಆವನ್ನೀಧರಿಯ ವ್ಯಾಪ್ತನೆಂದೆನಿಸುವ ।
ಆವ ಪುರುಷನೆ ನಮ್ಮ ಸ್ವಾಮಿ ಕಾಣೊ ।
ಆವಾವ ನಿರ್ದೋಷ ಎಂದೆನಿಸುವನೊ ।
ಆವನೆ ಎನ್ನ ಭಾಗ್ಯದೊಡಿಯ ಕಾಣೊ ।
ಆವಾವ ಜ್ಞಾನ ಪೂರ್ಣ ಪೂರ್ಣನೆಂದೆನಿಪನೊ ।
ಆವನ್ನೆ ಎನ್ನ ಮನದೊಡಿಯ ಕಾಣೊ ।
ಆವಾವ ಸರ್ವತ್ರ ವ್ಯಾಪ್ತನಾಗಿಪ್ಪನೊ ।
ಆವನೇ ಎನಗೆ ಮುಖ್ಯವಿಷಯ ಕಾಣೊ ।
ಆವನಿಂದ ಜಾಗ್ರವು ಸೃಷ್ಟಿ ಸ್ಥಿತಿಲಯವು ।
ಆವನೇ ಎನ್ನದಾತಾಶ್ರಿತನು ಕಾಣೊ ।
ಆವನಿಂದ ಬಂಧಕ ಮೋಚಕಾದುದೊ ।
ಆವನೆ ಈಗ ಮನವೆ ಪಿಡಿಯೊ ಕಾಣೊ ।
ಆವನ್ನ ಕಾವನ್ನ ಬಾವನ್ನ ತಾವನ್ನ ।
ಈವನ್ನ ಪಾವನ್ನ ಪೂರ್ಣ ಗುಣ ಸಂಪನ್ನ ।
ಮಾವನ್ನ ಮರ್ದನ ಗೋಪಾಲ ವಿಟ್ಠಲನೆಂಬ ।
ದೇವನ್ನ ತಂದು ತೋರು ಅನುಭವಕ್ಕೆ ॥೧॥

ಮಟ್ಟತಾಳ

ರಮ್ಮೆಯ ಅರಸನ್ನ ಬೊಮ್ಮನೈಯ್ಯನ್ನ ।
ಮೊಮ್ಮಗನೆಂದೆನಿಪ ಹರನ ಪೊರೆವನ್ನ ।
ಸುಮ್ಮನಸರನೆಲ್ಲ ಪರಿವಾರವು ಮಾಡಿ ।
ಬೊಮ್ಮಾಂಡವೆ ಮನಿಯ ಗಮ್ಯನೆಂದೆನಿಪನ ।
ಸುಮ್ಮನೆ ಹೋಗಿನ್ನು ಒಮ್ಮನದಲ್ಲಿ ।

ಘಮ್ಮನೆ ಅಳಗಿರಿ ತಿಮ್ಮನ್ನ ಕರದು ತಾ ।
ನಮ್ಮ ಸ್ಥಿತಿಯು ಪೇಳಿ ಸಮ್ಮತಿಸಿಕೊಂಬಾ ।
ಇಮ್ಮನ ಬ್ಯಾಡಿದಕೆ ಈಗಲೆ ಸಮ್ಯ ಯಿದಕೆ ।
ನಮ್ಮ ಪೊರೆವ ದಾತಾ ಗೋಪಾಲ ವಿಟ್ಠಲ ।
ಹಮ್ಮೆ ತೊರೆದು ಅಧಮ್ಮನೆಂದವಗೊಲಿವಾ ||೨||

ರೂಪಕ ತಾಳ

ಅವನಲ್ಲಿ (ಜೀವನಲ್ಲಿ) ಅಸ್ವತಂತ್ರವೆಂಬೋದು ಸಿದ್ಧ ।
ಅವನಲ್ಲೆ ಅವನಿರೂಪ ಅನುಭವ ತೋರುತಾ ।
ಅವನೆ ಅವನ ಮಹಿಮೆಯನು ಬಲ್ಲವ ।
ಅವನೆ ಸಕಲ ವಿಧಿಯನು ಮಾಡಿದವ ।
ಪಾವನ್ನನಾಗುವ ಅವನೆ ಕಂಡರೆ ಮನುಜ ।
ಈ ವೇಳ್ಯದಲಿ ಮನವೆ ಅನುಭೋಗವಲ್ಲದೆ ।
ದೇವಕಿನಂದನ ಗೋಪಾಲ ವಿಟ್ಠಲ ತ ।
ನ್ನವ ನೆಂದವನಿಗೆ ತನ್ನ ತೋರಿಸಿಕೊಂಬ ||೩||

ಅಟ್ಟ ತಾಳ

ಕುಣಿದು ಕುಣಿಸುವ ಮಣಿದು ಮಣಿಸುವ ।
ಉಣಿಸುವನುಂಡು ತನಗಭೇದಾಗಿ ।
ಎಣಿಕೆ ತಟ್ಟುವನಲ್ಲ ಅನುಮಾನವಸ್ತಲ್ಲ ।
ಘನಜಾಗ್ರಪ್ರತಾಪ ನಿತ್ಯವ್ಯಕ್ತ ದೇವ ।
ಎಣಿಸು ಮನವೆ ನಿನ್ನ ಎಲ್ಲ ಪ್ರಾವರ್ತಕ ।
ಕ್ಷಣಕ್ಷಣಕೆ ಇನ್ನು ಕಾಣಿಸುವನು ಆ ।
ರನು ನಾಚದೆ ಪಿಡಿಯಿನ್ನು ನೂಕು ಸಕಲ ಅಘ ।
ಕ್ಷೀಣಿಸಿ ಪೋಗುವದಿದಕೆ ಅನುಮಾನ ಸಲ್ಲದು ।
ಘನ ಮಹಿಮ ನಮ್ಮ ಗೋಪಾಲ ವಿಟ್ಠಲನ್ನ ।
ನೆನೆಸುವದೆ ಸುಖ ನಿನಗದೆ ಬಹುಲಾಭ ||೪||

ಆದಿ ತಾಳ

ಭಕ್ತರಿಗೆ ಭಕ್ತನಾಗು ಮುಕುತಿ ಬೇಕಿಚ್ಛೆ ಇತ್ತೆ ।
ಸಕಲ ವಿಷಯದಿ ವಿರಕ್ತಿವುಳ್ಳವನಾಗು ।
ಕಕುಲಾತಿ ಬಿಡು ಇನ್ನೊಂದು ದೈವಿಲ್ಲಯೆಂದು ।
ಲಕುಮಿರಮಣನಲ್ಲಾ ಸಕುತಿಯುಳ್ಳವನಾಗು ।
ಸಕಲ ವಿಧಿ ನಿಷೇಧ ಹರಿಗೆ ಆಧೀನವೆಂದು ।
ಉಕುತಿಗಳಿಂದ ಹರಿಯ ತುತಿಗೆ ದೀಕ್ಷಿತನಾಗು ।
ಭಕುತವತ್ಸಲ ರಂಗ ಗೋಪಾಲ ವಿಟ್ಠಲ ।
ಸಕಲ ಬಂಧವ ಬಿಡಿಸಿ ಸುಖ ಅಂಬುಧಿಯೊಳಿಡುವ ॥ ೫ ॥

ಜತೆ

ಸ್ವಾತಂತ್ರ್ಯಾಸ್ವತಂತ್ರ ತಿಳಿದವನಿಗೆ ಪಾರ ।
ತಂತ್ರವಿದೂರ ಗೋಪಾಲ ವಿಟ್ಠಲವೊಲಿವ ॥ ೬ ॥

## ಸುಳಾದಿ ೬೧.

ಕಾರಣವಿಲ್ಲದೇ ಕಾರ್ಯಮಾಡಿಸುವರಾರಿಲ್ಲ. ಮುಖ್ಯ ಕಾರಣ ವಿಷ್ಣು. ಸ್ವಾತಂತ್ರ್ಯನಿಂದೆಲ್ಲ ಕಾರ್ಯವಾಗುವವು.

ರಾಗ– ಭೈರವಿ ಧ್ರುವ ತಾಳ

ಸರಿಯಾಗಿ ಸಖನಾಗಿ ಸರ್ವೇಶನೆ ।
ಅರಸಾಗಿ ಆಳು ಆಗಿ ಅಪ್ರಮೇಯ ।
ಸರಸಾಗಿ ವಿರಸನಾಗಿ ಸಿರಿ ಹರಿಯೆ ।
ಇರುಳಾಗಿ ಹಗಲಾಗಿ ಶ್ರೀವಿಷ್ಣುನೆ ।
ನರಕಾಗಿ ಸ್ವರ್ಗವಾಗಿ ನಾರಾಯಣ ।
ದೂರಿತನಾಗಿ ದೂರಾಗಿ ದುರುಳಾಂತಕ ।
ವರ ಮಾಶಾಪಿತವಾಗಿ ಪುರುಷೋತ್ತಮ ।
ಪುರನಾಗಿ ಕಾನನಾಗಿ ಪುರಂದರಾ ।
ತುರವಾಗಿ ಕರುವಾಗಿ ದಾಮೋದರ ।

ಮೊರಿಯಾಗಿ ಮಗನಾಗಿ ಮಂಗಳಾಂಗ |
ಧರಿಯಾಗಿ ಧೈರ್ಯನಾಗಿ ಶ್ರೀಕೃಷ್ಣನೆ |
ನೆರೆಯಾಗಿ ನೆಂಟನಾಗಿ ಶ್ರೀರಂಗನೆ |
ಹೊರಗಾಗಿ ಒಳಗಾಗಿ ಅನಂತನೆ |
ಸರಳಾಗಿ ಕಠಿಣವಾಗಿ ಸರ್ವಜ್ಞನೆ |
ಪರವಾಗಿ ಇಹವಾಗಿ ಪರಮೇಷ್ಟಿಯೆ |
ದೂರನಾಗಿ ಸಾರ್‍ಯಾಗಿ ಮುಕುಂದನೆ |
ಕಿರಿದಾಗಿ ಹಿರಿದಾಗಿ ತ್ರಿವಿಕ್ರಮಾ |
ವರನಾಗಿ ಅಭಯನಾಗಿ ವಾಸುದೇವ |
ಜಿರಿದಾಗಿ ಅಲ್ಪವಾಗಿ ಸಿರಿಕಾಂತನೆ |
ಎರಡಾಗಿ ಏಕೋನಾಗಿ ಶ್ರೀಹರಿಯೆ |
ಪರಿಪಾಲಿತನಾಗಿಪ್ಪ ಬಿಡದೆ ಎಂದೆಂದು ಎನ್ನ |
ಸಂರಕ್ಷಿಸುವ ಭಾರಕರ್ತಾ ಮುಕ್ತ |
ಅರಿದವನಿಗೆ ಲಭ್ಯಾ ಗೋಪಾಲ ವಿಟ್ಠಲ |
ಧೊರಿಯೆ ಪೂರ್ಣಕಾಮ ನಿತ್ಯ ನಿರ್ಲಿಪ್ತ ||೧||

ಮಟ್ಟ ತಾಳ

ಬಲ್ಲೆನೆಂದವ ಅರಿಯಾ ಅರಿಯನೆಂದವ ಬಲ್ಲ |
ಇಲ್ಲವೆಂದವಗುಂಟು ಇದ್ದೆನೆಂಬವಗಿಲ್ಲ |
ಪೊಳ್ಳು ಗಟ್ಟ್ಯಾಗುವದು ಗಟ್ಟಿ ಪೊಳ್ಳಾಗುವದು |
ವಲ್ಲದವನೆಪ್ಪೊಲಿವಾ ವೊಲಿದು ಇದ್ದವ ಬಿಡುವ |
ಕಲ್ಲು ಕಲ್ಲಿಗೆ ತಾಕಿ ಅಗ್ನಿ ಪೊರಟರಿನ್ನು |
ನಿಲ್ಲು ಅದಕ್ಕೆ ಒಬ್ಬ ಪುರುಷ ಬೇಕು |
ಇಲ್ಲೊ ಸ್ತ್ರೀಲಿಂಗವು ಪುರುಷ ಎರಡು ಇದ್ದರೆ ಸೃಷ್ಟಿ |
ಎಲ್ಲ ಆಗುವ ದೆಂಬೊ ಸೊಲ್ಲನಾಡಲಿಬೇಡ |
ಫುಲ್ಲಲೋಚನ ಕೃಷ್ಣ ಗೋಪಾಲ ವಿಟ್ಠಲ |
ಎಲ್ಲರಿಂದಲಿ ಭೇದ ಅಭೇದನಾಗಿಪ್ಪ ||೨||

### ರೂಪಕ ತಾಳ

ಧನದಿಂದ ವಿಕ್ರಯು ಸಕಲ ಪದಾರ್ಥವು ।
ಧನವ ವಿಕ್ರಯಿಪಂಥ ಅರ್ಥಾವದು ।
ಧನಕಿಂತ ಉತ್ತಮ ಮನುಜಾರಾವೆನೋಡು ।
ಎನಗಿಂದ ಉತ್ತಮರಾದವರ ।
ಅನುಸಾರ್ಯಾಗಿ ನಡೆದು ಅಲ್ಲಿದ್ದ ಹರಿಯಾ ।
ಗುಣಗಳೀವೆ ಧನವಮಾಡಿಕೊಂಡು ।
ಮನೆಯು ಮಾಡಿಕೊಂಡು ಮೂರು ಅವಸ್ಥೆಯು ।
ನೆನೆದು ನೆನೆದು ದಿನ ಒಪ್ಪಿಸುವೆ ।
ಸನಕಾದಿಗಳ ಪ್ರಿಯಾ ಗೋಪಾಲ ವಿಟ್ಠಲ ।
ಎನಗೆ ನೀ ವಿಷಯನೊ ಸರ್ವ ಪರಿಯಲಿ ॥ ೩ ॥

### ಝಂಪೆತಾಳ

ಉಪಜೀವನವೆಂಬದಾವದು ನೋಡಲು ।
ವಿಪರೀತವಾಗಿಹುದು ಈಗ ನೋಡ ।
ತಪರಹಿತನಾಗಿ ಬಿಂಬನ್ನ ಮರೆದು ಅನ್ಯವಿಷಾ (ವಿಷಯು)।
ಉಪಜೀವನವೆಂದು ತೋಷಬಡುವೆ ।
ಕಪರ್ದಿಕವಾದರು ಲಾಭವಾದರು ಕಾಣೆ ।
ತಪಿಸುವೆನು ಹಗಲಿರಳು ವಿಷಯುದಿಂದ ।
ಸ್ವಪನದಲ್ಲ್ಯಾದರು ನಿಜಸುಖವನ್ನು ಕಾಣೆ ।
ಉಪವಾಸ ಬಹುಜನ್ಮ ದೀನಉದ್ಧಾರ ।
ಕೃಪಪೂರ್ಣ ನೀ ಎನಗೆ ಗುಪಿತ ಸಖನಾಗಿದ್ದು ।
ಉಪವಾಸದಲಿ ಎನ್ನ ಇಡಲಿಬಹುದೇ ।
ಸಪುತ ದ್ವಿಲೋಕಕ್ಕೆ ಅನ್ನದಾತಾನೆಂದು ।
ಅಪರಿಮಿತ ನಿನ್ನ ಕೀರುತಿಯು ಎತ್ತ ।
ತೃಪುತನಾಗೊಂತೆನಗೆ ಅನ್ನ ನೀ ಉಣಿಸಿದರೆ ।
ನೀ ಪರಮ ಕರುಣಿ ಎಂದು ತುತಿಪೆ ।

ಕಪಟನಾಟಕಧಾರಿ ಗೋಪಾಲ ವಿಟ್ಠಲ |
ಅಪರಾಧ ಮುನ್ನೇ ನಾ ಮಾಡಿದವನೆ ||೪||

ತ್ರಿವಿಡಿ ತಾಳ

ನಾ ನಿನ್ನ ಮರೆವದಕ್ಕೆನಗೊಂದುಪಾಧಿ ಉಂಟು |
ನೀ ಎನ್ನ ಮರೆವದಕ್ಕೆ ಆವ ಉಪಾಧಿಯೊ ? |
ಅನಾದಿ ಅವಿದ್ಯ ಎನಗಾವರ್ಣವಾಗಿದೆ |
ನೀನು ನೋಡದಂತೆನ್ನ ನಿನಗಾವ ಆವರ್ಣ |
ಜ್ಞಾನಪೂರ್ಣನೆ ಎನಗೆ ನೀನೆ ಆವರ್ಣ ಅಭಿ |
ಮಾನಿಗಳೆ ಎನ್ನ ಸ್ವಾತಂತ್ರರೆ |
ನೀನೆ ಅವರಿಗೊಂದು ಮರ್ಯಾದಿ ಮಾಡಿಟ್ಟು |
ಪ್ರಾಣಿಗಳಾವನ್ನ ಕರ್ತರೆನಿಪೆ |
ಗಾಣ ಕಟ್ಟಿದ ಎತ್ತು ಏನು ಬಲ್ಲವೊ ತೈಲ |
ತಾನು ಪಕ್ವವಾದ ಪ್ರಮಾಣವು |
ಧೇನಿಪವು ತಮ್ಮ ಆವಾಗ ಬಿಡೋನೆಂದು |
ಗಾಣಿಗನಾಧೀನ ಎಲ್ಲ ಜೀವ |
ನಾನೆ ಮುಂತಾದ ಎಲ್ಲ ಜೀವ ತಿಲ ಸ್ಥಾನ |
ಗಾಣದ ವರಳವೇ ಸಂಸಾರವೋ |
ಅನಾದಿ ಅವಿದ್ಯ ಸಂಸಾರದೊಳು ಹಾಕಿ |
ನೀನು ಮರ್ದಿಸಿ ಜ್ಞಾನ ಭಕುತಿ ತೈಲ |
ವಾನು ತೆಗೆದು ಸರ್ವ ಜೀವರಿಗೆ ಎರದು |
ನೀನು ಮಾಡುವ ಮರಿಯಾದಿ ಇದು |
ನಾನೇವೆ ಅಪರಾಧಿ ತಿಳಿಯದೊಂದಿನ್ನಿಂದ |
ಕಾಣಿಸುತಲದೆ ಕರುಣಾಕರ |
ಗೋಣಿ ಹೊರಸಿದವನೆ ಇಳಿಸಬೇಕಲ್ಲದೆ |
ಏನನ್ನ ಸ್ವಾತಂತ್ರ ಎಮಗೆ ಉಂಟೊ ? |
ಜಾಣ ಚನ್ನಿಗರಾಯ ಗೋಪಾಲ ವಿಟ್ಠಲ |
ಜ್ಞಾನ ಅಂಬುಧಿ ನಿನ್ನ ಮೊರೆಯ ಹೊಕ್ಕೆ || ೫ ||

ಅಟ್ಟ ತಾಳ

ಆರಾಧಿತನಾಗು ಸರ್ವ ಇಂದ್ರಿಯಗಳಿಂದ |
ಆರಾಧನೆಯ ಮಾಡಿ ಸಾರಿ ನೀನಲ್ಲದೆ |
ಆರಾಧನಿಯಿಂದೊಂದು ಆಶೆ ಎನಗೆ ಬೇಡ |
ಆರಾಧಿಸಿದೆನೆಂಬೊ ಅಹಂಕಾರವನು ಬೇಡ |
ಆರಾಧನೆಯ ಸಾಧನಾರಾಧಕಕ್ಕಾಗಲಿ |
ತಾರತಮ್ಯ ಪರಿವಾರಸಹಿತ ತಂತ್ರಸಾರ ಯುಕುತವಾದ |
ಆರಾಧನಿಯ ಮಾಡಿ ಸಾರಭೋಕ್ತ ಸುಂದರ ಮೂರತಿಯನು |
ತೋರಿ ಎನ್ನೊಳಗೆ ಸ್ಫೂರುತಿಯನು ಕೊಟ್ಟು |
ಕೀರುತಿ ನಿನ್ನದು ಕೊಂಡಾಡುತ ಸದಾ |
ವಾರಣಾಸಿಯು ಮುಂತಾದ ಕ್ಷೇತ್ರಗಳೆಲ್ಲ |
ತೋರಿಸಿ ಅಲ್ಲಲ್ಲಿ ಸ್ತೋತ್ರ ಮಾಡಿಸಿ ನಿನ್ನ |
ಚಾರು ಚರಣದಲ್ಲಿ ಸೇರಿಸಿ ಸಲಹುವದೊ |
ಕಾರಣ ನೀ ಬಲ್ಲಿ ಎನ್ನ ತಂದದಕಿನ್ನು |
ನಾರಾಯಣ ನಿನ್ನ ತುತಿಯ ಮಾಡಿಸು ಪೂರ್ಣ |
ಮೀರಿ ಬಂದವು ದಿನ ಸಾರಿಪೇಳುತ ಹೀನೆ (ಲೀನೆ) |
ಶಾರೀರವೆಂಬುದು ಅನಿತ್ಯ ಬಲು ಸಿದ್ಧ |
ಊರಿಗೆ ಮುತ್ತಿಗೆ ಬರುತಿರೆ ಎಂಬಂಥ |
ವಾರುತಿ ಆದರು ಸಾರೋರಪರೋಕ್ಷ |
ಭಾರ ನಿನ್ನದು ಕಂಡ್ಯಾ ಗೋಪಾಲ ವಿಟ್ಠಲ ವಿ |
ಚಾರ ನಿನ್ನಲ್ಲಿರಲ್ಹಗಳೆ( ಇರಳು ಹಗಲೆ )ನಗಿರಲಿ ‖ ೬ ‖

ಆದಿ ತಾಳ

ಫಲವಾಗಿರಿಸು ಮತ್ಕುಲ ಸ್ವಾಮಿಯೇ ನಿಹ |
ಫಲವು ಅಧಿಕ ನೋಡಿ ಕಲಿಯುಗ ಸಾಧನ |
ಹಲವು ಬಗೆಯಲ್ಲಿ ಬೇಡುವದೇನಿಲ್ಲ |
ಸುಲಭದಿ ಸುರನದಿ ಸ್ನಾನವಮಾಡಿಸಿ |
ಸ್ಥಳವ ಸೇರಿಸಿ ಬಂಧುಗಳ ಸಹಿತ ತಂ |

ದಿಲ್ಲಿ ನಿಲಿಸಿದವ್ಯಾಬೆನ್ನ ತಿಳದದ್ದು ಮಾಳ್ಪೋದು ।
ಕಳವಳ ಇದರ ಹೊರತೊಂದು ಕಾಣಿಸೊದಿಲ್ಲ ।
ಉಳಿದ ಧರ್ಮಗಳ ಬಲ್ಲ ನಾನಾಗಲಿ ।
ತಿಳಿವಿಕೆ ಬಲುಕೊಡು ನಿನ್ನ ಕಥೆಯಲ್ಲಿ ।
ಚಲಿಸದೆ ಮನಸಿಗೆ ನಿಲುಕುತ ನೀನಿರು ।
ಗೆಲಿದೆ ನಾನಾ ಸಂಕಲಿಪಿಸಿದದನೆಲ್ಲ ।
ಸಲಿಗೆಲಿ ಎನೆ ನಾ ಬಿನ್ನೈಸಿದದನೆಲ್ಲ ।
ಭಳಿಭಳಿರೆ ಸ್ವಾಮಿ ಭಕುತ ಜನರ ಪ್ರೇಮಿ ।
ಚಲುವ ಶುಭಾಕಾರ ಚಕ್ರ ಶಂಖಧರ ।
ಬಲು ವೈಚಿತ್ರ ಕೋಮಲ ಮನ ಪುರುಷ ।
ಜಲಜಾಕ್ಷನೆ ಮಹಾ ಕಲುಷ ಸಂಹಾರನೆ ।
ಜಲಜಸಂಭವ ಪಿತ ಜನನ ಮರಣ ದೂರ ।
ಚಲ ಅಚಲಾಗತ ಅಚಲಾನಂದನೆ ।
ಚಲಿಸುವ ಕರನ ಕುಂಡಲಗಳ ಪ್ರಭೆಯು ।
ಖಳೆಯು ಪ್ರಕಾಶಿತಾ ಮೊಗನೆ ಮನೋಹಾರಾ ।
ವಳಿ ಪಂಕ್ತಿಯು ಸುಜಠರ ಶಿರಿವತ್ಸ ।
ಸುಳಿಯು ಗುಂಭ ಪೊಕ್ಕಳಕಟಿ ಸುಗುಣ ।
ಥಿಲಥಿಲಕು ಊರು ಎತ್ತಿ ಕುಣೋ ಚರಣ ।
ನಿಲಕುತ ಇರು ಎನ್ನ ಮನಕೆ ಆಭರಣ ।
ಸುಲಭ ತಾರಕ ನೋಡು ಹರಿ ನಿನ್ನ ಸ್ಮರಣ ।
ಚಲುವ ದೇವರ ದೇವ ಗೋಪಾಲ ವಿಟ್ಠಲ ।
ಸಲಿಗೆ ಬಿನ್ನಪಿದೊಂದು ಸಲಿಸೋ ಹೇ ಜೀಯಾ || ೭ ||

**ಜತೆ**

ಕಾರಣೆಲ್ಲದ ಕಾರ್ಯಮಾಡುವರುಂಟೇನೈಯ್ಯ ।
ಕಾರಣ ಪುರುಷ ಕಾಯೊ ಗೋಪಾಲ ವಿಟ್ಠಲ || ೮ ||

## ಸುಳಾದಿ ೬೨

ಸ್ವಾಮಿ ಭೃತ್ಯಭಾವದಿಂದ ಆಚರಿಸೆ ಮುಕ್ತಿಯಾಗುವದು ಹರಿಯಾಧೀನ.

ರಾಗ ವಸಂತ ಭೈರವಿ ಧ್ರುವ ತಾಳ

ಏನೋ ನಿನ್ನ ಮಹಿಮೆ ಆನೇನು ಕೊಂಡಾಡುವೆ ।
ಜ್ಞಾನಾನಂದ ಕಾಯಾ ಲೋಕ ಮೋಹಕ ದೇವ ।
ದೀನ ಜನರ ಪಾಲ ದಿನಕರ ಶತತೇಜ ।
ಗಾನಲೋಲ ಪ್ರಿಯ ಗಾಯಿತ್ರಿ ಪ್ರತಿಪಾದ್ಯ ।
ಜಾನಕಿ ರಮಣನೆ ಜಗ ಸೃಷ್ಟ್ಯಾದಷ್ಟ ಕರ್ತ ।
ದಾನವಾರಿಯೆ ರಂಗ ದಾಸರ ಮನದೊಡಿಯ ।
ಮಾನಾಭಿಮಾನ ಕರ್ತ ಮನ್ಮಥನ ಜನಕ ।
ಶ್ರೀನಾಥ ಸರ್ವೋತ್ತಮ ಶೃಂಗಾರ ಮೂರುತಿಯೆ ।
ಧ್ಯಾನದಿ ಭಕ್ತರಿಗೆ ದೀಪ್ತಿಸುತ ಪೊಳೆವನೆ ।
ನಾನಾ ಪದಾರ್ಥದಲ್ಲಿ ನಾನಾ ದೇಶಗಳಲ್ಲಿ ।
ನಾನಾ ಕಾಲಗಳಲ್ಲಿ ನೀ ನಿತ್ಯ ನಿತ್ಯ ತೃಪ್ತ ।
ಅನಾದಿ ಕಾಲ ದೈವ ಅಪ್ರಮೇಯಾ ।
ವಾಣಿ ಭಾರತಿ ಅಜಸುರರಿಂದ ವಂದಿತನೆ ।
ಕ್ಷೋಣಿಯೊಳಗೆ ಸಮವಿಲ್ಲದ ದೈವವೆ ।
ಧೇನಿಸಿ ನೋಡಲು ದಿನದಿನಕೆ ವಿಚಿತ್ರ ।
ಜ್ಞಾನಿಗಳರಸನೆ ಗರುಡವಾಹನ ರಂಗ ।
ಕಾಣರು ನಿನ್ನ ಗುಣಹೀನ ಮನುಜರಿನ್ನು ।
ತಾನೆ ನೀನೆಂಬವಗೆ ಏನೆಂಬೆ ಹರಿಯೆ ।
ನೀನೆ ಗತಿ ಅಂತ ನಂಬಿದ ಭಕ್ತರಿಗೆ ।
ಊನವಾಗೊವು ದೋಷ ಅನಂತವಿದ್ದರನ್ನ ।
ನಾನು ನಿನ್ನ ಬಣ್ಣಿಸಿ ಏನು ಬೇಡುವದಿಲ್ಲ ।
ರೇಣು ಎನಿಸು ಎನಿಸು ಎನ್ನ ಜ್ಞಾನಿಗಳ ಪಾದದ ।
ನಾನು ನನ್ನದು ಎಂಬೊ ಹೀನ ಮತಿಯಲಿಂದ ।

ಗಾಣದ ಎತ್ತಿನಂತೆ ತಿರುಗುವೆ ಧರಿಮೇಲೆ ।
ಭಾನು ಶತ ತೇಜ ಗೋಪಾಲ ವಿಟ್ಠಲ ।
ದೀನರಿಗೆಲ್ಲ ದತ್ತ ಪ್ರಾಣ ದೇವ ॥ ೧ ॥

ಮಟ್ಟತಾಳ

ಎಲ್ಲಿ ನೋಡಲು ನೀನು ಅಲ್ಲಲ್ಲಿ ವ್ಯಾಪ್ತನು ।
ಎಲ್ಲಿ ನೋಡಲು ನೀನು ಅಲ್ಲಲ್ಲಿ ಪೂರ್ಣನು ।
ಬಲ್ಲಿದವರಿಗೆ ಬಲ್ಲಾಗ್ಯ ಬಲ್ಲವಗತಿ ಸುಲಭ ।
ಸಲ್ಲುವದೊ ಬಿರಿದು ಎಲ್ಲಿ ನಿನಗೆ ಸಮ ।
ವಿಲ್ಲವು ನಾಗಾಣೆ ಮಲ್ಲರ ಮರ್ದನ ।
ಹುಲ್ಲು ಕಲ್ಲಿನಲ್ಲಿ ಎಲ್ಲದಿ ಭರಿತನೆ ।
ಎಲ್ಲ ಕಾಲವು ನಮ್ಮನೆಲ್ಲರ ಸಲಹುವಿ ।
ಜಲ್ಲಧಿ ಒಳಗೆ ಇನ್ನು ಕಮಲವು ಇದ್ದಂತೆ ।
ಎಲ್ಲವನು ತೊರೆದು ನಿಲ್ಲಿಸಿ ಮನವನ್ನು ।
ಸೊಲ್ಲು ಎತ್ತಿ ಪಾಡಿ ಇಲ್ಲೆ ಆರಾಧಿಸಲು ।
ಚೆಲ್ಲಿ ಪೋಗದವರ ಮೆಲ್ಲನೆ ನೀ ಹೃದಯದಲ್ಲಿ ನಿಂತು ತೋರಿ ।
ಝಿಲ್ಲಕೆಂದು ಕುಣಿದು ಉಳ್ಳಷ್ಟು ದೋಷ ।
ವೆಲ್ಲ ಪೋಗಲಾಡಿ ಸಲ್ಲುವಂಥ ಪದವಿ ।
ಭಳಿರೆ ಇತ್ತು ಪೊರವಿ ಫುಲ್ಲನಾಭನೆ ಚಲ್ವ ಗೋ ।
ಪಾಲ ವಿಟ್ಠಲ ಒಲ್ಲೆನೆಂದರೆ ಬಿಡ ಯಳ್ಳಷ್ಟು ಕ್ಲಿಷ್ಟಕೆ ॥ ೨ ॥

ತ್ರಿವಿಡಿ ತಾಳ

ನಿನ್ನ ಜ್ಞಾನವಂತನೆಂದು ಇನ್ನು ಜ್ಞಾನ ಸಂಪಾದಿಸುವೆ ।
ನಿನ್ನ ದೋಷ ದೂರನೆಂದು ಎನ್ನ ದೋಷಂಗಳಟ್ಟುವೆ ।
ನಿನ್ನ ಗುಣ ಪೂರ್ಣನೆಂದು ಗುಣವಂತನಾಗುವೆ ।
ನಿನ್ನ ಸುಖಪೂರ್ಣನೆಂದು ಸಂತೋಷದಿಂದಲಿರುವೆ ।
ನಿನ್ನ ಬಲಪೂರ್ಣನೆಂದು ಬಲವಂತನಾಗುವೆ ।
ನಿನ್ನ ಜನನ ಮರಣ ರಹಿತನೆಂತೆಂದು ಕೊಂಡಾಡಿ ।
ಮುನ್ನೆ ಧರಿಯ ಮೇಲೆ ಎನ್ನ ಜನನ ಕಳೆವೆ ।

ನಿನ್ನ ಜಾರವಂತನೆಂದು ಎನ್ನಜಾರತ್ವಕಳಿವೆ ।
ನಿನ್ನ ಕಂಸಾರಿ ಎಂತೆಂದು ಎನ್ನ ಸಂಸಾರ ನೀಗುವೆ ।
ನಿನ್ನ ದನುಜ ಮರ್ದನನೆಂದು ಎನ್ನ ಅರಿಗಳಗೆಲ್ಲುವೆ ।
ನಿನ್ನ ಭಕ್ತವತ್ಸಲನೆಂದು ಇನ್ನು ಭಕ್ತಿ ಸಂಪಾದಿಸುವೆ ।
ನಿನ್ನ ಕರುಣಾಳೆಂತೆಂದು ಎನ್ನ ಕರಣ ಶುದ್ಧನಾಗುವೆ ।
ನಿನ್ನ ತೊತ್ತಿಗೆ ತೊಂಡನಾಗಿ ನಿನ್ನ ಭೃತ್ಯನಾಗುವೆ ।
ನಿನ್ನವರ ಮನೆ ಮುಂದೆ ಕುನ್ನಿ ಆಗಿ ಆನಿರುವೆ ।
ನಿನ್ನ ತೀರಥ ಪ್ರಸಾದ ನಿನ್ನ ಯಂಜಲಗಳುಂಡು ।
ನಿನ್ನ ಬೇಡಿ ನಿನ್ನ ಕಾಡಿ ನಿನ್ನ ಹಾಡಿ ಹಾರೈಸಿ ।
ಎನ್ನ ದಿನಗಳ ಕಳೆವೆ ಮುನ್ನೆ ಕ್ಲಿಪ್ತಪರಿಯಂತರ ।
ಪುಣ್ಯವೊ ಪಾಪಗಳೊ ಎನ್ನಿಂದ ಮಾಡಿಸೊ ಕಾರ್ಯ ।
ಮುನ್ನೆ ಏನಿದಕೆ ಫಲವೊ ನಿನ್ನಗೆ ನೀನೆ ಬಲ್ಲೆಯ್ಯಾ ।
ಇನ್ನು ನಾ ಒಂದು ಬಲ್ಲೆನು ನಿನ್ನನೆ ಗತಿ ಎಂಬೋದು ।
ಚಿನ್ನುಮಯ ಮೂರುತಿ ಗೋಪಾಲ ವಿಟ್ಠಲರೇಯ ।
ಧನ್ಯನಾಗುವೆ ಕೇಳು ನಿನ್ನವರ ಬಳಿವಿಡಿದು ॥ ೩ ॥

ಅಟ್ಟ ತಾಳ

ಹೀನರ ಒಳಗೆಲ್ಲ ಹೀನನು ನಾಬಲು ।
ಮಾನವರೊಳಗೆಲ್ಲ ಮಾನಗೇಡಿ ಬಲು ।
ದೀನರ ಒಳಗೆಲ್ಲ ದೀನನು ನಾ ಬಲು ।
ಹೀನ ದೀನ ಅಜ್ಞಾನಕೆಲ್ಲ ನಿನ್ನ ।
ಧ್ಯಾನ ನಾಮ ಬಲ ನಾನೊಂದು ಮಾಡಲು ।
ತಾನು ಇದರ ಮುಂದೆ ಏನೇನು ಮಾಳ್ಪವು ।
ಜಾಣ ಸುಂಕರಿ ಗಂಡವ (ವಾ) ನು ಬಂದರೆ ಇನ್ನು ।
ಗೋಣಿಯನೊಪ್ಪಿಸಿ ತಾನು ಸುಮ್ಮನಾಗೆ ।
ಏನು ಮಾಡುವನವ ಕ್ಷೋಣಿಯಒಳಗಿನ್ನು ।

ಶ್ರೀನಾಥ ನಿನ್ನ ದಾಸನಾದವನ ಇನ್ನು ।
ನಾನು ಕಾರಣ ಎಲ್ಲ (ವಲ್ಲ) ಏನೇನು ಮಾಡೋವು ।
ದಾನವಾಂತಕ ರಂಗ ಗೋಪಾಲ ವಿಟ್ಠಲ ।
ಮಾನಾಭಿಮಾನಕೆ ನೀನೆ ಗತಿಯೊ ದೇವಾ ॥ ೪ ॥

ಆದಿತಾಳ

ಜನರಲ್ಲಿ ಮನಹೋಗೆ ನಿನಗೆ ಹೋಯಿತು ಇನ್ನು ।
ಧನದಲ್ಲಿ ಮನಹೋಗೆ ನಿನಗೆ ಹೋಯಿತು ಇನ್ನು ।
ದಿನದಲ್ಲಿ ಮನಹೋಗೆ ನಿನಗೆ ಹೋಯಿತು ಇನ್ನು ।
ಗುಣದಲ್ಲಿ ಮನಹೋಗೆ ನಿನಗೆ ಹೋಯಿತು ಇನ್ನು ।
ಉಣಿಸಲ್ಲಿ ಮನಹೋಗೆ ನಿನಗೆ ಹೋಯಿತು ಇನ್ನು ।
ಕುಣಿದಾಡು ಮನಹೋಗೆ ನಿನಗೆ ಹೋಯಿತು ಇನ್ನು ।
ಎಣಿಸಲು ಮನಹೋಗೆ ನಿನಗೆ ಹೋಯಿತು ಇನ್ನು ।
ಅಣಕಿಸ ಮನಹೋಗೆ ನಿನಗೆ ಹೋಯಿತು ಇನ್ನು ।
ಅನುವುದಪ್ಪಿದವೆಲ್ಲ ಅನುವು ಮಾಡಿ ನೋಡೆ ।
ನಿನಗೆ ಕಾರಣವಯ್ಯಾ ನೀನಿಲ್ಲದಾರಿಲ್ಲ ।
ನೀನು ಮಾಡಿಸುದದು ನಿನಗೆ ಸಮರ್ಪಿತ ।
ನಿನಗೆ ನೀನೇ ಗತಿ ಎನಗೆ ನೀನೆ ಗತಿ ।
ಘನಮಹಿಮ ನಮ್ಮ ಗೋಪಾಲ ವಿಟ್ಠಲರೇಯ ।
ಅನುವು ತಪ್ಪಿದವೆಲ್ಲ ಅನುವುಮಾಡಿಪೊರಿಯೊ ॥ ೫ ॥

ಜತೆ

ನೀನು ಅನಾದಿ ಸ್ವಾಮಿ ನಾನು ಅನಾದಿ ಭೃತ್ಯ ।
ನೀನೆ ನೀನೆ ಗತಿಯೊ ಗೋಪಾಲ ವಿಟ್ಠಲ ॥ ೬ ॥

## ಸುಳಾದಿ ೬೩

ಜೀವನಿಗೆ ನಾ ಕರ್ತೃನೆಂದರೆ ನರಕಾದಿಗಳು, ದೇವರೆ ನೀನೆ ಕರ್ತೃನೆಂದರೆ ನರಕಾದಿಗಳು ಅಗಲರಿಯುವು. ಹೀಗೆ ನಂಬಲು ಜೀವನು ಎಷ್ಟರಮನುಜ? ದೇವರು ಇಂಥ ನಂಬಿಕೆ ಇತ್ತರೆ ನಂಬುವನು.

ರಾಗ ಪಂತುವರಾವಳಿ ಧ್ರುವ ತಾಳ

ನಿನ್ನ ಸ್ಮರಣೆ ಎನಗೆ ತೀರ್ಥ ಯಾತ್ರಿಗಳಯ್ಯಾ ।
ನಿನ್ನ ಸ್ಮರಣೆ ಎನಗೆ ಯಜ್ಞ ದಾನಂಗಳಯ್ಯಾ ।
ನಿನ್ನ ಸ್ಮರಣೆ ಎನಗೆ ವ್ರತ ಚಾಂದ್ರಾಯಣಗಳಯ್ಯಾ ।
ನಿನ್ನ ಸ್ಮರಣೆ ಎನಗೆ ತಪಸ್ಸು ಸಿದ್ಧಿಗಳಯ್ಯಾ ।
ನಿನ್ನ ಸ್ಮರಣೆ ಎನಗೆ ಸಾಧನ ಸಂಪತ್ತುಗಳು ।
ನಿನ್ನ ಸ್ಮರಣೆ ಎನಗೆ ಬಲಧೈರ್ಯವೊ ಎನ್ನಯ್ಯಾ ।
ನಿನ್ನ ಸ್ಮರಣೆ ಎನಗೆ ಇಹಪರದಲ್ಲಿ ಲಾಭ ।
ನಿನ್ನ ಸ್ಮರಣೆ ಎನಗೆ ಸಿದ್ಧವಾದ ಮುಕುತಿಯ್ಯಾ ।
ನಿನ್ನ ವಿಸ್ಮರಣೆಯಿಂದ ಆವ ಕರ್ಮ ಮಾಡಲು ।
ಪುಣ್ಯದ ಫಲವನು ದೊರಿಯದು ಜೀವರಿಗೆ ।
ಕಣ್ಣು ಬಿಗಿದು ಕಟ್ಟಿ ಚಿತ್ರವ ಬರೆದಂತೆ ।
ನಿನ್ನರಿಯದ ಕರ್ಮ ಅನಂತ ಮಾಡಲ್ಯಾಕೆ ।
ಕನ್ನಿಕೆಗೆ ಬಾಲ್ಯದಿ ಕಂಡವರು ಪತಿ ಆದಂತೆ ।
ನಿನ್ನ ಸ್ಮರಿಣಿಲ್ಲದ ಕರ್ಮ ಈ ಪರಿಯೊ ದೇವ ।
ನಿನ್ನ ವಿಸ್ಮರಣೆಯೆ ಗೋಹತ್ಯ ಬ್ರಹ್ಮಹತ್ಯ ।
ನಿನ್ನ ವಿಸ್ಮರಣೆಯೆ ಪಂಚಮಹಪಾತಕ ।
ನಿನ್ನ ವಿಸ್ಮರಣೆಯೆ ಸರ್ವ ಅಪರಾಧವಯ್ಯಾ ।
ನಿನ್ನ ವಿಸ್ಮರಣವೇ ಸಕಲ ನಿಷೇಧಗಳು ।
ನಿನ್ನ ಸ್ಮರಣವೇ ಇಷ್ಟಗಳಯ್ಯಾ
ನಿನ್ನ ಸ್ಮರಣೆ ಇರಲು ಅಧಮ ಕರ್ಮ ಮಾಡಲು ।
ಅನ್ಯಾಯವೆನಿಸದು ಆಗಮ ಸಮ್ಮತವು ।

ಘನ್ನ ದಯಾನಿಧೆ ಗೋಪಾಲ ವಿಟ್ಠಲ ।
ನಿನ್ನ ಸ್ಮರಣೆ ಪುಣ್ಯ ನಿನ್ನ ವಿಸ್ಮರಣೆ ದೋಷಾ ॥ ೧ ॥

### ಮಟ್ಟ ತಾಳ

ಜಡಚೇತನ ಜ್ಞಾನ ಅಡಿಗಡಿಗೆ ತಿಳಿದು ।
ಜಡಕೆ ಲಯುವೆ ಬಗೆದು ಚೇತನಗಳೆರಡು ।
ದೃಢವಾಗಿ ತಾತನ್ನ ಒಡಲೊಳಗಿಪ್ಪನ್ನ ।
ಒಡಿಯನೆಂದು ತಿಳಿದು ಅಡಿಗಳಿಗೆ ಎರಗಿ ।
ಕೊಡುವವ ಕೊಳುವನು ಬಿಡದಲೆ ನೀನೆಂದು ।
ನಡಿಸುವ ನುಡಿಸುವ ಹರಿ ನೀನೆಂದರಿದು ।
ಎಡಬಲದಲಿ ಇನ್ನು ಪರಿವಾರ ಸಹವಾಗಿ ।
ಕಡಕವಿಲ್ಲದೆ ನೋಡಿ ಜಡಮತಿಯನೆ ಬಿಟ್ಟು ।
ನುಡಿವದೆ ಸ್ಮರಣೆಯು ಕೊಡುವದು ಮಹಾಫಲವು ।
ಕಡು ಮೂರ್ಖತನದಿ ಬಿಡದಲೆ ಹಗಲಿರುಳು ।
ನುಡಿನುಡಿಗೆ ಘರ್ಜಿಸಿಡಲ್ಯಾತಕೆ ಮೊರಿಯಾ ।
ಮಿಡುಕುವದಲ್ಲದೆ ವೃಡಸಖನು ಮೆಚ್ಚಾ ।
ಕಡಲ ಶಯನ ರಂಗ ಗೋಪಾಲ ವಿಟ್ಠಲ ।
ಕೊಡು ನಿನ್ನ ಸ್ಮರಣೆ ಬಿಡದಲೆ ಕ್ಷಣಕ್ಷಣಕೆ ॥ ೨ ॥

### ರೂಪಕ ತಾಳ

ನಾ ಕರ್ತನೆಂದದರಿಂದಲೆವೇ ಸಕಲ ।
ಶೋಕಾನರ್ಥಗಳು ಜೀವರಿಗೊದಗೋದು ।
ನೀ ಕರ್ತನೆಂದದರಿಂದ ಜೀವರಿಗೆ ।
ನರಕಾದ್ಯನರ್ಥಗಳು ಆಗಲರಿಯುವಯ್ಯಾ ।
ಈ ಕುರುಹಕೆ ತಂದು ( ಒಂದು ) ದೃಷ್ಟಾಂತರವು ಇನ್ನು ।
ಆಕಳನ ಕೊಂದಂತೆ ಆವಿಪ್ರನೆ ಸಾಕ್ಷಿ ।
ಶೋಕ ಸುಖವೆರಡು ನೀನು ಮಾಡಿಸಿ ಇನ್ನು ।
ಹಾಕು ದ್ವಿಫಲವನು ಜೀವರ್‍ಯೋಗ್ಯತ ಅರಿದು ।

ನೀ ಕಾಣಿಸಿಕೊಂಬುವನೆ ನಿನ್ನ ಕರ್ತೃತ್ವಕ್ಕೆ ।
ಸಾಕಲ್ಯವಗರಿದು ಏಕ ಚಿತ್ತದಲ್ಲಿಪ್ಪ ।
ನೀ ಕರ್ತರ್ಮವಾಸ್ವಾಮಿ ನಾಕುಶ್ಚಿತ ಭೃತ್ಯಾ ।
ನೀ ಕಾಯೊ ಎನ್ನಯ್ಯಾ ಸಾಕುವ ಬಿರಿದುಂಟು ।
ನಾ ಕೃತಘ್ನ ಬಲು ನೀ ಕರುಣಾಳಯ್ಯಾ ।
ನಾ ಕಪಟಿಯೊ ದೇವ ನೀ ದಯಾವಾರಿಧಿ ।
ಸಾಕಲ್ಯ ಗುಣಪೂರ್ಣ ಗೋಪಾಲ ವಿಟ್ಠಲ ।
ಹಾಕದಿರೆನ್ನ ನಾನಾ ಕುಯೋನಿಗಳಲ್ಲಿ ॥ ೩ ॥

ಝಂಪೆ ತಾಳ

ಆವ ಲೀಲೆಯೊ ನಿನ್ನದಾವ ಸ್ವಭಾವವೊ ।
ಜೀವರೊಡನೆ ಆಟ ಆವ ಸುಖವೊ ನಿನಗೆ ।
ನಾವಸ್ವತಂತ್ರರು ನೀ ಸರ್ವ ಸ್ವಾತಂತ್ರ ।
ಬಾವುವದೆ ( ಬಾಹುವದೆ ) ಮ್ಮಿಂದ ಏನು ನಿನಗೆ ದೇವ ।
ನಾವು ಊಳಿಗರು ನಿನಗೆ ಬೇಕಿವೆಂಬೀವೇನೋ ।
ನೀ ಊಳಿಗನಾಗಿ ಮಾಡಿಸಿ ನಮ್ಮಿಂದ ।
ಜೀವರಿಗೆ ಫಲವನು ತಂದು ತಂದು ನೀವೆ ।
ದೇವ ನಿನಗೆ ನೋಡ ಒಂದು ಕಾರಣವಿಲ್ಲ ।
ದೇವ ನಿನಗೆ ನೋಡ ಒಂದು ಕರ್ಮಗಳಿಲ್ಲ ।
ಆವಾವ ಪರಿ ನಿನ್ನ ಲೀಲೆಗಳ ತೋರಿದಿ ।
ದೇವ ನೀ ಬಂಡಿಯು ಬೋವಾದೆ ಅರ್ಜುನಗೆ ।
ಆವುಗಳ ಕಾದೆ ಸನಕಾದಿಗಳ ಪಾಲಿಸಲಿ ।
ಆ ಉಗ್ರಸೇನನ ಸೇವೆಯನು ಮಾಡಿದೆ ।
ದೇವ ಗೋಪಿಯು ಕೈಯ್ಯ ಕಟ್ಟೆ ಹಾಕಿಸಿಕೊಂಡೆ ।
ನೀ ವಟು ವಿಪ್ರನಾಗಿ ಯಜ್ಞದಲಿ ಪೋಗಿ ।
ದೇವ ಭಿಕ್ಷವ ಬೇಡಿ ಭಕ್ತನ್ನ ಪಾಲಿಸಿದೆ ।
ಕಾವಲಿ ಕಾದೆ ಆತನ್ನ ಮನೆ ದ್ವಾರದಲಿ ।
ಆವ ಅಪೇಕ್ಷಿಯು ನಿನಗೆ ಒಂದೂ ಇಲ್ಲ ।

ಧಾವತಿಬಡುವೆ ನಿನ್ನ ಭಕುತರಿಗಾಗಿ ।
ನೋವಾಗುವೆ ನಿನ್ನ ಭಕ್ತರು ದಣಿದರೆ ।
ಆವ ನಿನ್ನ ಕಾರ್ಯ ಭಕ್ತರ ಪಾಲಣೆ ।
ಆವ ನಿನ್ನ ಕ್ರೀಯಾ ದನುಜರ ಮರ್ದನೆ ।
ಆವ ವ್ಯಾಪಾರವು ನಿನಗೆ ಮಾಡೆಂಬರು ಪೇಳುವರುಂಟೆ ದೇವ।
ಕಾವ ಕರುಣಿ ನಮ್ಮ ಗೋಪಾಲ ವಿಟ್ಠಲ ।
ಸೇವಕರ ಪಾಲಿಸುವ ಬಗೆಯುಂತೆಂತೊ ದೇವ ॥ ೪ ॥

## ತ್ರಿವಿಡಿ ತಾಳ

ಎನ್ನ ಅಜ್ಞಾನವೆಲ್ಲ ನಿನ್ನಾಧೀನವಯ್ಯಾ ।
ಎನ್ನ ಕರಣ ಚೇಷ್ಟೆ ವ್ಯಾಪಾರ ನಿನ್ನಾಧೀನ ।
ಎನ್ನ ಪ್ರೇರಣೆ ಪ್ರತಿಕ್ಷಣಕೆ ನಿನ್ನಾಧೀನ ।
ಎನ್ನ ಸ್ಮರಣೆ ಸ್ಫರಣೆ (ಸ್ಫುರಣೆ) ನಿನ್ನಾಧೀನ ದಮ್ಮಯ್ಯಾ ।
ಎನ್ನ ಸ್ವಾಮಿಯೆ ನೀನು ನಿನ್ನ ಭೃತ್ಯನು ನಾನು ।
ಇನ್ನೊಂದು ನಾನರಿಯೆ ಎನ್ನೊಡಿಯನೆ ಕೇಳು ।
ಎನ್ನ ಐಶ್ವರ್ಯವು ನಿನ್ನ ಪರವಾಗಲಿ ।
ಎನ್ನ ಆರೋಗ್ಯವು ನಿನ್ನ ಪರವಾಗಲಿ ।
ಎನ್ನ ಆಯುಷ್ಯವು ನಿನ್ನ ಪರವಾಗಲಿ ।
ಎನ್ನ ಸಕಲ ವ್ಯಾಪಾರ ನಿನ್ನಪರ ಆಗಲಿ ।
ಎನ್ನ ಚರಣಗಳು ನಿನ್ನ ಯಾತ್ರಿಯು ಮೆಟ್ಟಲಿ ।
ಎನ್ನ ಕರಗಳಿನ್ನು ನಿನ್ನ ಪೂಜೆ ಮಾಡಲಿ ।
ಎನ್ನ ಕರ್ನಗಳಿನ್ನು ನಿನ್ನ ಕಥೆ ಕೇಳಲಿ ।
ಎನ್ನ ಚಕ್ಷುಸುಗಳು ನಿನ್ನ ಮೂರ್ತಿ ನೋಡಲಿ ।
ಎನ್ನ ಜಿಹ್ವೆಯು ಸತತ ನಿನ್ನ ಕೊಂಡಾಡಲಿ ।
ಎನ್ನ ಶಿರಸ್ಸು ನಿನ್ನ ಚರಣಕ್ಕೆರಗುತಿರಲಿ ।
ಎನ್ನ ಸರ್ವಾಂಗವು ಸಾಷ್ಟಾಂಗ ಹಾಕುತ ।
ಇನ್ನು ಹಗಲಿರುಳು ನಿನ್ನ ವಾಲ್ಗೈಸಲಿ ।

ಎನ್ನ ಮನೋವಾಕ್ಕಾಯದಿಂದಿನ್ನು ।
ಇನ್ನು ಮಾಡಿದ ಕರ್ಮ ನಿನ್ನ ಪರವು ಮಾಡಿ ।
ನಿನ್ನವನೆನೆಸಯ್ಯಾ ಘನ್ನದಯಾನಿಧೆ ಗೋಪಾಲ ವಿಟ್ಠಲ ।
ಇನ್ನಿದೆ ಮಾಡಿಸೊ ಅನಂತ ಜನ್ಮಕ್ಕ ॥ ೫ ॥

ಅಟ್ಟತಾಳ

ಕೆಡಿಸುವನು ನೀನೆ ಇಡಿಸುವನು ನೀನೆ ।
ಕೊಡಿಸುವನು ನೀನೆ ಹಿಡಿಸುವವನು ನೀನೆ ।
ಮಡದಿ ಇದ್ದರೆ ಮನೆ ಕಡು ಶುಭ ಎಂಬೋರು ।
ಹುಡುಗರಿದ್ದರೆ ಮನೆ ಕಡು ಶುಭ ಎಂಬೋರು ।
ಒಡವೆ ಇದ್ದರೆ ಮನೆ ಕಡು ಶೋಭ ಎಂಬೋರು ।
ಕಡೆದರಿದ್ದರೆ ಮನೆ ಕಡುಶೋಭವೆಂಬೋರು ।
ಜಡಗಳ ಹಿಡಕೊಂಡು ಮಿಡಕೊ ಜೀವರ ನೋಡಿ ।
ಎಡವಿ ಬಿದ್ದಂತೈದಿ ಎನಗಾಗುತಿದೆ ದೇವಾ ।
ಜಡಮತಿ ಜಡಸ್ನಾನ ಜಡಕರ್ಮ ಜಡಪೂಜೆ ।
ಜಡದಿ ಭಿನ್ನ ನಿನ್ನ ಅಡಿಗಳವಿಡಿಯದೆ ।
ಕಡೆಯಿಲ್ಲದ ಕರ್ಮ ಬಿಡದೆ ಮಾಡಲಿಯಾಕೆ ।
ಒಡೆಯಾ ನಿನ್ನ ಪ್ರೀತಿ ಪಡಿಯದರಿಯರಯ್ಯಾ ।
ಕಡು ಸಂಪತ್ತುಗಳು ನಿನ್ನ ನುಡಿಗಳು ಎನಗಿನ್ನು ।
ಬಿಡೆನೊ ಎಂದೆಂದೆಗೂ ದೃಢವಾಗಿ ಮನದೊಳು ।
ಕೊಡು ಇನ್ನು ಈ ಭಾಗ್ಯ ಒಡೆಯ ದೇವರ ದೇವ
ಗೋಪಾಲ ವಿಟ್ಠಲ ।
ಕೊಡು ಒಂದು ಕೊಡದಿರು ಬಿಡೆ ನಿನ್ನ ಚರಣವ ॥ ೬ ॥

ಆದಿತಾಳ

ದಣವು ಬಂದರೆನಗೆ ಏನು ಆವ ।
ಗುಣವು ಬಂದರೆ ಎನಗೆ ಏನು ।
ಜನುಮ ಬಂದರೆನಗೆ ಏನು ಸು ।

ಗುಣವಾಗಿ ಬಂದವರೆನಗೆ ಏನು ।
ನಿನಗೆ ನನಗೆ ಭೇದ ತಿಳಿದು ।
ನನಗೆ ದೇಹಕೆ ಭೇದ ತಿಳಿದು ।
ಕ್ಷಣಕ್ಷಣಕೆ ನೀ ಸ್ವಾಮಿಯೆಂದು ।
ಕ್ಷಣಕ್ಷಣಕೆ ನಿನ್ನ ಭೃತ್ಯನೆಂದು ।
ಎಣಿಸುತ್ತ ಎನಗಿಂದ ಗುಣಾಧಿಕರ ಹಿಡಿದು ।
ಫಣಿರುದ್ರ ಅಜಸಿರಿ ಪರಿಯಂತ ದಿನದಿನದಿ ।
ಅನುವರಿತು ಕೊಂಡಾಡಿ ಗುಣವುಪಾಸನಿಯುನ್ನು ।
ಎನಗೊಂದು ಇರಲಯ್ಯಾ ।
ಮುನಿಗಳ ಮನಪ್ರಿಯ್ಯಾ ।
ಇನಿತು ಸುಖವೆ ಸಾಕು ಇನ್ನೊಬ್ಬರಿಗೆ ಅಂಜೆ ।
ಎನಗೊಂದು ಸುಖವಿಲ್ಲ ನಿನ್ನ ನೋಡೊದಕ್ಕಿಂತ ।
ಗುಣಪೂರ್ಣ ಚಲುವ ಗೋಪಾಲ ವಿಟ್ಠಲರೇಯ ।
ನಿನಗೆ ಎನಗೆ ಲೆಂಕೆ ಎನಗೊಬ್ಬರಿನ್ನಿಲ್ಲ ॥ ೭ ॥

ಜತೆ

ನಂಬಲಿ ನಾನಿನ್ನು ಎಷ್ಟರ ಮನುಜ ।
ನೀ ನಂಬಿಸಲು ನಂಬಿದೆಗೋಪಾಲ ವಿಟ್ಠಲ ॥ ೮ ॥

## ಸುಳಾದಿ ೬೪

ಸ್ವಾಮಿ ಚಿತ್ತವೇ ಜೀವರಿಗೆ ಸರ್ವ ಭಾಗ್ಯ ಇಂಥ ಜ್ಞಾನವೇ ಸುಜ್ಞಾನ
ಸಕಲ ಕಾಲ ಕ್ರಿಯೆ ಧರ್ಮಗಳಿಗೆ ಪ್ರೇರಕನೆ ಶ್ರೀ ಹರಿಯು.

ರಾಗ ಸಾವೇರಿ ಧ್ರುವ ತಾಳ

ನಿನ್ನ ಚಿತ್ತ ಎನ್ನ ಭಾಗ್ಯ ಇನ್ನೊಬ್ಬರೆನಗೆಯಿಲ್ಲ ।
ಮನ್ನಣೆ ಅಮನ್ನಣೆ ನಿನ್ನದೋ ಸರ್ವೇಶನೆ ।
ಬೆನ್ನು ಕೊಟ್ಟೆನೊ ನಿನಗೆ ಎನ್ನ ಏನನ್ನ ಮಾಡು ।
ಕಣ್ಣಿಲಿ ಕಂಡ್ಯಾ ಅಷ್ಟು ಎನ್ನ ಕೇಳೋಣ ನಿನ್ನ ।

ಬಣ್ಣಿಸಿ ನಿನ್ನ ನಾನು ಘನ್ನ ಬೇಡುವದಿಲ್ಲ |
ನನ್ನದೆಂಬೊ ಅಹಂಕಾರವನ್ನು ಬಿಡಿಸೊ ದೇವ |
ಎನ್ನ ಸಂಕಲ್ಪವೆಲ್ಲ ನಿನ್ನ ಅಧೀನವೈಯ್ಯಾ |
ನಿನ್ನ ಸಂಕಲ್ಪಕ್ಕಿನ್ನು ಭಿನ್ನಭಿನ್ನಗಳಿಲ್ಲ |
ನಿನ್ನಿಚ್ಛೆ ನೀ ಪ್ರೇರಕ ನಿನ್ನದೊ ಎನ್ನ ಭಾರಾ |
ಇನ್ನು ಮುನ್ನೆ ಎಂದೆಂದು ಇನ್ನಿದೆ ಸಿದ್ಧವಯ್ಯಾ |
ಇನ್ನೊಂದು ನಾನರಿಯೆ ಎನ್ನೊಡೆಯನೆ ಕೇಳು |
ಮನ್ನವಾಚಾಕಾಯದಿ ಇನ್ನು ಹೀಗೆ ಹಾರೈಸಿ |
ಬಿನ್ನಹ ಮಾಡಿದೆ ನಿನ್ನ ನಿಲಿಸಿಕೊಂಡು |
ಚಿನ್ನುಮಯ ಮೂರುತಿ ಗೋಪಾಲ ವಿಟ್ಠಲ |
ನಿನ್ನ ಬೇಡುವೆನಲ್ಲದನ್ಯರಿಗಾಲ್ಪರಿಯೆ ॥ ೧ ॥

ಮಟ್ಟತಾಳ

ನಿನ್ನಿಂದಲಿ ದತ್ತವಿನ್ನು ಆಗದ ವಸ್ತು |
ಅನಂತವಿದ್ದರು ಇನ್ನೊಲ್ಲೆ ಇನ್ನೊಲ್ಲೆ |
ಅನ್ಯ ಕರ್ಮವ ಮಾಡಿ ಅನ್ಯ ದೈವವನೋಡಿ |
ಎನ್ನುದರ ಪೂರ್ತಿಯನ್ನು ಮಾಡೋದಕ್ಕಿಂತ |
ಬಣ್ಣಗೆಟ್ಟವನಾಗಿ ಅನ್ಯ ವಿಷಯವ ಬಿಟ್ಟು |
ನಿನ್ನವನಾಗಿನ್ನು ಅನ್ಯವಿಲ್ಲದಲೆ ಅ |
ರಣ್ಯವಾಸರಿನ್ನು ಜಣ್ಣು ಹಂಪಲ ಮೆದ್ದು |
ನಿನ್ನ ವಿಷಯಕ್ಕೆ ಕರ್ಮ ನಿನ್ನ ವಿಷಯಕ್ಕೆ ಧರ್ಮ |
ಇನ್ನೇನಾದದ್ದು ನಿನ್ನ ಪರವು ಮಾಡಿ |
ಇನ್ನ ಇಡಿಸಿದರೆ ಘನ್ನುಪಕಾರವು ಇನ್ನೆಂದಿಗೆ ಮರಿಯೆ |
ಚಿನುಮಯ ಮೂರುತಿ ಗೋಪಾಲ ವಿಟ್ಠಲ |
ನಿನ್ನ ಚಿತ್ತಕೆ ಬಾರದಿನ್ನೆಂದಿಗೆವಲ್ಲೆ ॥ ೨ ॥

ರೂಪಕ ತಾಳ

ಹಾಗೆಯಿತ್ತೆ ಇನ್ನು ಹಾಗೆ ಆಗಲಿ ದೇವಾ |
ಹೀಗೆಯಿತ್ತೆ ಇನ್ನು ಹೀಗೆ ಆಗಲಿ ದೇವಾ |

ಹಾಗೆ ಹೀಗೆ ಇನ್ನು ಎರಡು ಆಗಲಿ ದೇವ |
ಆಗ ಅಂಜುವನಾರು ಈಗ ಅಳುಕುವನಾರು |
ಆಗದಂಥ ಕಾರ್ಯ ಆಗಮಾಡುವನಾರು |
ಆಗುವಂಥ ಕಾರ್ಯ ಆಗಲೀ(ಆಗಲಿಸುವ) ಸುವನಾರು |
ಬಾಗಿದೆ ನಿನ್ನ ಚರಣಗಳಿಗೆ ನಾನು |
ಹಾಗೆ ಆದರು ಲೇಸೆ ನೀಯಿತ್ತ ಭಾಗ್ಯಕ್ಕೆ |
ಹೋಗು ಹೊರಡೆಂದರೆ ಆಗೊದೆ ನಿನ್ನಿಂದ |
ಸಾಗು ಸಾಗಿ ಇನ್ನು ತೂಗಿದ ತೊಟ್ಟಿಲು |
ಹೋಗಿ ಹೋಗಿ ತನ್ನ ಸ್ಥಳಕೆ ನಿಲ್ಲುವದು |
ಸಾಗರ ಶಯನ ಗೋಪಾಲ ವಿಟ್ಠಲ |
ಭೋಗ ತೀರಿಸಿ ದೋಷನಿಯಾ(ಯೋ)ಗ ಮಾಡೊ ದೇವ ||೩||

ಝಂಪೆ ತಾಳ

ನೀನಿತ್ಯ ನಾನಿತ್ಯ ಅನಾದಿ ಕಾಲದಿ |
ಏನು ಆಗುವ ಪ್ರೀತಿ ನಿನ್ನಿಂದಲೆ ಎನಗೆ |
ಕಾಣದೊಂದು ಉಂಟೆ ನಿನ್ನ ಕಂಡವರಿಗೆ |
ಜಾಣತನವ್ಯಾಕೆ ಎನ್ನೊಡನೆ ಮಾಜಲಿಬೇಡ |
ಪ್ರಾಣರಿಗೆ ಒಂದೊಂದು (ದ) ನಿತ್ಯ ವಸ್ತುಗಳಲ್ಲಿ |
ಏನು ಭ್ರಮೆ ಪುಟ್ಟಿಸಿ ಮರುಳು ಮಾಡುವಿ ದೇವ |
ಶ್ರೀನಾಥ ನಿನ್ನ ಸಾಯುಸಕೆ ಆನೀನಂಬೆ |
ಧೇನಿಸಿನೋಡ ಶತ ಆನಂದಗೊಶವಲ್ಲ |
ಕಾಣಿವೆ ? ನೆನ್ನಂಥ ನರಗೂರಿಯು ನಿನ್ನ ನಾ |
ಶ್ರೀನಿವಾಸನೆ ನಮೊನಮೊ ಎಂದೆನೋ |
ದೀನರಕ್ಷಕ ದೇವ ಗೋಪಾಲ ವಿಟ್ಠಲ |
ನೀನು ಕುಣಿಸಿದಂತೆ ನಾನು ಕುಣಿವೆನಯ್ಯಾ ||೪||

ತ್ರಿವಿಡಿ ತಾಳ

ವಾಸುದೇವನೆ ನಿನಗೆ ವಾಸೆ ಒಂದೇ ಕೇಳು |
ಈಶನೊಂಬೊಪೆಸರು ನಿನ್ನಗಯ್ಯಾ |

ದಾಸನೆಂಬೊ ಪೆಸರು ನಿನಗೆ ಎಂದಿಗೆಯಿಲ್ಲ |
ದಾಸತ್ವತನವೆಲ್ಲ ನಮ್ಮದಯ್ಯಾ |
ದಾಸರು ಇಲ್ಲದ ಈಶತ್ವ ಪ್ರಕಟಿಸದು |
ಈಶನು ಇಲ್ಲದ ದಾಸತ್ವತನವ್ಯಾಕೆ |
ದೇಶ ಕಾಲ ಪಾತ್ರ ಈಸು ಕೂಡಿದ ಅಲ್ಲಿ |
ಕಾಸು ಕೊಡುವದಾತಾಪಿಲ್ಲದಿರೆ |
ಕಾಸು ಇದ್ದವನಲ್ಲಿ ದೇಶ ಪೋಗುವದೊ |
ದೇಶ ಇದ್ದಲ್ಲಿಗೆ ಕಾಸು ಬಾಹುವದು (ವದೆ) |
ದಾಸತ್ವ ಎನ್ನಲ್ಲಿ ಈಶ (ಲೇಶ) ಮಾತ್ರವನ್ನು |
ಆಶ್ರೈಸಿ ಇತ್ತೆ ಈಶ ಎನಗುಂಟು |
ದೇಶ ದೇಶದವರು ಕಾಲಕೆ ಕುರುಹ |
ಮಾಸದೆ ಕಂಡರೆ ಪೋಷಿಸುವರು ಬಿಡದೆ |
ಲೇಸಾಗಿ ಇಬ್ಬರು ಒಂದೆ ಸ್ಥಳದಲ್ಲಿ ವಾಸವಾಗಿಯಿದ್ದು |
ನಾಶರಹಿತರಾಗಿ ಕ್ಲೇಶಕೊಬ್ಬನ ಮಾಡಿ |
ಕ್ಲೇಶರಹಿತ ನೀನಾಗಿ ಘಾಸಿಯ ಬಡಿಸೆಮ್ಮ |
ಮೀಸಲಾಗಿ ನೀನಿಂದು |
ದೋಷರಹಿತ ರಂಗ ಗೋಪಾಲ ವಿಟ್ಠಲ |
ದಾಸರ ಬಿಡದಿರು ಏಸೇಸುವಿಡಿದರು || ೫ ||

ಅಟ್ಟ ತಾಳ

ಧನದಿಂದ ನೆಂಟರು ಕೆಲವರು ಎನಗಿನ್ನು |
ತನುವಿನ ನೆಂಟರು ಕೆಲವರು ಎನಗಿನ್ನು |
ಮನದಿಂದ ನೆಂಟರು ಕೆಲವರು ಎನಗಿನ್ನು |
ದಿನದಿಂದ ನೆಂಟರು ಕೆಲವರು ಎನಗಿನ್ನು |
ಗುಣದಿಂದ ನೆಂಟರು ಕೆಲವರು ಎನಗಿನ್ನು |
ಇನಿತು ನೆಂಟರೊಳು ಎನಗೆ ಒಬ್ಬರ ಕಾಣೆ |
ಅನುವಾಗಿ ಇದ್ದರೆ ಅಷ್ಟು ನಮ್ಮವರೆಲ್ಲ |
ಅನುವು ತಪ್ಪಿದರಿನ್ನು ಆರು ನಮ್ಮವರಲ್ಲ |

ನನಗೆ ನಿನಗೆ ನೆಂಟತನವಿನ್ನು ಹೀಗಲ್ಲಾ |
ಅನಿಮಿಷ ಅಗಲದೆ ಅನಿಮಿತ್ಯ ಬಂಧಾಗಿ (ಬಂಧುಆಗಿ)
ಕ್ಷಣ ಬಿಡದಲೆ ಕಾಯುವ ಗೋಪಾಲ ವಿಟ್ಠಲ |
ನಿನಗೆ ಮಾಡುವದೇನು ನಮೊ ನಮೊ ಎನ್ನಿಂದ ॥ ೬ ॥

ಆದಿ ತಾಳ

ನೀನೆವೆ ವೈಕುಂಠ ನೀನೆವೆ ಮುಕುತಿನಗೆ |
ನೀನೆವೆ ಸಕಲಾದಿ ತೀರ್ಥಯಾತ್ರಿಗಳೆನಗೆ |
ನೀನೆವೆ ಇಹಪರದಲ್ಲಿ ಕಾವುವ ನೀನೋ |
ಆನೆಲ್ಲಿ ನೋಡಲು ನೀನೆ ಕಾಣಿಸುವದು |
ನೀನಿದ್ದ ಸ್ಥಳದಲ್ಲಿ ಸಕಲ ದೇವತೆಗಳು |
ನೀನೆವೆ ಫಲಂಗಳು ಸಕಲರಲ್ಲಿ ನಿಂತು |
ದೀನ ಜನರ ಪಾಲ ಗೋಪಾಲ ವಿಟ್ಠಲ |
ಜ್ಞಾನಿಗೆಳಿಗೆ ಪ್ರೀಯ ನಿನಗೆ ಜ್ಞಾನ(ನಿ) ಪ್ರೀಯಾ ॥ ೭ ॥

ಜತೆ

ಕಾಣದವನೆ ನಿನ್ನ ಕಂಡದ್ದು ಹಾರೈಸುವ |
ಕಾಣುವ ಬಿಡ ನಿನ್ನ ಗೋಪಾಲ ವಿಟ್ಠಲ ॥ ೮ ॥

## ಸುಳಾದಿ ೬೫

ಚಲಾಚಲಗಳಲ್ಲಿ ಸರ್ವ ಕ್ರಿಯಾದಲ್ಲಿ ಅದ್ವೈತ್ರಯನಾದ ಶ್ರೀ ಹರಿಕರ್ತೃ
ಯಾಮಕನೆಂದರಿತು ಸಕಲರೂಪ ಬಿಂಬನಲ್ಲಿ ಐಕ್ಯಚಿಂತಿಸಿಧ್ಯಾನೋಪಾಸನಕ್ರಮ

ರಾಗ ರೇಗುಪ್ತಿ ಧ್ರುವ ತಾಳ

ಧ್ಯಾನ ಮಾಡು ಮನವೆ ದೈನ್ಯ ವೃತ್ತಿಯಲ್ಲಿನ್ನು |
ಜ್ಞಾನವಂತನಾಗಿ ಗೆದ್ದು ವಿಷಯಾ |
ಹಾನಿಲಾಭಗಳಿಗೆ ಹರುಷ ಕ್ಲೇಶವು ಬಡದೆ |
ಜಾಣತನದಿ ಚಿಂತಿಸು ಜಗದೀಶನ್ನ |
ನಾನು ಎಂಬೊದು ಬಿಟ್ಟು ನಿತ್ಯದಲ್ಲಿ ಇನ್ನು |
ಜ್ಞಾನ ಪೂರ್ಣ ಶ್ರೀ ಹರಿಯ ಧೇನಿಸಿನ್ನು |

ಯೋನಿ ಎಂಭತ್ತುನಾಲ್ಕು ಲಕ್ಷ ಬಂದ ಕಾಲಕ್ಕೂ ।
ನೀನು ಪಕ್ವ ಬಾರದಾ ಗತಿಯುಯಿಲ್ಲಾ ।
ಕಾಣೆ ನಿನಗೆ ಮುಖ್ಯ ಸಾಧನ ಸಂಪತ್ತು ।
ಮಾನವ ಯೋನಿಯಲ್ಲೆ ಘಳಿಸಬೇಕು ।

ಕ್ಷೋಣಿಯೊಳಗೆ ಈ ಜನ್ಮ ಬಪ್ಪದೆ ದುರ್ಘಟ ।
ಶ್ರೀನಾಥನ ಕಾರುಣ್ಯವೆಂದು ತಿಳಿಯೋ ।
ಶ್ವಾನ ಸೂಕರ ನಾನಾ ಯೋನಿ ಬಂದಕಾಲಕ್ಕೂ ।
ಮಾನಿಸನಾಗೆ ಚಿಂತಿಸಲಿ ಬೇಕು ।

ಜ್ಞಾನ ಅಲ್ಲಿ ದೊರೆಯದು ಕುಚ್ಛಿತಯೋನಿಯಲ್ಲಿ ।
ನಾನಾ ಭವಣೆಯುಂಟು ನಾಯೇನೆಂಬೆ ।
ನಾನಾಕು ಜೀವರಿನ್ನು ನಾಲ್ಕು ಬಗೆಯ ಕರ್ಮ ।
ತಾವು ಮಾಡುತಿಹರೋ ದೇಹಧಾರಿಗಳಾಗಿ ।

ಕಾಣಿಸುವರು ಎಲ್ಲಾ ಜಗದ ವೊಳಗೆ ಇನ್ನು ।
ಜ್ಞಾನ ಮಾತ್ರ ನೀ ಪಿಡಿದು ಕುಳಿತುಕೋ ।
ಗೇಣು ವೊಳವು ಅಣುರೇಣು ಸ್ಥಳದಪರಿ ।
ನಾನಾ ದೇಹಧಾರಿಗಳಿಂದ ಆಗುವ ಕರ್ಮ ಕಾಣೋ ।

ನಿನ್ನಲ್ಲಿ ಇದ್ದು ಸ್ವಾಮಿ ಮಾಡಿಪನೆಂದು ।
ಖೂನ ಪಿಡಿದು ಕುಣಿಕುಣಿದಾಡೋ ।
ನಾನು ಅಸ್ವತಂತ್ರ ನನ್ನಂತೆ ಅವರೆಂದು ।
ಕಾಣು ಅಲ್ಲಿ ವ್ಯಾಪಾರ ಹರಿಯೆ ಎಂದು ।

ಮಾನವಾ ಬಿಟ್ಟು ಮಮತೆಯಲ್ಲಿ ನಮೋಯೆಂದು ।
ಪ್ರಾಣನಾ ಸಾಕ್ಷಿಯಾಗಿ ಹರಿಗರ್ಪಿಸು ।
ಹೀನರಲ್ಲಿ ದಯಾಘನರುಗಳಲ್ಲಿ ಸೇವೆ ।
ನೀನು ಅರಿತು ಮಾಡು ನಿತ್ಯದಲ್ಲಿ ।

ದೀನ ಜನ ಬಂಧು ಗೋಪಾಲ ವಿಟ್ಠಲನ್ನ ।
ಕಾಣು ಚೇತನಾ ಚೇತನದಿ ಇಪ್ಪನೇಂದು ॥ ೧ ॥

ಮಟ್ಟತಾಳ

ಭಾವಾದ್ವೈತ ಕ್ರೀಯಾದ್ವೈತ ದ್ರವ್ಯಾದ್ವೈತ ।
ಇವು ಮೂರನ್ನೆ ದೇವನಲ್ಲಿ ಇಪ್ಪವೆಂದು ಅರಿದು ನೋಡು ।
ಆವಾವಲ್ಲಿ ಚಿಂತಿಸು ಬಿಡದೆ ।
ಕಾವಾ ಕೊಲ್ಲುವಲ್ಲಿ ಈವಲ್ಲಿ ಕೊಂಬಲ್ಲಿ ।
ಧಾವತಿಗಳಲ್ಲಿ ಸುಲಭ ಸೂಕ್ಷ್ಮದಲ್ಲಿ ।
ಭಾವ ಕ್ರೀಯ ದ್ರವ್ಯ ದೇವ ದೇವ ಎಂದು ।
ನೀ ವಿವೇಕದಿ ನೀಚ ಊಚ ಕ್ರಮದಿ ।
ಜೀವಿಗಳ ಗತಿಯು ಜಿತವಾಗಿ ಅರಿತು ।
ಭಾವ ಶುದ್ಧದಲ್ಲಿ ಭಕುತಿ ಪೂರ್ವದಿಂದ ।
ನೀ ವೊಲಿ ವೊಲಿದು ತಿಳಿದು ವೊಲಿಸು ವೊಲಿಸಿ ಪಾಡು ।
ಸೇವ್ಯ ಸೂತ್ರವು ನಿಂದ್ಯ ನೋವು ದಂಡನೆಯುಲ್ಲಾ ।
ದೇವಪೂಜ್ಯ ಎಂಬ ಭಾವ ಕ್ರೀಯೆವ ಘಳಿಸು ।
ಆವ ವಿಷಯದಲ್ಲಿ ದೇವಾ ದೇವರನ್ನ ।
ಸಾವಧಾನದಿ ಹುಡಿಕಿ ಪಾವನಾಂಗ ನಾಗೊ ।
ಕೋವಿದರ ಪ್ರಿಯ ಗೋಪಾಲ ವಿಟ್ಠಲ ।
ಕಾವ ನಿನ್ನ ಬಿಡದೆ ಆವಲ್ಲಿ ಇದ್ದರು ॥ ೨ ॥

ರೂಪಕ ತಾಳ

ನೋಡಿಸಿದರೆ ನೋಡು ಆಡಿಸಿದರೆ ಆಡು ।
ಕೂಡಿಸಿದರೆ ಕೂಡು ಓಡಿಸಿದರೆ ಓಡು ।
ಬೇಡಿಸಿದರೆ ಬೇಡು ನೀಡಿಸಿದರೆ ನೀಡು ।
ಮಾಡಿಸಿದರೆ ಮಾಡು ವಿಹಿತ ಅವಿಹಿತಗಳು ।
ಕೇಡು ಎಂದು ತಿಳಿಯೊ ಅವಿಹಿತ ಮಾಡಿಸಿದರೆ ।
ಕೇಡು ಲಾಭಂಗಳು ಮಾಡಿಸಿದರೆ ನೀನು ।
ಮಾಡಿಸಿದರೆ ಕೇಡು ಬೇಡಿಕೊ ದೈನದಿ ಪಶ್ಚಾತ್ತಾಪನಾಗು ।
ನೋಡು ನಿನಗಾವ ವಿಷಯಂಗಳಲಿನ್ನು ।

ಮಾಡಿಸುವ ಅನುಭವ ಹರಿಯೆ ಎನ್ನು ।
ಕೂಡಿಸು ಯಾವತ್ತು ಜಡ ಚೇತನಗಳಲ್ಲಿ ।
ಗೂಡು ಮಾಡಿಟ್ಟಂಥ ಮೂರ್ತಿಗಳಿಲ್ಲ ।
ಕ್ರೋಡಿ ಕರಿಸಿ ಧ್ಯಾನ ಮಾಡು ನಿನ್ನ ಮನದಿ ।
ಕೇಡು ತೋರದು ನಿನ್ನ ಸಾಧನಕೆ ।
ಮೂಢ ಮತಿಯಲ್ಲಿ ಜಡ ಪ್ರತಿಮೆ ಪಿಡಿದು ।
ಮಾಡೊ ಅಲ್ಲಿ ಪೂಜೆ ಇದೆ ಬಗೆ ಚಿಂತಿಸು ।
ಷೋಡಶ ಕಳೆಯುಳ್ಳ ಲಿಂಗದ ಒಳ ಹೊರಗೆ ।
ನೂಡಿ ಮಾಡಿಸುವ ಹರಿಯು ಮಹಿಮೆ ತಿಳಿ ।
ನಾಡಿಗೊಡೆಯ ರಂಗ ಗೋಪಾಲ ವಿಟ್ಠಲ ।
ಈಡಿಲ್ಲದ ದೈವನ ನೋಡು ಮನದಿ ನಿಲಿಸಿ ।

ಝಂಪಿ ತಾಳ

ಒಂದೆ ಪಿಡಿದು ಮತ್ತಾನಂತವ ಚಿಂತಿಸು ।
ಒಂದೆ ಚಿಂತಿಸು ಮತ್ತಾನಂತವೆಲ್ಲಾ ।
ತಂದುಕೊ ನಿನ್ನಲ್ಲಿ ಕ್ಷಣಕ್ಷಣಕೆ ಸ್ಮೃತಿಯನು ।
ಸಂದೇಹ ಬಿಟ್ಟು ಸರ್ವೋತ್ತಮನೆಂದು ಭಿ।
ನ್ನಾದಿಯನು ತಿಳಿಯದಿರು ಹರಿ ಅಂಶಿ ಅಂಶಕ್ಕೆ ।
ಒಂದೊಂದೆ ಪೂರ್ಣ ಬಲವುಳ್ಳನೆಂದು ।
ಇಂದ್ರಿಯಗಳು ಎಲ್ಲ ಪೂರ್ಣಮಯಯೆಂತೆಂದು ।
ಒಂದು ರೂಪಕನ್ನ ಇಂದ್ರಿಯ ಭೇದವು ಇಲ್ಲ ।
ಪೊಂದಿಪ್ಪವು ಕಪಿಲಾದಿ ನಾಮಗಳಿಂದ ।
ಗಂಧ ಆಘ್ರಾಣಿಸುತ ನೋಡುತ ಕೇಳುತ ।
ನಿಂದಿಪ್ಪವು ಪೂರ್ಣವಾಗಿ ತನ್ನ ಮನ ।
ಬಂದಂತೆ ಕ್ರೀಡೆಗಳನು ತೋರಿ ।
ಸಂದಿ ಸಂದಿಲಿ ಇನ್ನು ವ್ಯಾಪ್ತನಾಗಿ ಇನ್ನು ।
ಒಂದು ಪಿಡಿದು ನೋಡಿ ಆಡಿ ಕಂಡೇವೆನಲು ।

ಇಂದಿರೆಗೆ ತಿಳಿಯಲಾಗೋಚರವು ।
ಬಂದು ನಿಲ್ಲುವ ತತ್ವತ್ಯೋಗ್ಯತಿ ಅನುಸಾರ ।
ಸಂದರುಶನವಿತ್ತು ಸಲಹುವನೋ ।
ಒಂದು ಕೊಂಡು ಮತ್ತೊಂದು ಕೊಡುವವನಲ್ಲ ।
ಒಂದು ಕೊಳ್ಳದೆ ಮತ್ತೆ ಈವನಲ್ಲಾ ।
ಒಂದುಕೊಟ್ಟರೆ ಮತ್ತೆ ಒಂದು ಕೊಡುವನಲ್ಲ ।
ಒಂದಕನಂತವ ಅನಂತಕೆ ಪೊಂದೀವಾ ।
ನಂದಮೂರುತಿ ರಾಮಗೋಪಾಲ ವಿಟ್ಠಲ ।
ಅಂದಿ ಕೈಗೆ ತೋರಿ ಅಂದದಂತೆ ಪೊಳೆವಾ ॥ ೪ ॥

ತ್ರಿವಿಡಿ ತಾಳ

ಮಾಡುವ ಕರ್ಮಉಂಟು ನೋಡುವ ಕರ್ಮಉಂಟು ।
ಬೇಡುವ ಕರ್ಮ ಉಂಟು ಮಾಡಿಸುವ(ವ)ರುಂಟು ।
ಮಾಡಿ ಮಾಡಿಸುವರು ಸಾಂಶ ಸುರಾದಿ ದಿವಿಜರು ।
ಮಾಡುವರೂ ಮಾತ್ರ ನಿರಂಶರೂ ।
ನೋಡುವರೊ ಉತ್ತಮರು ಕರ್ಮಾಧಮರೊ ।
ಬೇಡಿ ಮಾಡುವ ಕರ್ಮ ಸರ್ವ ಜೀವರಿಗುಂಟು ।
ಕೂಡುವ ಮಲಗುವ ಓಡುವ ನಿಲ್ಲುವ ।
ಮಾಡುವ ನಾಲ್ಕು ಕರ್ಮದೇಹಿಗಳು ।
ಮಾಡಿಸುವ ಹರಿಯೆಂದು ತಿಳಿಯಬೇಕು ।
ಮಾಡಿಸುವರ ದಯ ಮಾಡುವರ ದಯ ।
ನೋಡುವರ ದಯ ಬೇಡು ನಿನಗೆ ಬೇಕು ।
ಮಾಡುವ ಕರ್ಮವು ಈ ಪರಿ ತಿಳಿಯದೆ ।
ಮಾಡಲು ಏನೇನು ಫಲಬಾರದು ।
ನಾಡನೆಲ್ಲವು ತಿರುಗಿ ತೀರ್ಥಾದಿಗಳ ಮಿಂದು ।
ಮಾಡೆ ನಾನಾ ದಾನ ಯಜ್ಞಾದಿಗಳೆಲ್ಲ ।
ಕೂಡಿಸವು ಗತಿಗೆ ಎಂದೆಂದಿಗೂ ।

ಪಾಡಿದವರ ಪ್ರಾಣಾ ಗೋಪಾಲ ವಿಟ್ಠಲ ।
ನೂಡಿ ಮಾಡಿಸುವಂಥ ಕರ್ತನರಿತು ಬಾಳು ॥ ೫ ॥

ಅಟ್ಟತಾಳ

ಮುಕ್ತಾ ಅಮುಕ್ತಾ ಚೇತನದೊಳಗೆಲ್ಲ ।
ನಿತ್ಯಾನಿತ್ಯ ಜಡಗಳ ವೊಳಗೆಲ್ಲ ।
ತತ್ತತದಾಧಾರಾ ಸತ್ತ್ರವೃತ್ತಿಯೊ ।
ನಿತ್ಯ ಮುಕುತಾ ನಿರ್ಲಿಪ್ತ ನಿರಾಶ್ರಯಾ ।
ಸತ್ವಾದಿ ರಹಿತ ನಿತ್ಯಾನಂದ ಮೂರ್ತಿ ।
ಚಿತ್ರ ಚಾರಿತ್ರ ವಿಮಲ ಜ್ಞಾನಪೂರ್ಣ ।
ಭಕ್ತ ವತ್ಸಲ ಬಂಧಕ ಮೋಚಕ ದೇವಾ ।
ರಕ್ತ ಶುಕ್ಲ ಶ್ಯಾಮುದಳವರ್ನಾ ।
ತತ್ತಳಿಸುವ ಹರಿ ಮೂರ್ತಿಯು ।
ಸುತ್ತ ಪರಿವಾರ ನಿಲ್ಲಿಸಿ ನಿನ್ನಯು ।
ಹೃತ್ಕಮಲದಲ್ಲಿ ನಿತ್ಯ ವಾಸವಾದ ।
ನಿತ್ಯ ಮೂರುತಿಯನು ಚಿತ್ತಜನಯ್ಯಾ ಸರ್ವೋತ್ತಮ ಹರಿಯು।
ಮತ್ತೆ ಪೇಳಿದಂತೆ ಭಗವಂತ ತದ್ರೂಪಾ ।
ಕತ್ಯಂತ ಅಭೇದ ಚಿಂತಿಸಿ ತುತಿಸಿ ।
ಪ್ರತ್ಯೇಕ ಪ್ರತ್ಯೇಕಧಿಷ್ಟಾನಗಳಲ್ಲಿ ।
ಭಕ್ತಿಪೂರ್ವಕದಿ ಎತ್ತಿ ಕರವ ಮುಗಿದ ।
ತ್ಯಂತ ಮಹಿಮನೆ ನಿತ್ಯಕಾಯೊ ಎಂದು ।
ಉತ್ತಮರ ಸಂಗ ಜತ್ತಾಗಿ ಮಾಡಿನ್ನು ।
ಸತ್ಯ ಸಂಕಲ್ಪ ಗೋಪಾಲ ವಿಟ್ಠಲರೇಯಾ ।
ತುತ್ತ ಮಾಡಿಪ್ಪಂತೆ ಸಾಧನ ಮಾಡಿಪಾ ॥೬॥

ಆದಿತಾಳ

ಎಂತೆಂತು ಬಿಂಬನ ಚಿಂತನೆ ಮಾಡಲು ।
ಅಂತಂತೆ ಬರುವನು ಪ್ರತಿಬಿಂಬಕ್ಕೆ ಸ್ವಾ ।

ತಂತ್ರವೊಂದು ಮಾತ್ರ ಹೊರತಾಗಿ |
ಚಿಂತಿಸಿ ನೋಡಲು ಜೀವ ಚಿದ್ರೂಪನು |
ಸಂತೋಷಾದಿಗಳೆಲ್ಲ ಹರಿಯಾಧೀನ ನಿ |
ರಂತರ ಪರಾಧೀನ ಜೀವ ಸ್ವಾಮಿ ।
ಭೃತ್ಯ ನ್ಯಾಯವೆಂದು ಉಪಾಸನೆ ಎದುರಿಲಿ |
ಚಿಂತಿಸಿ ಕರಮುಗಿದು ಚಿಂತನೆ ಮಾಡಲು |
ಸಂತೋಷದಲ್ಲಿ ಪ್ರಾಣದ್ವಾರಾ |
ಚಿಂತಾಯಕ ತಂತ್ರಮೂರ್ತಿ ತೋರಿ ಭವ |
ಗ್ರಂಥಿಯ ಹರಿಸುವ ತಡವಿಲ್ಲದೆ |
ಶಾಂತ ಮೂರುತಿ ನಮ್ಮ ಗೋಪಾಲ ವಿಟ್ಠಲ |
ನಿಂತಲ್ಲೆ ನಿಧಾನವಾಗಿ ಉಣಿಸುವಾ |

ಜತೆ

ಚಲ ಅಚಲಗಳಲಿ ಈ ಪರಿಧೇನಿಸೆ |
ಒಲಿವ ಗೋಪಾಲ ವಿಟ್ಠಲ ಇವಗೆ ಕರುಣದಲಿ || ೮ ||

## ಸುಳಾದಿ ೬೬

ಆಪ್ತ ವ್ಯಾಪ್ತನಾದ ಬಿಂಬನ ಗುಪ್ತ ಉಪಾಸನೆಕ್ರಮ.
ಆವಬಿಂಬನೇವೆ ಸಕಲ ಜಡ ತತ್ವಾದಿಗಳಲ್ಲಿ ಆನಂದಮಯನಾಗಿ ಸಕಲ ಚೇತನರಿಗೆ
ಬಿಂಬನಾಗಿ ಪ್ರವರ್ತಿಸುವ ಗುಣರೂಪ ಕ್ರಿಯಾದಿ ಬಿಂಬೋಪಾಸನೆ ವಿಷಯ.
ಸಕಲ ರಸವಿಭಾಗ ಬಿಂಬಾರ್ಪಣ.

ರಾಗ ಕಾಂಬೋದಿ ಧ್ರುವತಾಳ

ಆವಾ ವಿಷ್ಣುನೆ ಜೀವದಂಗುಟ ಮಾತ್ರ ಮೂರ್ತಿ |
ಆವಾ ವಿಷ್ಣುನೆ ಜೀವದಾಕಾರ ಮೂರುತಿ |
ಆವಾ ವಿಷ್ಣುನೆ ಸರ್ವವ್ಯಾಪ್ತ ಮೂರುತಿ |
ಆವಾ ವಿಷ್ಣುನೆ ಜೀವಕ್ಕಾವರ್ಕವಾದ ಮೂರುತಿ |
ಆವಾ ವಿಷ್ಣುನೆ ಜೀವಾದಿಷ್ಠಾನ ದೇಹ ಮೂರುತಿ ।

ಆವಾ ವಿಷ್ಣುನೆ ಜಗದಾ ವ್ಯಾಪುತ ಮೂರುತಿ ।
ಆವಾ ವಿಷ್ಣುನೆ ಮೂಲಾದವತಾರ ಮೂರುತಿ ।
ಆವಾ ವಿಷ್ಣುನೆ ಮಧ್ಯ ಆಜಾದಿ ಮೂರುತಿ ।
ಆವಾ ವಿಷ್ಣುನೆ ಜೀವಾ ಸರ್ವವಿಶ್ವಾದಿ ಮೂರುತಿ ।
ಆವಾ ವಿಷ್ಣುನೆ ಅನಂತವತಾರ ಮೂರುತಿ ।
ಆವಾ ವಿಷ್ಣುನೆ ಜೀವದ (ಸ) ಪ್ರತಿಪಾದ್ಯ ಮೂರುತಿ ।
ಆವಾ ವಿಷ್ಣುವಿನ್ನಧೀನವಾಗದ ಠಾವಿಲ್ಲ ಎಲ್ಲಿನೋಡಾ ।
ಆವಾ ವಿಷ್ಣು ಸರ್ವಜ್ಞ ಸಾಕಾರ ಜ್ಞಾನಾನಂದಾ ।
ಯಾವತ್ತು ಏಕಮೇವಾ ದೇವಾ ।
ಶ್ರೀವಿಷ್ಣು ನಮ್ಮ ಸ್ವಾಮಿ ಗೋಪಾಲ ವಿಟ್ಠಲ ।
ಪಾವನ್ನ ಮೂರುತಿ ಪರಮ ಪುರುಷ ನೋಡು ॥ ೧ ॥

ಮಟ್ಟತಾಳ

ಪ್ರಥಿವಿ ಅಪ್ಪು ಅಗ್ನಿ ವಾಯುುರಾಕಾಶವು ।
ತತು ತನ್ಮಾತ್ರಿ ಶಬ್ದಾದಿ ವಿಷಯಂಗಳು ।
ಜಿತ ತೈಜಸ ವೈಕಾರ ಸತು ಮಹಾ ।
ತತುವ ಹರಿಗೆ ಸ್ವರೂಪ ಭೂತಾ ।
ತತುಗಳು ಜಡವಲ್ಲ ಎಲ್ಲ ಆನಂದಮಯಾ ।
ಗತಿ ಕೊಡುವವು ಒಂದಕ್ಕೆ ಒಂದೊಂದೆ ಪೂರ್ಣಾ ।
ಖತಿಗೊಳಿಸುವವಲ್ಲ ಖಂಡ ಖಂಡವಲ್ಲಾ ।
ಚತುರವು ಇವು ಬಲು ಹರಿಯೆ ಇವು ಎನ್ನಿ ।
ಸತತ ತಾತನ್ನ ಸ್ವರೂಪಭೂತ ತತ್ವಪ್ರವೇಶವೆ ।
ಮತಿಯು ಪ್ರಕೃತಿ ಅಂಶಗಳಿಗೆ ।
ಸತತ ಬಿಂಬನಾಗಿ ಸವಿಯುದೆ ಎಂದೆಂದು ।
ಕ್ಷಿತಿಯಲ್ಲಿ ಜೀವರಾಶಿಗೆ ಸಾಧನ ಮಾಳ್ಪ ।
ಪತಿತ ಪಾವನ ವಿಷ್ಣುಗೋಪಾಲ ವಿಟ್ಠಲ ।
ಸತತ ಕ್ರೀಡಿಯು ಮಾಳ್ಪ ಚೇತನ ತನದಿ ॥ ೨ ॥

## ರೂಪಕ ತಾಳ

ವಿಷ್ಣು ವರುಣ(ವರ್ಣ)ವಿನ್ನು ವಿಷ್ಣು ಕಾಲವು ನೋಡು |
ವಿಷ್ಣುವೆ ಆಕಾಶ ಅವ್ಯಾಕೃತಕೆ ಬಿಂಬಾ |
ವಿಷ್ಣುನೆ ಮಹದಾದಿ ವಿಷ್ಣುನೆ ಅಹಂಕಾರಿಕ |
ವಿಷ್ಣು ವೈಕಾರಿಕ ವಿಷ್ಣುತೈಜಸವಿನ್ನು |
ವಿಷ್ಣು ಪಂಚಮಹಾಭೂತ ವಿಷ್ಣು ತನ್ಮಾತ್ರಿಗಳು |
ವಿಷ್ಣುನೇ ಕಾರ್ಯಕಾರಣ ತತ್ವ ಜಡಗಳಿಗೆ ಬಿಂಬ |
ವಿಷ್ಣುನೆ ತತ್ವಾಭಿಮಾನಿಗಳಲ್ಲಿ ಬೇರೆ |
ತತ್ತ್ವದಾಕಾರನಾಗಿ ಇಷ್ಟರವೊಳಗಿನ್ನು |
ವಿಷ್ಣುನೆ ಆವರವರ ಸತತ ಪ್ರಾವರ್ತಕನಾಗಿ |
ಇಷ್ಟನಿಷ್ಟಗಳಿಗೆ ತೊಡಕದಿದ್ದು |
ವಿಷ್ಣುನಾಮಕ ಚಲುವ ಗೋಪಾಲ ವಿಟ್ಠಲನು ಸರ್ವಾಂ |
ವಿಷ್ಣುಮಯಂ ಜಗತ್ತು ವ್ಯಾಪಿಸಿಪ್ಪ | ॥ ೩ ॥

## ಝಂಪೆ ತಾಳ

ವಿಷ್ಣುನೆ ಇಷ್ಟ ತತ್ವ ರೂಪ ತಾನಾಗಿ |
ಇಷ್ಟ ತತ್ವಗಳಿಗೆ ಬಿಂಬನಾಗಿ |
ವಿಷ್ಣು ತಾನಿಪ್ಪದಾಶ್ಚರ್ಯವೆಂದೆನ್ನದಿರಿ |
ವಿಷ್ಣುದಾಸರಿಗೆ ಸ್ವರೂಪ ಭೂತಾ |
ಇಷ್ಟು ತತ್ವಂಗಳು ಜೀವ ಸ್ವರೂಪದಂತೆ |
ಸ್ಪಷ್ಟವಾಗಿಪ್ಪದು ತಿಳಿದವರಿಗೆ |
ಕಷ್ಟಬಡಿಸುವರೆಲ್ಲ ಎನ್ನೆ ಅನ್ಯಾಯು |
ಪುಟ್ಟಿಸುವ ಒಂದೊಂದಾಭೇದವ |
ನಷ್ಟವಾಗುವದಲ್ಲ ಜೀವರ ಸ್ವರೂಪ |
ಬಿಟ್ಟು ಹೋಗುವದಲ್ಲ ಎಂದೆಂದಿಗೂ |
ಸ್ಪಷ್ಟವಾಗಿ ಇದರ ಅನುಭವ ಎಂಬುವದು |
ವಿಷ್ಣುದಾಸರೆ ಇದರ ವಿವರವು ಬಲ್ಲರು |

ಇಷ್ಟವಮೂರುತಿ ನಮ್ಮ ಗೋಪಾಲವಿಟ್ಠಲ ।
ಇಷ್ಟರಲ್ಲಿ ನಿಂತು ಹರಿ ಏನೇನುನೋಳ್ಪ ॥ ೪ ॥

ತ್ರಿವಿಡಿ ತಾಳ

ಭಿನ್ನವಾದ ವೃತ್ತಿರೂಪ ಸುಖದುಃಖವು ।
ಇನ್ನು ಸ್ವರೂಪ ಅನುಭವ ಉಂಟು ।
ಚಿನ್ಮಸಿನ ಮನಸಿನ ದ್ವಾರವಿನ್ನು ಅಭಿಮಾನದಲ್ಲಿ ।
ತನ್ನದೆಂದರಿವ ಭಿನ್ನವಾದ ದುಃಖವ ।
ತನ್ನ ಪ್ರಕಾಶ ಅಭಿಮಾನವಿದ್ದಲ್ಲೆಲ್ಲ ।
ತನ್ನದೆಂದೆ ತಿಳಿವ ಅಭಿಮಾನದಿ ।
ಇನ್ನು ಹೀಗೆ ವೃತ್ತಿರೂಪ ದುಃಖವಿನ್ನು ।
ತನ್ನಭಿಮಾನದಿಂದಲೆ ಅನುಭವ ।
ಚನ್ನಾಗಿ ಲಿಂಗ ಭಂಗವಾಗುವತನಕ ।
ಇನ್ನು ಹೀಗೆ ಅನುಭವಿಪ ಜೀವನು ।
ಮುನ್ನೆ ವೃತ್ತಿರೂಪ ಸುಖವು ಮತ್ತೆ ಹೀಗೆ ।
ಇನ್ನು ಅನುಭವವೆಲ್ಲ ಒಂದೆ ನೋಡು ।
ತನ್ನದೆಂಬ ಅಭಿಮಾನ ಬಿಟ್ಟು ನಿರ್ಗುಣದಲ್ಲಿ ।
ಅನ್ನರಸ ಪಾನಂಗಳು ಎಲ್ಲ ಹರಿಯೆ ಉಣುವ ।
ವನೆಂದು ತಿಳಿದು ಉಂಬ ಜೀವರಿಗೆ ।
ಚಿನುಮಯ ಬಿಂಬ ತಾನುಂಡು ಎಲ್ಲ ।
ಭಿನ್ನರಸ ಸುಖ ವ್ಯಂಜಕಮಾಡಿ ।
ಆನಂದವನೇ ಇನ್ನು ಜೀವನಿಗೆ ಅಭಿವ್ಯಕ್ತಿಮಾಳ್ಪ ।
ಇನ್ನಿವನಿಗೆ ವಿಪರೀತ ದುಷ್ಟ ಜೀವನರಿಗೆ ।
ಇನ್ನು ದುಃಖ ಅಭಿವ್ಯಕ್ತಿ ಮಾಳ್ಪಾ ।
ಪುಣ್ಯಪಾಪಗಳೆರಡು ಜೀವಕೆ ಸಹಾಯವಾಗಿ ।
ತನ್ನದೆಂಬೊ ಮಾತು ಮಾತ್ರ ಇನ್ನು ಪುಶಿಯು ।
ಖಿನ್ನನ(ನಾ)ಗ್ಯಾಡುವನು ಅಭಿಮಾನದಿ ।

ಅನಂತ ಗುಣಪೂರ್ಣ ಗೋಪಾಲ ವಿಟ್ಠಲ ।
ಚನ್ನಿಗನ ಮಹಿಮೆ ಚಿತ್ರವಿಚಿತ್ರವು ॥ ೫ ॥

ಅಟ್ಟತಾಳ

ಒಂದು ರಸದಲ್ಲಿ ಬಿಂದು ಉದರದಿ ಬಿದ್ದರೆ ।
ಇಂದಿರೆ ಉಂಟಲ್ಲಿ ವಿರಿಂಚಿ ಶಿವನುಂಟು ।
ಚಂದಾದಿ ಗರುಡ ಶೇಷ ಇಂದ್ರಾದಿ ಸುರರೆಲ್ಲ ।
ಹೊಂದಿರುವರು ತಮ್ಮ ತತ್ವದ ರಸ ।
ಇಂದಿರೇಶ ವಿಭಾಗವ ಮಾಡಿ ತರತಮ ।
ದಿಂದಲೆ ಆರಾರ ಭಾಗ ಪೊಂದಿಸಿ ಈವಾ ।
ಇಂದಿರಾದೇವಿಗವ್ಯಕ್ತ ರಸದಲೆ ಅಭಿಮಾನ ।
ಮಂದಜ ಜನಕಗೆ ಮಹಾ ತತ್ವರಸವಿನ್ನು ।
ಇಂದು ಮೌಳಿಗೆ ಅಹಂಕಾರ ರಸದಲ್ಲಿ ।
ಇಂದ್ರಾದಿ ಸುರರಿಗೆ ವೈಕಾರಿಕ ರಸ ।
ತಂದುಕೊಡುವ ತೈಜಸ ರಸತರ ತಮ್ಯ—
ದಿಂದ ಭೌತಿಕ ರಸ ಬಪ್ಪದು ಮನುಜರ್ಗೆ ।
ತಂದು ಕೊಡುವ ಒಂದರೊಳಗೆ ಎಲ್ಲ ।
ಒಂದೇ ವಿಷಯ ಬಹುಮಂದಿಗೆ ಅನುಭೋಗ ।
ತಂದಿಪ್ಪದು ಪೃಥುವಿ ಗಂಧ ತನ್ಮಾತ್ರೆಯಂತೆ ।
ಮಂದ ಅಸುರ ದೈತ್ಯ ವೃಂದಕ್ಕೆ ಇದರೊಳು ।
ಗಂಧ ಬೇರೆ ಉಂಟು ಒಂದೆ ರಸದಲ್ಲೆ ।
ಮಂದಾಕಿನಿಯಲ್ಲಿ ಮೈಲಿಗೆ ವಸ್ತ್ರತೊಳೆದರೆ ।
ತಂದು ಕೊಡುವದು ತದ್ಭೂಷಣ ಆ ವಸ್ತ್ರಕ್ಕೆ ।
ಸುಂದರ ಮೂರುತಿ ಗೋಪಾಲ ವಿಟ್ಠಲ ।
ಬಂಧುವಾದನು ಸಾಧು ಜೀವರ್ಗೆ ॥ ೬ ॥

ಆದಿತಾಳ

ದೇವಿಯಿಂದಲಿ ಕ್ರೀಡೆ ದೇವನಾಡುವ ತತ್ವ ।
ದೇವತೆಗಳನ್ನೆಲ್ಲ ಕಾವಲಿ ಇಟ್ಟನ್ನು ।

ಆವರ್ಣ ಪ್ರಕೃತಿಗಳಲಿ ತಾನಿಂತು |
ತ್ರಿವಿಧ ಮೂಲರ ಜಗಕೆ ವೃಕ್ಷನಾಗಿ |
ಶ್ರೀ ವಿಷ್ಣುನೆ ಅಲ್ಲಿ ವಿಟಪನಾಗಿ ಸರ್ವ |
ಜೀವರಿಗಾಶ್ರಯನಾಗಿ ಪಾಲಿಸುವಾ |
ಆವಾ ಈ ವೃಕ್ಷದ ಮೂಲ ಕಂಡವರಿಲ್ಲ |
ದೇವ ದೇವೇಶನ ಲೀಲೆ ಎಷ್ಟೊ |
ದೇವಿ ಲಕುಮಿ ಸಾಕಲ್ಯ ತಿಳಿಯದೆ ಶ್ರೀ |
ಭಾವವನು ತಾನು ನಂದದೊಳು ಮುಣುಗಿ |
ಶ್ರೀವರ ಪ್ರೇರಕನೆಂದು ತುತಿಸಿಯಿನ್ನು |
ಭಾವೆ ಗಂಡನ ಕೊಂಡಾಡಿಹಳು |
ಜೀವರು ತಮ್ಮ ತಮ್ಮ ಯಾವತ್ತು ಶಕ್ತಿಲಿ |
ದೇವನ ಸ್ತುತಿಸಿ ಧೇನಿಸುವರು |
ಗೋವರ್ಧನೋದ್ಧಾರ ಗೋಪಾಲ ವಿಟ್ಠಲನ್ನ |
ದೇವನ ಮಹಿಮೆ ಬಲ್ಲವರಾರು ॥ ೭ ॥

**ಜತೆ**

ಆಪ್ತ ಉಪಾಸನಿ ಗುಪ್ತದಿಯಿದುಮಾಡಿ |
ಪ್ರಾಪ್ತನಾಗುವ ಗೋಪಾಲ ವಿಟ್ಠಲ ನಿಮಗೆ ॥ ೮ ॥

## ಸುಳಾದಿ ೬೭

ಒಂದೇ ಅನಂತರೂಪ, ಅನಂತ ಒಂದೇ ರೂಪನಾದ ಹರಿಯ ಗುಣ, ರೂಪಕ್ರಿಯೆ, ಅಧಿಕಾರ ಭೇಧದಿಂದ ವಿಶ್ವರೂಪೋಪಾಸನಾ.

ರಾಗ ಸಾರಂಗ ಧ್ರುವತಾಳ

ಒಂದೇ ರೂಪವು ನೋಡಾ ಅನಂತ ಪೂರ್ಣವಿನ್ನು |
ಒಂದೊಂದು ಅವಯವವೆ ಪೂರ್ಣವಯ್ಯಾ |
ಒಂದು ರೂಪದೊಳಗೆ ಅನಂತ ರೂಪಂಗಳು |
ಒಂದೊಂದು ರೂಪದಿಂದ ಭೇದಾ ಭೇದನಾಗಿಪ್ಪ |

ಒಂದು ಧನುರ್ಧರ ಒಂದು ಅರಿಶಂಖಧರ |
ಒಂದು ಚತುರ್ಭುಜ ಒಂದು ದ್ವಿ ಭುಜರೂಪ |
ಒಂದು ಚತುರ ಹಸ್ತ ಒಂದು ಸಾಸಿರ ಹಸ್ತ |
ಒಂದು ಏಕಮುಖ ಒಂದು ಚತುರ್ಮುಖ |
ಒಂದು ಸಾಸಿರ ಮುಖ ಒಂದು ಗಜಮುಖ |
ಒಂದು ಮತ್ಸ್ಯಮುಖ ಒಂದು ಸೂಕರಮುಖ |
ಒಂದು ಕ್ರೂರ ಮುಖ ಒಂದು ಶಾಂತಮುಖ |
ಒಂದು ಶಾಮ ವರ್ನ ಒಂದು ರಜೋವರ್ನ |
ಒಂದು ಪೀತವರ್ನ ಒಂದು ಶುಭ್ರವರ್ನ |
ಒಂದು ಭಯಪ್ರದ ಒಂದು ಅಭಯಪ್ರದ |
ಒಂದು ಅಣುವಾಗಿ ಪುನಃ ಒಂದೊಂದೆ ಮಹತ್ತಹ |
ಒಂದು ಕುಳಿತಿಪ್ಪದು ಒಂದು ನಿಂತಿಪ್ಪದು |
ಒಂದು ಕೆಲವು ಮಲಗಿ ಒಂದು ಕೆಲವು ಓಡ್ಯಾಟ |
ಒಂದು ಕಡೆ ಸಂಹಾರ ಒಂದು ಕಡೆ ಸೃಷ್ಟಿಯು |
ಒಂದು ಕಡೆ ಪಾಲಣೆ ಒಂದೆ ರೂಪದಲ್ಲಿನ್ನು |
ನಿಂದು ನಾನಾ ವೈಚಿತ್ರನಾಗಿ ತೋರುವ ದೈವ |
ಸುಂದರ ಮೂರುತಿ ಗೋಪಾಲ ವಿಟ್ಠಲ |
ಒಂದಾನಂತಾನಂತರೂಪ ಅನಂತ ಒಂದೇ ರೂಪ |

ಮಟ್ಟತಾಳ

ಒಂದು ರವಿಯು ತೇಜ ಒಂದು ದ್ವಿರವಿ ತೇಜ |
ಒಂದಕ್ಕೊಂದು ಅಧಿಕ ಹತ್ತು ರವಿಯು ತೇಜ |
ಒಂದೊಂದೆ ಬಲ ವಿಜ್ಞಾನ ಪೂರ್ಣವಾದ ರೂಪ |
ನಿಂದಿವೆ ಮಲಗುವ ಮಲಗಿ ತಿರಗುವ |
ಪೊಂದಿ ಕೊಡುವ ಏಕ ಇಂದ್ರಿಯ ಭೇದಗಳಿಲ್ಲ |
ಮಂದ ಜನರ ಮನಕೆ ಮಹಾ ಅಲೌಕಿಕ |
ಗಂಧಾದಿ ಶಬ್ದವೆಲ್ಲ ಸ್ವರೂಪ ಭೂತಾ |
ಇಂದ್ರಿಯಂಗಳೆಲ್ಲ ಒಂದೊಂದೆ ಪೂರ್ಣವು |

ಪೊಂದಿಪ್ಪವು ನೋಡಾನಂತ ಬ್ರಹ್ಮಾಂಡಗಳು ।
ಹಿಂದಿನ ಅತೀತ ಅನಾಗತವೆಲ್ಲಾ ।
ಒಂದೊಂದೆ ರೂಪದಿ ಹೊಂದಿಕೊಂಡಿಪ್ಪವು ।
ಒಂದು ಆದರು ಅಂತೆ ಕಂಡೆನೆಂಬವರಾರು ।
ನಂದ ನಂದನ ಕಂದ ಗೋಪಾಲ ವಿಟ್ಠಲ ।
ಬಂದು ತೋರುವ ತತ್ತ್ತತ್ಯೋಗ್ಯತೆಯನುಸಾರ ॥ ೨ ॥

ರೂಪಕ ತಾಳ

ಒಂದು ಕಡೆಯಲಿ ರಾವಣನ ಹನನ ಮಾಡುವ ।
ಒಂದು ಕಡೆಯಲಿ ತತ್ವಜ್ಞಾನ ಭೋಧಿಸುತಿಪ್ಪ ।
ಒಂದು ಕಡೆಯಲಿ ತುರುವುಗಳನು ಕಾಯುವನು ।
ಒಂದು ಕಡೆಯಲಿ ಕ್ರೂರ ಜನರ ಸದಬಡಿವ(ಯು)ವ ।
ಒಂದು ಕಡೆಯಲಿ ಕುರು ಪಾಂಡವರ ಕಡದಾಡಿಸುವ ।
ಒಂದು ಕಡೆಯಲಿ ಗೋಪ ಸ್ತ್ರೀಯರ ವೊಡನಾಟ ।
ಒಂದು ಕಡೆಯಲಿ ಗೋವರ್ಧನ ಗಿರಿಯನೆತ್ತಿಹ ।
ಒಂದು ಕಡೆ ಬ್ರಹ್ಮಾದ್ಯರಿಂದ ಪೂಜಿಸಿಕೊಂಬ ।
ಒಂದು ಕಡೆ ಕಂಸನ ಹನನ ಮಾಡುತಿಪ್ಪ ।
ಒಂದು ಕಡೆಯಲಿ ಪಾಲು ಬೆಣ್ಣೆ ಕದ್ದದ್ದು ತಿಂದು ।
ಒಂದು ರೂಪದಿ ಯಶೋದೆ ಮುಂದಾಡುತಿಪ್ಪ ।
ಇಂದು ಮುಖಿಯರ ಮುಂದೆ ಇಲ್ಲೆಂದಾಡುತಿಪ್ಪ ।
ಒಂದು ರೂಪದಲ್ಲೆ ಈ ಪರಿ ಪರಿರೂಪ ।
ಛಂದದಿ ತೋರುವ ಒಂದೆರಡು ಎನಸಲ್ಲ ।
ಕಂದರ್ಪ ಜನಕ ಗೋಪಾಲ ವಿಟ್ಠಲ ತನ್ನ ।
ಹೊಂದಿದವರ ಮನಕೆ ಒಂದಾನಂತಾಗಿ ತೋರ್ಪ ॥ ೩ ॥

ಝಂಪಿತಾಳ

ಒಂದು ಕಡೆಯಲಿ ದ್ರೋಣ ಭೀಷ್ಮಾದಿಗಳನ್ನೆಲ್ಲ ।
ಕೊಂದು ಕೊಂದರ್ಜುನ ಕೊಲ್ಲೊ ನೀಯಂತಿಪ್ಪ ।
ಒಂದು ಕಡೆಯಲಿ ಅರಿ ಸೈನ್ಯಕೆ ಬಲವಾಗಿ ।

ಮುಂದರಿದು ಮತ್ತವರ ಮೋಹಗೊಳಿಸುತಲಿಪ್ಪ ।
ಒಂದು ರೂಪದಿ ಪಾರ್ಥನಿಗೆ ತತ್ವ ತಿಳಿಸುತ್ತ ।
ಬಂದ ಅರಿಗಳ ಅಸ್ತ್ರತಾನೆ ಧರಿಸುತಲಿಪ್ಪ ।
ಒಂದು ರೂಪದಲಿ ಅರ್ಜುನನ್ನ ಆಲಿಂಗಿಸಿ ।
ಬಂದ ಆಯಾಸಗಳ ಬಡಸದೆ ನಿಂತಿಪ್ಪ ।
ಒಂದು ರೂಪದಿ ದೇವದತ್ತ ಶಂಖವನೂದಿ ।
ತಂದೀವ ಬಲವ ಪ್ರತಿಕ್ಷಣಕೆ ಪಾರ್ಥನಿಗಿನ್ನು ।
ಮಂದ ಅಸುರರಿಗೆ ಇದೇ ಶಬ್ದದಿಂದ ಅವರ ।
ಕುಂದು ಮಾಡುವ ಬಲ ಒಂದು ರೂಪದಲ್ಲಿನ್ನು ।
ಒಂದೊಂದು ಅನಂತ ರೂಪನು ಆಗಿ ।
ಮುಂದರಿದು ಆ ಕುರು ಸೈನ್ಯ ಕೊಂದುಕೊಂದ್ಹಾಕುತಿಹ ।
ಮಂದಾಕಿನಿಯ ಜನಕ ಗೋಪಾಲ ವಿಟ್ಠಲಗೆ ಹೀ ।
ಗೆಂದು ತಿಳಿದರ್ಚಿಪಗೆ ಬಂಧನವ ಕಡಿವಾ ॥ ೪ ॥

ತ್ರಿವಿಡಿ ತಾಳ

ಮತ್ಸ್ಯಾದಿ ಅಜಾದಿ ಕೇಶವಾದಿ ಚತುರಾದಿ ।
ವಿಶ್ವಾದಿ ಹಯ ಶಿಂಶುಮಾರ ಕಪಿಲ ವ್ಯಾಸ ।
ಸ್ವಚ್ಛವಾದಾನಂತ ರೂಪಂಗಳೆಲ್ಲವು ।
ನಿಚ್ಚ ನಿಚ್ಚ ಕೃಷ್ಣನಲ್ಲೆ ನಿತ್ಯವಾಗಿ ।
ಎಚ್ಚತ್ತಿಹವು ಕಾಣೊ ಲೇಶಸಂಶಯ ಸಲ್ಲಾ ।
ಅಚ್ಚನಿಟ್ಟಂತೆ ಮತ್ತೊಂದೆ ಪಟ್ಟದಲ್ಲಿನ್ನು ।
ಅಚ್ಯುತನ್ನ ರೂಪ ಒಂದು ದುರ್ಲಭ ಪ್ರಬಲ ।
ನೀಚ್ಚೋಚ ವಿಲ್ಲವೊ ನಿತ್ಯ ವ್ಯಕ್ತಾ ।
ಅಚ್ಚ ಬೆಲ್ಲವು ಒಂದು ಆವಕಡೆ ತಿಂದರು ।
ಹುಚ್ಚ ಒಂದು ಕಡೆ ಹುಳಿ ಸೀಯು ಎನಿಪದೇ ।
ಮಚ್ಚರ ಜನರಿಗೆ ಮರುಳುಗೊಳಿಸಿ ಹೀಗೆ ।
ನಿಚ್ಚವಾದ ನಿರಯ ಪೊಂದಿಸುವ ।

ಸ್ವಚ್ಛ ಮೂರುತಿ ನಮ್ಮ ಗೋಪಾಲ ವಿಟ್ಠಲ ।
ಅಚ್ಚ ಕರುಣಿಕಾಣೊ ಆರ್ತ ಜನಕೆ ನಿತ್ಯ ॥ ೫ ॥

ಅಟ್ಟ ತಾಳ

ಅಣು ಅಣು ಪರಮಾಣು ಅತ್ಯಣು ಬಲು ಅಣು ।
ಘನ ಘನ ಘನ ರೂಪ ಘನತಾನು ಘನತಾನು ।
ಅಣು ರೂಪಾದಾ(ದ್ರವ್ಯ) ಮನಸ್ಸಿಗೆ ವಂದನ್ನ ।
ಎಣಿಕೆ ಹಿಡಿದೆನೆನಲು ಮನಕೆ ನಿಲ್ಲುವದಲ್ಲಾ ।
ಘನರೂಪದಾ ದ್ರವ್ಯ ಆಕಾರದೊಳಗಿನ್ನು ।
ಅಣುವಾಗಿ ತೋರೋದು ಅವ್ಯಾಕೃತ ದ್ರವ್ಯ ।
ಘನವ್ಯಾಪ್ತಿವುಳ್ಳದಾದರು ಸರಿಯೆವೆ ।
ಘನಹರಿ ದ್ರವ್ಯದಲ್ಲಿ ಅಣುವಾಗಿ ತೋರೋದು ।
ಚಿನುಮಯ ಹರಿತಾನು ಚಿದ್ರೂಪಕೆ ಬಿಂಬ ।
ಎನಸಲ್ಲಾ ಮನುಜಾ ಘನಸೋಜಿಗವುಂಟು ।
ಅನುವಾದ ಪಂಚ ಮಹಾಭೂತ ಅವ್ಯಕ್ತಕೆ ।
ಮನಸಿಜನಯ್ಯ ತಾ ಬಿಂಬನಾಗಿಪ್ಪನು ।
ಎಣಿಸಿ ಧೇನಿಸಿಪ್ಪಂಗೆ ಎಲ್ಲಕ್ಕೆ ಹರಿಬಿಂಬ ।
ಘನ ಜಾಗ್ರತನಯ್ಯಾ ಗಣನೆಮಾಡನು ಅನ್ಯ ।
ಸನಕಾದಿಗಳೊಡಿಯಾ ಗೋಪಾಲ ವಿಟ್ಠಲ ।
ಅನಿಮಿಷರಿಗೆ ತಿಳಿಯಾ ಅಗೋಚರನಯ್ಯಾ ॥ ೬ ॥

ಆದಿತಾಳ

ಚತುರ ವಿಶಂತಿ ತತ್ವ ಸ್ವರೂಪ ಭೂತವು ।
ಪತಿತ ಪಾವನನಾದ ಹರಿಯಲ್ಲಿಯಿಪ್ಪುದು ।
ತತು ತತು ರೂಪ ತದ್ವರ್ಣ ತದಾಕಾರ ।
ಗತಿಗೆ ನಿಯಾಮಕ ಸತತ ಬಿಂಬನಾಗಿ ।
ಖತಿ ಗೊಳಗಾದದ ಖಂಡಾ ಖಂಡನಾಗಿ ।
ಜಿತವಾದ ತನ್ನ ಸ್ವರೂಪದಿಂದಲೇ ।

ಇತರಾಪೇಕ್ಷೆಯು ಇಲ್ಲ ಈರ್ವರಿಂದಲಿ ಬಂದ ।
ಅತಿಶಯ ಬೇಕಿಲ್ಲ ಆಶ್ರಿತ ಜನಪಾಲಾ ।
ಜಿತವಾದ ಜಡಕ್ಕೆ ಬಿಂಬನಾದ ಬಳಿಕಿನ್ನು ।
ತತುವ ಜೀವರಿಗೆಲ್ಲ ಬಿಂಬನಾಗೋದಾಶ್ಚರ್ಯ ।
ಇತರ ಜೀವರಿಗೆಲ್ಲ ನಿಶ್ಚಯ ನಿತ್ಯದಿ ।
ಗತಿ ಬೇಕಾದವನಿಗೆ ಇದೆ ಚಿಂತನೋಪಾಯ ।
ಇತರ ದೈವರ ಗಂಡ ಗೋಪಾಲ ವಿಟಲ ।
ಚ್ಯುತ ದೂರ ನಿತ್ಯ ಆಶ್ರಿತ ಜನಪಾಲಾ ॥ ೭ ॥

ಜತೆ

ವಿಶ್ವರೂಪ ದರುದಶನಧಿಕಾರಿಗಳು ಅರಿದು ।
ವಿಶ್ವನಾಮಕ ಗೋಪಾಲ ವಿಟ್ಠಲನ ಭಜಿಸಿ ॥

## ಸುಳಾದಿ ೭೮

ಧ್ಯಾನವೇ ಮುಖ್ಯ, ಬಿಂಬಮೂರ್ತಿ ಧ್ಯಾನಕ್ಕೆ ಒಲಿಯೆ ಪ್ರಾರ್ಥನಾ, ಧ್ಯಾನೋಪಾಸನೆ ಮುಖ್ಯ ಧ್ಯಾನದೊಳಗೆ ಎಲ್ಲವೂ ಅಡಕ, ಸರ್ವಜ್ಞ ಸರ್ವಶಕ್ತಿ ಪ್ರದ ಯಾವತ್ತು ನಿನ್ನಲ್ಲೆ ಉಂಟು, ನಾನಾಸ್ಥಾವರ ಜನಮಗಳಲ್ಲಿ ಬಂದುದು ನಿನ್ನ ಪೂಜೆ ಮಾನವ ಜನುಮದಲ್ಲಿಯು ದಶೇಂದ್ರಿಯ ಪ್ರವರ್ತಕನಾದ ಹರಿಯೆ ಧ್ಯಾನಕ್ಕೆ ನಿಲ್ಲೆಂದು ಪ್ರಾರ್ಥನೆ.

ರಾಗ– ಭೈರವಿ ಧ್ರುವ ತಾಳ

ನಿಲ್ಲು ನಿಲ್ಲಯ್ಯಾ ದೇವಾ ನೀಲವರ್ನದ ಸ್ವಾಮಿ ।
ಎಲ್ಲಿ ಪೋಗುತ ಯಿದ್ದಿ ಎನ್ನ ರಕ್ಕಿಸಿ ಮುಂದೆ ।
ಸಲ್ಲದವನೆ ನಾನು ಸಾಕದಿದ್ದರೆ ನೀನು ।
ಬಲ್ಲಿದನೆ ಬಡವ ಬಡವ ಬಲ್ಲಿದನಯ್ಯಾ ।
ಎಲ್ಲ ಸಾಧನಗಳು ನಿನ್ನ ಬಳಿಯಲ್ಲುಂಟು ।
ಇಲ್ಲದ್ದೊಂದಿಲ್ಲ ಎನಗೆ ಇತ್ತ ನೀವ್ಒಲಿದಮೇಲೆ ।
ಎಲ್ಲ ನಿನ್ನೊಳಗಡಕ ಯೋಚಿಸಲಾಗಿ ಇನ್ನು ।

ಕಲ್ಲು ಮೃದುವಾಗುವದು ಕಂಡ ಆಗಲಿ ನಿನ್ನ |
ಹುಲ್ಲು ಪರ್ವತಭಾರ ಹರಿ ನಿನ್ನ ಕಾಣದಾಗ |
ಎಲ್ಲಿ ಕೆಲ್ಲಿಯೊ ಆಗಿ ಎನಗೆ ತೋರುವದಿನ್ನು |
ಗಲ್ಲ ಗಲ್ಲವ ಬಡಿದು ಗಂಟಲನೆ ಸೆಳೆದುಕೊಂಡು |
ಗುಲ್ಲ ಎಬ್ಬಿಸದೋಡಿ ಪೋದವನಂತೆ ನೀನು |
ಮೆಲ್ಲ ಮೆಲ್ಲನೆ ಮನಕೆ ಬಂದು ಸುಳಿದು ಪೋದರೆ |
ಎಲ್ಲ ಸಂಪತ್ತು ಪೋಗಲಾಡಿಸಿಕೊಂಡವನು |
ಎಲ್ಲಿತನಕ ಅವಗೆ ಕ್ಲೇಶವು ಆಗುವದೊ |
ಇಲ್ಲಿ ಸಾದೃಶ್ಯ ಸ್ವಲ್ಪು ಆ ವಿಷಯದಲ್ಲಿನ್ನು |
ಎಲ್ಲ ಸುರರೊಡಿಯ ಗೋಪಾಲ ವಿಟ್ಠಲ |
ಬಲ್ಲಿದ ನಿನ್ನ ಧ್ಯಾನ ಬಲ್ಲವಗನುಭೋಗಾ | ॥ ೧ ॥

ಮಟ್ಟತಾಳ

ಧ್ಯಾನ ಮಾಡಿದವ ಸ್ನಾನ ಮಾಡಿದವ |
ಧ್ಯಾನ ಮಾಡಿದವ ದಾನಮಾಡಿದವ |
ಧ್ಯಾನ ಮಾಡಿದವ ಮೌನ ಮಾಡಿದವ |
ಧ್ಯಾನ ಮಾಡಿದವ ನಾನಾ ಕರ್ಮಗಳು |
ತಾನು ಮಾಡಿದವ ನ್ಯೂನ ಒಂದು ಇಲ್ಲವು |
ಧ್ಯಾನಕ್ಕೆ ಹರಿಯೆ ನೀನು ಬಾರದಿರೆ |
ನಾನು ಕಂಡ ವಿಷಯವನ್ನು (ವನು) ಧೇನಿಸುವೆ |
ಜ್ಞಾನ ಪೂರ್ವಕವಾಗಿ ಧ್ಯಾನ ಮಾಡುವನಿಗೆ |
ಕಾಣದೊಂದು ಯಿಲ್ಲ ಕರ್ಮ ಆದರೊಳಡಕ |
ದೀನ ಜನ ಬಂಧು ಗೋಪಾಲ ವಿಟ್ಠಲ |
ಧ್ಯಾನಕ್ಕೆ ಎನಗೆ ನೀನು ವಿಷಯನಾಗು ॥ ೨ ॥

ರೂಪಕ ತಾಳ

ಆವಾವ ತೀರ್ಥವು ನಿನ್ನ ಬಳಿಯಲುಂಟು |
ಆವಾವ ಕ್ಷೇತ್ರವು ನಿನ್ನ ಬಳಿಯಲುಂಟು |

ಆವಾವ ತತ್ವವು ನಿನ್ನ ಬಳಿಯಲುಂಟು ।
ಆವಾವ ಸಜ್ಜನರು ನಿನ್ನ ಬಳಿಯುಲುಂಟು ।
ಯಾವತ್ತು ನಿನ್ನಲ್ಲೆ ಉಂಟು ಯೋಚಿಸಲಾಗಿ ।
ಈ ವೇಳ್ಯ ಆ ವೇಳ್ಯ ಅನ್ನದೆ ಎಲೋ ದೇವಾ ।
ಪಾವನ ಪಾಪವು ಎಲ್ಲ ಶಕ್ತಿಗಳು ।
ದೇವಾ ನಿನ್ನಲ್ಲಿನ್ನು ಆವಿಷ್ಟವು ನೋಡಾ ।
ಈ ವೇಳ್ಯಯಿತ್ತು ನೀ ನೋಡು ಯೋಚಿಸದೆ ।
ದೇವಾ ಒಬ್ಬರು ನಿಮಗೆ ಬೇಡವೆಂಬುವರಿಲ್ಲ ।
ದೇವಕ್ಕಿ ನಂದನ ಗೋಪಾಲ ವಿಟ್ಠಲ ।
ನೀ ವೊಲಿಯುಲು ಎನಗಿಲ್ಲ ಒಂದಸಾಧ್ಯ ॥ ೩ ॥

ಝುಂಪೆ ತಾಳ

ಏನು ಬಗೆ ಪೂಜೆಗಳು ನಿನಗೆ ಮಾಡುವೆ ಎಂಬ್ಯಾ ।
ನೀನಿತ್ತ ಬಂದೆನಗೆ ವೊಲಿದ ಮೇಲಕೆ ದೇವಾ ।
ನಾನಾ ಜಾಲ (ಜಲ)ಗಳಲ್ಲಿ ನಾನಾ ಯೋನಿಗಳೈದಿ ।
ನಾನು ಇದ್ದದನೆಲ್ಲ ಸ್ಥಾನಂಗಳೂ ನಿನಗೆ ।
ನೀನು ಎನ್ನನು ಎಲ್ಲಿ ನಿಲಿಸಿದ ಸ್ಥಳವೆಲ್ಲ ।
ಶ್ರೀನಿಲಾಸನೆ ನಿನಗೆ ಆದೇ ಪೀಠವು ।
ಧೇನು ಜನ್ಮಂಗಳಲ್ಲಿ ಬಂದ ಕರದ ಪಾಲು ।
ಶ್ರೀ ನಾರಾಯಣಾ ನಿನಗೆ ಅಭಿಷೇಕವು ।
ನಾನಾ ಪರಿ ಪುಷ್ಪ ಸಿರಿ ತುಲಸಿ ಶಿರಿ ಗಂಧ ಮರ ।
ನಾನಾ ಜನುಮಗಳಾಗಿ ನಾನು ಬಂದುದುಯೆಲ್ಲ ।
ಶ್ರೀನಾಥ ನಿನಗೆ ಇವೆ ಪೂಜಿಗೆ ಆದೆನು ।
ನಾನಾ ವಸನವು ಜಲರೂಗ್ಮ(ರೂಹ) ಜನ್ಮಗಳಲ್ಲಿ ।
ನಾನು ಇದ್ದದೆನೆಲ್ಲ ನಿನಗೆ ಉಡಿಗಾಭರಣ ।
ಆನಿ ಕುದುರೆ ಅಂಡಜಾದಿ ಯೋನಿಗಳಲ್ಲಿ ।
ನಾನು ತಿರುಗಿದೆನಲ್ಲ ನಿನಗೆ ವಾಹನವಯ್ಯಾ ।

ನಾನಾ ಪದಾರ್ಥ ತಂಡುಲ ಮೊದಲಾದವುಗಳು ।
ಏನು ಐದಿದವನೆಲ್ಲ ನಿನಗೆ ನೈವೇದ್ಯವು ।
ಭಾನು ಚಂದಿರ ಸಾಕ್ಷಿಯಾಗಿ ಮಾಡಿದ್ದೆ ದೀಪ ।
ನೀನು ಎನ್ನವನಾಗಿ ಇದ್ದು ಇದರೊಳಗೆಲ್ಲ ।
ಏನೇನು ಪರಿ ಪರಿ ಕರ್ಮ ಮಾಡಿಸಿದದ್ದು ।
ಹೇ ನಾರಸಿಂಹ ಕಪ್ಪವು ನಿನಗೆ ಕಾಣೊ ।
ನೀನು ಮಂಗಳಮೂರ್ತಿ ಡಿಂಗರಿಗೆ ಬಲು ಸಾರ್ಥಿ ।
ನೀನಾಗಿ ಮಾಡಿಸಿದುದೆಲ್ಲ ನಿನಗೆ ಆರ್ತಿ ।
ಜ್ಞಾನಮಯ ಕಾಯ ಗೋಪಾಲ ವಿಟ್ಠಲರೇಯ ।
ನೀನಿತ್ತ ಬಾರೋ ನಿಜ ಭಕ್ತಜನರೊಡೆಯಾ ॥ ೪ ॥

ತ್ರಿವಿಡಿ ತಾಳ

ಮಾನವಯೋನಿಗಳು ಏನೇನು ಐದಿದವೆಲ್ಲ ।
ನಾನಾ ಬಗೆಯ ಪೂಜೆ ನಿನಗೆ ಸ್ವಾಮಿ ।
ನಾನು ನಿನ್ನನು ಬಿಟ್ಟು ಒಂದು ಕಾಲದಲಿಯನ್ನು ।
ಏನಿದ್ದೆನೇನೊ ಚೆಲ್ವ ಚಿತ್ರ ಮಹಿಮಾ ।
ಕಾಣದೆ ಕೆಟ್ಟೆ ನಿನ್ನ ನಾನು ನನ್ನದು ಎಂಬೊ ।
ಹೀನಬುದ್ಧಿಯ ಮಾಯವು ಎನಗೆ ಪಚ್ಚಿ ।
ನಾನು ನೀನು ಎಂತೆಂಬೊ ಜ್ಞಾನವ ತಿಳಿಯದೆ ।
ಮಾನಸ ಪಶುವೊ ನಾ ಏನಂಬಿನೊ ।
ನೀನೆ ಅಲ್ಲವೆ ಎನಗೀ ಮಂದಬುದ್ಧಿಯಿತ್ತವು ।
ಏನು ಎನಗೆ ಕೆಟ್ಟದೊಂದು ಇಲ್ಲ ।
ಏನಾದದೆಲ್ಲ ಹಿಂದೆ ನಾನಾ ಕರ್ಮಂಗಳೆಲ್ಲ ।
ಮಾನಸ ವಾಚಾ ಕಾಯಾ ಮಾಡಿದದ್ದು ।
ಶ್ರೀನಾಥ ನಿನಗೆ ಮತ್ತೀಗ ಒಪ್ಪಿಸುವೆನೊ ।
ನಾನಲ್ಲ ಇದಕ್ಕೆ ಸ್ವಾತಂತ್ರನೆಂದು ।
ಏನು ಆದದ್ದು ಎಲ್ಲ ನೀನೆ ತೆಗೆದುಕೊಂಡು ।

ಹೀನ ನಾ ನೀನು ಸಾರ್ಥಕನ ಮಾಡು |
ಭಾನು ಶತ ತೇಜ ಗೋಪಾಲ ವಿಟ್ಠಲ |
ಕಾಣಿಸಿಕೊಂಡು ಕರ್ಮ ಕಾನನ ದಾಟಿಸೆನ್ನ |

ಅಟ್ಟತಾಳ

ಎನ್ನ ದಶ ಇಂದ್ರಿಯಗಳು ನಿನ್ನ ವಿಷಯಕರಿಸಲಿ |
ಎನ್ನ ಮನಸು ಬಂದು ನಿನ್ನಲ್ಲೆ ಎರಗಲಿ |
ಅನ್ಯವೆಂದರೆ ಎನಗೆ ವಮನ ಸರಿ ಆಗಲಿ |
ನಿನ್ನನೆ ಹುಡುಕತ ಎನ್ನ ಬುದ್ಧಿಯು ಇರಲಿ |
ನಿನ್ನ ನೋಡಿ ನಲಿದಾಡಲೆನ್ನ ಚಿತ್ತ |
ನಿನ್ನಲ್ಲದಿಲ್ಲೆಂಬೊ ಅಹಂಕಾರ ಎನಗಿರಲಿ |
ಇನ್ನೇನು ಬೇಡುವದಲ್ಲವೊ ಹೇ ಸ್ವಾಮಿ |
ನಿನ್ನದೆಲ್ಲ ಎಂಬುವದು ಪಾಲಿಸು |
ಘನ್ನ ದಯಾನಿಧೆ ಗೋಪಾಲ ವಿಟ್ಠಲ |
ನೀನಲ್ಲದರಿಯೆ ನಾ ಇನ್ನೊಂದು ಸುಖವ ||

ಆದಿತಾಳ

ಮೂರು ದಿನಕೆ ಒಮ್ಮೆ ಆಹಾರವನು ಕೊಂಡು |
ನೀರು ಮಾತ್ರವ ಕೊಟ್ಟು ನಿಲ್ಲಿಸಿ ದೇಹವ |
ಆರು ಎನಗೆ ಹತ್ತದಂತಲಾದರು ಏನು |
ನಾರಿ ಸುತರು ಸೇರದಂತಲಾದರು ಮಾಡು |
ಅ (ಆ) ರಿವೆ ರಿವರನ್ಯತ್ರರ ಕೂಡಿಸ ಧೋಗು (ಸದೆ ಹೋಗು)|
ಊರನೆ ಹೊರಡಿಸಿ ಕಾನನ ಸೇರಿಸು |
ನಾರಾಯಣಾ ನಿನ್ನ ನಾನು ಬಿಟ್ಟವನಲ್ಲ |
ಈ ರೀತಿ ಎನಗೆ ನೀ ಮಾಡದಿರು ಇನ್ನು |
ಆರಾಭಾರಕ್ಕೆ ಸರ್ವ ಕಾರಣ ನೀನೆಂದು |
ಶಾರೀರ ವೊಪ್ಪಿಸಿ ಕರವ ಮುಗದೆ |

ಘೋರ ಸಂಸಾರದ ಬೇರು ಕಿತ್ತುವದಕ್ಕೆ ।
ಭಾರಿಭಾರಿಗೆ ನಿನ್ನ ಸ್ಮರಣೆ ಬಲವಯ್ಯಾ ।
ಭಾರತೀಶನೊಡಿಯ ಗೋಪಾಲ ವಿಟ್ಠಲ ।
ದೂರನೋಡದೆ ಮನಕೆ ಬಾರೊ ಸರ್ವದ ಸ್ವಾಮಿ ।

ಜತೆ

ನೀನು ಧ್ಯಾನಕೆ ನಿತ್ಯ ನಿಲಕುತಲಿರು ಎಂದೆ ।
ಏನು ಅನ್ಯವನೊಲ್ಲೆ ಗೋಪಾಲ ವಿಟ್ಠಲ ।

## ಗೋಪಾಲ ವಿಠಲರ ಸುಳಾದಿ ೬೯

ಭಗವದಪರೋಕ್ಷವಾಗಲು ಉಪಾಯ ತತ್ ಸಾಧನೆ, ಖಂಡಾಖಂಡ ಧ್ಯಾನದ
ವಿಚಾರ, ಸಕಲ ಮೂರ್ತಿಗಳ ಗುಣರೂಪಕ್ರಿಯಾದಿಗಳ
ಬಿಂಬೈಕ್ಯ ಧ್ಯಾನ ಮುಖ್ಯ

ರಾಕೆ ಮಾರವಿ ಧ್ರುವ ತಾಳ

ಅಪರೋಕ್ಷವೆಂಬುವದು ಬಹುದೂರವಿಲ್ಲವಿನ್ನು ।
ಸ್ವಪರೋಕ್ಷ ದಾರಢ್ಯದಂತೀಲಿ ಯಿಪ್ಪುವದು ।
ಅಪವಾದದ ಮಾತಲ್ಲ ಆಲಿಸಿ ತಿಳಿವದು ।
ಕಪಟರಹಿತರಾದ ಕೋವಿದರೂ ।

ಶಪಥ ಮಾಡಲಿಬೇಕು ಸರ್ವೋತ್ತಮ ಹರಿಯೆಂದು।
ಚಪಲ ಸಂದೇಹವನ್ನು ಬಿಟ್ಟು ।
ತಪಸು ಎಂದು ತಿಳಿದು ತ್ರಿವಿಧ ।
ತಾಪತ್ರಯಾವು ಅಪವರ್ಗ ಸುಪವರ್ಗ ದಾರಿ ಹಿಡಿದು।

ಕುಪಿತವಾಗದೆ ದುಷ್ಟ ಉಕ್ತಿ ಸುವಚನಕ್ಕೆ ।
ಕ್ಲಿಪುತಕ್ಕೆ ಅಧಿಕ ಹ್ರಾಸ ಇಲ್ಲವೆಂದು ।
ಗುಪಿತಾದಲ್ಲಿ ಹರಿಯ ಗುಣಗಳ ಕೊಂಡಾಡಿ ।
ಸ್ವಪನ ಜಾಗ್ರತಿ ವ್ಯಾಪಾರಗಳ ತಿಳಿದು ।

ರಿಪು ಮಿತ್ರಗಳವ್ಯಾಪಾರ ಹರಿಯೆ ಎಂದು |
ಸಪುತ ಧಾತುಗಳನ್ನಯಾದಿ ಕೋಶಗಳು |
ಸಪುತದಶ ಸಹಸ್ರ ದ್ವಿನಾಡಿಯಲಿ |
ಗುಪಿತನಾಗಿದ್ದ ಹರಿಯ ಗುಣರೂಪಕ್ರಿಯೆಗಳು |
ಜಪಿಸು ಏಕೀಭೂತ ಬಿಂಬದಲ್ಲಿ |
ಕಪಿಲ ಮೊದಲಾದ ಭಗವದವತಾರ |
ತಪಮಾಡಿ ಚಿಂತಿಸು ಬಿಂಬಕ್ರಿಯಾ |
ಗುಪಿತ ವ್ಯಕುತ ನಿತ್ಯಾ ಗೋಪಾಲವಿಟ್ಠಲ |
ತಪಸಿಗೆ ಲಭ್ಯನಾಹ ಈಪರಿ ಚಿಂತಿಸೆ || ೧ ||

ಮಟ್ಟ ತಾಳ

ಒಂದು ಮೂರುತಿ ಒಂದೆರಡು ಮೂರ್ತಿ |
ಪೊಂದಿ ಲಿಂಗದೇಹ ಯಿಪ್ಪನ ಮೂರ್ತಿ |
ಒಂದು ಮೂರು ಮೂರ್ತಿ ಅನಿರುದ್ಧ ಕಾಯ |
ದಿಂದ ಒಳಹೊರಗೆ ವ್ಯಾಪ್ತವಾದ ಮೂರುತಿ |
ಛಂದವಾದ ಹೃದಯಸದನದಲ್ಲಿಯಿಪ್ಪವ ಮೂರುತಿ |
ಒಂದೇಳು ದಳದಿ ಬಿಡದೆ ತಿರುಗುವ ಮೂರ್ತಿ |
ಒಂದು ಹತ್ತು ಮೂರ್ತಿ ಚತುರವಿಂಶತಿ ಮೂರ್ತಿ |
ಅಂದವಾದ ಐವತ್ತೊಂದು ಮೂರುತಿಗಳು |
ಒಂದು ನವಮೂರುತಿ ಮತ್ಸ್ಯಾದಿಗಳಿನ್ನು |
ವಂದಿಸಿರೋ ಕೃದ್ಧೋಲ್ಕಾದಿ ಮೂರುತಿಗಳು |
ಒಂದು ಮೂರು ಮೂರ್ತಿ ವಟು ಜಾಮದಗ್ನಿ |
ಸಂದಿಸಿಂದಿಗೆ ವ್ಯಾಪ್ತ ಮೂರುತಿಗಳ ತಿಳಿದು |
ವಂದಿಸಿದರೆ ಎಲ್ಲ ಒಂದೇ ಮೂರುತಿ ಕಾಣೊ |
ಇಂದಿರೆಯರಸ ಗೋಪಾಲವಿಟ್ಠಲರೇಯಾ |
ವಂದಿಸಿದಂತೆ ತನ್ನವರಲಿಪ್ಪವನು ಬಿಡದೆ || ೨ ||

### ರೂಪಕ ತಾಳ

ಸಾಸಿರ ನಾಮಕ್ಕೆ ಸಾಸಿರ ಮೂರುತಿ |
ಸಾಸಿರ ದಳದಲ್ಲಿ ವಾಸವಾದ ಮೂರ್ತಿ |
ದಾಸೋಹಂ ಎಂದವಗೆ ಬಿಡದೆ ತೋರುವ ಮೂರ್ತಿ |
ಲೇಸು ಹ್ರಾಸಗಳಿಗೆ ಹಿಗ್ಗಿ ಕುಗ್ಗದ ಮೂರ್ತಿ |
ಕಾಸಿಗೆ ಬೆಲೆಯಾಗಿ ಕ್ರಯವಾಗದ ಮೂರುತಿ |
ದೇಶದೇಶದಿ ವ್ಯಾಪ್ತವಾಗಿದ್ದ ಮೂರುತಿ |
ನಾಶರಹಿತ ಸ್ವಪ್ರಕಾಶವಾದ ಮೂರುತಿ |
ಶೇಷನ ಹಾಸಿಕೆಯಲಿ ಮಲಗಿಪ್ಪ ಮೂರುತಿ |
ಈ ಸರ್ವ ಜಗವೆಲ್ಲ ವ್ಯಾಪಿಸಿದ ಮೂರ್ತಿ |
ದೋಷರಹಿತ ಮೂರ್ತಿ ಗೋಪಾಲವಿಟ್ಠಲ |
ವಾಸವಾಗಿ ಹೃದಯದೊಳಗಿಪ್ಪ ಮೂರುತಿ ‖ ೩ ‖

### ಝಂಪೆ ತಾಳ

ಕಣ್ಣಿನೊಳಗೆ ಇದ್ದು ಕಾಣಿಸುವ ಮೂರುತಿ |
ಕರ್ನಂಗಳಲ್ಲಿ ನಿಂತು ಭಿನ್ನಭಿನ್ನ ಮೂರ್ತಿ ಬೀಜವಾದಮೂರ್ತಿ |
ಅನ್ಯೋನ್ಯ ಆಶ್ರಯ ಆಗಿದ್ದ ಮೂರುತಿ |
ತನ್ನ ನೆನೆವರಿಗೆ ತಗಲಿ ತೊಲಗದ ಮೂರುತಿ |
ನಿನ್ನವನೆಂದವಗೆ ನೆಲೆಯಾದ ಮೂರುತಿ |
ಚಿನ್ಮಯ ಮೂರುತಿ ಗೋಪಾಲ ವಿಟ್ಠಲ |
ಅನ್ಯಜನರಿಗೆ ಅವೇದ್ಯನಾದ ಮೂರ್ತಿ ‖ ೪ ‖

### ತ್ರಿವಿಡಿ ತಾಳ

ಏಸು ಜನ್ಮದ ಉಪಾಸನೆ ಮಾಡಲು |
ವಾಸನ ರೂಪದಿ ಪೊಳೆದು ತೋರಿದ ಮೂರ್ತಿ |
ಕೇಶವ ಮತ್ಸ್ಯಾದಿ ಅವತಾರ ರೂಪದಿ |
ದಾಸ ಜನರಿಗೆ ಪೊಳೆದು ತೋರುವ ಮೂರುತಿ |
ಈ ಶರೀರ ಹೃದಯಾಕಾಶದಲ್ಲಿ ನಿಂದು |

ಸುಷುಪ್ತಿಲಾತ್ಮಗೆ ಸುಖವ ಉಣಿಸುವ ಮೂರುತಿ |
ಭಾಸುರ ಮೂರುತಿ ಭವಗಳ ಕಳೆದಿನ್ನು |
ವಾಸವಾಗಿ ನಿತ್ಯ ನಲಿದು ಆಡುವ ಮೂರ್ತಿ |
ವಾಸುದೇವಾಚ್ಯುತ ಗೋಪಾಲ ವಿಟ್ಠಲ |
ಶ್ರೀಶ ಕೃಷ್ಣ ಎನ್ನ ಪೋಷಿಪ ಮೂರುತಿ . || ೫ ||

ಅಟ್ಟತಾಳ

ಸೃಷ್ಟಿ ಸ್ಥಿತಿಯು ಕಾರಣ ಮೂರುತಿ |
ನಿಷ್ಟಾನಿಷ್ಟ ಪ್ರದವಾದ ಮೂರುತಿ |
ಇಷ್ಟಾರಿಷ್ಟಕ್ಕೆ ತೊಡಕದ ಮೂರುತಿ |
ಬಿಟ್ಟೆನೆಂದರು ಬಿಡಲೀಯದ ಮೂರುತಿ |
ನಷ್ಟ ಜನರಿಗಿನ್ನು ವಂಚಿಸೊ ಮೂರುತಿ |
ಮುಟ್ಟಿ ಭಜಿಸುವರಿಗೆ ಮುಂದೊಲಿದು |
ಸ್ಪಷ್ಟವಾಗಿ ಸುಳಿದಾಡುವ ಮೂರುತಿ |
ದಿಟ್ಟಿಸಿ ನೋಡಲು ಸರ್ವ ವಸ್ತುಗಳಿಗು |
ಘಟ್ಟಿಯಾಗಿ ಬಿಂಬವಾಗಿದ್ದ ಮೂರುತಿ |
ಇಷ್ಟ ದೈವವು ನಮ್ಮ ಗೋಪಾಲ ವಿಟ್ಠಲ |
ಕಷ್ಟ ಸಂಸಾರದ ಕಡಲು ದಾಟಿಪ ಮೂರುತಿ | || ೬ ||

ಆದಿ ತಾಳ

ತಾರಕ ಕಾರಣವಾದ ಮೂರುತಿ |
ತಾರಕ ಮಂತ್ರ ಉಪದೇಶಕ ಮೂರುತಿ |
ಅರಬ್ಧಾಂತ ಗಾಮಿನಿಯಾದ ಮೂರುತಿ |
ಭಾರಕರ್ತ ಅನಿಮಿತ್ಯ ಬಂಧು ಮೂರುತಿ |
ನಾರಿ ದ್ರೌಪದಿ ಅಭಿಮಾನಕಾಯ್ದ ಮೂರುತಿ |
ನಾರಿಯರ ವ್ರತಕೊಲಿದಂಥ ಮೂರುತಿ |
ಪೋರರ ಒಡಗೂಡಿ ಆಡಿದ ಮೂರುತಿ |
ನಾರಾಯಣಿರೂಪವಾದ ಶ್ರೀ ಮೂರುತಿ |

ವಾರಿಜೋದ್ಭವ ಪಿತ ಗೋಪಾಲ ವಿಟ್ಠಲ |
ಕಾರಣನಾಗೆನ್ನ ಕಾಯ್ವಂಥ ಮೂರುತಿ ॥ ೭ ॥

ಜತೆ

ಖಂಡಾಖಂಡ ಧ್ಯಾನ ಬಿಡದೆ ನಿತ್ಯವು ಮಾಡಾ |
(ಡ ಅ) ಖಂಡೇಶ ಗೋಪಾಲ ವಿಟ್ಠಲ ನಿನಗೆ ಪ್ರೊಲಿವಾ ॥ ೮ ॥

## ಸುಳಾದಿ ೭೦

ಬಿಂಬನಾದ ಶ್ರೀಹರಿಯು ಭಕ್ತವಾತ್ಸಲ್ಲ್ಯತೆ ಸ್ತೋತ್ರ ಪೂರ್ವಕ
ಶ್ರೀಹರಿಯು ಕ್ರಿಯಾ ರೂಪೋಪಾಸನೆ ವಿವರಾದಿ.

ರಾಗ ಭೈರವಿ ಧ್ರುವ ತಾಳ

ಸೃಷ್ಟಿಗೊಡಿಯು ಕೇಳೊಂದೆಷ್ಟು ನಾ ತುತಿಸಲು |
ದೃಷ್ಟಿಯಿಂದಲಿ ಎನ್ನ ಕಡಿಯು ನೋಡಲಿವಲ್ಲಿ |
ಅಷ್ಟ ಸೌಭಾಗ್ಯವೆಂಬೊ ಎಷ್ಟು ಮದವೊ ನಿನಗೆ |
ಘಟ್ಟ್ಯಾಗಿ ನೀನಲ್ಲಾ ದನ್ಯರಿಂದವೆಂದರೆ |
ಸೊಟ್ಟ ತಿರುವಿ ಮೊಗ ಅಟ್ಟವೇರುತಲಡೆ |
ಎಷ್ಟಿಲ್ಲವೆಂದು ಬಿಟ್ಟರಂಜುವನಲ್ಲಾ |
ಘಟ್ಟಿ ಭಕುತಿ ಪಾಶದಲಿ ಕಟ್ಟಿ ಎನ್ನುದರ ದೊ |
ಳಿಟ್ಟು ಕೊಂಬೆನಯ್ಯಾ ಜಿಷ್ಣುಸಖನೆ ಕೃಷ್ಣ |
ಭ್ರಷ್ಟ ಎಂತೆಂದು ದೂರ ದೃಷ್ಟಿಲಿ ನೋಡಿದರೆ |
ಬಿಟ್ಟುಕೊಡೊ ನಿನ್ನ ಭಕುತವತ್ಸಲನೆಂಬೊ ಬಿರುದು |
ಅಷ್ಟ ಸಂಪತ್ತು ಮತ್ತಿಷ್ಟು ಕೊಡೊ ಎಂತೆಂದು |
ಕಷ್ಟಬಡಿಸಿ ನಿನ್ನ ಕಾಡಿ ಬೇಡುವದಿಲ್ಲಾ |
ಕಷ್ಟ ಸಂಸಾರವೆಂಬ ಸುಳಿಯುವೊಳಗೆ ಎನ್ನ |
ಇಷ್ಟು ನೋಡೋದು ನಿನಗೆಷ್ಟು ಸುಖವೊ ಕಾಣೊ |
ಮೆಟ್ಟಿ ತುಳಿಯೊ ಬೆನ್ನಟ್ಟಿ ಬಾಹೋ ದುರಿತಾ |
ಕುಟ್ಟಿ ಬೀಸಾಡು ಬಲು ನಷ್ಟ ಸಂಸಾರ ಬೇರ |

ಸೃಷ್ಟ್ಯಾದಷ್ಟಕರ್ತಾ ಗೋಪಾಲ ವಿಟ್ಠಲರೇಯಾ ।
ಸ್ಪಷ್ಟರೂಪ ತೋರೊ ಮುಟ್ಟಿ ಭಜಿಸಲು ॥ ೧ ॥

ಮಟ್ಟ ತಾಳ

ಭಕುತರಿಗಾಗಿ ನೀ ಜಗವ ಪುಟ್ಟಿಸಿದಯ್ಯಾ ।
ಭಕುತರಿಗಾಗಿ ನೀ ಅವತಾರ ಮಾಡಿದಯ್ಯಾ ।
ಭಕುತರು ನಿನ್ನನ್ನು ಭಜಿಸದಿದ್ದರೆ ದೇವಾ ।
ಸಕಲ ಲೋಕರು ನಿನ್ನರುಹುವರೆಂತೊ ।
ಮುಕುತಿದಾಯಕ ಮೂಲ ದೈವವೆಂಬೋದು ।
ಸಕಲ ಲೋಕಕ್ಕೆ ಕರಿರಾಜ ತೋರಿಸಿದನು ।
ಉಕುತಿಗಳಿಂದ ಅರಸಲು ಬಾಹೋದು ।
ಪ್ರಕಟ ಮಾಡಿದಳಯ್ಯಾ ಶಕತಳು ದ್ರೌಪದಿ ।
ಸಕಲರಲ್ಲಿ ನೀನು ವ್ಯಾಪಕನೆಂಬೋದು ।
ಭಕುತ ಪ್ರಲ್ಹಾದ ಇರುವು ತೋರಿಸಿದನು ।
ಭಕುತರಿಂದ ನೀನು ಭಕುತರಾಧೀನ ದೇವಾ ।
ಭಕುತ ವತ್ಸಲ ನಮ್ಮ ಲಕುಮಿಯ ರಮಣಾ ।
ಉಕುತಿ ಪತಿ ನಾಥಾ ಗೋಪಾಲವಿಟ್ಠಲರೇಯಾ ।
ಭಕುತರ ಮುಂದೆ ನಿನ್ನ ಯುಕುತಿ ನಡಿಯುದಯ್ಯಾ ॥ ೨ ॥

ತ್ರಿವಿಡಿ ತಾಳ

ಶೃಂಗಾರ ಗದ್ದುಗೆ ಬಂಗಾರಾಭರಣಿಟ್ಟು ।
ರಂಗ ಪ್ರೊಲಿಯೊ ಎಂದು ಅಂಗೀಕರಿಸಲರಿಯೆ ।
ಮಂಗಳ ಮೂರುತಿ ಮನವೆ ಕುಳ್ಳಿರಪೀಠ ।
ಗಂಗಾಜನಕನೆಂದೆನಿಸಿಕೊಂಬೊದೆ ಸ್ನಾನ ।
ಅಂಗನೆ ದ್ರೌಪದಿ ಅಭಿಮಾನ ರಕ್ಷಕನೆಂಬ ।
ಶೃಂಗಾರ ಬಿರಿದೊ ವಸನಂಗಳು ನಿನಗೆ ।
ಅಂಗವೆ ಕೊರಡು ಶ್ರೀಗಂಧವೆ ತೇದಿಡುವೆನೊ ।
ಕಂಗಳೆರಡು ದೀಪ ಕರ ಉಭಯ ಚಾಮರ ।

ಅಂಗದೊಳಿದ್ದಷ್ಟು ಕಮಲವು ಕುಸುಮವೊ |
ಹಿಂಗದೆನ್ನ ಕಿಂಚಿತ್ತು ಭಕುತಿಯೆ ನೈವೇದ್ಯ |
ರಂಗಾ ದಿನದಿನದಿ ಮಾಡಿಸಿದ ಕರ್ಮವೆ ಕಪ್ಪವು |
ರಂಗ ಮಹಿಮನೆ ಜಠರಾಗ್ನಿಯೆ ಆರುತಿ ತು |
ರಂಗವದನ ಸರ್ವಾಂಗ ಸಮರ್ಪಿಸಿ ಕ |
ರಂಗಳು ಮುಗಿದೆ ಅಂತರಂಗದಿನಿಲ್ಲೊ ಸ್ವಾ |
ಯಂಗಾಯನ ನಾಮಾ ಗೋಪಾಲ ವಿಟ್ಠಲರೇಯಾ |
ಸಂಗವಿಡಿಸೊ ನಿನ್ನ ಡಿಂಗರಿಗರೊಡನೆ || ೩ ||

ಅಟ್ಟತಾಳ

ಒಡಿಯ ನಿನಗೆ ಮೊರೆಯಿಡುತಲಿದ್ದರೆ ಎನ್ನ |
ಕಡಿಯ ನೋಡಲುವಲ್ಲಿ ಬಡಿವಾರ ನಿನಗೆಷ್ಟು |
ತಡಿಯದೆ ನಾನೊಂದು ನುಡಿಯ ನುಡಿವೆನಯ್ಯಾ |
ಕಡು ಕುಷ್ಟ ನಾರುತ ಮಡುವಿನೊಳಗೆ ಸೇರು |
ಬಿಡದೆ ಬೆಟ್ಟವ ಪೊತ್ತು ಕಡಲೊಳಗಿರು ಇನ್ನು |
ಅಡವಿ ಸೂಕರ ಜನ್ಮ ಬರಲಿ ನಿನಗೆ |
ಕೆಡಲಿ ನಿನ್ನ ರೂಪ ಕಡುಘೋರನಾಗೆಲೊ |
ಒಡಲಿಗಿಲ್ಲದೆ ನೀನು ತಿರಕಿಯನೆ ಬೇಡು |
ಕೊಡಲಿಯ ಪಿಡಿದಿನ್ನು ಅಡಿವಿ ಸಂಚಾರನಾಗೊ |
ಮಡದಿಯ ಕಳಕೊಂಡು ಜಡಿಯ ಧರಿಸೊ ನೀನು |
ತುಡುಗ ದನ ಕಾಯೆಂದು ನುಡಿಯಲಿ ಜನರೆಲ್ಲ |
ಉಡುವೊ ವಸ್ತ್ರವಿಲ್ಲದೆ ಬತ್ತಲಾಗಿ ನಿಲ್ಲೊ |
ಕಡು ವೇಗದಲಿ ನೀ ಕಲ್ಕಿರೂಪನಾಗೊ |
ತಡಿಯದೆ ವರಗಳ ಕೊಡುವವನೆಂತೆಂದು |
ನುಡಿದೆನೊ ನಾ ಇಂಥ ಬಿಡಿಮಾತುಗಳ |
ಕಡು ದಯಾಸಾಗರ ಗೋಪಾಲ ವಿಟ್ಠಲ |
ಹಿಡಿದು ಬಿಡೆನೊದೇವಾ ಬಡವರಾಧಾರಿ || ೪ ||

ಆದಿ ತಾಳ

ಈಪರಿ ನುಡಿದರೆ ಪಾಪವೆಂಬಿಯಾ ಹರಿಯೆ |
ಪಾಪವೆಲ್ಲದೊಂದೊ ನಿನ್ನ ವ್ಯಾಪಾರ ಇಂಥದೊ |
ಪಾಪಗರಳಿನ ಕೂಪಾದೊಳಗೆ ಬಿದ್ದು ತಾ ಪಾ |
ರಾಗದೆ ನಿನ್ನ ಕೋಪದಿಂದಲಿ ನುಡಿದೆ |
ಪಾಪಿ ಎಂತೆಂದು ಎನ್ನ ಹೋಪಾ ನೂಕಿದರೆ |
ನೀ ಪತಿತಪಾವನನೆಂಬೊ ಬಿರುದುಂಟೊ ದೇವಾ |
ಮೋಪರಾಗಿಹೆ ನಾನು ಕಾಮಕ್ರೋಧದ ಕೆಳಗೆ |
ರಾಪುಮಾಡದೆ ದೋಷ ಉಪ್ಪೆಂದು ಹಾರಿಸು |
ಕುಪಥವ ತಪ್ಪಿಸು ಸುಪಥವ ತೋರಿಸು |
ಶ್ರೀಪತಿ ಎನ್ನಮೇಲೆ ನೀ ಪ್ರೀತಿಯನೆ ಮಾಡು |
ಆಪಾರ ನಾಮಂಗಳು ಲೇಪಿಸೆನ್ನ ಜಿಂಹೆಗೆ |
ಪಾಪಗಳ ಕಳೆಯೊ ದ್ರೌಪದಿಯ ಮಾನದೊಡಿಯ |
ಭಾಪುರೆ ನಮ್ಮ ಗೋಪಾಲ ವಿಟ್ಠಲರೇಯಾ |
ನೀ ಪರದೈವವೆಂದು ನಾ ಪಾದಪಿಡಿವೆನೊ || ೫ ||

ಜತೆ

ಎಂದಿಗಾದರು ನಿನ್ನ ಬಳಿಗೆ ಬಾಹೊದೆ ಸತ್ಯಾ |
ಇಂದೆ ಮುಂದಕೆ ಕರಿಯೊ ಗೋಪಾಲ ವಿಟ್ಠಲ || ೬ ||

## ಸುಳಾದಿ ೭೧

ಬಿಂಬನ ಗುಣೋತ್ಕರ್ಷಪೂರ್ವಕ, ಗುಣೋಪಾಸನೆ, ತತ್ಫಲ,
ಹೃತ್ಕಮಲಸ್ಥ ಬಿಂಬಪೂಜಾ ಧ್ಯಾನಪ್ರಕಾರ ನಾನಾವತಾರ ಐಕ್ಯಚಿಂತನೆ

ರಾಗ ಭೈರವಿ ಧ್ರುವತಾಳ

ನಿನ್ನ ನಿರ್ದೋಷನೆಂದು ನಾ ನಿರ್ದೋಷಿ ಆಗುವೆ |
ನಿನ್ನ ಸರ್ವಜ್ಞನೆಂದು ಜ್ಞಾನವಂತನಾಗುವೆ |
ನಿನ್ನ ಬಲವು ಪೂರ್ಣನೆಂದು ನಾ ಬಲಿಷ್ಟನಾಗುವೆ |
ನಿನ್ನ ಸುಖಪೂರ್ಣನೆಂದು ಇನ್ನು ನಾ ಸುಖಿಸುವೆ |

ನಿನ್ನ ವ್ಯಾಪ್ತನೆಂತೆಂದು ಇನ್ನು ಶೋಕ ನೀಗುವೆ |
ನಿನ್ನ ಸ್ವಾತಂತ್ರನೆಂದು ಎನ್ನ ಸ್ವಾತಂತ್ರಬಲಿಪೆ |
ನಿನ್ನ ಅನಾದಿ ಎಂದು ಇನ್ನು ನಿತ್ಯ ನಾನಾಹೆ |
ನಿನ್ನ ನಿರ್ಗುಣನೆಂದು ನಾ ನಿರ್ಗುಣನಾಗುವೆ |
ಭಿನ್ನ ಕಾಮರಹಿತ ಗೋಪಾಲ ವಿಟ್ಠಲ |
ನಿನ್ನಾಧೀನವು ದೇವಾ ಎನ್ನ ವಿಭವಾತಿಶಯಾ || ೧ ||

ಮಟ್ಟತಾಳ

ಸ್ವಾಮಿಯೆಂದು ನಿನ್ನುಪಾಸನಿಯನು ಮಾಡಿ |
ಸ್ವಾಮಿಯಾಗುವೆನಯ್ಯಾ ಎನಗಿಂದವರರಿಗೆ |
ಪ್ರೇಮನೆಂದು ನಿನ್ನುಪಾಸನಿಯನುಮಾಡಿ |
ಪ್ರೇಮಪಡಿವೆನಯ್ಯಾ ಎನ್ನಿಂದುತ್ತಮರ |
ಕಾಮಪೂರ್ಣನೆಂದು ನಿನ್ನ ವಂದಿಸಿ ಭಿನ್ನ |
ಕಾಮರಹಿತ ಆತ್ಮ ಕಾಮವುಳ್ಳವನಾಹೆ |
ಸಾಮಜ ವರದನೆ ಗೋಪಾಲ ವಿಟ್ಠಲ |
ತಾಮಸ ಜನ ವೈರಿ ಆ ಮಹಾಗುಣ ಪೂರ್ಣಾ || ೨ ||

ರೂಪಕ ತಾಳ

ಶುದ್ಧಾತ್ಮನೆಂದು ಅಶುದ್ಧ ಪದಾರ್ಥದಲಿ |
ಇದ್ದವ ನಾನಿನ್ನ ಬುದ್ಧಿಂದ ಕೊಂಡಾಡಿ |
ಅಧ್ಯಾತ್ಮ ಮೊದಲಾದ ತ್ರಿವಿಧ ತಾಪಂಗಳು |
ಒದ್ದು ನಾ ಬಿಡುವೆನು ನಿನ್ನ ವಂದಿಸಿ |
ಉದ್ಧಾರಕ ಸರ್ವ ಜಗಕೆ ನೀನೆಂತೆಂದು |
ಉದ್ಧರಿತನಾಗುವೆ ದಿನದಿನ ನಿನ್ನಿಂದ |
ಮಧ್ಯ ಆದಿ ಅಂತ್ಯ ರಹಿತನೆಂದು ನಿನ್ನ ತುತಿಸಿ |
ಶುದ್ಧವಾದ ನಿನ್ನ ಲೋಕದಿ ಹೊಂದಿರುವೆ |
ಛೇದ್ಯ ಭೇದ್ಯರಹಿತನೆಂದು ನಿನ್ನ ತುತಿಸಿ |
ಛೇದಾ ಭೇದಗಳಿಗೆ ದೂರನಾನಾಗಿರುವೆ |

ಭದ್ರಮೂರುತಿ ಚಲುವ ಗೋಪಾಲ ವಿಟ್ಠಲ |
ಸಾದೃಶ್ಯ ರಹಿತನೆಂದು ಧನ್ಯನಾನಾಗುವೆ || ೩ ||

ಝಂಪೆ ತಾಳ

ಜನನ ಮರಣರಹಿತನೆಂದು ನಿನ್ನನ್ನು ಭಜಿಸಿ |
ಜನನ ಮರಣಗಳಿಂದ ದೂರನಾಗುವೆನಯ್ಯಾ |
ತನುವು ಅಪ್ರಾಕೃತನೆಂದು ನಿನ್ನ ತಿಳಿದೆನ್ನ |
ತನುವಿನ ಭ್ರಮಣತ್ವನೆಲ್ಲ ನೀಗುವೆನಯ್ಯಾ |
ನಿನಗೆ ನಿನ್ನವತಾರಕ್ಕೈಕ್ಯವನು ಚಿಂತಿಸಿ |
ತೊನಗದಾನಂದದಲ್ಲಿ ನಿನ್ನ ವಿಷಯಕರಿಸುವೆ |
ನಿನಗೆ ನಿತ್ಯತೃಪ್ತ ಅನಿದ್ರನೆಂದರಿತು |
ಎನಗಿಪ್ಪಹಸಿವಿ ತೃಷಿ ನಿದ್ರಿಗಳ ನೀಗುವೆ |
ಅನಿಮಿಷರೊಡಿಯ ಗೋಪಾಲ ವಿಟ್ಠಲ ಎಂತು |
ನೆನವುವರು ನೀನವರ ಗುಣದಂತೆ ಗುಣವೀವೆ || ೪ ||

ತ್ರಿವಿಡಿ ತಾಳ

ತನು ಹೃದಯಾಕಾಶ ವನಜಮಂಡಲದಲ್ಲಿ |
ದಿನಕರನಂತೆ ತಾ ಹರಿ ನಿಲ್ಲಿಸಿ |
ಘನ ಜ್ಞಾನವೆಂಬ ಕಿರಣಗಳೆಲ್ಲ ಪಸರಿಸಿ |
ಮನವೆಂಬ ರಥವೇರಿ ತಿರುಗಾಡುತಾ |
ಅನುವಾದ ಬುದ್ಧಿಯನು ಅರುಣನ ಸಾರಥಿಮಾಡಿ |
ಘನವಾದ ಭವಾಂಬುಧಿ ವಣಗಿಸುವ |
ದಿನ ದಿನ ತನ್ನ ನೂತನ ಧ್ಯಾನವನ್ನೆನಿತ್ತು |
ಜನನಿಯ ಮೊಲೆಹಾಲು ಉಣಿಸನಯ್ಯಾ |
ತನು ಸಂಬಂಧಿಗಳಂತೆ ಬಂಧು ಅಲ್ಲವು ಕಾಣೊ |
ಅನಿಮಿತ್ಯ ಬಾಂಧವ ಅಪ್ರಮೇಯಾ |
ಸನಕಾದಿಗಳೊಡಿಯಾ ಗೋಪಾಲ ವಿಟ್ಠಲ |
ಅನುವಾಗಿ ಅವರವರ ಗುಣದಂತೆ ಉಪಾಸ್ಯಾ || ೫ ||

ಅಟ್ಟತಾಳ

ದುಃಖಿಷ್ಟರಿಗೆ ದುಃಖ ವ್ಯಕ್ತಿಮಾಡುವನಾಗಿ ।
ದುಃಖಿಯೆಂತೆಂದು ತಾ ಕರಿಸಿಕೊಂಬುವನಯ್ಯಾ ।
ರಕ್ಕಸಾರಿಗೆ ನೀಚರ ಮಾಡೋದರಿಂದ ।
ಚೊಕ್ಕ ತಾ ಅವರನೆಂತೆಂದು ಬಂಧನೆನಿಸಿಕೊಂಬ ।
ದಿಕ್ಕಾಗಿ ಅವರವರ ಸಾಧ್ಯ ಸಾಧನ ಕರ್ತಃ ।
ವ್ಯಕ್ತಿ ಮಾಡೋದರಿಂದ ಬಾಧ್ಯ ಬಾಧಕನೆಂಬ ।
ಉಕ್ತಿಲಿ ಕರಿಸಿಕೊಂಬುವ ಹೇಯತ್ವಗಳಿಂದ ।
ಲಕ್ಷುಮಿಪತಿ ಈವ ದಾವಾ ನಿಷೇಧವಿಲ್ಲಾ ।
ಭಕ್ತವತ್ಸಲ ದೇವ ಗೋಪಾಲ ವಿಟ್ಠಲ ।
ಸಿಕ್ಕದೆ ಮನೆ ಮನೆ ತುಕ್ಕುತ ಚರಿಸುವ ॥ ೬ ॥

ಆದಿ ತಾಳ

ತಾರಕ ಹರಿ ಮುಖ್ಯ ಕಾರಣ ಕರ್ತಾ ।
ಮಾರಾರಿ (ಮಾರ ಅರಿ) ಬೊಮ್ಮ ಕಾರಣ ನೆನದಿರಿ ।
ಆರಾರಿ ಗೊರಗಳು ನೀವರು ಇವರೆಲ್ಲ ।
ಬಾರದಿದ್ದರೆ ಸರಿ ಹರಿತರಿದೊಟ್ಟುವ ।
ಮೀರ ಶಕ್ಯರು ಅಲ್ಲ ಈ ಶಕ್ತಿಯು ಒಬ್ಬ ।
ರಾರಾದರು ವಿಚಾರಿಸೆ ನೋಡಲು ।
ಭಾರ ನಿಳಹೇ ಭೂದೇವಿಯಾಗೇಳ್ವೆವ ।
ತಾರ ಮಾಡುವ ಜೀವರ ಉದ್ಧರಿಸಲು ।
ಈರೇಳು ಜಗವ ಸೃಷ್ಟಿಸಿ ಒಡನಿದ್ದು ।
ಆರ ಭಾರಕೆ ಯೆಲ್ಲ ಕಾರಣನಾಗಿಹ ।
ಈ ರೀತಿ ಸೃಷ್ಟಿ ಸ್ಥಿತಿಲಯ ವ್ಯಾಪಾರೆಲ್ಲ ।
ಮಾರನಯ್ಯಗೆ ಕ್ರೀಡಿ ನಾರಿಗೆ ಸಂಪತ್ತು ।
ಮೂರು ವಿಧ ಜೀವರಗೆಲ್ಲ ಭೋಗ ।
ನಾರಾಯಣನ ವ್ಯಾಪಾರವಯ್ಯಾ ।

ವಾರಿಜ ಭವನಯ್ಯ ಗೋಪಾಲ ವಿಟ್ಠಲ ।
ದೂರಕೆ ದೂರತಿ ಸಾರಿಗೆ ಸಾರ್‍ಯಾ ॥ ೭ ॥

ಜತೆ

ಎಂತೆಂತು ತನ್ನನ್ನು ಭಜನಿಯು ಮಾಳ್ಪರಿಗೆ ।
ಅಂತಂತೆ ಆಗಿ ಪೊಳವಾ ಗೋಪಾಲ ವಿಟ್ಠಲ ।

---

## ಶ್ರೀ ಮಂತ್ರಾಲಯದ ಶ್ರೀ ರಾಘವೇಂದ್ರರ ಸ್ತೋತ್ರ.

### ಸುಳಾದಿ ೭೨

ರಾಗ ಭೈರವಿ ಧ್ರುವತಾಳ

ಧರಿಯುವೊಳಗೆ ನಮ್ಮ ಗುರು ರಾಘವೇಂದ್ರರಿನ್ನು ।
ಇರುತಿಪ್ಪ ವಿವರ ಅರಿದಷ್ಟು ವರಣಿಸುವೆ ।
ಸ್ಥಿರವಾಗಿ ಮಂತ್ರಾಲಯು ಪುರ ತುಂಗ ತೀರದಿ ।
ಹರಿಭಕ್ತ ಪ್ರಲ್ಹಾದ ವರ ಯಾಗ ಇಲ್ಲಿ ಮಾಡಿ ।
ಸುರರಿಗಮೃತ ಉಣಿಸಿ ಪರಿಪರಿಯು ಕ್ರೀಡಾ ಮಾಡಿ ।
ಪರಿಸಿದ್ಧನಾದನೆಂದು ಅರಿದು ಈ ಸ್ಥಳದಲ್ಲಿ ।
ಗುರುರಾಘವೇಂದ್ರರಾಯು ಶರೀರ ಪೋಗಾಡಿ ದಿಲ್ಲಿ ।
ಪರಲೋಕಕ್ಕೆ ಸಾಧನ ಪರಿಪೂರ್ತಿಯು ಮಾಡಿಕೊಂಡು ।
ಸಿರಿ ಕೃಷ್ಣನ್ನ ಚರಣಕ್ಕೆರಗಿ ಸಂತೋಷದಲ್ಲಿ ।
ಧರಿಯು ಮ್ಯಾಲಿದ್ದ ಜನರ ಪೊರೆಯುಬೇಕೆಂದೆನುತ ।
ಹರಿ ನುಡಿದನು ಇವರ ಪರಮ ದಯಾಳು ತಾನು ।
ಗುರುವಂತರ್ಯಾಮಿಯಾಗಿ ವರವಾ ಸೀಯುಲಿ ಜಗಕೆ ।
ನರಹರಿ ತಾನೆ ನಿಂದು ನಿತ್ಯ ಪೂಜೆಯುಗೊಂಡು ।
ಸಿರಿವುಳ್ಳ ಕೀರುತಿಯು ಸುರರ ಪಾಲಕ ಚಕ್ರ ।
ಧರ ನಾರಾಯಣ ತಾನೆ ವರಸನ್ನಿಧಾನನಾಗಿ ।

ವರಿಗೆ ಫಲತಂದೀವ ಇಹ ಪರದಲ್ಲಿನ್ನು ।
ಕರುಣಾಕರ ರಂಗ ಗೋಪಾಲ ವಿಟ್ಠಲ ತನ್ನ ।
ಶರಣರ ಪೊರೆವಂಥ ಚರಿಯಾ ಪರಿ ಪರಿ ಉಂಟೊ ॥ ೧ ॥

ಮಟ್ಟ ತಾಳ

ನರಹರಿ ಕೃಷ್ಣರಾಮ ಸಿರಿವೇದವ್ಯಾಸ ।
ಎರಡೆರಡು ನಾಲ್ಕು ಹರಿಯ ಮೂರ್ತಿಗಳು ।
ಪರಿವಾರ ಸಹವಾಗಿ ಸಿರಿಸಹಿತದಿ ನಿಂದು ।
ಸುರಗುರುವರ್ಯರು ಮಧ್ವಾಚಾರ್ಯರೆ ಮೊದಲಾಗಿ ।
ತರುವಾಯದಲಿನ್ನು ತರತಮ್ಯಾನುಸಾರ ।
ಪರಿ ಪರಿಯತಿಗಳು ಇರುತಿಪ್ಪರು ಇಲ್ಲಿ ।
ಹರುಷದಿಂದಲಿ ವೇದಗರೆದು ಶಾಸ್ತ್ರಗಳನ್ನು ।
ಪಂಪರಿ ಪುರಾಣ ಭಾರತಗಾನದಲಿ ।
ಸರಿ ಸರಿ ಬಂದಂತೆ ಸರಿಗಮವೆನುತಲಿ ।
ಭರದಿಂದಲಿ ಕುಣಿದು ಭಕುತಿಯಿಂದಲಿ ಇನ್ನು ।
ಹರಿಯ ಪೂಜಿಸುತ್ತ ಹಗಲಿರಳು ಬಿಡದೆ ।
ಪರತತ್ವದ ವಿವರ ಪರಿ ಪರಿ ಪೇಳುವರು ।
ಗರುಡ ವಾಹನ ರಂಗ ಗೋಪಾಲ ವಿಟ್ಠಲ ।
ಶರಣರ ಪಾಲಿಸುತ ಇರುತಿಪ್ಪನು ಇಲ್ಲಿ ॥ ೨ ॥

ತ್ರಿವಿಡಿ ತಾಳ

ನರ ಹರಿ ರೂಪನಾಗಿ ವಾಸವಾಗಿ ಇಲ್ಲಿ ।
ದುರಿತ ದುಷ್ಕೃತ ಬ್ರಹ್ಮೇತಿಗಳೋಡಿಸುವ ।
ಸಿರಿರಾಮನಾಗಿಲ್ಲಿ ಪರಿ ಪರಿ ಪರಿ ದೇಶಾಂ ।
ತರ ಅನ್ನ ಕಳಕೊಂಡು ನರರಿಲ್ಲಿ ಬಂದರೆ ।
ಸ್ಥಿರಪಟ್ಟ ಕಟ್ಟುವ ಸಿರಿಕೃಷ್ಣನಾಗಿಲ್ಲಿ ।
ಪರಿಪರಿಯಲಿ ಬಂದ ಪರಮಾತುರರಿಗೆ ।

ವರವೀವ ಪುತ್ರೋತ್ಸವ ಮುಂಜಿ ಮದುವೆಯು |
ಹರಕೆಗಳ ಕೈಕೊಂಡು ಹರುಷ ಬಡಿಸುವವರ |
ಸಿರಿವೇದವ್ಯಾಸನಿಲ್ಲಿ ಭರದಿಂದಲಿ ಬಂದ |
ದುರುವಾದಿಗಳನ್ನೆಲ್ಲ ಧುರದಿಂದ ಲೋಡಿಸಿ |
ಮುರಿದು ಅವರ ಶಾಸ್ತ್ರ ಹರಿಸರ್ವೋತ್ತಮನೆಂದು |
ಇರುವನಿಲ್ಲಿ ತೋರಿ ಶರಣ ಜನಕ ಇನ್ನು |
ವರಜ್ಞಾನ ಸುಧಿಯನ್ನು ಕರದುಕೊಡುತಲಿಪ್ಪ |
ಸಿರಿವಂದಿತ ಪಾದ ಗೋಪಾಲ ವಿಟ್ಠಲ |
ಪರಿ ಪರಿಯಲಿ ಇಲ್ಲಿ ವಾಲಗ ಕೈಕೊಂಬ || ೩ ||

ಅಟ್ಟತಾಳ

ರಾಘವೇಂದ್ರನೆಂಬೋ ರೂಪತಾನೆ ಆಗಿ |
ರಾಘವೇಂದ್ರನೆಂಬೊ ನಾಮ ಇಡಿಸಿಕೊಂಡು |
ರಾಘವೇಂದ್ರರಿನ್ನು ಮಾಡಿದಂಥ ಪುಣ್ಯ |
ಭೋಗವರಿತು ತನ್ನ ಭಾಗವತರ ಕಿರ್ತಿ |
ಸಾಗಿಸಿ ಸಲಹಲಿ ತ್ರಿಜಗದೊಳಗಿನ್ನು |
ಮೇಘ ಸುರಿದಂತಮೋಘ ಕೀರುತಿಯನು |
ರಾಘವ ಇವರಿಗೆ ರಾಜ್ಯದಿ ತಂದೀವ |
ರಾಘವೇಂದ್ರ ಮೂರ್ತಿ ಗೋಪಾಲ ವಿಟ್ಠಲ |
ಭಾಗವತರಲ್ಲಿ ಬಹು ಪೂಜೆಯನುಗೊಂಬ || ೪ ||

ಆದಿತಾಳ

ದಿನದಿನಕಿಲ್ಲಿ ನೂತನ ಪೂಜೆಗಳಾಗ್ವವು |
ದಿನದಿನಕಿಲ್ಲಿ ನೂತನ ವಾರ್ತೆಗಳಾಗ್ವವು |
ದಿನದಿನಕಿಲ್ಲಿ ನೂತನೋತ್ಸವಗಳಾಗ್ವವು |
ಜನರ ಸಂದಣಿ ಪ್ರತಿದಿನ ವಿಪ್ರಭೋಜನ |
ಜನನಾಥ ತಾನಿಲ್ಲಿ ಅನುವಾಗಿ ತಾನಿಂದು |

ಘನಮಹಿಮೆಯಿಂದಲಿ |
ಜನರ ಪಾಲಿಸುವದಕ್ಕನುಮಾನ ಸಲ್ಲದೊ |
ಗುಣಗಣ ಪರಿಪೂರ್ಣ ಗೋಪಾಲ ವಿಟ್ಠಲ |
ಅಣೋರಣಿ ಎಂಬುವಗೆ ಎಣೆಯಾರೊ ಜಗದೊಳಗೆ ॥ ೫ ॥

ಜತೆ

ಮಂತ್ರ ಸಿದ್ಧಿ ಕ್ಷೇತ್ರ ಇದು ನೋಡಿ ಕೋವಿದ |
ಮಂತ್ರ ಪ್ರತಿಪಾದ್ಯ ಗೋಪಾಲ ವಿಟ್ಠಲನಿಂದ ॥ ೬ ॥

॥ ಶ್ರೀಗುರು ಮಧ್ವೇಶ ಶ್ರೀಕೃಷ್ಣಾರ್ಪಣ ಮಸ್ತು ॥

---

ಸಧ್ಯ ದೊರೆತ ಶ್ರೀ ಗೋಪಾಲ ವಿಟ್ಠಲರ೬೨ ಸುಳಾದಿಗಳು.

---



## ಶ್ರೀ ವಿಜಯ ದಾಸರ ಶಿಷ್ಯರೂ, ಅಪರೋಕ್ಷ ಜ್ಞಾನಿಗಳೂ ಆದ,

# ಶ್ರೀ ಮೋಹನ ವಿಟ್ಠಲರ ಸುಳಾದಿಗಳು.

### ಸುಳಾದಿ (೧) ೬೩

ಪಂಚಭೇದ ತಾರತಮ್ಯ ವಿಷಯ, ಹರಿಭಕ್ತರಿಗೆ ಪಾಪ ಫಲ ಬಾರದು ಇತ್ಯಾದಿ.

ರಾಗ ಭೈರವಿ ಧ್ರುವ ತಾಳ

ಹರಿಯೆ ಸರ್ವೋತ್ತಮ ಸಿರಿಯು ಆತನ ರಾಣಿ ।
ಸರಸಿಜೋದ್ಭವ ಮಾರುತ ಪುತ್ರರೈಯಾ ।
ಸರಸ್ವತಿ ಭಾರತಿ ಗರುಡ ಶೇಷ ರುದ್ರ ।
ಹರಿಯ ರಾಣಿಯರು ನಾಲ್ಕೆರಡು ಮಂದಿ ಸೌ ।
ಪರಣಿ ವಾರುಣಿ ಗಿರಿಜಾ ಸುರಪತಿ ಕಾಮಾದ್ಯರ ।
ತರತಮ್ಯಜ್ಞಾನದಿಂದ ತಿಳಿಯಬೇಕು ।
ಸುರ ನದಿ ಪಿತ ನಮ್ಮ ಮೋಹನ ವಿಟ್ಠಲ ।
ಶರಣು ನೆನಿಸಿಬವಗೆ ಇನ್ನು ಸರಿಯು ಕಾಣೆ ॥ ೧ ॥

ಮಟ್ಟ ತಾಳ

ಜೀವ ಜೀವಕೆ ಭೇದ ಜಡ ಜಡಕೆ ಭೇದ ।
ಜೀವ ಜಡಕೆ ಭೇದ ಹರಿಗೆ ಜಡಕೆ ಭೇದ ।
ಜೀವ ಈಶಗೆ ಭೇದ ದೇವ ನಾರಾಯಣನ ।
ಭಾವ ಕ್ರಿಯಗಳಿಗೆ ಅಭೇದವನ್ನು ತಿಳಿದು ।
ಶ್ರೀ ವಲ್ಲಭ ನಮ್ಮ ಮೋಹನ ವಿಟ್ಠಲನ್ನ ।
ಪಾವನ ಚರಣ ನಾಮ ತೀವ್ರದಲಿ ಭಜಿಸು ॥ ೨ ॥

ತಾಳ ತ್ರಿವಿಡಿ

ಹರಿಯು ತನಗೆ ಬೇಕಾದವನ ಮನಸು ।
೧ ಎರಗಲೀಸನು ಅನ್ಯಸತಿಯರಲ್ಲಿ ।
೨ ಎರಗಿಸಿದರೆ ಬೇಗ ತಿರಿಗಿಸುವನಯ್ಯಾ ।

೩ ತಿರುಗಿಸದಿದ್ದರೆ ಬೆರೆಯ ಲೀಸಾ ।
೪ ಬೆರೆದರೆ ಬೆರೆಯಲಿ ರತಿಯ ಪುಟ್ಟಲೀಸಾ ।
೫ ರತಿ ಪುಟ್ಟಿದರೆ ಏನು ಕಾಕು ಮಾಡಲೀಸನಯ್ಯಾ ।
ಕರುಣಾಸಾಗರ ನಮ್ಮ ಮೋಹನ ವಿಟ್ಠಲನ ಪಾವನ ।
ಚರಣವನು ತೀವ್ರದಲಿ ಭಜಿಸೊ ॥ ೩ ॥

ಅಟ್ಟ ತಾಳ

ಮಾರುತ ಮತವ ಪೊಂದಿ ಹರಿಗೆ ಪರನೆಂದು ।
ಗುರು ಹಿರಿಯರ ಚರಣಕ್ಕೆರಗು ಆವಾಗಲು ।
ಹರಿಕಥಾಮೃತವ ಕರ್ಣದಿಂದಲಿ ಕೇಳು ।
ಹರಿ ನಿರ್ಮಾಲ್ಯವ ಶಿರದಲ್ಲಿ ಧರಿಸುತಿರು ।
ಹರಿ ನೈವೇದ್ಯವ ಹರುಷದಲಿ ಭುಂಜಿಸು ।
ಹರಿ ದಾಸರ ಕೂಡ ತಿರುಗು ಊಳಿಗನಂತೆ ।
ಹರಿ ಅವತಾರ ಸಿರಿ ಮೋಹನ ವಿಟ್ಠಲ ।
ಹರಿಯೆ ತ್ರಿಭುವನ ಧೊರೆ ಎಂದು ತಿಳಿಯೊ ॥ ೪ ॥

ಆದಿ ತಾಳ

ತನಗೆ ಬೇಕಾದವನು ಉನ್ನತ ವಾಸವ ಮಾಡಿ ।
ದಾನವರಿಗೆ ಕೊಡಿಸಿ ಪುಣ್ಯ ಭಕ್ತರಿಗೀವ ।
ಘನ್ನ ಮಹಿಮ ಲಕುಮಿಯನ್ನು ಬಿಟ್ಟರೇನು ಪ್ರ ।
ಪನ್ನರ ಬಿಡೆನೆಂಬ ಚಿನ್ಮಯ ಮೂರುತಿ ।
ಪನ್ನಗಾದ್ರಿ ನಿಲಯ ಮೋಹನ ವಿಟ್ಠಲನ್ನ ।
ಸನ್ನುತಿಸುವನಿಗೆ ಇನ್ನು ಸರಿಯು ಕಾಣೆ ॥ ೫ ॥

ಜತೆ

ತಾರತಮ್ಯ ಪಂಚಭೇದ ತಿಳಿಯದವಗೆ ।
ಮಾರುತಿ ಪ್ರಿಯಾ ಮೋಹನ ವಿಟ್ಠಲವೊಲಿಯಾ ॥ ೬ ॥

( ಧಾರವಾಡ ಸಂಗ್ರಹದಲ್ಲಿಯ ಜತೆ )

ಪನ್ನಗಾದ್ರಿ ನಿಲಯ ಮೋಹನ ವಿಟ್ಠಲನ ।
ಸನ್ನುತಿಸುವನಿಗೆ ಇನ್ನು ಸರಿಯು ಕಾಣೆ ।

## ಸುಳಾದಿ (೨) ೭೪

### ಸಾಧನ ವಿಚಾರ.

ರಾಗ ವಸಂತ ಭೈರವಿ ಧ್ರುವ ತಾಳ

ಹರಿದಾಸನು ನಾನಲ್ಲ ಹರಿಭಕುತಿ ಎನಗಿಲ್ಲ ।
ಧರೆಯೊಳು ಒಂದು ವೇಷವ ಧರಿಸಿ ತಿರುಗುವೆನು ನಾನು ।
ತರುಣಿ ಮಕ್ಕಳು ಸಹೋದರ ಮೊದಲಾದವರ ।
ಪೊರೆವೆ ನೆನುತ ಡಂಭ ವಿರಚಿಸಿ ಶರಣನೆಂತೆಂದು ।
ಕರೆಸಿ ಕೊಂಬೆನೊ ಬಹಿರದಲ್ಲಿ ಅನ್ಯರಿಂದಲೆ ।
ಸಿರಿಪತಿ ನಿನ್ನ ಪಾದ ಸ್ಮರಿಸದಲೆ ।
ಪರಮ ದಯಾಳು ಮೋಹನ್ನ ವಿಟ್ಠಲರೇಯ್ಯಾ ।
ಕರಣ ಶುದ್ಧ ನಾಗದೆ ತಿರುಗಿದೆ ಪೊಟ್ಟೆಗಾಗಿ ॥ ೧ ॥

ಮಟ್ಟ ತಾಳ

ದೇಶ ದೇಶಕೆ ಧನದ ಆಶೆಗಾಗಿ ಪೋಗಿ ।
ಕಾಶಿ ಗ್ಹೋಗುವೆನೆಂದು ಕಾಸು ಹಣವತಂದು ।
ಈ ಸಂಸಾರಕ್ಕೆ ನಾ ಸಮರ್ಪಿಸಿ ।
ತೋಷಪಡುವೆ ದುರಿತರಾಸಿ ಯಂಬರಿಯುದಲೆ ।
ಭೂಸುರರು ಎನ್ನ ವಾಸದಲ್ಲಿಗೆ ಬರಲು ।
ಗ್ರಾಸ ವೀಯದೆ ಅಪಹಾಸ ಮಾಡುವೇನು ।
ದೋಷ ವರ್ಜಿತ ನಮ್ಮ ಮೋಹನ ವಿಟ್ಠಲ ।
ಘಾಸಿ ಯಾದೆನೊ ಯಮ ಪಾಶಕ್ಕೆ ಗುರಿಯಾಗಿ ॥ ೨ ॥

ತ್ರಿವಿಡಿತಾಳ

ವಿತ್ತವಿದ್ದವನ ಮನಿಯೊಳು ಪೋಗಿ ಕುಳಿತು ಬಲು ।
ಉತ್ತಮ ನೆಂದವನ ಸ್ತೋತ್ರವ ಮಾಡಿ ।

ಹತ್ತೆಂಟು ಪುಸಿ ವಾರ್ತೆಪೇಳೆ ಆವನು ಈ ।
ಹೊತ್ತು ಬನ್ನಿರಿ ಎನ್ನೆ ಹರುಷದಿಂದ ।
ಹತ್ತೈದು ದೇವತಾರ್ಚನೆಯು ಸಾಮಗ್ರೀಯು ।
ತತ್ಥಳಿಸುವಂತೆ ವಿರಚಿಸುವೆ ।
ಸುತ್ತ ಧೂಪ ದೀಪ ವೆತ್ತಿನೈವೇದ್ಯವ ।
ಹತ್ತಿಲಿರಿಸಿಕೊಂಡು ಮುಸುಕು ನಿಟ್ಟು ।
ಚಿತ್ತಶುದ್ಧಿ ಪಿಲ್ಲದಲೆ ಬಹಿರದಲ್ಲಿಕರ ।
ವೆತ್ತಿ ಪಿಟಿ ಪಿಟಿ ಎಂದು ತುತಿಸುವೆನೊ ।
ಮತ್ತೇನು ಮಂತ್ರ ತಂತ್ರವು ಬಾರದೆನ್ನೆ ।
ಹತ್ತೀಲಿ ಸೇರಲೀಸೆನೊ ಸ್ವೋತ್ತುಮರ ।
ಎತ್ತ ನೋಡಲು ಎನ್ನ ಹತ್ತಿಲಿ ಹೊದ್ದಿದವರು ।
ಮುತ್ತಿಕೊಂಡು ಕಾಗೆಬಳಗದಂತೆ ।
ಚಿತ್ತಜನಯ್ಯಾ ಮೋಹನ ವಿಟ್ಠಲ ನಿನ್ನ ।
ಭೃತ್ಯನೆನಿಸಿ ಸ್ವಸ್ಥಚಿತ್ತದಿಂದಿರದ್ಹೋದೆ ॥ ೩ ॥

ಅಟ್ಟತಾಳ

ಕಾಮ ಕ್ರೋಧ ಲೋಭಮದ ಮತ್ಸರಂಗಗಳು ।
ರೋಮ ರೋಮ ಕೂಪದೊಳು ತುಂಬಿಕೊಂಡು ।
ಭೂಮಿ ಸುರ ದೇಹ ಬಂದೀಹ ದೆಂತೆಂಬ ।
ಈ ಮಹಾ ಗರ್ವದಿಂದಾಡುವೆ ಸುಜನರ ।
ಶ್ರೀ ಮನೋಹರ ನಿನ್ನ ತಾಮರ ಸಾಂಘ್ರಿನಿ ।
ನಿಷ್ಕಾಮದಿಂದಲಿ ಭಜಿಸಿ ಮರೆಪೋಗಲಿಲ್ಲವೊ ।
ಭೂಮಿ ಭಾರಕನಾಗಿ ತನುವ ಪೊರೆದೆ ನಿನ್ನ ।
ನಾಮಾಮೃತವನು ಪ್ರೇಮದಿ ಸವಿಯದೆ ।
ಸಾಮಜ ವರದ ಮೋಹನ್ನವಿಟ್ಠಲ ಆ ।
ನಾಮಧೇಯನಾದೆ ಪಾಮರರೊಡಗೂಡಿ ॥ ೪ ॥

ಆದಿ ತಾಳ

ಅನ್ಯರ ಪದಾರ್ಥವ ತಂದು ನಿನ್ನ ಮುಂದೆ ಸಮರ್ಪಿಸಲು ।
ಎನಗೇನು ಬರುವದೊ ಬಲುಪುಣ್ಯ ಆದರಿಂದ ।
ತನ್ನ ಕರದಿಂದಲಿ ಉದಕವನ್ನು ತಂದು ತುಲಸಿಯಿಂದ ।
ನಿನ್ನ ಪೂಜೆ ಮಾಡಲು ಪ್ರಸನ್ನನಾಗಿ ಪಾಲಿಸುವಿ ।
ಮುನ್ನೆ ಒಬ್ಬ ಕುಚೇಲಂಗೆ ಮನ್ನಿಸಿ ಪದವಿಯನಿತ್ತೆ ।
ನಿನ್ನ ಮಹಿಮೆ ಎಣಿಸರಾರೊ ಘನ್ನ ಮಹಿಮ ಮೋ ।
ಹನ್ನ ವಿಟ್ಠಲರೇಯಾ ಅನ್ಯರಲಿ ಪೋಗಿ ಪಾಪ ಕೊಂಡು ಬರುವೆನೊ ॥ ೫ ॥

ಜತೆ

ಕೆರೆ ನೀರು ಕೆರೆಗೆ ಚಲ್ಲಿ ವರಗಳು ಪಡೆದಂತೆ ।
ಕರುಣಾಳು ಮೋಹನ್ನ ವಿಟ್ಠಲ ನರ್ಚಿಸು ಮನವೆ ।

( ಜತೆ ಧಾರವಾಡದ ಪ್ರತಿ )

ಸಕಲಕ್ಕು ನಿನ್ನ ಬೇಡುವದೇನೊ ವಿಷಯದಾ ।
ಸಕುತಿ ಬಿಡಿಸೊ ನಮ್ಮ ಮೋಹನ ವಿಟ್ಠಲ ॥

---

## ಸುಳಾದಿ (೩) ೭೫

ಇಂದ್ರಿಯಗಳ ದುರ್ವ್ಯಾಪಾರ ಬಿಡಿಸಿ ಹರಿಪಾದದಿ ರತಿ ಕೊಡಲು ಪ್ರಾರ್ಥನೆ.

ರಾಗ ಕಾಂಬೋದಿ ಧ್ರುವತಾಳ

ಶ್ರೋತುರ ನಿನ್ನ ಕಥೆ ಕೇಳಲೊಲ್ಲದು ಪರ ।
ಮಾತುರದಿಂದ ದುರ್ವಾರ್ತೆ ಕೇಳುತಲಿದೆ ।
ನೇತುರ ನಿನ್ನ ಮೂರ್ತಿಯ ನೋಡದಲೆ ಗಾಡಿ ।
ಕಾರ್ತಿಯರನು ಮನದಣಿಯ ನೋಡುತಲಿದೆ ।
ಗಾತುರ ನಿನ್ನ ದಾಸರ ನಪ್ಪದೆ ಕಾ ।
ಮಾತುರದಿಂದ ಕಂಡವರ ನಪ್ಪುತಲಿದೆ ।

ಪೂತಪದಾರ್ಥವ ಭುಂಜಿಸದಲೆ ಜಿಂಹ್ವೆ ।
ಪಾತಕರ ದುಷ್ಟನ್ನ ಕೊಳುತಲಿದೆ ।
ಶ್ರೀ ತುಳಸೀ ಆಘ್ರಾಣಿಸದಲೆ ಮೂಗು ।
ಬಾತಿ ಬಸಿದ ಕೂಗಂಧ ಗೋಡುತಲಿದೆ ।
ಯಾತರಿಂದಲಿ ನಿನ್ನ ಮನಕೆ ಬಪ್ಪೆನೆದೇವ ।
ಕೋತಿ ಕೊರವಂಗೆ ಸಿಲ್ಕಿದಂತಾಯಿತು ।
ಜೋತಿರ್ಮಯ ನಮ್ಮ ಮೋಹನ ವಿಟ್ಠಲ ಬೆ ।
ನ್ನಾತು ಸಲಹದಿರೆ ಗತಿಯಾವುದು ಎನಗೆ ॥ ೧ ॥

ಮಟ್ಟತಾಳ

ಸಂಸಾರ ವೆಂತೆಂಬೊ ಸಾಗರದೊಳು ಶಿಲ್ಕಿ ।
ಹಿಂಸೆಬಡುತ ತೇಲಿ ಮುಳುಗುವವನ ಕಂಡು ।
ಕಂಸಾರಿ ನೀಕೈಯ್ಯ ಆನದಿದ್ದರೆ ಇನ್ನು ಕಡೆಹಾಯುವದೆಂತೊ ।
ಹಂಸವಾಹನನೈಯ್ಯಾ ಮೋಹನ್ನ ವಿಟ್ಠಲ ।
ಸಂಶಯುವೆಂತೆಂಬೊ ಸುಳಿಯೊಳು ಶಿಲ್ಕಿದನ ಕಡೆಹಾಯುವ
ದೆಂತೊ ಕಡೆಹಾಯುವದೆಂತೊ ॥ ೨ ॥

ತ್ರಿವಿಡಿ ತಾಳ

ವಾಕು ನಿನ್ನನು ಕೊಂಡಾಡ ಲೊಲ್ಲದೆ ಕೆಟ್ಟ ।
ಕಾಕು ಪೋಕರ ಕೂಡ ಕೆಲದಾಡುತಲಿದೆ ।
ಬೇಕೆಂದು ನಿನ್ನ ಪೂಜೆಯ ಮಾಡದಲೆ ಪಾಣಿ ।
ಕೂಕರ್ಮಕೊಳಗಾಗಿ ಭ್ರಷ್ಟಮಾಡುತಲಿದೆ ।
ಶ್ರೀ ಕಾಂತನ ಯಾತ್ರೆ ಮಾಡಲೊಲ್ಲದು ಪಾದ ।
ಬೇಕೆಂದು ಗನದಾಶೆಗೆ ತಿರುಗುತಲಿದೆ ।
ನೀಕೇಳೊ ಎರಡೈದೇಂದ್ರಿಯ ವ್ಯಾಪಾರ ।
ವಾಕಾಮಗೋಚರ ವಶವಾಗದು ಎನಗೆ ।
ಕಾಕೋದರ ಶಾಯಿ ಮೋಹನ್ನ ವಿಟ್ಠಲ ।
ನೀ ಕೈಯ್ಯ ಹಿಡಿಯದಿರೆ ಗತಿಯಾವುದೆನಗೆ ॥ ೩ ॥

### ಅಟ್ಟ ತಾಳ

ಪಂಚಜ್ಞಾನೇಂದ್ರಿಯ ಪಂಚಕರ್ಮೇಂದ್ರಿಯ ।
ಪಂಚಭೂತ ಪಂಚತನ್ಮಾತ್ರಗಳು ಪ್ರ ।
ಪಂಚಕ ಎಳದೊಯ್ದು ಘಾತಿಸುತಲಿವೆ ।
ಪಂಚಬಾಣನ್ನೈಯ್ಯ ಪಂಚಪ್ರಾಣ ಪ್ರಿಯ ।
ಪಂಚಪಾಂಡವಪಾಲ ಪಾಂಚಾಲಿ ವರದನೆ ।
ಪಂಚರೂಪಾತ್ಮಕ ಮೋಹನ ವಿಟ್ಠಲ ।
ಮಿಂಚಿನಂದದಿ ಪೊಳೆಯೋದೋಷನ ಕಳೆಯೋ ॥ ೪ ॥

### ಆದಿತಾಳ

ವೇದ ಶಾಸ್ತ್ರವ ಸಾಧು ಪುರಾಣ ।
ಓದಿದವನಲ್ಲ ಕೇಳಿದವನಲ್ಲ ।
ಮಾಧವನ ಪೂಜೆ ಮಾಡಿದವನಲ್ಲ ।
ವಾದಿಸುವೆ ಕುತರ್ಕವನು ಮಾಡಿ ।
ಬೋಧ ಮೂರುತಿ ನಮ್ಮ ಮೋಹನ ವಿಟ್ಠಲ ।
ನೀದಯದಿ ಕೈಪಿಡಿಯದೆಂತೊ ॥ ೫ ॥

### ಜತೆ

ತನುವೆ ತೀರಲಿ ನಿಚ್ಚ್ಯಾಗುಣವೆ ತೀರಲಿ ಎನ್ನ ।
ಮನ ನಿನ್ನಂಘ್ರಿಯಲಿಡೊ ಮೋಹನ್ನ ವಿಟ್ಠಲ ॥ ೬ ॥

ಶ್ರೀ ವಿಜಯದಾಸರ ಸಾಕ್ಷಾತ್ ಶಿಷ್ಯರೂ ಅಪರೋಕ್ಷ
ಜ್ಞಾನಿಗಳೂ ಆದ

# ಶ್ರೀ ವೇಣುಗೋಪಾಲ ವಿಟ್ಠಲರ

## ಸುಳಾದಿ (೧) ೬೬

ಶ್ರೀ ಹರಿ ಸೃಷ್ಟ್ಯಾದಿ ಅಷ್ಟ ಕರ್ತೃ ಸ್ವತಂತ್ರನು

ರಾಗ ಭೈರವಿ ಝಂಪೆ ತಾಳ

ಅಷ್ಟ ಮಹಾ ಮಂತ್ರಗಳು ನಿಷ್ಟಿಯಿಂದಲಿ ಕ್ಷುತು ।
ತೃಷ್ಣಿಗಳ ಕಟ್ಟಿ ಸಂತತ ಮಾಡಲು ।
ಸ್ಪಷ್ಟವಾಗುವದೇನೊ ನಿನಗೆ ಜ್ಞಾನವು ಬಲು ।
ಕಷ್ಟವಲ್ಲದೆ ಬರಿದೆ ಮನುಜ ಕೇಳೊ ।
ದೃಷ್ಟಿಯನು ಮುಚ್ಚಿ ಪ್ರತಿಷ್ಟಿಯಲಿ ಅಂಗಗಳು ।
ಬೊಟ್ಟಲಿಂದಲಿ ಎಷ್ಟು ಮುಟ್ಟಲೇನು ।
ಬೆಟ್ಟವನು ಏರಿ ಬಿಸಲೊಳಗೆ ಬಳಲಿಸಿ ದೇಹ ।
ಪುಷ್ಟವನು ತೊರೆದರೆ ಇಷ್ಟವಾಹದೆ ।
ಅಷ್ಟ ಮದಗಳು ಮುರಿದು ನಷ್ಟ ವಿಷಯವ ಜರಿದು ।
ಅಷ್ಟ ಇಷ್ಟೆಂದು ಹರಿಕೊಟ್ಟದೆನ್ನದೆ ।
ಮುಟ್ಟಿ ಮನವನು ತಿಳಿಯೊ ಸೃಷ್ಟಿಯೆ ಮೊದಲಾದ ।
ಅಷ್ಟ ಕರ್ತೃ ಜಗಕೆ ವಿಷ್ಣು ಎಂದೂ ।
ಗಟ್ಟಿ ಭಕುತಿಯಿಂದ ವಿಟ್ಠಲನ ದಾಸರಲ್ಲಿ ।
ಇಟ್ಟ ಚಿತ್ತಗೆ ದುರಿತ ಮುಟ್ಟುವವೆ ।
ಸೃಷ್ಟೇಶ ನಮ್ಮ ಸಿರಿ ವೇಣು ಗೋಪಾಲ ವರ ।
ಕೊಟ್ಟ ಬಳಿಕ ಕೆಡದು ಅನಂತ ಕಲ್ಪಕ್ಕೆ ॥ ೧ ॥

ಮಟ್ಟ ತಾಳ

ಸಿರಿ ದೇವಿ ತುತಿಸಲು ಕೇಳಿ ಆತುಮ ಸೃಷ್ಟಿಯನು ಮಾಡಿದ ।
ತರುವಾಯ ಮೊತ್ತಾದಿ ದೇವರಿಗೆ ಇತ್ತು ಸೂಕ್ಷ್ಮ ದೇಹ ತೆತ್ತು ।

ವರಗಳ ತೆಗೆದು ವಿಸ್ತಾರ ಮಾಡಿ ಸ ।
ರ್ವೋತ್ತಮ ಸಿರಿಹರಿ ಸೃಜಿಸಿದ ಬ್ರಹ್ಮಾಂಡ ।
ಹತ್ತು ನಾಲಕು ಲೋಕ ಸಪ್ತಸಾಗರ ಪ ।
ರ್ವತ್ತವೆ ಮೊದಲಾದ ಜಡ ಸೃಷ್ಟಿಯನು ಮಾಡಿ ।
ತೆತ್ತಿಸರ ಸಕಲ ಸ್ಥಳಗಳ ಸೇರಿಸೆ ।
ಇತ್ತ ಸಕಲ ಜನಕೆ ಸ್ಥೂಲ ದೇಹವ ನಿತ್ತು ।
ತತ್ತ ಸ್ಥಾನದಲ್ಲಿ ತಾನು ವ್ಯಾಪಿಸಿ ಸಕಲ ।
ಕರ್ತೃತ್ವ ಹರಿಯಾಗಿ ಸೃಜಿಸುವ ಸರ್ವರಿಗೆ ।
ಮಿತ್ರನು ತಾನಾಗಿ ಮನುಜನೊಳಗೆ ನಿಂದು ।
ಚಿತ್ರ ಪುತ್ರ ಗೃಹಾಮೋದಕ್ರಿಯಾಪ್ರೊತ್ತು ।
ಪತ್ನಿಗೆ ಸರ್ವದ್ವಾರದಿ ಕಾರಣನೋ ।
ಸತ್ಯ ಸಂಕಲ್ಪ ಸಿರಿವೇಣು ಗೋಪಾಲನ್ನ ।
ಸತ್ಯ ಸೃಷ್ಟಿಯ ವಿವರವನು ತಿಳಿದವ ಬಲು ಧನ್ಯಾ ॥ ೨ ॥

ರೂಪಕ ತಾಳ

ಸಿರಿವಿರಿಂಚಿ ಮೊದಲಾದ ತೃಣಾಂತ ಈ ।
ಗಿರಿ ವನಧಿ ಲೋಕಗಳು ವನಜಜಾಂಡವ ।
ಹರಿ ತಾನು ವ್ಯಾಪಿಸಿ ಒಬ್ಬರಿಂದ ಒಬ್ಬರ ಪಾಲಿಸುವ ।
ನರ ನಾಡಿ ನೊಳಗಿದ್ದು ಕುಟುಂಬ ರಕ್ಷಿಸುವ ।
ಧರೆ ಪತಿಗಳೊಳಗಿದ್ದು ಪೋಷಿಸುವ ।
ನರ ತಿರಿಯಾದಿ ನಾನಾ ಜೀವರಾಸಿಗೆ ಪರಿ ।
ಪರಿ ಪರಿಯ ಗ್ರಾಸವ ಸೃಜಿಸಿಟ್ಟು ಅವರವರ ।
ಅರಿತು ಕಾಲಗಳನ್ನು ಮೀರಗೊಡದೆ ದೇವನು ।
ಮರಿಯಾಗಿ ಸರುವರನ ಪೊರೆವನು ಭಾರಕರ್ತಾ ।
ಇರೊಂದು ಇನ್ನಿದರೊಳು ಬಲು ಪರಿ ವಿಧ ।
ಅರಿತ ಮಾನವನಿಗೆ ಸರಿಯಿಲ್ಲ ಧರೆಯೊಳು ।

ಪರಮ ಕಾರುಣಿಕ ಸಿರಿ ವೇಣು ಗೋಪಾಲ ವಿ |
ಸ್ತರ ಮಹಿಮನೆಂದು ಪೊಗಳುವನೆ ಸುಗುಣಾ |

ತ್ರಿವಿಡಿ ತಾಳ

ತನ್ನ ಇಚ್ಛೆಯಲಿಂದ ಜಗವ ಪಾಲಿಸುವ |
ತನ್ನ ಇಚ್ಛೆಯಲಿಂದ ಜಗವ ಸೃಜಿಸುವ |
ತನ್ನ ಇಚ್ಛೆಯಲಿಂದ ಜಗವ ಕೆಡಿಸುವ ತೆರ |
ವನ್ನು ಕೇಳಿ ಸಕಲ ಸಜ್ಜನರು ಅನಂತ ಜೀವರ |
ಮುನ್ನೆ ಕಾರಣಗಳನ್ನು ಮಾಡಿ ಸಂಹರಿಸುವನು |
ಇನ್ನು ತತ್ವಗಳನ್ನು ಸೂಕ್ಷ್ಮದಿಂದ |
ಬಣ್ಣಾ ಬಣ್ಣಗಳ ಐದುಸುವ ಹರಿ |
ತನ್ನ ಭಕ್ತರಾದ ಅನಂತ ತಾತ್ವಿಕರ |
ಚನ್ನಾಗಿ ಲಯವ ಐದುಸುವ ಕಡೆಗೆ |
ಇನ್ನಿತು ಸರ್ವರನ ಐದಿಸಿ ಆಪೋಲೆ |
ತನ್ನ ಸುತನ ಚರ್ಮವನ್ನೆ ತೆಗೆದು |
ಸಣ್ಣರಂತೆ ಶಿರಕೆ ಸುತ್ತಿ ಕುಣಿವನು |
ತನ್ನಿತೆ ಸಿರಿ ವ್ಯಾಪಾರಾ ಬಿಡಿಸುವ |
ಘನ್ನ ಸಂಸಾರದೊಳಗೆ ಆಗುವ ಲಯಕ್ರಿಯಾ |
ಅನಂತ ವಿಧಗಳಿಗೆ ಹರಿ ಕಾರಣವೆನ್ನುತ ಸುಖಿಸುವ |
ಗೆನಿತೊ ಸುಖಗಳು ಬಣ್ಣಿಸಲಳವಲ್ಲ ಒಬ್ಬರಿಂದ |
ಪನ್ನಗಾದ್ರಿ ನಿವಾಸ ವೇಣುಗೋಪಾಲ ಭವ |
ವನ್ನೆ ದಾಟಿಸುವನು ಈ ವಿವರವನ್ನೇ ತಿಳಿಸಿ ॥ ೪ ॥

ಝಂಪೆ ತಾಳ

ಕಾಲಾ ದ್ರವ್ಯಾದಿ ಸುಖ ದುಃಖ ಜೀವೇಶ ವಿ |
ಶಾಲ ಕ್ರಿಯದ ತೊಡರು ಈಡು ವಚನ |
ಸೀಲ ದುಸ್ಸೀಲ ಕುಲಾಲ ಕ್ರಿಯಾದಿಗಳು |
ಶ್ರೀಲೋಲನಿತ್ತರೆ ಜ್ಞಾನ ವಾಹದೋ |

ಆ ಲಕುಮಿಯೊಳಗೆ ತಾನಿದ್ದು ಪ್ರಳಯಾಂತ ।
ಕಾಲ ಜ್ಞಾನವ ನಿತ್ತಾದಾರಂಭಿಸಿ ।
ಬಾಲಕಗೆ ಕ್ಷುಧಿಯಾಗೆ ಬಳಲುವಾ ಮಿತಕ್ಕೆ ।
ಆಲಿಂಗ ದೇಹದಿ ಮನೆಮಾಡಿ ಜೀವರಿಗೆ ।
ಕಾಲ ನಾಮಕ ಹರಿ ಯುಗಃಪ್ರವೃತ್ತ ಮೇಲು ।
ಕೆಳಗಾಗದಿರು ಇದರೊಳಗೆ ಇನ್ನು ಬಹು ।
ಸ್ಥೂಲ ಸೂಕ್ಷ್ಮಗಳು ಉಂಟು ಮತ್ತೆ ।
ಆಲದೆಲಿಯ ಶಾಯಿ ವೇಣು ಗೋಪಾಲ ಶುಭ ।
ಆಲಯವ ಸೇರುವಗೆ ಭಕ್ತರಲಿ ತಿಳಿಸುವಾ || ೫ ||

ಧ್ರುವ ತಾಳ

ಸ್ಮೃತಿ ರಹಿತಾದಲಿ ಕರ್ತನಾ ನಹುದಿನ್ನು ।
ಸತಿ ಪುತ್ರರಿಗೆ ಮಾತ್ರದಯ ಮಾಡುವ ।
ತೃತಿಯಾಕ್ಷವುಳ್ಳ ಸರ್ವ ಜೀವರಿಗೆ ।
ಮತಿ ತಿರೋಭೂತಾ ಮಾಡಿ ತಿರುಗಿಸುವ ।
ಕ್ಷಿತಿಯೊಳು ಊಚ ನೀಚ ಜೀವರಲ್ಲಿ ಸ್ಮೃತಿಗೆ ।
ಖತಿ ಸುಖಗಳು ಕೂಡಾ ನಾವಲ್ಲವೋ ।
ತೃತಿಯಾಗಳವಲ್ಲ ದಿತಿಸುತರು ಮೊದಲಿಲ್ಲ ।
ಕೃತು ಭುಜರಲ್ಲಾ ವೈಯ್ಯಾ ಸ್ವಾತಂತ್ರದಿ ।
ಪತಿತ ಪಾವನ ವೇಣು ಗೋಪಾಲರೇಯಾ ।
ದ್ಭುತ ಮಹಿಮನ ಲೀಲೆ ತಿಳಿಯೊ ಭಕ್ತಿಯ ಪಡೆಯೊ || ೬ ||

ಅಟ್ಟತಾಳ

ಸಿರಿ ದೇವಿ ಮೊದಲಾಗಿ ತೃಣಜೀವ ಕಡೆಯಾಗಿ ಬ ।
ಹಿರಂತರದಲ್ಲಿ ಪ್ರೇರಕ ನರಹರಿ ।
ಪರುವರ ಮನ ಮೊದಲಾದ ಇಂದ್ರಿಯಗಳೊಳು ।
ಬೆರೆತುಕೊಂಡಿಹನು ಹರಿತಾನು ಸ್ಥಿರವಕ್ಕು ।
ಪರಮ ಪುರುಷ ತಾನು ವೊಳಗೆ ನಿಯಾಮಕ ।

ಹೊರಗೆ ಅಧಿಷ್ಠಾನದಿಂದ ಉಪದೇಶ ।
ವರಾವರನರಿತು ಮಾಡುತಲಿ ವಿಹರಿಸುವ ವಿ ।
ಹರಿಸುವ ನರನ ತಪ್ಪೇನಯ್ಯಾ ಇದರ ಮೇಲೆ ತಿಳಿ ।
ದರೆ ಒಂದು ವ್ಯಾಪಾರ ಒಬ್ಬರ ವಶವಲ್ಲ ।
ಹರಿ ಸ್ವಾತಂತ್ರ ಸಿದ್ಧವೆನಿಸಿಕೊಂಬ ।
ಗರುವ ದೈವರ ದೇವ ವೇಣುಗೋಪಾಲ ವಿ ।
ಸ್ತರ ಮಾಡಿ ತೋರುವ ಮತ್ತು ವಿಚಾರಿಸೆ ।

ಆದಿ ತಾಳ

ಖಗರಾಜ ವರದನ್ನ ಜಗದೊಳು ವ್ಯಾಪ್ತನ್ನ।
ಅಗಣಿತ ಬಂಧ ಕ್ರಿಯಾ ವಿಗಡ ಮಾಡುವ ತನ್ನ।
ಬಗೆ ಬಗೆ ಶಕುತಿಯಿಂದ ಬಾಧೆ ಬಡಿಸುವ ।
ನಗುಹ ನೋಡಿ ತಾನು ಹಗಲಿರುಳೆನ್ನದೆ ।
ಸಿಗನ್ಯೈಯ್ಯಾ ಒಬ್ಬರಿಗೆ ಸಿಲಕಾನು ಸಿಲಕೆ ।
ಮಿಗೆಲೊಬ್ಬರಾಧೀನದವನಲ್ಲದನುಜಾರಿ ।
ನಿಗಮ ಗೋಚರ ಸಿರಿವೇಣು ಗೋಪಾಲರೇಯಾ ಈ ।
ಬಗೆಯಲ್ಲಿ ಬಂಧಕ ಶಕ್ತನಹುದೊ ತಿಳಿಯಬೇಕು ॥ ೮ ॥

ಜತೆ

ಸಿರಿ ಮೊದಲಾದ ಚೇತನ ಜಡಗಳ ಮೋಕ್ಷ ।
ಸಿರಿ ವೇಣು ಗೋಪಾಲನಾಧೀನ ತಿಳಿದವ ಸುಖಿಯೊ ॥ ೯ ॥

---

## ಸುಳಾದಿ (೨) ೭೭

ಸ್ತೋತ್ರ– ಭಕ್ತರ ಸಂಗ ವಿನಾ ಸಾಧನ ಬಗೆ ಅವುದಿಲ್ಲ.
ಭಕ್ತರ ಸಂಗವೇ ಮುಖ್ಯ.

ರಾಗ ಭೈರವಿ ಧ್ರುವ ತಾಳ

ಏಸೇಸು ಜನುಮಗಳು ಸೂಸಿ ಬಂದರೆ ಏನು ।
ಕಾಸಾವೀಸಗಳನ್ನು ಬಡೆನೋ ಬಡೆನೋ ।

ಶ್ರೀಶನಂಘ್ರಿಯು ಸತತ ಸೇವಿಪ ವಿಜಯಾಖ್ಯ ।
ದಾಸರ ಕರುಣ ವಿಶೇಷವಾಯಿತು ಎನಗೆ ।
ಆಶಿಯೆ ಮೊದಲಾದ ಅಖಿಳ ಬಂಧಾಂಬುಧಿಯು ।
ಈಸುವೆ ನಾನು ಇತರ ಕ್ಲೇಶ ಬಡೆನೋ ।
ಲೇಶವಾದರು ಸಿಲ್ಕಿದಾಚಿಗೆ ಪೋಪೆ ಅಲ್ಲಿ ।
ತೋಷ ಬಡುವೆ ಹರಿಯ ದಾಸರೊಡನೆ ।
ಈ ಶರೀರದ ಸುಖ ಲೇಸಾಗಿ ತಿಳಿಯೆ ಮ ।
ಹೀಷಿಯ ಕೂಡಿದಹಿ ಸಮೀಪ ತೆರನಂತೆ ।
ಲೇಸು ತೋರುತಲಿದೆ ಮನವೆ ನೀ ಕೇಳು ಮತ್ತೆ ।
ಘಾಸೆಯಲ್ಲದೆ ಒಂದು ಕಾಸಿನ ಲಾಭವಿಲ್ಲ ।
ದೋಷ ವಿದೂರ ನಮ್ಮ ವೇಣು ಗೋಪಾಲನಂಘ್ರಿ ।
ಶಾಶ್ವಿತ ನೆನವಿಲಿ ನೀ ಸೇರು ಭಕ್ತರೊಳಗೆ ॥ ೧ ॥

ಮಟ್ಟ ತಾಳ

ದೇಶ ಆಳುವದಿಲ್ಲ ಕೋಶ ಘಳಿಸಿ ಇಲ್ಲ ।
ದಾಸಿ ದಾಸರ ಪೋಷಣೆ ಮಾಡುವದಿಲ್ಲ ।
ಸಾಸಿರವನು ವಂಚಿಸದೆ ಸದನವಿಲ್ಲ ।
ಸೂಸಿದ ಸುಖವಿಲ್ಲಶೇಶುಪಾಶಗಳಿಲ್ಲಾ ।
ಈಸುವದ್ಯಾತಕೆ ವಿಷಯಗಳೊಳು ಬಿದ್ದು ।
ಭೂಸುರ ಜನ್ಮವು ದುರ್ಲಭವೋ ।
ನಾಶರಹಿತ ನಮ್ಮ ವೇಣು ಗೋಪಾಲನ್ನ ।
ದಾಸರ ಪಾದದಲಿ ವಾಸವಾಗು ಬೇಗ ।

ತ್ರಿವಿಡಿ ತಾಳ

ಜನನಿ ಅನುಜಾಗ್ರಜರು ಜನುಮ ಜನುಮದಿ ನಿನಗೆ ।
ಘನವಾಗಿ ಅತ್ತೆಲ್ಲಿ ಇದ್ದಿಲ್ಲವೇ ।
ಮನವೇ ಸತಿ ನಿನಗೆ ಅನಿಮಿತ್ಯಳೆಂದು ।
ಕನಸಿನಲ್ಯಾದರು ಕನಕರಿಸದಿರು ।

ತನು ಸಂಬಂಧಿಗಳಿವರು ನೆನೆದುಕೊ ನಿನ್ನೊಳಗೆ |
ಅನುದಿನ ಕೇಳಿ ಕೇಳಿ ದಣಿದೆಯೆಲ್ಲ |
ಹನುಮವಂದಿತ ನಮ್ಮ ವೇಣುಗೋಪಾಲನ್ನ |
ಅನುಸರಿಸಿ ಇರುತಿಹರ ಸೇರು ಅನುಮಾನಸಲ್ಲ || ೩ ||

ಅಟ್ಟ ತಾಳ

ಸಾಸಿರ ದೇಶವು ಸಾಸಿರ ಕಾಲವು |
ಸಾಸಿರ ಪಾತ್ರರು ಈಸು ಒಂದಿನ ಕೂಡೆ |
ಆಶೆ ಬಿಡದೆ ಪೂಜೆ ಏಸು ಮಾಡಿದರೇನು |
ಮೀಸಲ ಮನದಿಂದ ಶ್ರೀಗರ್ಪಿಸದಲೆ |
ಕಾಶಿಯೆ ಮೊದಲಾದ ದೇಶ ತಿರುಗಿವನ |
ನಾಸಿಯಾದರೇನು ಲೇಶವೊಲಿಯ ಹರಿ |
ವಾಸುದೇವ ನಮ್ಮ ವೇಣು ಗೋಪಾಲನ್ನ |
ದಾಸರ ತೋರ್ಪಡರ ದಾಸನಾಗದವ ||

ಆದಿ ತಾಳ

ಭಕ್ತಿ ಜ್ಞಾನ ವೈರಾಗ್ಯ ಸಕ್ತನಾಗಿ ಇರುತ ಪರಮಾ |
ಭಕ್ತರಾದ ಜನರಿಂದ ವ್ಯಕ್ತಿ ಉಕ್ತಿ ಭುಕ್ತನಾಗಿ |
ಶುಕ್ತಿ ರಜತ ತೋರಿದಂತೆ ಉಕ್ತಿ ನಾನು ಎಂಬುದೆಂದು |
ಶಕ್ತಿಯಿಂದ ನೆನೆದು ಸರ್ವಾಸಕ್ತಿಯುಸ್ಸು ಕಡಿಯಬೇಕು |
ಮುಕ್ತ ವಂದ್ಯ ಚರಣ ವೇಣು ಗೋಪಾಲನ್ನ |
ಭಕ್ತ ಸಂಗ ಸೇರು ಈ ದುರಕ್ತವನ್ನು ಜ್ಯಾರುಮನವೆ |

ಜತೆ

ಭಕುತರೊಳಿರುವಂಥ ಸುಖವಿಲ್ಲಾ ಸುಜನಂಗೆ |
ಲಕುಮಿ ವಲ್ಲಭ ವೇಣು ಗೋಪಾಲವೊಲಿದಂಗೆ |

## ಸುಳಾದಿ (೩) ೭೮

### ಸ್ತೋತ್ರ ಶ್ರೀ ಹರಿಭಕ್ತವಾತ್ಸಲ್ಯ, ಕಾರುಣಿ ಕತೆ

ರಾಗ ಮಾರವಿ ಧ್ರುವತಾಳ

ಏನಯ್ಯಾ ಸಿರಿಪತಿ ನಾನಿನ್ನನಂಬಿ ಇತರ ।
ಜ್ಞಾನವೇ ಮರೆದು ತನು ನಿನಗೊಪ್ಪಿಸಿ ।
ಹಾನಿ ವೃದ್ಧಿಗಳೆರಡು ಏನಾದರನ್ನ ನಿನ್ನ ।
ಧೀನ ವೆಂದು ನಿತ್ಯ ನಿಧಾನದಲ್ಲಿ ।
ನಾನಿಳ ಇತ್ತ ವಿಷಯ ಕಾನನಕ್ಕೆನ್ನೊಪ್ಪಿಸಿ ।
ನೀನಗುತ ಲಿಪ್ಪುದು ಸೋಜಿಗವೋ ।
ಆನಂದ ಶರಧಿಯಲ್ಲಿ ನಾನಾಗಿದ್ದ ಮನುಜ ।
ಹೀನ ಪೂಯಾವ ಸೇರಿದಂತಾಯಿತೋ ।
ಆನಘ ರಾಶಿಗಳು ಆವಾವ ಜನುಮದಲ್ಲಿ ।
ಏನೇನು ಮಾಡಿಸಿದ್ದು ಒದಗಿಸಿದಿಯೊ ।
ನಾನು ನಿನಗೆರವಾದ ದೇನಯ್ಯಾ ಕಾಪನಯ್ಯಾ ।
ಭಾನು ತೇಜನೆ ಭಕ್ತಾಧೀನ ಪ್ರೀಯಾ ।
ಆನಳಿನಭವ ರುದ್ರ ಇಂದ್ರಾದಿದಿವಿಜರಿಗೆ ।
ನೀನಲ್ಲದೆ ಎನಗಾರು ಗತಿಯೊ ।
ಶ್ರೀನಾಥನಾದ ವೇಣು ಗೋಪಾಲ ವಿಟ್ಠಲರೇಯಾ ।
ಅನಾದಿಯಿಂದ ನೋಡು ನಿನ್ನಾಧೀನವೆ ಸಿದ್ಧಾ ॥ ೧ ॥

ಮಟ್ಟತಾಳ

ತಾಯಿ ತನ್ನ ಶಿಶುವು ತವಕದಿಂದಲಿ ಎತ್ತಿ ।
ಬಾಯಿಲೆ ಕೊಂಡಾಡಿ ಮುದ್ದಿಸಿ ಮೊಲೆಗೊಟ್ಟು ।
ಕಾಯುವ ಪೋಷಿಸುತ ಕರುಣವ ತಪ್ಪಿ ಒಮ್ಮೆ ।
ನೋಯದಾ ನುಡಿಯಿಂದ ನುಡಿದು ಬಡಿದು ನೂಕೆ ।
ಆ ಎಂದಬ್ಬರಸಿ ಅಳುವದಲ್ಲದೆ ಒಮ್ಮೆ ।

ಧೀ ಎನ್ನಲಾಪದೆ ಚಿತ್ತ ಪಲ್ಲಟ ಮಾಡಿ |
ಕಾಯಜ ಪಿತ ನೀನು ಜನನಿಯು |
ಮಾಯದ ಗುಣ ಮೂರು ಮೀರಿದ ಮಹಾ ಮಹಿಮ |
ತಾಯಿ ನೀನು ಸಕಲ ಜಗಕೆ ಜನಕನಾಗಿ |
ತಂದೆ ನೀನು ಜಗಕೆ ಪೋಷಣೆ ಭಿಷೆಯಿಂದ |
ಈಯುಬಲ್ಲವರೊಡಿಯ ವೇಣು ಗೋಪಾಲ ವಿಟ್ಠಲ |
ಧೇಯ ನೀನು ಸತ್ಯ ನಿನ್ನ ಬಿಡಿನೊನಾನ್ತು || ೩ ||

ತ್ರಿವಿಡಿ ತಾಳ

ಭಕುತರ ಸಲಹುವಿ ಭಕುತರಗಲಿ ಸೂವಿ |
ಭಕುತರ ವಶದಿ ಸಂಚರಿಸುವೆ ಅಯ್ಯ ನೀನು |
ಭಕುತರೆ ನಿನ್ನ ಬಳಗ ಭಕುತರೆ ನಿನ್ನ ಬಂಧು |
ಭಕುತರೆ ನಿನ್ನ ಶಳದು ಬದಿಗೆ ತಾಹರಯ್ಯ |
ಭಕುತರು ಇಲ್ಲದಿರೆ ಏಕಾನಲ್ಲವೆ ನೀನು |
ಉಕುತಿ ಶಕುತಿಗಳು ಆರಗೋಸುಗವಯ್ಯಾ |
ಭಕುತರೊಡಿಯನಾಗಿ ಅನಾದಿಯಿಂದ ಮೆರೆವ |
ಲಕುಮಿ ವಲ್ಲಭ ವೇಣು ಗೋಪಾಲ ವಿಟ್ಠಲ |
ಭಕುತರೊಳ್ಕೇವಲ ಶಕಲನ ಸಲಹಯ್ಯಾ ⁝

ಅಟ್ಟ ತಾಳ

ಮಂಗಳಾಂಗನೆ ಶ್ರೀರಂಗಾಂಬುಧಿ |
ತಿಂಗಳನ ಪ್ರಭೆ ಪಿಂಗೊಳಿಸುವ ನಖ |
ಅಂಗುಲಿಯ ಸನ್ನೆ ಪೊಂಗೊಳನಾದ |
ಸಂಗೀತದಿ ಗೋಪ ಅಂಗನಿಯರಸಾ |
ಕಂಗೊಳಿಸಿದ ಶುಭಾಂಗಾ ರಿಪು ಕುಲ |
ಭಂಗ ಮಾಡಿದ ಭವ್ಯ ಮೂರುತಿಯೆ |
ತುಂಗ ವೇಣು ಗೋಪಾಲ ವಿಟ್ಠಲ |
ಹಂಗಿಸುವ ದೇಕಾ ಪಾಂಗಾದಲಿ ನೋಡೊ || ೪ ||

ಆದಿ ತಾಳ

ಸುಖವಾದರೆ ಬಿಡೆ ದುಃಖವಾದರೆ ಬಿಡೆ ।
ಅಖಿಳವು ಒದಗಿಸಿದರೆ ನಾ ನಿನ್ನ ಬಿಡೆನೈಯ್ಯಾ ।
ಸಖ ನೀ ಎನಗೆ ಅನಾದಿ ಕಾಲದಲಿಂದ ।
ಮುಖತಾ ಪೇಳುವದೇಕೆ ಪ್ರಕಟವಾದ ಪರಿ ।
ಸುಖ ಗುಣ ಗಣ ಪೂರ್ಣ ವೇಣು ಗೋಪಾಲ ವಿಟ್ಠಲ ।
ಮುಖಜ ಮುಕ್ತ್ಯಾದವರ ಯುಕುತಿಯಿಂದಲಿ ಪೊರದೆ ॥ ೫ ॥

ಜತೆ

ಆವದಾದರು ನಿನ್ನ ಸೇವಕ ನಾ ಸತ್ಯ ।
ದೇವ ವೇಣು ಗೋಪಾಲ ವಿಟ್ಠಲ ನೀ ಬಿಡುವಾಯಾ ॥ ೬ ॥

---

## ಸುಳಾದಿ (೪) ೭೯

### ಶ್ರೀ ಪ್ರಾಣದೇವರ ಸ್ತೋತ್ರ

ರಾಗ ಭೈರವಿ ಧ್ರುವತಾಳ

ಪರಮ ಮುಖ್ಯ ಪ್ರಾಣನೆ ಪರಿಶುದ್ಧ ಚರಿತನೆ।
ಪರಿಪೂರ್ಣ ಭಕ್ತಿಯುಳ್ಳಪಾರ ಮಹಿಮನೆ ।
ವರಣಿಪರಾರು ನಿನ್ನ ವದನದಿಂದಲಿ ಗುರುವೆ ।
ನರಹರಿಯು ನವವಿಧ ದ್ವೇಷಿಹಂತಾ ।
ಧರವಲ್ಲ ಧರವಲ್ಲ ತರಣಿ ಭಾರತಿ ಮುಕ್ತ ।
ಸುರರಿಗೆ ಸುಲಭವಲ್ಲ ಸುಖ ಪೂರ್ಣನೆ ।
ಶರಧಿಯ ಉದಕ ನಭ ಭರಿತವಾದುಗಣಣೆ ।
ತೋರೆ ಮಳಲು ಮಹಾ ಮಳೆಯ ಬಿಂದು ।
ಕರಣಾದಿ ವಿಸ್ತರಿಸಿ ಎಣಿಸಿ ಗುಣಿಪರಾರು ।
ವರ ದೇವ (ವೇದ) ವೇದ್ಯಾ ಸರ್ವಜಡಚೇತನಾ ।
ಇರುವ ಪುಟ್ಟುವ ಮುಂದೆ ಸರಸಿಜ ಭವಮುಕ್ತ ।

ಸುರರು ಸುಗುಣ ಒಂದು ಅಧಿಕ ರೆನಿಸಿ |
ಕರುಣಿಸಿ ಭೂಮಿಯೊಳು ವರದೇಹವನು ಇತ್ತು |
ಹರಿ ನಿನ್ನ ಮತದೊಳು ತಂದಿಟ್ಟರೊ |
ಮರಿಯಾದೆ ಮತ್ತೆ ಎನ್ನ ಮನದೊಳು ಪೊಕ್ಕು ಮತ್ತೆ |
ಗುರುಗಳ ಪಾದ ಭಕುತಿ ಎರಕಮಾಡಿ |
ದರು ಮತ್ತೆ ಆದರೊಳು ಗುರುಗಳು |
ಕರುಣಿಸೆನ್ನ ಉದರದೊಳು ತಿಳುಹಿ ಸ್ತೋತ್ರ ನುಡಿಸಿದಂತೆ |
ಬರಿವೆನಯ್ಯಾ ನಾನು ಒಂದರಿತವನಲ್ಲ |
ಸರುವ ತಂತ್ರ ನೀನೆ ಕಾರಣನೊ |
ಗಿರಿಜೇಶಾದಿಗಳೆಲ್ಲ ಕರಮುಗಿದು ಕೊಂಡಾಡುತ |
ಭರದ ಭಕುತಿಯೊಳು ಲೋಲ್ಯಾಡಲು ಈ |
ನರನೇನು ಎಂದು ದೂರನೋಡಲಾಗದು ಇನ್ನು |
ದುರವಿಯಿಂದ ರಿಕ್ತನಿಗೆ ಪೂಜೆಯುಂಟು |
ಪರಿಪಾಲಿಸಿ ಎನ್ನನು ಕರವದು ವಚನವ |
ನೆರೆನಂಬಿದವ ನಿನ್ನ ದಾಸರನು |
ದುರುಳ ಭಂಜನ ವೇಣುಗೋಪಾಲ ವಿಟ್ಠಲಂಗವ |
ಸರದಾಳು ನೀನು ಕೊಡುವೆ ತ್ರಿವಿಧ ಜೀವರಿಗೆ ||೧||

ಮಟ್ಟತಾಳ

ಪ್ರತಿ ಪ್ರತಿ ಭೂಮಿಗಳು ಪ್ರತಿ ಪ್ರತಿವನಧಿಗಳು |
ಪ್ರತಿ ಪ್ರತಿ ಲೋಕಗಳು ಪ್ರತಿ ಪ್ರತಿ ಸ್ಥಾನಗಳು |
ಪ್ರತಿ ಪ್ರತಿ ಪರ್ವತ ಪ್ರತಿ ಪ್ರತಿ ಆವರಣ |
ಪ್ರತಿ ಪ್ರತಿ ವೇದ ಪ್ರತಿ ಪ್ರತಿ ಕಾಲಾ |
ಪ್ರತಿ ಪ್ರತಿ ದೇಶ ಪ್ರತಿ ಪ್ರತಿ ನಭ |
ಪ್ರತಿ ಪ್ರತಿ ಜೀವರಿಗೆ ಪ್ರತಿ ಪ್ರತಿ ದೇಹಗಳು |
ಪ್ರತಿ ಪ್ರತಿ ಗಳಲ್ಲಿ ಸತತ ನಿನ್ನಯ ರೂಪ |
ತತು ತತು ಆಕಾರ ತತು ವರ್ನಾ |

ತತು ನಾಮದಲ್ಲಿ ಒಳಗೆ ಹೊರಗೆ ಅಂಶ |
ಪ್ರತತನಾಗಿ ಇದ್ದು ಪರಮ ಗುಣಗಳಲ್ಲಿ |
ಸತಿಯ ಸಹಿತ ಸರ್ವಾಕಾರಾ ವ್ಯಾಪ್ತನಾಗಿ |
ರತಿ ಪತಿ ಜನಕನ ನುತಿಸಿ ಪೂಜಿಸಿ ಭ |
ಕುತಿ ಭರಿತ ವೇದೋಕುತ ಮತ್ಯಾನು ಗುಣಗಳನ್ನ |
ವಿತತದಿ ಕೊಂಡಾಡಿದಿ ವಿಶ್ವದೊಳಗೆ ಜೀವ |
ಗತನಾದ ಹರಿಯ ಗುಣಗಳ ಮಹಿಮೆಗಳ |
ಅತಿಶಯದಲಿ ತಿಳಿದು ಅನಂತ ತ್ರಿರೂಪ |
ತತು ತತು ಸ್ಥಾನದಲಿ ನಿನ್ನ ಪೂಜಿಪೆ ಸತ್ಯಾ |
ಮಿತ ಮಹಿಮಾ ಮೂಲ ಸ್ಥಾನದಿ ಬಿಂಬನ್ನ |
ಕೃತಿ ಧ್ಯಾನ ಮಾಳ್ಪೆ ಸರ್ವ ಸಂಧಾನದಿ ಕ್ಲಿ |
ಪುತ ಕಾಲದಲಿ ಕಾಂಬಿನೆ ಪ್ರವಾಹವತು |
ಇತರ ರೂಪತ್ರಯುವ ಅಲ್ಲಲ್ಲೆ ನುತಿ ಗೈವೆ |
ಪೃಥಿವಿ ಮೊದಲಾದಾವರಣದಿಂದಲಿ ಯು |
ಕುತವಾದ ಬೊಮ್ಮಾಂಡವ ಮತ್ತೆ ಉಂಗುಟದಿಂದ |
ಗತಿ ತಪ್ಪದಂತೆ ಗಮನಾಗಮನಗಳನು ಯೈದಿ |
ಸ್ಥಿತವಾಗುವದೆ ಏನೇನು ಮಾಡಿದರದು |
ಕೃತಿ ಪತಿ ವೇಣು ಗೋಪಾಲ ವಿಟ್ಠಲನ್ನಾ |
ಶ್ರಿತನಾಗಿ ಸ್ವಲ್ಪ ಕೃತಿ ತೋರುವ ಜಗಕೆ ॥ ೨ ॥

ರೂಪಕತಾಳ

ಮಿನಗುವ ಮೂರಾದ ಪರಿಚ್ಛೇದಗಳಲ್ಲಿ |
ಘನವ್ಯಾಪಾರದ ಸಿರಿ ಭೂದುರ್ಗಾರಮಣನ್ನ |
ಅನುದಿನ ಪೂಜಿಸುತ ಅಲ್ಲಿಂದ ಸೂಕ್ಷ್ಮ |
ತನು ಮೊದಲಾದ ಈ ಸ್ಥೂಲ ದೇಹಗಳಲ್ಲಿ |
ಅನಿಮಿಷರು ಇರುವರು ವಿನುತ ಸುತ ಮೊದಲಾದ |
ದನುಜರು ಅಲ್ಲಲ್ಲಿ ಪೊಂದಿಕೊಂಡಿಪ್ಪರು |

ಮನನ ಮಾಡುತ ದ್ವೈತತಾರತಮ್ಯದಿಂದ |
ದನುಜೇಂದ್ರಗೆ ನೀನೆ ಪ್ರೇರಕನೊ ಅಸುರ |
ಗಣಕೆ ಸುರರೆಲ್ಲರು ಪ್ರೇರಕರೊ ನಿನ್ನಿಂದ |
ತೃಣ ಜೀವ ಕಡಿಯಾಗಿ ವಾಣಿಮೊದಲಾದ |
ತೃಣ ತುಲ್ಯರಯ್ಯಾ ನೀ ಚೇಷ್ಟೆ ಮಾಡಿಸದಿರಲು |
ವನ ಜಾಂಡದೊಡೆಯ ಸಿರಿವೇಣು ಗೋಪಾಲವಿಟ್ಠಲ |
ಅನುಕೂಲವಾಗಿ ನಿನ್ನೊಳು ಪೊಂದಿಪೊಲಿದಿಪ್ಪಾ |

ಝಂಪೆತಾಳ

ನಿನ್ನಿಚ್ಛೆಯಾದರೆ ಹರಿ ಇಚ್ಛೆಯಾದಂತೆ |
ನಿನ್ನ ಬಲವಾಗೆ ಹರಿಯು ಬಲವಾದಂತೆ |
ನಿನ್ನ ದಯುವಾಗಲು ಹರಿಯು ದಯುವಾದಂತೆ |
ನಿನ್ನ ಒಲಿಸಲು ಹರಿಯು ಒಲಿಸಿದಂತೆ |
ನಿನ್ನ ಪೊಗಳಲಾಗಿ ಹರಿಯು ಪೊಗಳಿದಂತೆ |
ನಿನ್ನ ಗಾಯನ ಹರಿಯುಗಾಯನದಂತೆ |
ನಿನ್ನ ಪೂಜೆಯು ಮಾಡೆ ಹರಿಯುಪೂಜಿಸಿದಂತೆ |
ನಿನ್ನ ಪೊಂದಿರಲು ಹರಿಯು ಪೊಂದಿದಂತೆ |
ನಿನ್ನಾಜ್ಞ ಮೀರಿ ನಡೆದವರುಂಟೆ ಜಗದೊಳಗೆ |
ನಿನ್ನ ಚಾರಿತ್ರೆಗಳಿಗೀಡುಂಟೆ ಜಗದೊಳಗೆ |
ನಿನ್ನ ಪೋಲುವರಾರು ಘನ್ನದಯ ಸುರ ತರುವೆ |
ಅನಂತ ಚರಿತ ಗುಣಪೂರ್ಣ ಗುರುವೆ |
ಚನ್ನ ಮಾರುತಿ ವೇಣು ಗೋಪಾಲ ವಿಟ್ಠಲ |
ನಿನ್ನಾಧೀನದಿ ಜಗದ ವ್ಯಾಪಾರ ಗೈಸುವಾ | || ೪ ||

ತ್ರಿವಿಡಿತಾಳ

ಆವಾವಾ ಲೋಕದೊಳಗೆ ನಿನಗೆ ಪ್ರತಿ ಭಟರಿಲ್ಲ |
ಅವಾವಾ ಲೋಕಗಳು ನೀನು ಅರಿಯದವಲ್ಲ |
ಆವಾವ ಜೀವರಿಗೆ ಆಗುವ ಗತಿಗಳು |

ದೇವ ನಿನ್ನಿಂದಲೆ ತಾ ಒಂದು ಮಾಳ್ಪದಿಲ್ಲಾ |
ಈ ವನಜ ಜಾಂಡವು ಹಿಂದೆ ಮುಂದಾಗುವ |
ಆ ವನಜಾಂಡದಲಿ ಆಗುವದೆಲ್ಲ |
ಜೀವರ ಗತಿ ಜಡಭಾವ ವಿಶೇಷಗಳು |
ಸಾವಧಾನದಿ ನಿನ್ನ ಚಿತ್ತದಲಿ ತಿಳಿಸಯ್ಯಾ |
ಈ ವಿಧವಾದ ನಿನ್ನಯ ಶಕುತಿಗೆ ಪತ್ತೆ |
ಆವನಯ್ಯಾ ಈಡು ಈ ಜಗದಿ |
ಪೂ ವಿಲ್ಲನಯ್ಯಾ ಸಿರಿ ವೇಣುಗೋಪಾಲ ವಿಟ್ಠಲ |
ಧಾವಂತ ವಿಲ್ಲದೆ ನಿನ್ನ ಸಲಹುವ ಅಧಿಕಾ || ೫ ||

ಅಟ್ಟತಾಳ

ಅಪರಮಿತ ಅಂಶ ಅಪರಮಿತ ಬಲ |
ಅಪರಮಿತ ಜ್ಞಾನ ಅಪರಮಿತ ತೇಜ |
ಅಪರಮಿತ ಧೈರ್ಯ ಅಪರಮಿತ ತನುವಿನೋ |
ದಿವಾ* ಅಹಿಪಾದಿವ್ಯಾಪಕ ದೇವಾರಿಗಳಮಲ್ಲ |
ಶಪಥ ಪೂರ್ವಕದಿಂದ |
ಚಪಲ ಸಿರಿವರ ವೇಣು ಗೋಪಾಲ ವಿಠಲನ್ನ |
ಅಪನಿಯನಾಗಿ ಧೇನಿಪೆ ಸರ್ವಕಾಲಾ || ೬ ||

ಆದಿತಾಳ

ಈ ರೀತಿ ಮಹಿಮನು ಧಾರುಣಿಯೊಳಗಿನ್ನು |
ಮೂರಾವತಾರದಿ ತೋರಿದೆ ಕೃತ್ಯಗಳನು |
ಬಾರಿಬಾರಿಗೆ ಹರಿಯ ಸೇವಿ ಎನಿಸಿ ಬಹು |
ಮೀರಿದ ಭಕ್ತನೆಂದು ಕೀರುತಿ ಪಡದೆ ಅಯ್ಯಾ |
ಓರಂತೆ ಹಗಲು ಇರುಳು ನೀನು ಹೊತ್ತು |
ಮೀರದೆ ಒಂದು ಕ್ಷಣ ಪಾರ ಜೀವರೊಳಗೆ |
ಮಾರುತ ಮಂತ್ರವನ್ನು ಒಬ್ಬೊಬ್ಬರಲ್ಲಿ ನಿಂದು |
ಮೂರೇಳು ಸಾವಿರ ಆರು ನೂರುವ ಮಾಡಿ |

ಆರಾಧಿಸುತ್ತ ಹರಿಯಾಕಾರವ ಕಾಣಲದು |
ಚೋರ ಭಕುತಿ ಎಂದವತಾರ ಮಾಡಿದೆ ಧೊರಿಯೆ |
ಕ್ರೂರ ರಸ ಒಂದು ಎಲ್ಲಿಹದೆನಬೇಕು |
ಪ್ರೇರಣೆ ನಿನ್ನ ಹೊರತು ತೋರು ಆವರೊಳಗಿನ್ನು |
ಸಾರ ಹೃದಯರ ಸಂಸಾರ ವೃಕ್ಷದ ಮೂಲ |
ಬೇರರಿಸಿ ಕೀಳಲು ಆಕಾರ ಧರಿಸಿದೆ ನಿನ್ನ |
ವಾರೆ ನೋಟದಿ ನೀನು ಎನ್ನ ನೋಡಿದರೆ |
ಆರು ಉಳದವರು ಉದ್ಧಾರವಾಗಲು ಮತ್ತೆ |
ಆರಿತೀ ಸಂಗತಿ ವ್ಯಕ್ತನಾದೆನು ಎನ್ನ |
ತೋರು ನೀ ನಿಲ್ಲದ ಪರಮಾಣು ಪ್ರದೇಶ ಒಂದು |
ಕಾರಣ ಒಂದು ಎನಗೆ ಕೂಗಿಸುವದು ಜೀಯ್ಯಾ |
ಕಾರುಣ್ಯಾದ್ವೇಷಾ ಭಕ್ತಿ ಲವಲವಿಕೆ ಮೂರು ಪರಿ |
ಈ ರೀತಿ ಅಲ್ಲದಿನ್ನು ಬೇರೆ ಒಂದಿಲ್ಲ ನಿನಗೆ |
ತೋರಿದ ಬಗೆಯುನ್ನು ಸಾರಿದೆ ಬಿನ್ನಪದಿ |
ಕಾರುಣ್ಯಾ ನಿಧಿ ವೇಣು ಗೋಪಾಲ ವಿಟ್ಠಲಂಗೆ |
ಸಾರಥಿಯಾಗಿ ಜಗವ್ಯಾಪಾರಗೈಸುವೆ ಮುಖ್ಯ ॥ ೭ ॥

ಜತೆ

ನಿನ್ನ ಬಿನ್ನಪದಂತೆ ಮಾಡುವ ಕ್ರಿಯಗಳನು |
ಇನ್ನು ಜೀವರೊಳಿದ್ದ ವೇಣು ಗೋಪಾಲ ವಿಟ್ಠಲಾ ॥ ೮ ॥

---

## ಸುಳಾದಿ (೫) ೮೦

### ಶ್ರೀ ಮುಖ್ಯ ಪ್ರಾಣ ದೇವರ ಸ್ತೋತ್ರ

ರಾಗ ಸಾವೇರಿ ಧ್ರುವತಾಳ

ಮರುತಾ ನಿನ್ನ ಮಹಿಮೆ ಪರಿಪರಿಯಿಂದ ತಿಳಿದು |
ಚರಿಸಿದ ಮನುಜಗೆ ದುರಿತ ಬಾಧೆಗಳ್ಯಾಕೆ |
ಸರಸಿ ಜಾಸನ ಸಮ ಸಿರಿದೇವಿ ಗುರುವೆಂದು |

ಪರತತ್ವ ಹರಿ ಎನುತ ವಂದಿಸಿ ಅಖಿಳ |
ಭರಿತನಾಗಿಪ್ಪ ಜಗದಿ ಅರಸಿ ಭಾರತಿ ಸಹಿತ |
ಹೊರಗಿದ್ದು ನವಾವರಣಗಳಿಗೆ ಜೀವರ ಬೀಜ |
ಸರಿಬಂದ ವ್ಯಾಪಾರದಿ ಆಡಿಸುವೆ ಜಡಜೀವರನು |
ಪುರಹರ ಮೊದಲಾಗಿ ಅರಿಯರು ಒಂದು ಕಾರ್ಯ |
ಗುರುವೆ ನಿನ್ನ ಹೊರತು ಹೊರಗೆ ಬೊಂಬಿಗಳ |
ತೋರಿ ಒಳಗೆ ತರ ತರದಿ ನೀನು |
ಇರುವೆ ಸರ್ವರಿಗೆ ಆಧಾರ ರೂಪದಿ ಅತಿ |
ಸ್ಥಿರ ಭಕುತಿಯಿಂದ ಹರಿಯ ಧೇನಿಸುತ |
ಮಿರಗುವ ಪ್ರಭೆ ನಿನ್ನದು ಪದ ರೂಪಧ್ವನಿ ನಿನ್ನದು ದೇವ |
ಬರುವ ಹೋಗುವ ವ್ಯಾಪಾರ ನಿನ್ನದು ದೇವ |
ಶರಧಿ ಶಯನ ಸಿರಿ ವೇಣು ಗೋಪಾಲ ರೇಯಾ |
ಪರಮ ಹರುಷದ ಲೀಲೆ ತೋರುವನಿನ್ನೊಳಿದ್ದು ॥ ೧ ॥

ಮಟ್ಟ ತಾಳ

ಅಖಿಳಾಗಮ ವೇದ್ಯ ಅಖಿಳಾಗಮ ಸ್ತೋತ್ರ್ಯಾ |
ಅಖಿಳಾಗಮ ನಿಗಮ ವ್ಯಾಪುತ ದೇವನೆ |
ಅಖಿಳದೊಳಗೆ ನಿಂದು ಸಕಲ ಕಾರ್ಯಗಳೆಲ್ಲ |
ಅಕುಟಿಲ ನೀನಾಗಿ ಮಾಡಿಸಿ ಮುದದಿಂದ |
ಯುಕುತಿಯಿಂದಲಿ ಜಗವ ಅತಿಶಯವನು ತಿಳಿದು |
ಲಕುಮಿ ಪತಿಯು ನೀನು ಕಾಣುವೆ ಸರ್ವದ |
ಶಕತ ಮೂರುತಿ ನಿನ್ನ ತುತಿಸಿ ಬಲ್ಲವರಾರು |
ಭಕುತಯು ಅಭಿಮಾನಿ ಭಾರತಿಗಳವಲ್ಲಾ |
ಭ್ರುಕುಟಿಲಾ ವಂದಿತ ನೀನು ವೇಣುಗೋಪಾಲನ್ನ |
ಪ್ರಕಟದಿ ಬಲ್ಲದ್ದು ಅರಿಯರು ಉಳಿದವರು |

ತ್ರಿವಿಡಿ ತಾಳ

ಪೃಥಿವಿ ಶಬ್ದದಿ ಭೂತ ಮಾತ್ರ ಪರಮಾಣುಗಳಲ್ಲಿ |
ಪ್ರತಿ ಪ್ರತಿ ರೂಪನಾಗಿ ಇರುತಿಪ್ಪ ಮಡದಿ ಸಹಿತ ಪ್ರಾ |

ಕೃತ ಪಿಡಿದು ಸಕಲವ್ಯಾಪ್ತಾ ತಾ ।
ತ್ರಿಕರಲ್ಲಿ ವ್ಯಾಪಾರ ನಿನ್ನದಯ್ಯಾ ಲೋಕವಂ ।
ದಿತ ದೈನಾ ಶಾತಕುಂಭಾರಿಯಿಂದ ನಿರ್ಮಿತ ಬೊಮ್ಮಾಂಡ ।
ಧಾತ ನಿನಗೆ ಎಣೆಯೆನುತ ಲೋಡುವದಯ್ಯಾ ತ್ರೀ ।
ಕಾಂತ ನಾದ ಸಿರಿ ವೇಣು ಗೋಪಾಲನು ।
ಪ್ರೀತಿಯಿಂದಲಿ ನಿನಗೆ ಒಲಿದಿಪ್ಪ ಅಧಿಕವಾಗಿ || ೩ ||

ಅಟ್ಟತಾಳ

ಈ ರೀತಿಯಲಿ ಜಗದಾಧಾರನಾಗಿರುತಿದ್ದರ್ ।
ಧಾರುಣಿಯೊಳು ಮೂರು ಅವತಾರಗಳ ಧರಿಸಿ ।
ಕ್ರೂರರ ಸದೆದದ್ದು ಮೂರ್ಖರ ಕಾರ್ಯವೇ ।
ಮೇರು ನುಂಗುವ ಒಂದು ಚೂರು ನುಂಗಲಿಬಹುದು ।
ಶೂರತನವೇನೋ ಮಾರಾರಿವಂದ್ಯನೆ ।
ಆರು ಬಣ್ಣಿಪರೊ ವಿಚಾರಿಸಿ ನಿನ್ನನು ।
ನಾರಾಯಣ ಕೃಷ್ಣವೇಣು ಗೋಪಾಲನಾ ।
ಧಾರದಿಂದಲಿ ಸೇವೆ ಭಾರಿ ಭಾರಿ ಮಾಳ್ಪೆ || ೪ ||

ಆದಿತಾಳ

ಒಂದು ಅವತಾರದಿ ಅಸುರ ವೃಂದವ ಘಾತಿಸಿದೆ ।
ನಂದ ತೀರ್ಥ ರೂಪದಿಂದ ಸಕಲ ದುರುಳ ।
ರಂದ ವಚನಗಳ ಕಡಿದಾನಂದದಿಂದಲಿ ಮೆರದೆ ।
ತಂದೆಯು ಕೃತಿಗಳು ನಿನ್ನಿಂದಾದು ನೋಡಿ ।
ಮುಂದಾರವು ಸುಖವ ಪೊಂದುವೆವಯ್ಯಾ ಬಹು ।
ಸಿಂಧು ಸಪ್ತುತ ಯೋಕಾದಿಂದ ಹಾರುವನು ।
ಮುಂದಿದ್ದ ಕಾವಲಿಯು ನಿಂದು ನಿಂದು ದಾಟಿದಂತೆ ।
ಮಂದಮತಿಗಳ ಮನಕೇ ನೆಂಬೆಯೊ ಎಲೊ ದೇವ ।
ಸುಂದರಾಂಗನೆ ಸುಖದಿಂದ ಪೊರೆಯುತ ವಾಯು ।
ನಂದಾ ಹನುಮ ರಾಮನಿಂದ ಆಲಿಂಗಿನಿಪಡೆದು ।

ಬಂದು ವಂದಿಸಿದೆ ಗೋಪಿ ಕಂದನ್ನ ಬಿಡದೆ ಭೀಮಾ ।
ನಂದ ಮೂರುತಿ ವ್ಯಾಸನಿಂದ ತತ್ವಗಳೆಲ್ಲ ।
ಅಂದದಿ ಓದುವ ಅಮರೇಂದ್ರ ವಂದಿತ ಮಧ್ವ ।
ತಂದೆ ಎನ್ನಯ ಬಿನ್ನಪ ಒಂದು ಲಾಲಿಸುವದು ।
ಪೊಂದಿ ಭೂಪತಿಯು ಪೂಜೊಂದು ಬಿಡದಂತೆ ।
ಇಂದು ಬೇಡುವೆ ಮನದಿಂದ ವಂದನೆ ಮಾಡಿ ।
ಕುಂದದೆ ಎನ್ನೊಳಿದ್ದು ಮಂದಿರದೊಳು ನಿನ್ನ ।
ಅಂದವಾದ ರೂಪ ಇಂದು ತೋರುವದೆನಗೆ ।
ಸಿಂಧುಶಯನ ನಿಂವೇಣು ಗೋಪಾಲನು ।
ನಿಂದು ನಿನ್ನೊಳು ಲೀಲೆ ಒಂದೊಂದು ಮಾಳ್ಪ ಚಿತ್ರಾ ॥ ೫ ॥

ಜತೆ

ಪವನ ನಿನ್ನಯ ಪಾದ ಪೊಂದಿದ ಮನುಜನು ।
ಜವನ ಪುರಕೆಸಲ್ಲಾ ವೇಣು ಗೋಪಾಲ ಬಲ್ಲಾ ॥ ೬ ॥

---

ಸೂಚನೆ— ಈ ಸುಳಾದಿ ಶ್ರೀ ಮಂತ್ರಾಲಯ ಶ್ರೀಗಳವರದೆಂದು ಪರಿಮಳ ಮಾಸಿಕ ಮೈಸೂರಲ್ಲಿ ತಿಳಿಯದೇ ಹಾಕಿರುವರೆಂದು ತೋರುತ್ತದೆ. ವೇಣು ಗೋಪಾಲ ವಿಟ್ಠಲ ರಚಿತವೆಂದು ಹೇಳೀ ಚಿಪ್ಪರಗಿ ನಮ್ಮ ಪುಸ್ತಕದಲ್ಲಿ ಬರೆದ ಕೆಲ ಸುಳಾದಿಗಳು ವಿಟ್ಠಲ ಇಲ್ಲದೆ ವೇಣು ಗೋಪಾಲನೆಂದು ಅಂಕಿತ ಇತ್ತಿರುವದು.

## ಸುಳಾದಿ (೬) ೮೧

ಶ್ರೀ ಹರಿಯೆ ಸಕಲ ವ್ಯಾಪಾರ ಸ್ವಾಧೀನ ವಾಗಿರಲು ಜೀವರ ತಪ್ಪೇನು?
ವಿಷಯಾದಿಗಳಿಂದ ರಕ್ಷಿಸೆಂದು ಪ್ರಾರ್ಥನೆ

ರಾಗ ಭೈರವಿ ಧ್ರುವತಾಳ

ನಿರ್ಮಳ ಮನಮಾಡೊ ನಿಶ್ಚಯವಾಗಿ ಎನ್ನ ।
ಕರ್ಮಗಳಿಗೆ ಇನ್ನು ಕಡೆಯಾವದೊ ವಿಷಯ ।
ಊರ್ಮಿಯೊಳಗೆ ಬಿದ್ದು ಉಣತಿಹೆನಯ್ಯಾ ಗತಿಯ ।

ಮರ್ಮವ ತಿಳಿಯದೆ ಮೋಹದಿಂದ ।
ಪರ್ಮಿಳಕಾಗಿ ವೇಗ ಪೋದ ಮಧುಪದಂದಾ ।
ದುರ್ಮತಿಯಿಂದ ಕೆಟ್ಟೆ ದನುಜಾರಿಯೆ ।
ಪೇರ್ಮೆಯ ನೋಡಿ ಜನರು ಪರಿಪರಿಯಿಂದ ತಿಳಿದು ।
ವರ್ಮದಂತೆ ಬಾಹ್ಯ ವೃತ್ತಿಯಿಂದ ಮೋಹಿಪರು ।
ಶರ್ಮಾಖ್ಯಾ ಸದಾ ಕ್ರಿಯಾ ಚರಿಸುತಲಿನ್ನು ಸತತ ।
ಧರ್ಮವಂತರ ಸೇವಾ ದವನ ಮಾಡೊ ।
ಕೂರ್ಮ ಮೂರುತಿ ಸಿರಿ ವೇಣುಗೋಪಾಲನೆ ಆ ।
ಧರ್ಮ ಬುದ್ಧಿಯ ಕೊಡದೆ ಕಡೆಹಾಯಿಸೊಜೀಯಾ ॥ ೧ ॥

ಮಟ್ಟತಾಳ

ಪರವ ಇಂದ್ರಿಯಗಳೆಲ್ಲ ಸರಿಯದೆ ವಿಷಯದ ।
ಥೆರೆಗಳೊಳಗೆ ಬಿದ್ದು ಸ್ಥಿರವಾಗಿ ಭುಂಜಿಸಿದರು ।
ಕರೆಕರೆಯ ಕಾಮ ಕ್ರೋಧಾಧಿಗಳೆನ್ನ ।
ಆರಮರೆಯ ಗೊಳಿಸದಂತೆ ಕಾಪಾಡುವದೊ ।
ಸರಸಿಜ ಭವ ಮುಖ್ಯ ಸಕಲ ಸುರರು ನಿತ್ಯ ।
ನರಕ ಸೇರುವ ಕಲಿಮೊದಲಾದವರೆಲ್ಲ ।
ತೆರೆದ ಕಣ್ಣಿನೆ ಮುಚ್ಚುವ ತೆರನೇನು ಬಲ್ಲರೊ ।
ಪರಮ ಬಲಿಷ್ಠ ನೀನೆ ನೀನೆ ಈ ಜಗದೊಳು ।
ಶರಧಿ ಶಯನ ಸಿರಿ ವೇಣುಗೋಪಾಲನ್ನ ।
ಕರುಣದಿಂದಲಿ ನಿನ್ನ ಕುರುಹ ತೋರಿಸುವದೊ ॥ ೨ ॥

ತಾಳ ತ್ರಿವಿಡಿ

ನರಹರಿ ನರಕಾರಿ ನವನೀತ ಚೋರನೆ ।
ಆರೆ ಮರೆ ಸಲ್ಲದೊ ಅಮರಪೂಜಿತ ದೇವ ।
ಬಿರಿದಿಲಿ ಜಗದೊಳು ಭರಿತನಾಗಿ ಸಕಲ ।
ಸರಸಿಜ ಭವಾದ್ಯರಿಗೆ ಸುಖವನೀವೆ ।
ಅರಸು ನೀನೆ ಸಿರಿ ಅಜಭವ ಇಂದ್ರಕಾಮ ।

ಸರಸಿಜ ಸಖಸೋಮ ಇತರ ದೇವ ದನುಜರಿಗೆ |
ಮುರಹರನೆ ಮುಕ್ತರಿಗೆ ಮುನಿ ಸನಕಾದಿಗಳಿಗೆ |
ನರತೃಣ ತಿರಿಯಾದಿ ನಾನಾ ಜಂತುಗಳಿಗೆ |
ದುರುಳ ವರವಕೊಡುವ ಪರಿಭೂತಾದಿಗಳಿಗೆ |
ತೋರಿರೆ ವೇದಕಾಲ ಪ್ರಕೃತಿ ಅಭಿಮಾನಿಗಳಿಗೆ |
ಎರಡೇಳು ಲೋಕದೊಳು ಆರೋ ಸಾಕುವರಿನ್ನು |
ಮೀರಿ ನಿನ್ನನು ಬೇರೆ ಇರುವರೇನೊ |
ನಾರಾಯಣನೆಂಬ ನಾಮದರ್ಥವು ನೋಡು |
ಸಾರುತಿಹದು ಸಕಲ ಶ್ರುತಿಗಳಿಂದ |
ಸರಿಯದೆ ವಿಹಾರ ಪರಿಪರಿಮಾಡುತ್ತ |
ಚರಿಸುವೆ ಜಗದೊಳು ಚದುರ ತನದಿಂದ |
ಮರುತ ನೊಡೆಯ ಸಿರಿ ವೇಣುಗೋಪಾಲ ಈ |
ಮರವೆ ಕರ್ಮಕೆ ಗುರಿಯಾರೊ ನಾನಾಗಲು || ೩ ||

ಅಟ್ಟತಾಳ

ಇನಿತು ಬೊಮ್ಮಾಂಡ ದೊಳ್ಯಾವತ್ತು ವ್ಯಾಪಾರ |
ಘನವಾಗಿ ನೀನು ಮಾಡುತ್ತಲಿರೆ ಮುದದಿಂದ |
ವನಜನಾಭನೆ ಕೇಳು ವಿಧಿ ನಿಷೇಧಗಳೆಂದು |
ದಿನ ದಿನ ಯಾತನೆ ಜನರಿಗ್ಯಾಕೊ |
ಮನುಜರ ಕರ್ಮ ಪ್ರಬಲವೆಂದೆನಬೇಕು |
ದಿನಮಣಿ ನಿಭ ನಿನ್ನ ಅಗಲಿಮಾಡಿದದೆಂದೊ |
ದನುಜ ದೇವತಿಗಳು ಕಾರಣರೆಂಬಿಯಾ |
ಮನನ ಮಾಡಿಕೊ ಹಿಂದೆ ನುಡಿದ ವಚನಗಳು |
ಮನಸಿಜನಯ್ಯಾ ಮಮತೆಯಿಂದಾಗುವದೆನೆ |
ಮನ ಮೊದಲಾದ ಇಂದ್ರಿಯಗಳ ಒಡೆಯ ನೀನು |
ಎನಿತು ನೋಡಲು ನರಗೆ ಅಪರಾಧಗಳು ಕಾಣೆ |
ದನುಜರ ರಿಪುವೆ ಇನ್ನೆನಿತು ಇಪ್ಪದು ಪೇಳೊ |

ಸನಕಾದಿ ವಂದಿತ ವೇಣುಗೋಪಾಲನೆ ।
ನನಗಾರು ದಿಕ್ಕಿಲ್ಲಾ ನಿನಗೊಬ್ಬರೆದುರಿಲ್ಲ ॥ ೪ ॥

ಆದಿತಾಳ

ಚಿತ್ತಜನಯ್ಯಾ ಮಹತ್ತು ಅಲ್ಲವೊ ಏಕ ।
ಛತ್ರಾದಿಪತಿ ತನ್ನ ಭೃತ್ಯನ್ನ ಬಳಲಿಸುವದು ।
ಹೆತ್ತತಾಯಿ ಹಿತವ ವತ್ತಿಗರಳವ ಸಣ್ಣ ।
ಬತ್ತಿಗೆ ಎರಿಯಲು ಮತ್ತೆ ಪೇಳುವರಾರೊ ।
ಹತ್ತಿಲಿಯಿದ್ದು ಸಕಲ ಕೃತ್ಯ ಅಕೃತ್ಯಕ್ಷಣ ।
ಹೊತ್ತು ಬಿಡದೆ ಮಾಳ್ಪ ತತ್ತ್ವಳವೇನೊ ಇದು ।
ಉತ್ತಮ ಗುಣವಲ್ಲ ಸತ್ವರ ಸಲಹೊ ಏಕ ।
ಕರ್ತುನೀನೆ ಜಗಕೆ ಕಾಯೊ ಅನುಮಾನವ್ಯಾಕೆ ।
ಮಿಥ್ಯಾ( ಸಟೆಯಾಡುವ)ಚಾರಿ ನಿನಗೆ ಸತ್ಯವೊ ಸಾಧನವೆನಗೆ ।
ಹೊತ್ತು ಹೊತ್ತಿಗೆ ಎನ್ನ ಚಿತ್ತದೊಳಿದ್ದು ಮಾಡೊ ।
ಅತ್ಯಾವಿಯೋಗಿ ಸಿರಿ ವೇಣುಗೋಪಾಲ ನಿನ್ನ ।
ಭೃತ್ಯರೊಳಿಟ್ಟೆನ್ನ ಭಕ್ತಿಭರಿತನ್ನ ಮಾಡೊ ॥ ೫ ॥

ಜತೆ

ಸತ್ಯಸಂಕಲ್ಪ ಸಿರಿ ವೇಣುಗೋಪಾಲವಿ ।
ರಕ್ತಿ ಪೂರ್ವಕ ಶಕಲ ಭಕ್ತನೆಂದೆಸುವದೆನ್ನ ॥ ೬ ॥

## ಸುಳಾದಿ (೭) ೮೨

ಪ್ರಾರ್ಥನಾ, ಹರಿ ನೀನು ವ್ಯಾಪ್ತ ಸರ್ವ ಕರ್ತಾ, ವಿಷಯಾದಿಗಳಿಂದ
ದೂರ ಮಾಡಿ ನಿನ್ನ ಪಾದ ಸೇವೆ ಕೊಡು

ರಾಗ ರೇಗುಪ್ತಿ ಧ್ರುವ ತಾಳ

ಎಲೆ ಎಲೆ ಕೃಷ್ಣಯ್ಯಾ ಎನ್ನ ಈ ಪರಿಯಿಂದ ಭವದ ।
ಬಲೆಯೊಳಗಿಟ್ಟು ಸತತ ಬಾಧಿಸುವರೆ ।
ಛಲವೇನೊ ನಿನಗೆ ಎನ್ನ ಮೇಲೆ ಚಲುವ ಚನ್ನ ।
ಗಲಭೆ ಕೇಳುವೆ ಬಲು ಕರುಣಿ ಎಂದು ।

ನೆಲೆಯಲ್ಲಿ ನರಲೋಕದ ಜನದ ಸಾಧನವೇನೊ ।
ಸುಲಭವೆನ್ನರೆ ಬುಧರು ಕಲಿಯುಗವ ।
ಸಲೆಯುಮಗೆ ಭಾರತ ವರ್ಷ ಉತ್ಪತ್ತಿ ಎಂದು ।
ತಲೆದೂಗಿ ಕೊಂಡಾಡರೇ ಅಮರಗಣರು ।
ನಳಿನನಾಭನೆ ನಮಿತಾವಳಿಯ ಕಾಯ್ವ ಭಕ್ತ ಬಂಧು ।
ಹಳಿವದು ಹಿಂದೆ ಇದ್ದ ಪ್ರತಿಬಂಧಕ ।
ತಿಳಿಪದು ಎನ್ನೊಳಿದ್ದು ನಿನ್ನ ಮೂರುತಿಯನ್ನು ।
ಕಳೆವದು ಮುಂದೆ ಹೀನ ಆಗಾಮಿಯ ।
ಪುಳಕೋತ್ಸವ ವಾಗಲೆನ್ನ ಮನ ಮುಕ್ಕಾದಿಂದ್ರಿಯಗಳು ।
ಜಲಜಾಕ್ಷ ನಿನ್ನಾಧೀನವನ್ನೆ ಅರಿತು ।
ಇಳೆಯೊಳಗೆ ನಿನ್ನಂಘ್ರಿ ಭಜಕಾ ಭಜಕರಾ ತೊಂ ।
ಬಲಿಗಾನೆಂದೆನಿಸಿ ಬಲು ಸಾಕು ಬಲು ಹೆಚ್ಚು ।
ಬಲರಾಮನನುಜ ನಮ್ಮ ವೇಣು ಗೋಪಾಲ ವಿಟ್ಠಲ ।
ಹಲವು ಬಂಧಗಳ ಪರಿದು ನಿನ್ನ ವರನೆನಿಸೊ ॥ ೧ ॥

ಮಟ್ಟತಾಳ

ಆನು ನೋಡುವದೆಲ್ಲ ನಿನ್ನ ಮೂರುತಿ ಎನಿಸೊ ।
ಆನು ನುಡಿವದೆಲ್ಲ ನಿನ್ನ ತುತಿಗಳೆನಿಸೊ ।
ಆನು ನಡಿವದೆಲ್ಲ ನಿನ್ನ ಯಾತ್ರೆ ಎನಿಸೊ ।
ಆನು ಪಿಡಿವದೆಲ್ಲ ನಿನ್ನ ಸ್ಪರಿಶ ಎನಿಸೊ ।
ಆನು ಉಡುವದೆಲ್ಲ ನಿನ್ನ ಉಡಿಗಿ ಎನಿಸೊ ।
ಆನು ತೊಡುವದೆಲ್ಲ ನಿನ್ನ ತೊಡಿಗೆ ಎನಿಸೊ ।
ಆನು ಬೇಡುವ ಕೊಡುವ ಆವಾವಾದರು ।
ನೀನೆ ಕೇಳಕೊಡುವೆ ಎಂದೆನಿಸೊ ದೇವ ।
ಆನು ಅನುದಿನ ಪೇಳಿ ಕೇಳುವದೆಲ್ಲ ।
ಶ್ರೀನಾಥನೆ ನಿನ್ನ ಕೀರ್ತಿ ವಾರ್ತೆ ಎನಿಸೊ ।
ಆನನುಭವಿಸುವ ಖತಿ[೧] ನಿದ್ರೆ[೨]ಗಳೆರಡು ।

---

೧ ಖತಿ=ಸಿಟ್ಟು, ಕ್ರೋಧ ೨ ನಿದ್ರಾ=ಅಜ್ಞಾನ.

ಮಾಣದೆ ತಪ ಆಲಿಂಗನೆ ಎಂದೆನಿಸೊ |
ಆನು ಆಲಸದಿಂದ ಪವಡಿಸುವದೆಲ್ಲ |
ಜ್ಞಾನಪೂರ್ಣನೆ ನಿನಗೆ ದಂಡ ಪ್ರಣಾಮ ಎನಿಸೊ |
ಆನು ಅನ್ಯ ಜನರು ಮಾಡುವ ಮರಗುವ |
ದೇನು ಆದದ್ದು ಸಕಲ ದೇಹಾದಿಗಳಲ್ಲಿ |
ಆನಂತ ಸುಖ ಪೂರ್ಣ ಅತಿನಿರ್ದೋಷನೆ |
ಏನಾದರು ನಿನ್ನಾಧೀನ ಪೆಂದೆನಿಸೊ |
ದಾನವ ಕುಲ ವೈರಿ ವೇಣುಗೋಪಾಲವಿಟ್ಠಲ |
ನೀನಲ್ಲದೆ ಜಗವು ಮಾಡುವ ದೇನಯ್ಯಾ || ೨ ||

ರೂಪಕತಾಳ

ಮನದೊಳು ನೀನೆ ಘನವಿಷಯಂ ಗಳೊಳು ನೀನೆ |
ಇನಶಶಿ ಮೊದಲಾದ ಇಂದ್ರಿಯುವರೊಳು ನೀನೆ |
ಕನಸು ಸುಷುಪ್ತಿ ಜಾಗರಾದಿಗಳಲ್ಲಿ ನೀನೆ |
ಮನಬಂದ ವ್ಯಾಪಾರ ಮಾಡಿ ಮೋದಿಪೆನೀನೆ |
ಎನಗೆ ಸ್ವಾತಂತ್ರ ಯುಳ್ಳನಿತಾದರು ಇದ್ದ |
ರನುನಯದಿ ಆರ್ಚಿಸ ದಿಪ್ಪೆನೆ ದೇವಾ |
ಆನುದಿನ ವ್ಯಾಪಾರ ಆರವೆ ಸಂಗಡ (೧ತನಿಸಲಾ) ತನುಸಲಾ ವಿಚಿತ್ರ |
ಮೊನೆ ಸ್ವಲ್ಪ ಮಾಡಿಪ್ಪೆ ಭೋಗ ಬಡುವದ |
ಕೆನ್ಯಾಯ ಇನಿತು ಬಗೆ ಇರಲಾಗಿ ಈ ಪರಿಯಾತಕೊ |
ದಿನಮಣಿ ತೇಜನೆ ದೀನರುದ್ಧಾರಿಯೆ |
ಫಣಿಶಯನ ಪಾವನ್ನ ಕಾಯಾ ಕೇಶವರಾಯ |
ಘನವಲ್ಲವೊ ನೀ ನೊಯ್ಯಾದಿರೆ ಎನಗೆ |
ವನ ಜಾಂಡದೊಡಿಯಾ ಸಿರಿವೇಣು ಗೋಪಾಲವಿಟ್ಠಲ |
ಎನಿತಾದರೆನ್ನಯ್ಯ ಮನ ನಿನ್ನಾಧೀನವೊ || ೩ ||

---

೧ ತನಿಸಲಾ=ಹೆಚ್ಚಾಗಿ ಮಾಡುತ್ತಿರಲು.

ತ್ರಿವಿಡಿ ತಾಳ

ವಾಣಿವಲ್ಲಭ ವಂದ್ಯಾಕ್ಷೋಣಿಧರ ಖಗಪ ।
ತ್ರಿಣಿನೇತ್ರ ದೇವಾ ಶ್ರೇಣಿಯಿಂದಲಿ ಸೇವ್ಯಾ ।
ಜಾಣ ಜಗದೊಳು ವ್ಯಾಪ್ತಾ ಚಾಣುರಾರಿಮರ್ದನ ।
ಕಾಣಿಸಿದೆ ವಿಶ್ವ ಮಾತೆಗೆ ಬಾಯೊಳು ।
ಏಣ ಲೋಚನಿಯರ ಮಾಣದೆ ಮೋಹಿಸಿದ ।
ವೇಣು ಗೋಪಾಲ ವಿಟ್ಠಲ ಪಾಣಿ ಪಿಡಿವದೆನ್ನ ॥ ೪ ॥

ಝುಂಪೆ ತಾಳ

ನಿನ್ನ ಕರುಣವಾಗೆ ಇನ್ನು ನರಗೆ ।
ಬನ್ನ ಉಂಟೇನಯ್ಯಾ ಭವದೊಳಗೆ ।
ಅನ್ನ ವಸನಾದಿಗಳ ಆಶೆಉಂಟೆಪಾ ।
ವನ್ನ ನಿನ್ನಯ ಪಾದವನ್ನು ಪೊಂದಿದವಂಗೆ ।
೧ ಇನ್ನು ಮಹಿಪದಿ ಭಯಗಳುಂಟೆ ಪ್ರ ।
ಸನ್ನ ಮೂರುತಿ ನಿನ್ನ ತಿಳಿದವಂಗೆ ।
ಸನ್ನುತಾಂಗಿಯರಮಣ ವೇಣುಗೋಪಾಲ ವಿಟ್ಠಲ ।
ಎನ್ನೊಳೀಧೃಢ ಸತತನಿಲ್ಲಿಸುವದು ಹರಿಯೆ ॥ ೫ ॥

ಅಟ್ಟತಾಳ

ಹಲವು ಜನ್ಮಂಗಳಲ್ಲಿ ಜಲಜಾಕ್ಷನಿನ್ನಂಘ್ರಿ ।
ನಲವಿಂದ ಭಜಿಸುವ ಛಲಭಕ್ತಿ ಎನಗಿತ್ತು ।
ಸುಲಭದಿ ಸಂಸಾರ ಬಲಿಗೆ ದೂರನ ಮಾಡಿ ।
ಚಲುವ ನಿನ್ನವರ ಬಾಗಿಲ ಕಾಯಿದವನ ಮಾಡೊ ।
ಇಳಿಯೊಳು ನಿನ್ನ ಮಾಯಾ ತಿಳಿವವನಾರು ।
ಜಲಜ ಸಂಭವಗೆ ಮಿಕ್ಕಾದವರಿಗೆ ಅಳವಲ್ಲ ।
ಬಲಿಯನುದ್ಧರಿಸಿದ ವೇಣುಗೋಪಾಲ ವಿಟ್ಠಲ ।
ಹಲವು ಬಗೆ ಮನ ನಿಲುವಂತೆ ಮಾಡೋ ॥ ೬ ॥

---

೧ ಇನ್ನುಂ—ಅಹಪದಿ ಇನ್ನು ಅಹಿಪದಿ ಹಾವುಗಳ

ಆದಿ ತಾಳ

ಪಾಲಿಸುವದೆನ್ನ ಪಾಲಸಾಗರ ಶಾಯಿ ।
ಮೂಲಲೋಕದೊಡಿಯ ಮುಚಕುಂದ ಕೃಷ್ಣ ।
ಏಳಲ ಮಾಡದಿರು ಎನ್ನನು ನಿನ್ನ ಭಕ್ತ ।
ರೊಳಗಾದವ ನೆನ್ನಿಸಿ ನೀಯೋಸೇವೆ ।
ಖೂಳರ ಸಂಗದಿಂದ ಕೇಳು ವಾರ್ತೆಗೆ ಮನ ।
ಆಲಷದಂತೆ ಮಾಡೊ ಅಬುಜನಾಭಾ ।
ಸ್ಥೂಲ ದೇಹವೆ ತೆತ್ತುವಾಲಯು ನಿನ್ನಧ್ಯಾನ ।
ಲೋಲನಾಗುವೆನೆಂಬ ಆಶೆ ಘನವ್ಪೋ ।
ಚಾಲವರದರೇನು ನಿನ್ನಿಚ್ಛೆಯು ಮಾಡದಿರೆ ।
ಲೀಲಾ ವಿನೋದನೆ ಅಣುಸ್ಥೂಲವ್ಯಾಪ್ತಾ ।
ಬಾಲನ ಬಲದಂತೆ ಎನ್ನ ವೊರೆಯು ನಿನಗೆ ।
ಮೇಲೆ ನಿನ್ನಯು ಮನಾ ಮಾಧವನೆ ।
ಜಾಲಾ ಮಾಯಾ ವೇಣುಗೋಪಾಲ ವಿಟ್ಠಲ ।
ಕಾಲ ಅಕಾಲವು ನೀನೆ ಬಲ್ಲಿಯೊ ಹರಿಯೆ ॥ ೭ ॥

ಜತೆ

ಖೇದ ಮೋದಗಳೊಳು ಸಾಧು ಸಂಗದಿ ನಿನ್ನ ।
ಪಾದ ಸ್ಮರಣೆ ನೀಯೊ ವೇಣುಗೋಪಾಲವಿಟ್ಠಲ ॥ ೮ ॥

---

## ಸಳಾದಿ (೮) ೮೩

ಪ್ರಾರ್ಥನಾ, ಸಾಧನಾದಿಗಳನ್ನು ಮಾಡಿಸಿ ನಿನ್ನ ಭಕ್ತರಸಂಗ
ವಿತ್ತು ಕಾಯೊಲಕುಮಿಗಾದರೂ ಸಿಲುಕದ ದೇವ

ರಾಗ– ಭೈರವಿ ಧ್ರುವ ತಾಳ

ರಕ್ಷಿಸುವದು ಬಿಡದೆ ಪಕ್ಷಿವಾಹನ ಸತತ ।
ಕುಕ್ಷಿಯೊಳಿದ್ದ ದುರುಳ ರಕ್ಕಸರ ಬಾಧೆಯಿಂದ ।

ಅಕ್ಷಯ ಫಲ ನೀನು ಲಕ್ಷ್ಯೆಯೆ ಇವರು ನಿನಗೆ ।
ಮುಕ್ಷಕ ಸಮನಾದಶಕ್ತಿ ಸುಕ್ಷಮರೆಲ್ಲ ।
ಚಕ್ಷುರಿಂದ್ರಿಯದಿಂದ ನೀಕ್ಷಿಸಿ ದುಷ್ಟ ವಿಷಯ ।
ಪೇಕ್ಷಿಸಿ ಸರ್ವಕಾಲ ವಿಕ್ಷಯ ಮಾಳ್ಪರಯ್ಯಾ ।
ಮೋಕ್ಷ ಮಾರ್ಗದ ಜ್ಞಾನ ವಕ್ಷಮಾನರಲ್ಲಿ ।
ಕಕ್ಷ ಕ್ರಮಾನು ಸಾಧನದ ಶಿಕ್ಷೆಯ ಕೈಕೊಂಡು ।
ಪೇಕ್ಷ ಮಾಡದೆ ಸದಾ ತತ್ವಬುಭುಕ್ಷಿತನಾಗಿ ।
ಲಕ್ಷುಮಿ ಪತಿ ನಿನ್ನ ಲಕ್ಷಿಸುವಂತೆ ಮಾಡೊ ।
ರಾಕ್ಷಸಾಂತಕ ನೀನು ಪ್ರತ್ಯಕ್ಷನಾದರೆ ಈ ।
ಭಿಕ್ಷುಕರೆಲ್ಲ ಪೋಗಿ ಬಚಿಟ್ಟುಕೊಂಬರಯ್ಯಾ ।
ರಿಕ್ಷಾವಂದಿತ ಸಿರಿ ವೇಣುಗೋಪಾಲ ಸಹ ।
ಸ್ರಾಕ್ಷನ್ನ ಪ್ರಿಯ ಕುಪಿತಾಕ್ಷನೊಡಿಯ ಕಾಯೊ ॥ ೧ ॥

ಮಟ್ಟ ತಾಳ

ದಾಸ ರೊಳಿಡುವದು ವಾಸುದೇವನೆ ಎನ್ನ ।
ಆಶೆಯ ಮೊದಲಾದ ಮೋಸಗಳಿಗೀಮನ ।
ಸೂಸಿ ಪೋಗದಂತೆ ಶ್ರೀಶನೆ ನೀಮಾಡೊ ।
ಏಸೇಸು ಕಾಲ ವಿಶೇಷವಾಗಿ ನಿನ್ನ ।
ಲೇಸಾಗಿ ಪೂಜೆ ನೇಮಿಸಿ ಮಾಡಿದರೆ ।
ಭೂಸುರರಿಂದ ಉಪದೇಶ ಕೈಕೊಂಡು ।
ಸಾಸಿರ ಸಾಸಿರ ವತ್ಸರ ತಪಮಾಡೆ ದೇಶ ।
ದೇಶದೊಳಿದ್ದ ಕ್ಷೇತ್ರ ತೀರ್ಥಗಳೊ ।
ಮೀಸಲು ಮನದಿಂದ ಶೇಷನೇರಿಸಿದವಗೆ ।
ಈಶ ನಿನ್ನಂಘ್ರಿಯ ಶಾಶ್ವಿತ ಭಜಿಸುವ ।
ದಾಸರು ತೋರುವ ರಹಸ್ಯವಲ್ಲವೊ ಮಾಯಾ ।
ನಾಶ ರಹಿತ ನಮ್ಮ ವೇಣುಗೋಪಾಲನೆ ।
ಈಸು ಬಗೆಗೆ ನಿನ್ನ ವಾಸವೊ ಜಗದೊಳು ।

ತ್ರಿವಿಡಿ ತಾಳ

ವನಜಾಕ್ಷ ನಿನ್ನ ಶ್ರವಣವನು ಕೇಳಿರಬೇಕು ।
ಮನನಾದಿಗಳು ಬಹುದಿನ ಮಾಡಿ ಇರಬೇಕು ।
ಧ್ಯಾನಾದಿಗಳು ಬಲುದಿನ ಮಾಡಿ ಇದ್ದ ।
ಮನುಜನಲ್ಲದೆ ನಿನ್ನ ದಾಸರ ತಿಳಿಯನಯ್ಯಾ ।
ವನಜಾಂಡ ದೊಡಿಯ ಸಿರಿ ವೇಣು ಗೋಪಾಲನೆ ।
ಇನಿತು ಮಾಡಿಸದೆ ನಿನ್ನ ನೆನೆಪರ ತೋರಿಸಯ್ಯಾ ॥೩॥

ಅಟ್ಟತಾಳ

ಲೋಕರುದ್ಧಾರಕ್ಕೆ ದಾಸರ ನೇಮಿಸುವೆ ।
ಲೋಕರುದ್ಧಾರಾರ್ಥ ಲೀಲೆಯ ತೋರುವೆ ।
ಲೋಕರುದ್ಧಾರಕ್ಕೆ ಮಹಿಮೆಗಳನು ಅ ।
ನೇಕವಾಗಿ ತಿಳಿದು ಸಾಕುವೆ ಭಕುತರ ।
ಏಕಚಿತ್ತದಿ ನಂಬಿ ಲೋಕದಿ ಇರುವರ ।
ಶೋಕ ಮಾಡದೇವೆ ಬಿಡದೆ ಬೇಕೆಂದು ಪ್ರತಿದಿನ ।
ವಾಕೇಶನಯ್ಯ ಸಿರಿ ವೇಣು ಗೋಪಾಲನೆ ।
ಕಾಕುಗೊಳಿಸದೆ ಸಲಹೊನಾಕೇಶನೊಡೆಯಾ ॥ ೩ ॥

ಆದಿ ತಾಳ

ಸಕಲ ಜಗದೊಳಗೆಯಿದ್ದು ಯುಕುತಿಯಿಂದ ಮಾಡಿಸುವೆ ।
ಲಕುಮಿ ಮೊದಲಾದವರಿಗೆ ಅತಿಶಯವೇನೊ ನೀನು ।
ಭಕ್ತರೆಂದೆ ನೀ ಬಿಡದೆ ತುತಿಪುರು ಸರ್ವದ ।
ಮುಕುತಿಯ ಪೇಕ್ಷದಿಂದ ಸಕತರಾಗಿಪ್ಪರನೆ ।
ಮುಕುತನು ನಿತ್ಯ ಸಿರಿ ಮತ್ತೆ ನೀ ಕೊಡುವದೇನು ।
ವಿಕಸಿತನಾಗಿ ನಂದಾ ಉಕುತದೆನಬೇಕು ।
ರಿಕುತವಲ್ಲವೋ ಲಕುಮಿ ಬಹುಪೂರ್ಣ ಮತ್ತಳಯ್ಯಾ ।
ಮಿಕುಣದ ಕಾರ್ಯವೇನು ತೊರೆವದಿಲ್ಲವೊ ಇನ್ನು ।

ಶಕುತ ಮುಕುತಿ ನಿನ್ನಲ್ಲಿ ಚಿತ್ರ ಒಂದುಂಟು ದೇವಾ ।
ವಿಕಸಿತನಯ್ಯಾ ನಿನ್ನ ನಿನ್ನ ಪಕ್ಷದಲ್ಲಿದ್ದು ಧ್ಯಾನಾ।
ಸಕತಳಾಗಿ ಆತಿಆಶ್ಚರ್ಯ ವಕಂಡು ದೇವ ।
ನಿಕರಕ್ಕೆ ಬೋಧಿಸುತ್ತ ಇಡೆಗಾಣಲಾರಳು ।
ಶಕಟ ಭಂಜನ ವೇಣುಗೋಪಾಲರೇಯನೆ ।
ಸಿಖರವೊ ನಿನ್ನ ಭಕುತರು ಸೇವಿಸುವ ಸಾಧನ ॥ ೫ ॥

ಜತೆ

ಸಿರಿಗೆ ದುರ್ಲಭ ಮಹಿಮಾ ವೇಣುಗೋಪಾಲನು |
ಸ್ಥಿರ ಮಾಡು ನಿನ್ನ ಸೇವೆಯಲಿ ಎನ್ನಯ ಮನಾ ॥ ೬ ॥

---

## ಸುಳಾದಿ (೯) ೮೪

ಪ್ರಾರ್ಥನಾ– ಭಕ್ತ ರಕ್ಷಕನಾದ ಹರಿಯೇ ಸದಾ ನಿನ್ನ ಪರವಾಗಿ
ಸಕಲೇಂದ್ರಿಯ ವ್ಯಾಪಾರ ಮಾಡಿಸಿ ರಕ್ಷಿಸು

ರಾಗ ಭೈರವಿ ಧ್ರುವತಾಳ

ಕರುಣಿಸುವದು ನೀನು ಶರಣರರ ಪ್ರರಿಪಾಲಾ |
ಪರಣ ಶಯನ ಜಗದಾವರಣ ವ್ಯಾಪುತ ದೇವಾ |
ತರುಣಿ ಲಕುಮಿ ಸಹಿತಾ ಭರಣ ಸಕಲ ವಿಟ್ಟು |
ನಿರ್ವಾಣ(ರು)ಣದಲ್ಲಿ ಪೂಜೆ ನಿರುತ ಕೈಕೊಂಬ ಚಲುವ |
ಸ್ಮರಣೆ ಮಾಡಲು ವೇಗ ವರಣ ವರಣದ ವಸನ |
ತರುಣಿ ದ್ರೌಪದಿಗಿತ್ತು ತುತಿಸಿಕೊಂಡೆ ಅಯ್ಯಾ |
ಮರಣ ಭಯಕೆ ನಿನ್ನ ಮನದಿಂದಕೊಂಡಾಡಲು |
ಗರುಡನ್ನೇರದೆ ಬಂದು ಕರಿಯನ್ನುದ್ಧರಿಸಿದೆ |
ತರುಣಾವಸ್ಥೆಯಲಿ ಧ್ರುವನು ನೆನಿಯೆ ಗಲ್ಲಕೆ ಕಂಬು |
ಸ್ಫುರಣ ಬುದ್ಧಿಗೋಸುಗ ವತ್ತಿ ಪೊಗಳಿಸಿಕೊಂಡೆ |
ವರಣಿಸಬಲ್ಲರಾರು ಸಿರಿ ಅರಸನೆ ನಿನ್ನ |

ಹರಣದೊಳಗೆ ಒಲಿದು ಪೊಳೆಯೊ ನಿನ್ನಿಂದ ನೀನೆ |
ಧರುಣಿಯೊಳಗೆ ನಿನಗೆ ಸರಿಯು ಮತ್ತುಂಟೆ ದೇವಾ |
ಹರಿಣಾಕ್ಷಿಯರನಾಳೆ ಬ್ರಹ್ಮಚಾರಿ ಎಂದೆನಿಪೆ |
ವರುಣಲೋಕಕೆ ಪೋಗಿ ತಂದೆಯ ಬಿಡಿಸಿ ತಂದೆ |
ಅರುಣೋದಯದಲ್ಲಿ ಪಾರಣೆ ಮಾಡಿಸಿ ಕಾಯದೆ |
ಪೂರಣ ಆನಂದನಾಗಿ ಪೊರದೆ ಭಕ್ತರನ್ನೆಲ್ಲಾ |
ಚರಣೆ ಮಾಡಲು ಎನಗೆ ಸ್ಥಿರವಾದ ಮತಿಯನೀಯೊ |
ವರುಣ ಶಬ್ದವಾಚ್ಯನೆ ವೇಣುಗೋಪಾಲರೇಯಾ |
ಸರಿ ಬಂದ ಪರಿಯ ಮಾಡಿ ಭವ ದಾಟಿಸೋ ಎನ್ನ |

ಮಟ್ಟತಾಳ

ಸಕಲ ದೇವೋತ್ತಮನೆ ಸಕಲರ ಕಾಮಾನೆ |
ಸಕಲ ಜಗದಿ ಭರಿತ ಸಕಲ ಗುಣಪೂರ್ಣ |
ಸಕಲರಿಗೆ ಸೌಖ್ಯ ಖತಿಗಳ ಕೊಡುವ |
ಪ್ರತಿದೈವನು ನೀನು ಸಕಲ ಕಾಲಗಳಲ್ಲಿ |
ಸಕಲ ಬ್ರಹ್ಮಾದಿಗಳು ಸಾಕಲ್ಯದಿ ನಿನ್ನ |
ಕೃತಿಗಳು ಬಲ್ಲರೆ ಅದ್ಭುತ ಚರಿತಾ |
ಸಕಲ ಭಕ್ತರಂತೆ ಬೇಡೆನೊ ನಾ ನಿನ್ನ |
ಪ್ರಕಟವಾಗಿ ವೇಣು ಗೋಪಾಲರೇಯಾ |
ಸಕಲವು ಜಿತದುರಿತ ನಿಕರವ ಪರಿಹರಿಸಿ |
ಹಕಲಗೊಳಿಸದೆನ್ನ ಶಕಲ ಭಕುತನೆನಿಸೊ ॥ ೨ ॥

ರೂಪಕ ತಾಳ

ನಿರುತ ಸಜ್ಜನ ಸೇವೆ ಭರಿತವಾಗಲಿ ದೇಹ |
ತ್ವರಿತ ಬೀಳುವ ವಿಷಯ ಮರಿಸಿ ಬಿಡುವದು ಹರಿಯೆ |
ಶರಧಿಥೆರೆ ಎಂದದಿ ಬರುವ ಕ್ಲೇಶಕೆ ಜ |
ರ್ಝರಿತವಾಗಿ ಎನ್ನ ತನುವು ನಡಗುತಿದೆ |
ನರಹರಿ ನರಕಾರಿ ಪುರಹರಾದಿಪಾಲಾ |

ಮುರಹರ ಮುಕ್ಕುಂದ ತರಿವದು ದುರ್ವಿಷಯ |
ಹಿರಿದಾಗಿ ಅಜಮಿಳನು ಕರದ ಮಾತುರದಿಂದು |
ದ್ಧರಿಸಿದೆ ವೇಗದಿ ಪರಮ ಕರುಣಯೋ ನೀನು |
ಹರಲಾಪೆ ಜಗದೊಳು ಇರುವೆ ವ್ಯಾಪುತನಾಗಿ |

ಅರವಿಂದಾಲಯುಳಾದ ಲಕುಮಿ ಸಹಿತ |
ಸುರುವರ ಸರಿನಾನು ಅಲ್ಲವೊ ಅವಗ ದಾ |
ಸರ ದಾಸ ಅವರ ಪಾದದ ಸೇವಿಯಿಲ್ಲಿರಿಸೊ |
ಸರಿಯುಲೀಸದೆ ಮನವ ಸರಳು ಮಾಡೆಲೊ ದೇವ |
ಧೊರೆಯಲ್ಲವೆ ನೀನು ಪರಮ ಮುಖ್ಯದಿಂದ |
ಶರಣರಾದಿಗಳಪಾಲಾ ವೇಣುಗೋಪಾಲ ನೀ |
ಮರಿಯುದೆನ್ನನು ಭಕ್ತಪುರದೊಳಿಟ್ಟು ಪೊರೆಯೊ || ೩ ||

### ಝುಂಪಿ ತಾಳ

ಸತತ ಸಂಸಾರದೊಳಗಾಸಕ್ತನಾಗಿದ್ದು |
ಪಥಿಸಿಧರೆಯನುಗುರಿ ನಿನ್ನ ಮಾಡಿ |
ಇತರ ಶಬ್ದಗಳಲ್ಲಿರತನಾಗಿದ್ದರೆ ಸರಿ |
ಪ್ರತಿನಾಮ ನಿನ್ನವೂ ಎನ್ನುತಾ |

ಮತಿಹೀನರಲ್ಲಿ ಅಮಿತವಾದ ಮಾತು ಅನು |
ಮತ ವಾದವರ ಪ್ರೀತಿಬಡಿಸಿ |
ವ್ರತ ಭ್ರಷ್ಟನಿವನೆಂದು ತೋರಿ ದುರುಳರಿಗೊಂದು |
ಪ್ರತಿವಾಕ್ಯ ನುಡಿಯದಲೆ ಸುಮ್ಮನಿದ್ದು |
ತುತಿಯ ಬೈಗಳು ಎರಡು ಸಮಪೆಂದರಿಯುಲವಗೆ |
ಕೃತುವ್ಯಾಕೊ ಮಾಡೆಲೊ ಮತ್ತೆ ಅವನು |
ರತಿ ಪತಿಯ ಜನಕ ಸಿರಿವೇಣುಗೋಪಾಲನೆ |
ರುತು (ಋತ) ಮಾಡು ಎನ್ನಮನದಲ್ಲಿ ವಿಶ್ರುತವಿದು || ೪ ||

---

ರುತು=ಧೃಢಿಕರಿಸು, (ಋತ)= ಸತ್ಯ

ತ್ರಿವಿಡಿ ತಾಳ

ಇನಿತು ಮಾಡಿಸೆ ನಿನ್ನ ಘನತೆ ಅತಿಶಯುವಯ್ಯಾ |
ದಿನಮಣಿ ತೇಜ ಯುಜನಾದಿಗಳು ದೂರಾ |
ದಿನ ದಿನದಲಿ ಎನ್ನ ತನುವೆಂಬ ಮಂದಿರದಿ |
ಮಿನಗುವದು ಬಂದು ಕನಿಕರದಿಂದಲಿ |
ವನಜ ನಾಭನೆ ನೀನು ನೆನೆಸಲು ಸಲುಹಿದೆ |
ಕನಕನ್ನ ಕುವರನ್ನ ಕರುಣದಿಂದ |
ಹನುಮ ವಂದಿತ ಚರಣ ವೇಣುಗೋಪಾಲ ಪಾ |
ವನಮಾಡು ಎನ್ನ ಇನ್ನವರ ಸೇವಕನೆಂದು | ॥ ೫ ॥

ಅಟ್ಟತಾಳ

ನಿನ್ನವರೊಳು ಇಡು ಬನ್ನ ಬಡಲಾರೆನೊ |
ಇನ್ನು ವಿಷಯ ಬಾಧೆಯುನ್ನು ಬಿಡಿಸು ದೇವ |
ಕುನ್ನಿ ಎಂದದಿ ದುರುಳರನ್ನು ಆಶ್ರೈಸಲು |
ಅನ್ನವ ಕೊಡುವರೇನೊ ನಿನ್ನ ಹೊರತು ಬೇರೆ |
ಧನ್ಯವಾದ ಬುಧರನ್ನು ಪೊಂದಿಸಿ ವೇಗ |
ಘನ್ನ ಭವರೋಗವನ್ನು ಮಾಣಿಸಿ ಕಾಯೋ |
ಹೆಣ್ಣು ಹೊನ್ನು ಮಣ್ಣಾಶೆಯುಂಬೊದು ಎನ್ನ |
ಸುಣ್ಣದ ಕಲ್ಲಿನಂತೆ ಸುಡುವುದೊ ಪ್ರತಿದಿನ |
ಚನ್ನ ಮೂರುತಿ ಸಿರಿ ವೇಣುಗೋಪಾಲನೆ |
ಎನ್ನ ದೇಹದಿ ಸೇವೆಯುನ್ನು ಕೈಕೊಳ್ಳೊಧೊರೆಯೆ ॥ ೬ ॥

ಏಕತಾಳ

ಶಿರ ನಿನ್ನ ಚರಣಕ್ಕೆ ಎರಗುವಂತೆ ಮಾಡೊ |
ಕರ ನಿನ್ನ ಪೂಜೆ ವಿಸ್ತರನಾಗಿ ಮಾಡಲಿನ್ನು |
ಚರಿಸಲು ಪಾದಗಳು ಪುಣ್ಯದೇಶಗಳಲಿ |
ಹರಿ ನಿನ್ನ ನಾಮ ಉಚ್ಚರಿಸಲು ಆನನವು |
ವರನಾಶಿಕ ಕರ್ನ ಸಿರಿ ಅರಸನೆ ನಿನ್ನ |

ವರ ಕಥೆ ನಿರ್ಮಾಲ್ಯಗಳು ಸವಿಯಲು ಅನುದಿನ |
ಪರಮ ಪುರುಷ ಮಿಕ್ಕ ಇರುವ ಇಂದ್ರಿಯಗಳೆಲ್ಲ |
ಸರಿಯದೆ ನಿನ್ನ ಸೇವೆಯನು ಪೊಂದಿದರಲಯ್ಯಾ |
ಸರಸಿಜ ದಳ ನಯನ ವೇಣುಗೋಪಾಲರೇಯಾ |
ಇರಳು ಹಗಲು ನಿನ್ನುಚ್ಚರಿಸುವಂತೆ ಮಾಡೊ || ೭ ||

ಜತೆ

ಭಕ್ತ ವತ್ಸಲ ವೇಣುಗೋಪಾಲ ನಿನಗೆ |
ಯುಕ್ತವಾದದು ಮಾಡೊ ಹಸ್ತ ಮುಗುದೆ ನಾನು || ೮ ||

## ಸುಳಾದಿ (೧೦) ೮೫

ಸಕಲ ಬಹಿರಂತರವ್ಯಾಪ್ತ ಶ್ರೀಹರಿಯ ಧೇನಿಸಿ ಉಪಾಸನೆ
ಮಾಡುವ ಕ್ರಮ.

ರಾಗ ಭೈರವಿ ಧ್ರುವತಾಳ

ತಡವ್ಯಾಕೆ ತಿಳಿ ಮನವೆ ಒಡಿಯ ವಿಟ್ಠಲನ ಮಹಿಮೆ |
ಧೃಡವಾಗಿ ಬುದ್ಧಿಯಿಂದ ಬಿಡದೆ ಸಂಚರಿಸು |
ಜಡವೆಲ್ಲ( ಜಡವಲ್ಲ)ಹರಿಯ ಮಹಿಮೆ ನುಡಿಯಲಾಹರಿನಾಮಾ|
ಪೊಡವಿ ಪ್ರಾಣಿಗಳ ಒಡಲೊಳಿದ್ದು ನಡೆದು ನಡೆಸುವನು |
ನುಡಿದು ನುಡಿಸುವನು ಪಿಡಿದು ಪಿಡಿಸುವನುತಡೆದುತಡೆಸುವನು
ಜಡಜ ಸಂಭವ ಸಿರಿ ಮೊದಲಾದವರಿಗೆಲ್ಲ |
ತುಡಕಿ ಒಂದಾದರು ಎವೆ ಇಡಲು ಸ್ವಾತಂತ್ರವಿಲ್ಲ |
ಬಡವರಾಧಾರಿ ವೇಣುಗೋಪಾಲ ವಿಟ್ಠಲನು |
ಸಡಗರದ ಲೀಲೆ ಸಕಲ ಕಾಲದಿ ಮಾಳ್ಪ |

ಮಟ್ಟ ತಾಳ

ಇದೆ ಜಪ ವೆಂದೆನ್ನು ಇದೆ ತಪ ವೆಂದೆನ್ನು |
ಇದು ತಿಳಿದು ಸರ್ವಸಾಧನ ವೆಂದೆನ್ನು |

ಆದು ಭೂತ ಚರಿತ ಅಗಾಧ ಮಹಿಮ |
ಸದಮಲಾನಂದನ್ನ ಹೃದಯದೊಳಗೆ ಪಥವಿ |
ಡಿದು ಮೌಳಿಯು ಪರ್ಯಂತದಲ್ಲಿ |
ಪದು ಮಾಷ್ಟದಳದೊಳಗೆ ಚಿಂತಿಸಿ ಸತತ |
ಬುಧ ಜನ ಸಂಗತಿಯು ಪಡೆದು ಪಾಪವ ಕಳೆದು |
ಸುಧೆ ಉಂಡತೆರದಿ ಸುಮುಖದಿ ಸಂಚರಿಸು |
ಮಧು ವೈರಿ ವೇಣುಗೋಪಾಲ ವಿಟ್ಠಲನ್ನ |
ಬದಿ ದೂರ ವೆರಡು ಸ್ಥಳದಲ್ಲಿ ಧೇನಿಸುತ ॥ ೨ ॥

ತ್ರಿವಿಡಿ ತಾಳ

ಕೋಪ ನೀಗುವದು ತಾಪ ನೀಗುವದು |
ಭೂಪರ ಸೇವಿಸಿ ತಾಪಸರನು ಸರಿಸು |
ಅಪವರ್ಗದಾರಿ ರಾಪಾಗದಂತೆ ನೀ |
ವ್ಯಾಪಿ ವ್ಯಾಪಿಗೆ ತಿಳಿದು ಪಾಪದೂರನಾಗು |
ರೂಪ ಅಪರೂಪದಲಿ ಶ್ರೀಪತಿಯು ಮೂರುತಿ |
ಆಪಾದ ಶಿರಸದಿ ಅವಯವ ಸಹಿತಸ್ವ |
ರೂಪವ ಇರನೋಡಿ ಅಲ್ಲಲ್ಲೆ ಸಿರಿವಾಯು |
ಆ ಪುರ ವೈರಿ ಅಮರೇಶ ಮೊದಲಾದ |
ತಾಪಸರಿಂದಲಿ ಸೇವೆಯು ಕೊಳುತಲಿ |
ಶ್ರೀಪತಿ ವೇಣುಗೋಪಾಲ ವಿಟ್ಠಲನ್ನ ಚಿಂತಿಸು |
ವ್ಯಾಪಾರ ಸಕಲ ಶ್ರೀಹರಿಯಾಧೀನವೆನ್ನು ॥ ೩ ॥

ಅಟ್ಟ ತಾಳ

ತನುವು ನಿನ್ನದೆನ್ನು ಮನವು ನಿನ್ನದೆನ್ನು |
ವನಿತೆ ಮೊದಲಾದ ಸಕಲ ಸಂಪತ್ತು ಯುಳ್ಳಿಸಿತು |
ಎನ್ನದಲ್ಲ ಯಾವತ್ತು ನಿನ್ನದು |
ಕನಸು ಸುಷುಪ್ತಿ ಜಾಗರಾದಿಗಳಲ್ಲಿ |

ಮಿನುಗುವ ಶುಭಂಗಳು ಏನೇನು ಆದರು |
ಘನ ಮಹಿಮನೆ ನಿನ್ನವೆನ್ನು ಮತ್ತೆ ಎನ್ನು |
ಆಸಿಮಿತ್ಯ ಬಂಧು ವೇಣುಗೋಪಾಲ ವಿಟ್ಠಲನು |
ದಿನದಿನದಲ್ಲಿ ಸುಖವನಧಿ ಸೇರಿಸುವನು ॥ ೪ ॥

ಆದಿ ತಾಳ

ನಾನು ನಿನ್ನಾಧೀನ ನಾನಾವಿಧ ಕ್ರಿಯಂಗಳು |
ನೀನು ನೇಮಿಸಿದಂತೆ ಮಾಡುವೆನೊ ಎಂದು |
ಮಾನಸದಿ ಕ್ರಿಯಗಳಿಗೆ ನೀನೆ ಪ್ರೇರಕನೊ ಸ್ವಾಮಿ |
ದಾನವ ದೇವತೆಗಳ ಹೊರಗೆ ಒಳಗೆ ನೀನೆ ಇದ್ದು |
ಮಾಣದೆನ್ನ ಮಾಜದೆನ್ನ ಪ್ರಾಣಪ್ರೇರಕನೀ ಎಂದು |
ಮೇಣು ಚಿಂತೆಯು ಮಾಡಿ ಭವದ ಕಾನನವ ದಾಟುವದು |
ವಾಣಿಯು ರಸ ನೊಡಿಯಾ ವೇಣುಗೋಪಾಲ ವಿಟ್ಠಲನು |
ಆನು ನಿನ್ನಾಧೀನನೆಂಬ ಜ್ಞಾನಪೂರ್ಣನ ಮಾಡೆ ಇನ್ನು ಎನ್ನ |

ಜತೆ

ಬಾಹಿರಂತರ ಭರಿತಾ ವೇಣು ಗೋಪಾಲ ವಿಟ್ಠಲನ್ನ |
ಸ್ನೇಹದಿಂದಲಿ ನೆನೆದು ಸುಖಿಸುವದು |

## ಸುಳಾದಿ (೧೧) ೮೬

ಗುರುಗಳ ಆಜ್ಞೆಯಂತೆ ಜ್ಞಾನ ಸಂಪಾದಿಸಿ ಜ್ಞಾನವಂತನಾಗಿ
ಸಕಲವೂ ಸರ್ವತಂತ್ರನಾದ ಹರಿಯಾಧೀನ ಚಿಂತಿಸುವದೆ ಅಧಿಕ ಸಾಧನ

ರಾಗ ಶಂಕರಾಭರಣ ಧ್ರುವತಾಳ

ಚಿಂತಿಸದಿರು ಮನವೆ ಚಿತ್ತ ಚಂಚಲನಾಗಿ |
ಸಂತೋಷವನು ತಾಳು ಸತತ ತಿಳಿದು |
ಅಂತುಗಾಣದ ಕರ್ಮ ಅತಿಶಯವೆಂದು ತಿಳಿದು |
ಭ್ರಾಂತನಾಗಲು ಬೇಡ ಬಲು ಮೋಹದಿ |
ಸಂತರ ವಚನಕೆ ಸಂಶಯವಾಗದೆನಿ |

ಶ್ಚಿಂತನಾಗುವವು ನಗುತ ನೀನು ।
ಮುಂತಿನ ಪುಣ್ಯ ನಿನಗೆ ಮುಂಕೊಂಡು ಎದುರಲಿ ।
ನಿಂತಿಹದದರಿಂದ ನಿರುಪಾಧಿಕ ।
ಸಂತತ ಗುರುಗಳು ಸಮ್ಯಗರಾಗಿ ನಿನಗೆ ।
ಕಂತುಪಿತನ ಮಹಿಮೆ ತಿಳಿಸುವರೊ ।
ರೆಂತು ಯುಳ್ಳನಿತ್ತಾದರು ಹೃಧಯದೊಳದಿದ್ದೆ ನಿ ।
ಪಂಥನು ಸರಿಯಾಗು ಗುರುವಾಕ್ಯದಿ ।
ಜಂತು ಜಡಗಳಲಿ ಶ್ರೀಕಾಂತ ಒಳ ಹೊರಗಿದ್ದು ।
ತಂತು ನಡಿಸುವ ತನ್ನ ತೋರಗೊಡದೆ ।
ಅಂತರ್ಯಾಮಿ ಸರಾಖಿಳ ವ್ಯಾಪಾರ ಮಾಡೆ ।
ಎಂತು ನಿನಗೆ ಸುಖ ಯೋಚಿಸಿಕೊ ।
ರಂತಾಗಗೊಡದಿರು ರಹಸ್ಯವೆಂದೀ ಮಾತು ।
ಅಂತಃಕರುಣನು ಭವದಿ ಭಜಿಸು ಹರಿಯು ।
ದಂತಿ ವರದ ನಮ್ಮ ವೇಣು ಗೋಪಾಲ ವಿಟ್ಠಲ ।
ಎಂತಾದರೇನು ತನ್ನ ಬಳಿಯು ನೀವಾ ॥ ೧ ॥

ಮಟ್ಟತಾಳ

ಜ್ಞಾನವಂತನಾಗು ಜ್ಞಾನಿಗಳಿಗೆ ಬಾಗು ।
ಜ್ಞಾನ ಕರ್ಮವ ನೆಸಗು ।
ಜ್ಞಾನಬಳಗಿನಿಂದ ಜ್ಞಾನ ತಮವ ನೀಗು ।
ಜ್ಞಾನವೇ ಸಕಲ ಸಾಧನಕ್ಕೆ ಪ್ರಧಾನ ।
ಜ್ಞಾನವೇ ಮುಖ್ಯ ಮುಕುತಿಗೆ ಸೋಪಾನ ।
ಜ್ಞಾನವೇ ಭವ ಪಾಶ ಮೋಚನ ಮಾಡುವದು ।
ಜ್ಞಾನವೇ ಹರಿಮೂರ್ತಿ ಸೂಚನೆ ಮಾಡುವದು ।
ಜ್ಞಾನಕ್ಕಿಂತಲಿ ಮತ್ತೆ ಏನತ್ಯಧಿಕವಿಲ್ಲ ।
ಜ್ಞಾನಕ್ಕಿಂತಲಿ ಸುಖ ಯೇನು ತೋರುವದಿಲ್ಲ ।
ಜ್ಞಾನಹೀನರ ಸಂಗ ನೀನು ಮರಿಯೊ ಸು ।

ಜ್ಞಾನ ಜ್ಞಾನವಂತರ ಸಂಗ ನೀನು ಪಡಿಯೊ ಮಹ ।
ಜ್ಞಾನವಂತರೊಡಿಯ ವೇಣು ಗೋಪಾಲ ವಿಟ್ಠಲ ।
ನೀನೆ ನೀನೆ ಎಂದು ನಲಿನಲಿದಾಡುವದೊ ॥ ೨ ॥

ತ್ರಿವಿಡಿತಾಳ

ಹರಿ ಇಚ್ಛೆ ಜಗದೊಳು ಹರಿಯೆ ಸಕಲ ಠಾವು ।
ನರರಿಗೆ ತಿಳಿಯಗೊಡದೆ ಇರುತಿಪ್ಪದೊ ।
ಹರಿಭಕ್ತರಿದರೊಳು ಹರಿಪ್ರೇರಣೆಯಿಂದ ।
ಅರುವರು ನರಹರಿಯ ಲೀಲೆಯನ್ನು ।
ಪರಮ ಕರುಣದಿಂದ ಗುರುಗಳು ನಿನಗೊಂದು ।
ಗುರುತಿನ ವಾಕ್ಯವ ತೋರರಿಲು ।
ಅರಿತುಕೋ ಅದರೊಳು ಸಕಲ ಸಾಧನವುಂಟು ।
ಗುರುಗಳು ನುಡಿದ ವಚನ ದೃಢವಾಗಿ ।
ಅರಮರೆ ಮಾಡದೆ ಆದರದಿ ಭಕುತಿಯ ।
ಗುರು ಹಿರಿಯರಿಗೆರಗಿ ಹರಿಲೀಲೆಯಾ ।
ಗುರುತಿಟ್ಟು ಮನ ಸರ್ವ ಇಂದ್ರಿಯಗಳೊಳು ।
ಬೆರಸಿದರೆ ಮುಖ್ಯ ಸಾಧನದ ಶಿ ।
ಖರ ಮುಖ್ಯ ಎಂದರಿಯೊ ಇ ।
ತರ ಸಂಶಯ ಸಾಕು ಒಂದು ಹರಿಪಾದದಲ್ಲಿ ಮನವೆರಕಮಾಡು ।
ಪರಮಾಣು ಜೀವರೊಳು ನಾರಿ ಸಿರಿದೇವಿ ಸಹಿತದಿ ।
ಇರುತಿದ್ದು ಹರಿ ಸಕಲ ಕಾರ್ಯಗಳನ್ನು ।
ಹೊರ ಹೊರಗೆ ಇರುತಿಪ್ಪ ಅಧಿಷ್ಠಾನಾದಿ ಸಕಲ ।
ಸರಸಿಜೋದ್ಭವಾದಿಗಳ ಮನೆಯನು ಮಾಡಿ ।
ಹೊರಗೆ ಒಳಗೆ ತಾನೆ ಯಾವತ್ತು ವ್ಯಾಪಿಸಿ ।
ಹರುಷದಿಂದಲಿ ಸತಿಯಳ ಪ್ರೊಡಗೂಡಿ ।
ಸರಿಸಮಾನರು ಒಬ್ಬರಿಲ್ಲದು ದೇವ ತನ್ನ ।
ವರ ಸಂಕಲ್ಪಾನಾದಿ ಸತ್ಯಮಾಳ್ಪ ।

ನಿರುತ ನೀನು ಕಾಂಬ ಯಾವತ್ತು ಆಕಾರ |
ಪರಮಾಣಾತ್ಮಕ ಕಾರ್ಯಕಾರಣದ |
ಅರಿಯೊ ನೀ ಅದುಭೂತ ವ್ಯಾಪ್ತರಾಗಿರುವರು |
ಹರಿಸಿರಿ ವಿರಿಂಚಿ ಮುಖ್ಯರೆಲ್ಲ |
ಪರಮ ಪುರುಷ ಹರಿಸೇವೆ ಮಾಡುತ ಅಲ್ಲಿ |
ಇರುವರು ತದ್ವರ್ಣ ತದಾಕಾರದಿ |
ಭರದಿಂದ ಜಡದೊಳು ಶಬ್ದ ಪುಟ್ಟಲು ಅದು |
ಸಾರುವರಹುದಹುದು ಹರಿ ಪ್ರೇರಣೆಯು |
ಹರಿಶಬ್ದವಾಚ್ಯಾ ಹರಿನಿಯಾಮುಕಾ |
ಹರಿಶಬ್ದ ಮಾಡೆ ಸರ್ವರು ಮಾಳ್ಪರು |
ಹರಿ ಸುಮ್ಮನಿರೆ ಒಂದು ಆಗದು ನುಡಿನಡೆ |
ಹರಿಯೆ ಈ ಜಗಕೆ ಕಾರಣ ಮುಖ್ಯದಿ |
ಸುರರು ಸಾಂಶರು ಹರಿಯು ಅಭಿನ್ನನೊ |
ಪೂರ್ಣದ್ರವ್ಯವಂತ ಎಲ್ಲಿದ್ದರು |
ಧರೆಯೊಳು ವಸ್ತ್ರಾಗ್ರಾಹದ ಸರ್ವೋಹಗಳೊಳು |
ಬೆರಿಸಿ ವ್ಯಾಪಿಸಿದಂತೆ ಹರಿವ್ಯಾಪ್ತಿಯೋ |
ಪರಮ ಅದ್ಭುತ ಮಹಿಮ ಪರಮ ಆಶ್ಚರ್ಯಚರಿತ |
ಪರ ಬೊಮ್ಮ ಪರಮೂರ್ತಿ ಪರಮಾತ್ಮನಾ |
ಅರಕ್ಷಣ ಮರಿಯದೆ ಸ್ಮರಿಸುವದು ನೀನು |
ಕುರುಹ ಕಾಣುವಿ ಇದರಿಂದ ವೇಗ |
ಪರಮ ಮುಖ್ಯ ಪ್ರಾಣಜಗಕೆ ವೇಣುಗೋಪಾಲವಿಟ್ಠಲ |
ಅರಸಿನ ಲೀಲೆ ಅರಿತು ಸುಖಿಸುವದು | ॥ ೩ ॥

ಅಟ್ಟ ತಾಳ

ದಾನ ಧರ್ಮ ಪರ ಉಪಕಾರ ಯಾಗಾದಿ |
ಏನೇನು ಕರ್ಮ ಸಫಲವಾಗಲು ಮತ್ತೆ |
ಜ್ಞಾನಿಗಳ ಕರುಣ ಸಂದಿಸುವದು ಮಹಾ ಹರಿ ವ್ಯಾಪಾರ |
ಕಾಣಿಸಿ ಸುಖಸಿಂಧುವೆ ಸೇರುವನು ಸುರ |

ಶ್ರೀಣಿಯು ಕರುಣಸೇವಾರ್ಕದಿಂದಹಲವುಬಗೆ ಯೋಚಿಸಿ ಸತತ|
ಹೀನನಾಗದಿರು ಹರಿಧ್ಯಾನಕೆ |
ದಾನವಾರಿ ವೇಣುಗೋಪಾಲ ವಿಟ್ಠಲ |
ತಾನು ಒಲಿದು ನಿನ್ನ ಮಾನಸದಲ್ಲಿ ಪೊಳೆವಾ |

ಅದಿ ತಾಳ

ಹಸಿದವನಿಗೆ ಷಡುರಸನ್ನ ದೊರಕಿದಂತೆ |
ತೃಷಿಯು ಪೀಡಿತಗೆ ಪೀಯೂಷಮಡು ಸಿಕ್ಕಿದಂತೆ |
ವಸನ ಹೀನಗೆ ವಜ್ರಹೊಸ ಕವಚದೊರೆದಂತೆ |
ಬಿಸಲಿಂದಾರ್ತನ್ನವನಕೆ ವಸಂತ ವೈದಂತೆ |
ಪುಸಿಯಲ್ಲ ಕೇಳು ಮನವೆ ಹಸಗೆಟ್ಟು ಪೋಪೆನಗೆ |
ಬಿಸಜ ಮಿತ್ರನ ಏಕರಸ ಸಿಕ್ಕಿದದರಿಂದ |
ನಸು ನಗೆ ಮೊಗ ವೇಣು ಗೋಪಾಲ ವಿಟ್ಠಲನ್ನ |
ಕುಶಲಕ್ಕೆ ಮೆಚ್ಚಿ ಪಾದ ಬಿಸಿಜಕ್ಕೆ ಭೃಂಗನಾಗೊ || ೫ ||

ಜತೆ

ಆಧೀನ ತಿಳಿವದಕ್ಕಿಂತ ಅಧಿಕ ಸಾಧನವಿಲ್ಲ |
ಒದಗಿ ಸ್ಮರಿಸು ವೇಣು ಗೋಪಾಲ ವಿಟ್ಠಲನ || ೬ ||

---

## ಸುಳಾದಿ (೧೨) ೮೭

### ಶ್ರೀ ಪುರಂದರದಾಸರ ಸ್ತೋತ್ರ

ರಾಗ ಭೈರವಿ ಧ್ರುವತಾಳ

ತಂದೆ ಪುರಂದರ ದಾಸರ ಮಹಿಮೆಗಳು |
ಒಂದೊಂದು ನೋಡಲು ವಿಚಿತ್ರ ತೋರುತಲಿವೆ |
ಛಂದ ಛಂದ ಗುಣ ಮಂದಮತಿಗಳ ಮನ್ಮನಕೆ |
ಅಂದು ವಾವೆ ವಿಷಯ ಹೊಂದಿಕೊಂಡಿಪ್ಪರಿಗೆ |

ಒಂದೆ ಮನಸಿನಲ್ಲಿ ಪೊಂದಿ ಪಾದಾರವಿಂದ |
ದ್ವಂದ್ವವ ಭಜಿಸಲು ಬೆಂದು ಪೋದವು ಪಾಪಾ |
ಅಂದದಿ ಇನನು ಉದಯಿಸೆ ನಿಂದಿರುವದೆ ತಮ |
ಸುಂದರಂಗದ ಬೆಳಗಿನಿಂದ ಅಘಪೋಡುವದು |
ಹಿಂದೆ ಬಹು ಜನುಮಾ ಪಿಡಿದು ಮಂದರಧರನ ಪೂಜೆ |
ಯಿಂದ ಸಾಧುಗಳಿಗೆ ವಂದನೆ ಮೊದಲಾದ |
ಕುಂದದ ಸೇವೆಗಳಿಂದ ಸತತ ಅವರ |
ಮಂದಿರದೊಳಗಿದ್ದು ನಂದಾಬಡುವಗಲ್ಲದೆ |
ಮುಂದುವರೆಯದು ದುರುಳರಿಂದ ಉಪಜೀವಿಯಾದಾ |
ಅಂಥ ಬಲ್ಲನೆ ಇವರಿಂದಾಗುವ ಚರಿತ್ರೆಯನ್ನು |
ಸಿಂಧುಶಯನ ಸಿರಿವೇಣು ಗೋಪಾಲ ಇವರ |
ಮುಂದೆ ಕುಣಿದಾಡಿದನು ವಂದರಘಳಿಗಿ ಬಿಡದೆ ॥ ೧ ॥

ಮಟ್ಟ ತಾಳ

ಯಾತ್ರಿಗಳು ಎಲ್ಲಾನೇಕವಾಗಿ ಮಾಡಿ |
ತೀರ್ಥಗಳು ಎಲ್ಲಾ ಖ್ಯಾಪಿ ಖ್ಯಾಪಿಗೆ ಮಿಂದು |
ಪಾತ್ರರಾದ ಬುಧರ ಪ್ರೀತಿ ಸಂಪಾದಿಸಿ |
ಸ್ತೋತ್ರಗಳು ಎಲ್ಲಾ ವಾರ್ತಿಯಿಂದಲಿ ಮಾಡಿ |
ಗಾತ್ರವ ಬಳಲಿಸಿ ಸಾರ್ಥಕ ತಪದಿಂದ |
ಮಾತೃ ಪಿತೃಗಳ ಮಾತು ಲಾಲಿಸಿ ಮುದದಿ |
ನೇತ್ರದಿಂದ್ರಿಯ ಹರಿಯ ಮೂರ್ತಿಯಲ್ಲಿಟ್ಟು |
ಸ್ತೋತ್ರಗಳೆಲ್ಲಾ ಜರಿದು ಆರ್ತಿಯ ಪರಿಹರಿಸಿ |
ಕೀರ್ತಿವಂತ ನಮ್ಮ ವೇಣುಗೋಪಾಲ ವಿ |
ಚಿತ್ರ ತೋರುವ ತನ್ನ ಭಕ್ತರ ಮಹಿಮೆಗಳ ॥ ೨ ॥

ತ್ರಿವಿಡಿ ತಾಳ

ದೇಶವಾ ತಿರುಗಲು ಲೇಸು ಬಪ್ಪುದು ಯೇನು ? |
ಕಾಸಿ ಪಟ್ಟಣದಲ್ಲಿ ವಾಸವಾಗಿದ್ದರೇನು ? |

ಸೂಸಿ ಉದಕ ವಾರಣಾಸಿಯಿಂದಲಿ ತಂದು ಸೇ |
ತು ಶಿವಗೆ ಅಭಿಷೇಕ ಮಾಡಿದರೇನು ? |
ಈಶಾ ವೊಲಿವೊನಲ್ಲ ಶಾಶ್ವತ ತಿಳಿವೊದು |
ಲೇಸಾಗಿ ನಿರುತ ದ್ವಾದಶನಾಮ ಸಿರಿಮುದ್ರೆ |
ಪೂಸಿ ಗಂಧದಿ ಅಂಗ ಭೂಷಣ ಮಾಡಿಕೊಂಡು |
ಮೋಸಗೊಳಿಸಿ ನರರ ಆಶ್ರೈಸಿಕೊಡುವದೇನು |
ಆಶಯು ಬಿಟ್ಟು ಜಗದೀಶನ್ನ ದಾಸರ ಭ |
ಜಿಸಿದವನ ಜನುಮಾ ಕಾಶಿಗಿಂತಧಿಕವೆನ್ನು |
ಮೋಷ ದೂರರಾಗಿ ಚರಿಸುವರಾಗುಣಾ |
ಆಸೂ ತಿಳಿಯದಿರೆ ಲೇಶವಂದೆಂಡಾಗರು |
ಮೀಸಲ ಮನದಿಂದ ಉಣಿಸಿದವಗೆ ಇತರ |
ದೋಷವು ಬರಲುಂಟೇ ಶ್ರೀಶವೊಲಿವ ಮತ್ತೆ |
ಶೇಷಶಯನ ನಮ್ಮ ವೇಣುಗೋಪಾಲ ತನ್ನ |
ದಾಸರ ಮೂಲದಿಂದುಪದೇಶ ಮಾಡುವ ಜ್ಞಾನ || ೩ ||

ಅಟ್ಟತಾಳ

ಇಂದಿರಾದೇವಿಯು ರಮಣನ್ನ ರೂಪವ |
ಮುಂದೆ ಕುಣಿಸುವರು ಛಂದದಿಂದಲಿ ಸರ್ವ |
ನಂದಿವಾಹನ ಮೊದಲಾದ ಅಮರವೃಂದ |
ಬಂದು ಆಕಾಶದಿ ನಿಂದು ನೋಡುತಲಿರೆ |
ನಂದನ್ನ ಕಂದನಾಡುವ ತಾಳಗತಿಯಿಂದ |
ಅಂದ ಬಣ್ಣಿಪರಾರು ಯೆಂದು ಅಮರಗಣ |
ದಿಂದ ಜಯಜಯ ವೆಂದಾನಂದ ಭರಿತರಾಗಿ |
ಇಂದ್ರಾನುಜ ನಮ್ಮ ವೇಣು ಗೋಪಾಲನ್ನ |
ಪೊಂದುವನರನಾದ ರೊಂದಿಸುವ ಇವರ | || ೪ ||

ಆದಿ ತಾಳ

ಪರಿಪರಿಯಲಿನ್ನು ಸಿರಿ ಅರಸನ್ನ ಭಜಿಸಿ |
ಪಿರಿದಾಗಿ ಸರ್ವರಿಂದ ಅರುಹಿ ಉದ್ಧರಿಸುವ |

ಕರುಣದಿಂದಲಿ ವರ ಕಲಿಯುಗದಲ್ಲಿ ಹರಿಯಾ ।
ಚರಿತೆಯು ಕವನವ ಬಿತ್ತರಿಸಿ ಪೇಳಿದರಾಗಿ ।
ಪರಮ ಗುರುಗಳೆಂದು ಅರುವಾರು ಸುಜನರು ।
ನಿರುತ ಸಂಸಾರದೊಳಿದ್ದು ದುರಿತ ಉಂಬುವದ್ಯಾಕೆ ।
ಪರಮ ರಹಸ್ಯ ತತ್ವ ಸುರಿವವು ಕವನವು ।
ಅರಿತು ಬದುಕಬೇಕು ನರಜನ್ಮ ಬಂದುದಕ್ಕೆ ।
ಧರಾಧರ ನಮ್ಮ ವೇಣುಗೋಪಾಲನ್ನ ।
ಚರಣ ವಿಡಿದ ಪುರಂದರ ದಾಸರ ನಂಬಿರೋ ॥೫॥

ಜತೆ

ಪುರಂದರ ದಾಸರ ಚರಿತೆ ಗುಣಿಸಿದರೆ ।
ಸಿರಿ ವೇಣು ಗೋಪಾಲ ಪೊರೆವ ನಿತ್ಯದಲ್ಲಿ ॥ ೬ ॥

— ಶ್ರೀ ಗುರು ಮಧ್ವೇಶಾರ್ಪಿತವು —

ಶ್ರೀ ವಿಜಯದಾಸರ ಅನುಜರೂ ಶಿಷ್ಯರೂ
ಅಪರೋಕ್ಷ ಜ್ಞಾನಿಗಳೂ ಆದ,

# ಶ್ರೀ ಹಯವದನ ವಿಟ್ಠಲರ

## ಸುಳಾದಿ (೧) ೮೮

ರಾಗ ಕಲ್ಯಾಣಿ, ಧ್ರುವತಾಳ

ಸಕಲ ಚೇಷ್ಟಕ ಹರಿ ತಾನು ಸರ್ವರೊಳು |
ಅಖಂಡವಾಗಿ ಇದ್ದು ಮಾಡಿಸುವದು ತಿಳಿಯದೆ |
ಮಕ್ಕಳ ಆಟಕಿಯ ಮನವೆ ಕಕುಲಾತಿಯಿಂದ ಪಾ |
ಪಕ್ಕೆ ಎರಗದಿರು ಅಹಂ ಮತಿಯಿಂದ |
ಲಕುಮಿ ರಮಣನು ತಾನು |
ಅಕಳಂಕನಾಗಿ ಜೀವಕೆ ಪುಣ್ಯ ಪಾ |
ಪಕ್ಕೆ ಅಲ್ಪ ಸ್ವತಂತ್ರ ನೀಡೆ |
ಮುಕುತಿ ತಿಳಿಯದೆ ನೀನು ಸುಖ ದುಃಖ ಎನ್ನವೆಂದು |
ಪುಕ್ಕಟೆ ಹಂಬಲದಿಂದ ವಖ್ಖಣಿಸೂವೆ |
ರುಕ್ಮಿಮಿಣಿ ಪತಿ ತಾನು ವಿಕಸಿತ ವದನದಿಂದ |
ಸಖನಾಗಿ ತಾನೆ ಶೋಧಕನಾಗಿ ಮಾಡಿಸುವಾ |
ಅಕಳಂಕ ಶ್ರೀ ಹಯವದನ ವಿಟ್ಠಲರೇಯಾ |
ಮುಕುರದಂತೆ ಮಾಡಿ ಪ್ರತಿಬಿಂಬನೆನಿಸುವಾ ‖ ೧ ‖

ಮಟ್ಟತಾಳ

ಜೀವನ ಭವ ರೋಗ ಯೋಗ್ಯತಾವನು ತಿಳಿದು |
ಕಾವನು ಕರುಣದಲಿ ಔಷಧವಹಾರಿ |
ಕೋವಿದ ತನದಲ್ಲಿ ವೈದ್ಯನಂದದಿ ತಾನು |
ಸೀ ವಸ್ತುವ ನೋಡಿ ರುಚಿ ತಿಳಿದುಳವರಿ |
ಸೇವಿಸುವನು ಜೀವನಗೋಸುಗವಿತ್ತು |

ಪಾವನ ವಲ್ಲದೆ ವಿಷಔಷಧವಿರಲು ।
ತಾವಲ್ಲದೆ ವೈದ್ಯ ರೋಗಿಗೆ ಕೊಡುವಂತೆ ।
ಕಾವ ಕರುಣದಿಂದ ರೋಗ ಕರ್ಮವ ಬಿಡಿಸಿ ।
ಆ ವೈದ್ಯಗೆ ಔಷಧ ಬೇಕಾಗದು ಕಾಣೊ ।
ಭೂ ವಲ್ಲಭ ಹಯವದನ ವಿಟ್ಠಲರೇಯಾ ।
ಹ್ಯಾವರ ವಿಲ್ಲದಲೆ ಲೀಲೆಯ ತೋರುವನು ॥ ೨ ॥

ತಾಳ ತ್ರಿವಿಡಿ

ನರರ ಸುಖ ದುಃಖ ತಾನೆ ತೆಗೆದುಕೊಂಡು ।
ಅರಿದು ಅವರಿಗೆ ತಕ್ಕನಿತು ಕೊಡುವನಲ್ಲದೆ ।
ಇರಬಲ್ಲದೆ ಇವಗೆ ಮಾಡಿದ ಫಲಗಳು ।
ಹರಿ ತಾನೆ ಉಂಬುವನೆಂದಡೆ ಆತಗೆ ।
ಹರುಷ ಕಷ್ಟವು ಹತ್ತದು ಕಾಣೊ ತಿಳಿವದು ।
ಅರವಿಂದ ಸಖನಿರಲು ದೀಪ ಎದುರಿಗೆ ।
ಇರಲು ದೀಪದ ಬೆಳಕು ರವಿಗೆ ಇದ್ದಂತೆ ಈ ।
ನರರ ಸುಖವು ದೇವರಿಗೆ ಕಾಣೊ ಈ ।
ವರದೋಷವೆಂಬೊ ಕತ್ತಲು ಆದಿತ್ಯಗೆ ।
ಯರಕವಾಗಬಲ್ಲದೆ ಸರಿಸಕ್ಕೆ ಪೋಗಿ ।
ಹರಿ ಸರ್ವೋತ್ತಮ ಹಯವದನ ವಿಟ್ಠಲರೇಯಾ ।
ಅರಿದು ಈ ಮನುಜಂಗೆ ಅರಹು ಮಾಡುವನು ।

ಅಟ್ಟತಾಳ

ಈ ಪರಿಯಲಿ ರಮಾಪತಿ ಮಹಿಮೆಯ
ಆಪಾರ ಜನುಮಕ್ಕೆ ತಿಳಿಯಲು ತನ್ನಯ ।
ರೂಪ ತಿಳಿಸಿ ಧನ್ಯನ ಮಾಡಿ ಮುಕುತಿಗೆ ।
ಸೋಪಾನವಾಗಿ ಕರೆದೊಯ್ದು ವೇಗನೆ ।
ಪಾಪ ರಹಿತನ್ನ ಮಾಡಿ ಕರುಣದಿಂದ ।

ಗೋಪಾಲರ ಕೂಡಾಡಿದಂತೆ ಸ ।
ಲ್ಲಾಪ ಬಡಿಸುವ ಅಂತರಂಗದಲ್ಲಿದ್ದು ।
ಶ್ರೀಪತಿ ಹಯವದನ ವಿಟ್ಠಲಗೆ ಸರಿಮಿಗಿಲು ।
ಭೂಪಾರದೊಳು ಎಣೆಗಾಣೆ ಸರ್ವದಲ್ಲಿ || ೪ ||

ಅದಿತಾಳ

ಸರ್ವರೊಳು ಸಮ ಉಳ್ಳ ಶ್ರೀನಿವಾಸನ್ನ ।
ಊರ್ವಿಯೊಳು ಪುಣ್ಯ ಪಾಪದಲ್ಲಿ ವರಗಳ ।
ಓರ್ವ ಪ್ರಕಾರ ಕೊಡದಲೆ ಪರಿ ಪರಿ ।
ಕರ್ವೂತ್ತ [ಕರವುತ] ಲಿತ್ತು ಹರುಷ ಬಡಿಸುವದೇನೂ ।
ತರ್ವಾಯ ಇದಕೆ ವಚನ ಉಂಟುಧಿಷ್ಠಾನ ।
ಪರ್ವತ ವೆಂಕಟೇಶ ಮೊದಲಾದದಲ್ಲಿ ।
ಸರ್ವ ಜೀವರ ನಿಮಿತ್ಯವಲ್ಲದೆ ತನಗೆ ।
ನಿರ್ವಾಣದಲಿ ಎಂತು ಸುಖ ಉಂಟೂ ಅದರಂತೆ ।
ಸುರ್ವೋತ್ತಮ (ಸುರುವುತ್ತ) ವರಗಳ ಗುಣಗಣನಿಲಯನು ।
ಸರ್ವೋತ್ತಮ ಹಯವದನ ವಿಟ್ಠಲರೇಯನ ।
ಮರ್ವ ಉಳ್ಳ ಮನುಜರು ತಿಳಿಯದೆ ಕೆಡುವರು || ೫ ||

ಜತೆ

ತಾರತಮ್ಯದಿಂದ ಹಯವದನ ವಿಟ್ಠಲನ್ನ ।
ಕಾರುಣ್ಯ ಪಡೆವರು ಚೇಷ್ಟಾಕರ್ತನಿಂದ || ೬ ||

## ಸುಳಾದಿ (೨) ೮೯

ರಾಗ ಭೈರವಿ ಧ್ರುವತಾಳ

ನಿತ್ಯ ಕಲ್ಯಾಣ ಪುರುಷೋತ್ತಮ ಶ್ರೀ ರಮಣ ।
ಸತ್ಯ ಸಂಕಲ್ಪ ಸಿದ್ಧ ಉತ್ತಮಾತ್ಮಾ ।
ಹೊತ್ತುಪೋಗಾದಾರೆ ನಂತೆ ಚಿತ್ತದಲ್ಲಿ ನಗುತ್ತ ।
ಹತ್ತು ಆವರಣ ಬೊಮ್ಮಾಂಡ ಪಡೆದು ।

ಮುತ್ತ್ಯಯ್ಯನ ಪೆಸರುಳ್ಳ ಮಗನ ನಿರ್ಮಾಣವಾಡಿ ।
ಹೊತ್ತುಹೊತ್ತಿಗೆ ಆವನ ಅಂತರ್ಯಾಮಿಯಾಗಿದ್ದು ।
ಮತ್ತೆ ಉಳಿದ ಮೃತ್ಯುಂಜಯ ಮೊದಲಾದವರ ।
ತತ್ವಾಭಿಮಾನಿಗಳ ಸೃಜಿಸಿದ ಬಳಿಕ ।
ಬತ್ತಿದಾ ಜೀವರನ್ನು ಎಂಭತ್ತುನಾಲ್ಕು ಲಕ್ಷ ।
ಮೊತ್ತಾ ಯೋನಿಗಳನ್ನು ನೇಮ ಮಾಡಿ ।
ಹತ್ತಿದ ಕರ್ಮವೆಂಬೋ ಸೆವನ ಮಾಡಿ ನೀನು ।
ಜತ್ತಾರ ಬಾಹಿರಾದಲಿ ವಿತ್ತಾನಿಧಿ ಎಂಬೊ ।
ಸ್ವಾತಂತ್ರ್ಯದಲ್ಲ್ಯಾಡುತ್ತಾ ಹತ್ತದೆ ಜೀವರ ಸುಖ ದುಃಖವು ।
ಈ ತೆರದಲ್ಲಿ ಇದ್ದು ಜೀವರಾಸಿಗಳಿಗೆ ।
ವತ್ತಿ ಹಿಡದಂತೆವರ ಯೋಗ್ಯತಾ ತೆಗೆದುಕೊಂಡು ।
ಇತ್ತೆ ಧನ ಸ್ವಾತಂತ್ರ ಸ್ವಲ್ಪವನ್ನೂ ।
ಕತ್ತಲೆ ಹರನಂಗೆ ಪೊಳವುತ್ತ ಜಗದೊಳು ।
ಮತ್ತಾರಿಗಳ ಕಾದು ಮೋದದಿಂದ ।
ಸೋತ್ತುಮರ ಪ್ರಿಯಾಹಯವದನ ವಿಟ್ಠಲರೇಯಾ ।
ಎತ್ತ ನೋಡಲು ನಿನ್ನ ಸಮನಾರಿಲ್ಲ ॥ ೯ ॥

ಮಟ್ಟತಾಳ

ವನಜ ನಾಭನೆ ನೀನು ಘನನೀಕನಾಗಿ ।
ಮನುಜರ ಯೋಗ್ಯತೆ ನರಿತು ಧನವೆಂಬ ಸ್ವಾತಂತ್ರ ।
ಜನರ ಸುಕ್ಷೇಮಕೆ ಗಣಣೆ ಮಾಡಿ ಇಟ್ಟು ।
ಮನೆ ಮನೆಗಳಲ್ಲಿ ನೀ ಇನಿತು ಕಾಲಬಿಡದೆ ।
ಮನಸಿಲಿ ಕನಸಿಲಿ ಕ್ಷಣ ಬಿಡದೆ ಇದ್ದು ।
ಗುಣದಲ್ಲಿ ಈ ಜೀವನು ಸುಕರ್ಮವೆಂಬೊ ।
ಧನ ಲಾಭವು ಪಡಿಯೆ ಅನಿತರೊಳು ನೀನು ।
ಸನುಮತದಲಿ ಬದ್ಧಿಯನು ತೆಗೆದುಕೊಂಬೆ ।
ಕೊನೆತನಕ ಹೀಗೆ ಅನುದ(ನ)ಯದಲಿ ನಡಿಸಿ ।

ಬಿನಗು ನರನ ಸಂರಕ್ಷಣೆ |
ಯನು ಮಾಡುವೆ ಮುನಿಗಳ ಮನೋವಾ |
ಸನೆ ಶ್ರೀ ಹಯವನದ ವಿಟ್ಠಲ ನಿನ್ನ |
ಚಿಸಿವಾರದ ತನದ ಗಣಿಕೆ ಎಣೆಗಾಣೆ ‖ ೨ ‖

ತ್ರಿವಿಡಿತಾಳ

ಕಲಿ ಮೊದಲಾದ ಜೀವರು ನಿನ್ನ ಗಂಟನು |
ಮಲತು ತಿಂದರು ಎಂದು ಬಲವಂತತನದಿಂದ |
ಸಲೆ ಕೂಡಿ ಲೆಖ್ಖವ ಮಾಡಿ ಆವರನ್ನ |
ಕೊಲಿಯಾ ಕೊಲ್ಲಿಸಿ ಶರೆಮನೆಯೊಳು ಹಾಕಿಸಿ |
ಬಳಲಿಸುತಿಪ್ಪೆ ಮಹಾಘೋರದಿಂದ |
ಇಳಿಯೊಳು ಅವನಾದರು ನಿನ್ನ ದ್ರವ್ಯವ |
ಕಲಿಸಿಕೊಂಡದುಂಟೆ ತಮ್ಮದೆಂದೂ |
ಷಲಲಿಜ ಮೊದಲಾಗಿ ತನ್ನ ಸ್ವಾತಂತ್ರದಿ |
ತಲೆಯಲ್ಲಾಡಿಸಲರಿಯಾ ನ್ಯೆಯ್ಯಾ |
ಎಲೊ ದೇವಾ ನೀನಿತ್ತ ಧನವಲ್ಲದೆ ಬೇರೆ |
ಕಳವಿನಿಂದಲಿ ಒಂದು ಇರಬಲ್ಲದೆ |
ಸುಲಭ ಮಾರುತಿ ಹಯವದನ ವಿಟ್ಠಲರೇಯಾ |
ಸಲುಗೆಯಿಂದಲಿ ನುಡಿದು ಕಳೆಗುಂದಿ ಪೋಗೋದು |

ಅಟ್ಟತಾಳ

ಈ ವಿಧದಲಿ ದೇಹಾಖ್ಯ ಅಂಗಡಿ ಇತ್ತು |
ಕಾನಾಳಾದೊಳು ಕಳ್ಳರು ಬಾರದಂತೆ |
ದೇವಕ್ಕಳನು ಕಾವಲಿ ಇಟ್ಟು ನಿತ್ಯದಿ |
ಭೂವಲ್ಲಭನಂತೆ ತೆರಗಿಯ ದಿನ ದಿನ |
ಶ್ರೀವಾಸುದೇವಾರ್ಪಿತವೆನ್ನದಿರೆ ನರ |
ಾ ವ್ಯವಹಾರ ಮಾಡಲು ಫಲವಿಲ್ಲ |
ಕೋವಿದ ತನದಲ್ಲಿ ಒಳ ಹೊರಗೆ ಇದ್ದು |

ಭಾವನೆ ತೋರಿಪ ಜೀವಕ್ಕೆ ಕರ್ತೃತ್ವ |
ಮಾವ ಮರ್ದನ ಹಯವದನ ವಿಟ್ಠಲರೇಯಾ |
ಕಾವಾ ಕರುಣಿ ನೀನಲ್ಲದೆ ಮತ್ತಿಲ್ಲಾ ॥ ೪ ॥

ಆದಿ ತಾಳ

ನೀನೆ ಪೇಳಿದ ವಾಕ್ಯ ಭಗವದ್ಗೀತಾದಲ್ಲಿ |
ಅನೇಕ ಬಗೆಯಲಿ ಭಕುತರಿಗೆ ದಾರಿದ್ರ್ಯಾ |
ನಾನೀವೆನೆಂದು ಪಲ್ಗುಣಗೆ ಪೇಳಿದ ಮೇಲೆ |
ಏನಾದರೂ ಕರ್ತೃತ್ವ ಧನ ಎನಗೆ ಉಂಟೆ |
ಶ್ರೀನಾರಿ ಮೊದಲಾಗಿ ನಿನ್ನ ಸ್ವತಂತ್ರವ |
ಏಣಿಸಲಾರದೆ ಸೋತು ಸುಮ್ಮನಾದಳು |
ಮೀನ ಕೇತನ ಅಣ್ಣ ಮೊದಲಾದವರ ಯೋಗ್ಯ |
ತಾನು ಸಾರವೆ ಬಣ್ಣದಂತೆ ದ್ರವ್ಯವ ಇತ್ತು |
ಮಾಣದೆ ಅಂಗಡಿ ಇಡಿಸಿ ವ್ಯಾಪಾರವ |
ಜಾಣತನದಲ್ಲಿ ನೀ ಮಾಡಿಸಿ ಅವರಿಗೆ |
ಕಾಣುವಂತೆ ಲಾಭ ತೋರಿಸಿ ಪೊರೆವ ದೇವಾ |
ಏನೆಂಬೆ ನಿನ್ನಾ ಧನಪತಿ ತನಕೆ |
ಭಾನು ಕೋಟಿ ತೇಜ ಹಯವದನ ವಿಟ್ಠಲ |
ಮಾನದಲ್ಲಿ ಇಟ್ಟು ಸಂಸಾರ ಕಷ್ಟಕಳಿಯೊ ॥ ೫ ॥

ಜತೆ

ದ್ರವ್ಯಕಾರಣ ಕ್ರೀಯಾ ಭ್ರಮೆ ಗೊಳಿಸಿ ಜೀವರಿಗೆ |
ಅವ್ಯಕ್ತನಾಗಿಪ್ಪ ಹಯವದನ ವಿಟ್ಠಲಾ ॥ ೬ ॥

## ಸುಳಾದಿ (೩) ೯೦

### ನೈವೇದ್ಯ ಪ್ರಕರಣ

ರಾಗ– ಭೈರವಿ ಧ್ರುವ ತಾಳ

ನೈವೇದ್ಯ ಕೊಡುವ ವಿಚಾರವ ತಿಳಿವದು |
ಶ್ರಿ ವಲ್ಲಭನ ಪ್ರತೀಕವೆನಿಲಿಸಿ |

ಭಾವಜ ನೈಯ್ಯಗೆ ಬಗೆ ಬಗೆ ಅಲಂಕರಿಸಿ |
ಪೂವು ಪರಿಮಳ ಗಂಧ ಧೂಪ ದೀಪ |
ಪಾವನವಾದ ಭಕ್ತ ಭಾವದಿಂದಲಿ ತಿಳಿದು |
ಕೋವಿದ ತನದಿಂದ ಡಂಭವ ತೊರೆದು |
ಜೀವಾಂತರಿಯಾಮಿಯಾದ ಅಂತರಾತ್ಮ ಮೂರುತಿಯ |
ದ್ವಿವಿಧ ರೂಪಾಪೆಂದು ಚಿಂತೆ ಮಾಡಿ |
ದೇವನ ದೇಹದೊಳು ತಂದು ಆತನೆ ಆತ್ಮ |
ಈ ವಿಚಾರವ ಗ್ರಹಿಸಿ ಏಕೀ ಭೂತಾ |
ಯಾವತ್ತೂ ಇಂದ್ರಿಯ ಪ್ರೊಳಗಿಪ್ಪ ಮೂರುತಿಯ |
ವಿವೇಕದಲಿ ಸರ್ವ ಐಕ್ಯ ತಿಳಿದು |
ಈವ ಪದಾರ್ಥದಲ್ಲಿ ಹರಿಯೆವ್ಯಾಪ್ತನೆಂದು |
ತಾ ಪ್ರೊಲಿದು ತಾನೆ ಮಾಳ್ಪನೆಂದು |
ಈವವನಲ್ಲ ದೇವೇಶ ಒಳಗಿದ್ದು |
ಕೋವಿದತನದಲ್ಲಿ ಲೀಲೆ ತೋರಿ |
ನಾವೆಲ್ಲ ನಿಮಿತ್ಯ ಮಾತ್ರವೆಂದು ಹರಿಯು |
ದೇವತೆಗಳ ಕೂಡ ಚೇಷ್ಟೆ ಮಾಳ್ಪಾ |
ನಾಪೊಂದು ತಿಳಿವುದು ಶಕ್ಯವಿಲ್ಲೆಂದು ತಿಳಿದು |
ಶ್ರೀ ವಿಭುವಿಗೆ ಸಮರ್ಪಣೆಯ ಮಾಡಿ |
ಶ್ರೀ ವಿಷ್ಣುವಿನ ಅಧೀನ ಚಿಂತೆಯ ಮಾಡಿ |
ಶ್ರೀ ವಾತದೇವನಧಿಷ್ಠಾನದಲ್ಲಿ |
ಮಾವ ಮರ್ದನ ಹಯವದನ ವಿಟ್ಠಲರೇಯಗೆ |
ತವಕದಲ್ಲೀ ಮಂತ್ರ ಪಠಿಸುತ ಈಯಬೇಕು ॥ ೧ ॥

ಮಟ್ಟತಾಳ

ಸ್ನಾನ ಮಾಡಿಸುವಳು ಶ್ರೀ ಲಕುಮಿದೇವಿ |
ವೈನತೇಯನು ಪೀತಾಂಬರ ತಂದಿಪ್ಪ |
ಶ್ರೀ ನಾಗನು ಪೀಠ ತಂದು ಹಾಕುವ ವಾಸ |
ವನು ಕಲಶಗಳನು ತಂದು ಕೊಡುವ ಕಾ |

ಮನು ಗೋಪಿ ಚಂದನವನು ತೇದಿಪ್ಪ ।
ಮೀನ ಕೇತನು ಇಂದ್ರ ಶಂಖ ಚಕ್ರಧರರು ।
ದ್ಯುನಾಥನು ಕನ್ನಡಿ ತೋರ್ಪಾ ।
ವೈನಾಕಿ ರಮಣ ವೈಜಯಂತಿ ಈವ ।
ಶ್ರೀ ನಳಿನೋದರ ಕೌಸ್ತುಭ ಮಣಿ ಇಪ್ಪ ।
ಶ್ರೀ ನಾರಿ ತಾನು ವನಮಾಲಿಯ ನೀಯೆ ।
ಭಾನು ತೇಜ ಪ್ರೋಲ್ವ ಕುಂಡಲ ಶೇಷನು ।
ದಾನವಾರಿಗೆ ನಿತ್ಯ ಸೇವೆ ಮಾಡುವರು ।
ಅನಂತ ಗುಣ ಹಯವದನ ವಿಠ್ಠಲರೇಯಾ ।
ತಾನಿಪ್ಪನು ಭಜಕ ಜನಗಳ ಹೃದಯದಲ್ಲಿ ॥ ೪ ॥

ರೂಪಕತಾಳ

ಮಂಡಲದಲಿ ಭೂಮಿ ವರಹ ದೇವನಿಪ್ಪ ।
ಅಂಡಿಯಲಿ ಸುತ್ತ ವಿಷ್ವಕ್ಸೇನ ಪುರುಷ ।
ಮಂಡಲ ಮೇಲಕ್ಕೆ ಗಣಪತಿ ಕುಮಾರ ।
ಕೆಂಡದ ಮೇಲೆ ಪಾವಕ ಪಾತ್ರಿ ವಾರುಣಿ ।
ಚಂಡ ವಿಕ್ರಮ ಆನಂದ ನಿಪ್ಪ ।
ಉಂಡ ಪಾತ್ರಿ ದುರ್ಗಾ ಸತ್ಯವೆಂಬೊ ದೇವ ।
ಕುಂಡಲಿ ವೈರಿಯ ಪಕ್ಷಿ ವ್ಯಜಿನದಲ್ಲಿ ।
ಶೌಂಡ ಮುನಿ ದತ್ತಾತ್ರಯನಿಪ್ಪ ಅಲ್ಲಲ್ಲಿ ।
ಮಂಡನಾದಿ ವಸ್ತ್ರಾ ಧರಿಸಿ ರಮಾದೇವಿ ।
ಮಂಡಲದೊಳು ತುಲಸಿ ಮತ್ತೆ ಸ್ವಯಂಪಾಕ ।
ಹಂಡೆ ಯಿದ್ದಲಿ ಕಪಿಲ ವಿಶ್ವಂಭರ ।
ಮಂಡಿತನಾಗಿ ಇರುತಿಪ್ಪ ಈಪರಿ ।
ಮೆಂಡು ದೈವದ ಗಂಡ ಹಯವನದ ವಿಠ್ಠಲನ್ನ ।
ಪಂಡಿತರು ಈ ಪರಿ ತಿಳಿದು ಉಣಿಸುವದು ॥ ೩ ॥

ಝುಂಪೆತಾಳ

ಸರ್ವ ಶುದ್ಧಿಗೆ ಪುಷ್ಕರ ಹಂಸನಾಮಕ ।
ಸರ್ವ ಸ್ವಾದು ರಸಕೆ ರತಿ ವಿಶ್ವದೇವನು ।
ಪೂರ್ತಿಗೆ ಅಗ್ನಿ ಪರಶುರಾಮ ದೈವತಿ ।
ಚರ್ವ ಮಾಡೋದಕ್ಕೆ ಕಾಷ್ಟದಲ್ಲಿ ।
ಮಾರ್ವಲಿದು ವಸಂತ ವೃಷಭ ದೇವನಿದ್ದು ।
ಗರ್ವವನು ಬಿಟ್ಟು ಈ ಪರಿ ಮಾಳ್ಪರು ।
ಶರ್ವ ವಂದಿತ ಹಯವದನ ವಿಟ್ಠಲರೇಯ್ಯಾ ।
ಬೇರ್ವರಿಸಿ ತಾಪವನು ಕೇಳುವನು ತಿಳಿದವರಿಗೆ || ೪ ||

ತ್ರಿವಿಡಿ ತಾಳ

ಅನ್ನಕ್ಕೆ ಚಂದ್ರನು ಅಲ್ಲಿ ಕೇಶವ ಪರ ।
ವ[illegible]ನ್ನಕೆ ಭಾರತಿ ನಾರಾಯಣ ।
ಚನ್ನಾಗಿ ಭಕ್ಷಕೆ ಸೂರ್ಯಮಾಧವ ಘೃತಕೆ ।
ವನಧಿ ಸಂಭವೆ ಗೋವಿಂದನು ।
ಕನ್ಯ ಸರಸ್ವತಿ ವಿಷ್ಣು ಕ್ಷೀರದಲಿವಾಸಾ ।
ವನ್ನ ಜೋಳ್ವಪ ಮಂಡಿಗಿಗೆ ಮಧುಸೂದನ ।
ಬೆಣ್ಣೆಗೆ ವಾಯು ತ್ರಿವಿಕ್ರಮ ಮೂರ್ತಿವ ।
ರುಣ ಚಂದ್ರಮ ವಾಮನ ದಧಿಖಂಡಕ್ಕೆ ।
ಗುಣಿಸು ಸೂಪಕ್ಕೆ ಗರುಡದೇವನು ಅಲ್ಲಿ ।
ಚನ್ನಿಗ ಶ್ರೀಧರ ಮೂರ್ತಿಯನ್ನು ।
ಇನ್ನು ಪೇಳು ಪತ್ರಶಾಖಕ್ಕೆ ಮಿತ್ರರವಿ ।
ಎನ್ನು ತಿಳಿವದು ಅಲ್ಲಿ ಹೃಷಿಕೇಶನ ।
ಪನ್ನಗ ಫಲಶಾಕ ಅಲ್ಲಿ ಪದುಮನಾಭಾ ।
ಗಣ್ಯ ಮಾಡುವದು ಹುಳಿಯಲ್ಲಿ ಪಾರ್ವತಿ ದಾಮೋ ।
ದ್ರನ್ನ ಈಪರಿ ವಾಸ ಹನ್ನೆರಡು ಸ್ಥಾನದಲಿ ।
ಚಿನ್ಮಯ ಮೂರ್ತಿ ಹಯವದನ ವಿಟ್ಠಲರೇಯಾ ।
ತನ್ನ ತಾನೆ ಬಲ್ಲ ಈ ಪರಿ ತಿಳಿಸುವಾ || ೫ ||

ಅಟ್ಟತಾಳ

ಮಧುರ ಪದಾರ್ಥಕ್ಕೆ ಶಿವ ಸಂಕರುಷಣ ।
ಒದಗಿ ತಿಳಿವದು ಸಕ್ಕರಿ ಗುಡದ್ರವ್ಯಕೆ ।
ಅದಿತಿ ಕುವರ ವಾಸುದೇವ ನಾಮಕ ಹರಿ ।
ಮುದದಿಂದ ತಿಳಿವದು ವ್ಯಂಜನದಲಿ ಬ್ರಹ್ಮಪ್ರದ್ಯುಮ್ನದೇವರು।
ವಿಷ ದ್ರವ್ಯಗ ಧರ್ಮ ಆದರ ನಿಯಾಮಕ ಅನಿರುದ್ಧನು ।
ಮದನನು ಇಂಗು ಸಾಸಿವಿ ಶ್ರೀಖಂಡದಲ್ಲಿ ।
ಆದು ಭೂತ ಪುರುಷೋತ್ತಮ ಅಲ್ಲಿ ಇಪ್ಪ ।
ಬದಿಯಲ್ಲಿಪ್ಪ ಚೌಷ್ಯಲೇಹ ತೈಲಪಾಕ ।
ಬುಧ ಅಧೋಕ್ಷಜ ಅಲ್ಲಿ ವಾಸವಯ್ಯಾ ।
ಮೆದುವ ಉದ್ದಿನ ದ್ರವ್ಯ ಸಂಡಿಗೆ ವಡೆಗಳು ।
ಮೊದಲಾದಲಿ ದಕ್ಷ ನರಸಿಂಹನು ।
ನೊದಲ ಮನು ಹಪ್ಪಳ ವಡಿಯಲ್ಲಿಪ್ಪ ।
ತ್ರಿದಶ ವಂದಿತ ಅಚ್ಯುತನು ಅಲ್ಲಿ ಇಪ್ಪ ।
ಮದವಾದ ಲವಣದಿ ನಿಋತಿ ಜನಾರ್ದನ ।
ವಿಧ ವಿಧ ಲವಣಶಾಖದಲಿ ಪ್ರಾಣ ।
ಕದಲದೆ ಇಪ್ಪನು ಅಲ್ಲಿ ಉಪೇಂದ್ರನು ।
ನದಿ ಇಪ್ಪಳು ತಾಂಬೂಲಕೆ ಹರಿಯೂ ।
ಬುಧನು ಸ್ವಾದೋದಕದಲಿ ಶ್ರೀ ಕೃಷ್ಣ ।
ಇದೆ ಪರಿ ಇಪ್ಪರು ತುಂಬಿಕೊಂಡು ।
ವಿಧಿ ಪಿತಾ ಹಯವದನ ವಿಟ್ಠಲರೇಯಾ ।
ತದಾಕಾರದಲಿಪ್ಪ ಅನಿತು ಪದಾರ್ಥದಿ ॥ ೬ ॥

ಆದಿತಾಳ

ಲವಣ ಪದಾರ್ಥ ಮೊದಲು ತಂದು ಇಟ್ಟು ।
ಲವಣ ಶಾಖವು ಮತ್ತೆ ಪಳಿದೆ ಸಾರು ।
ಹವಣದಿಂದಲಿ ಅನ್ನ ಮೊದಲಾದ ದ್ರವ್ಯವು ।

ಸುವಿವೇಕದಲಿ ಇಡುವ ಬಗೆಯನ್ನೆ ತಿಳಿವುದು ।
ಹವಿಮೂಲೆಯಲಿ ಭಕ್ಷ ಶಿವಮೂಲೆಗೆ ಪರಮಾನ್ನ ।
ಜವನ ತರುವಾಯ ಕೋಣೆಯಲ್ಲಿ ।
ಕವಿಗಳು ಲೇಹ್ಯಪೆಯ್ಯ ತಂದು ಇಡಲಿಬೇಕು ।
ಪವನ ಮೂಲೆಯಲ್ಲಿ ಉಪಭೋಜನಾ ।
ಸವಿಯಾದ ಉದಕ ಘೃತ ಪ್ರತ್ಯೇಕ ತಂದಿಟ್ಟು ।
ನವ ವಿಧ ಭಕುತಿಯಿಂದ ಸಮರ್ಪಣೆಯ ಮಾಡಿ ।
ಹವಣದಿಂದಲಿ ಇನಿತು ಅಭಿಮಾನ್ಯ (ದೇವರ) ದೇವತೆಗಳ ।
ತವಕದಿ ಹರಿಯಂಗ ಸೃಷ್ಟಿಪ್ರಕಾರದಂತೆ ।
ಕವಲಬುದ್ಧಿ ಇಲ್ಲದೆ ಏಕೀಭೂತ ಚಿಂತಿಸಿ ।
ತ್ರಿವಿಧ ಬಗೆ ಅಧ್ಯಾತ್ಮ ಅಧಿದೈವ ಅಧಿಭೂತ ।
ಅವಿರುದ್ಧ ಮನದಲ್ಲಿ ಐಕ್ಯಭಾವವೆ ತಿಳಿದು ।
ಭವದೂರ ಶ್ರೀಹಯವದನ ವಿಟ್ಠಲರೇಯಗೆ ।
ದಿವಸ ದಿವಸ ಇತ್ತು ಸುಖಬಡುವದು ಜನರು ॥ ೭ ॥

ಜತೆ

ಈ ಪರಿಯಲಿ ಹರಿಗೆ ಉಣಿಸಿದ ಸುಜನಂಗೆ ।
ಶ್ರೀ ಪತಿ ಹಯವದನ ವಿಟ್ಠಲ ಮುಕ್ತಿಯ ನೀವಾ ॥ ೮ ॥

॥ ಶ್ರೀಗುರು ಮಧ್ವೇಶ ಶ್ರೀ ಕೃಷ್ಣಾರ್ಪಣಮಸ್ತು ॥

ಮುಗಿದುದು.

## — ಸೂಚನೆ —

ಈ ವರ್ಷ ೧೫೦೦ ಪುಟದಲ್ಲಿಈ ವರೆಗೆ—

| | | | |
|---|---|---|---|
| ೨೬ | ಪ್ರಕಟನೆ | ಪುಟ | ೨೨೦ |
| ೨೭ | ,, | ,, | ೩೨ |
| ೨೮ | ,, | ,, | ೩೨ |
| ೨೯ | ,, | ,, | ೨೨೮ |
| ೩೦ | ,, | ,, | ೩೬೦ |

ಒಟ್ಟು ೮೭೨ ಪುಟ.

ಮುಟ್ಟಿವೆ. ಬಾಕಿ ೭೭೮ ಪುಟ ಉಳಿದದರಲ್ಲಿ ಸಾವಕಾಶವಾಗಿ ೨ ಚರಿತ್ರೆ (೧) ಸುಳಾದಿ ಪುಸ್ತಕ(೩) ಸುಮಾರು ೬–೮ ತಿಂಗಳಲ್ಲಿ ಅಚ್ಚುಮಾಡಿ ಕಳಿಸುತ್ತದೆ. ಯಾಕಂದರೆ ಹಿಂದಿನ ಪ್ರೆಸ್ಸಿನ ಬಾಕಿ ಸಾಲ ತೀರಿಸಿ ಮುಂದಿನ ಕಾರ್ಯಕ್ಕೆ ಬಾಕಿ ಚಂದಾದಾರ ದ್ರವ್ಯಾನುಕೂಲದ ಅವಲಂಬನೆ ನಿರೀಕ್ಷಣೆ ಇದೆ.

೧೧೭ ,, ರಾಮರಾವ ಜಿ. ಬ್ಯಾಗವಾಟ ಮಾಲಗಿದಾರ ಕವಿತಾಳ.

೧೧೮ ,, ಅರಳನಗೌಡರು ವಕೀಲ ನಲಗಮ್‌ದಿನ್ನಿ ಮಾನ್ವಿ.

೧೧೯ ,, ಪಿ. ಬಿ. ದೇಸಾಯಿಯವರು M.A. ಪಾದುಕಾ ನೀಲಗಿರಿ.

೧೨೦ ,, ಕೆ. ವೆಂಕಟರಾಯರು ವಕೀಲಭಾವಣಿ ಲಿಂಗಸೂರ.

೧೨೧ ,, ವೆಂಕಪ್ಪಾಚಾರ್ಯರು ಭೋಗಬಂಡಿ ರಾಯಚೂರ.

೧೨೨ ,, ಗುರುರಾಯರು ಬಾದರದಿನ್ನಿ (ಸಾಹು) ಸೋಮವಾರಪೇಟೆ.

೧೨೩ ,, K. ಗುಂಡೂರಾಯರು B E ಇಂಜಿನಿಯರ್ ಲೋಕಲೈಜೇಶನ್ ಪ್ರಾಗ್ಜೆಟ್ ತುಂಗಭದ್ರಾ-ಆದವಾನಿ.

೧೨೪ ,, ವೆ. H. P. ಕೃಷ್ಣಮೂರ್ತ್ಯಾಚಾರ್ಯರು ರಾಯರ ಮಠಾಧಿಕಾರಿಗಳು ಆದವಾನಿ.

೧೨೫ ,, M.V.R.ವಾಸುದೇವರಾಯರು ಇನ್‌ಕಮ್ ಟ್ಯಾಕ್ಸ ಆಫೀಸರ ಆದವಾನಿ.

೧೨೬ ,, ಜನಾರ್ದನರಾಯರು ವಕೀಲ ಹೈಕೋರ್ಟ ಕೊಪ್ಪಳ.

೧೨೭ ,, ಮಧ್ವಮುನಿಗಳು (ಆಯಾಚಿತ) ಕೊಪ್ಪಳ.

೧೨೮ ,, ರಾಘವೇಂದ್ರರಾಯರು ಚಾಕಲಬ್ಬಿ ವಕೀಲ ಹೈಕೋರ್ಟ ಕೊಪ್ಪಳ

೧೨೯ ,, ವೆ. ಭೀಮಾಚಾರ್ಯರು ರಾಮಾಚಾರ್ಯರು ಜಹಗೀರದಾರ.

೧೩೦ ,, ಟಿ. ಎಸ್. ನಾಗರಾಜರಾಯರು ಓವ್ಹರಸೀರ ಜಮಖಂಡಿ.

೧೩೧ ,, ವೆಂಕಟಾಚಾರ್ಯರು ಕೊರತಕೊಂಡಿ ಕು॥ ಮು. ರಾಯಚೂರ.

೧೩೨ ,, ತಿರಮಲರಾಯರು ಲಕ್ಕುಂಡಿ ಕ್ಲಾರ್ಕ P.W.D. ಸಬ್ಡಿ. ರಾಯಚೂರ.

೧೩೩ ,, ವೆಂಕೋಬರಾವಜಿ ಉಮಲೋಟಿ ಸುಪರಟೆಂಡೆಂಟ್ ಕಲೆಕ್ಟರ ಆಫೀಸ ರಾಯಚೂರ.

ಇವರು ಕೊಟ್ಟ ಹಣವೆಲ್ಲವೂ ಹಿಂದಿನ ಪ್ರಕಟನೆ (೨೯) ಶ್ರೀಗುರು ವಿಜಯ ವಿಟ್ಠಲರ ಕೃತಿಗಳ ಅಚ್ಚಿನ ಬಾಕಿಯಲ್ಲಿ ಕೊಟ್ಟಿದೆ. ಇನ್ನೂ ೪೨ ರೂ. ಈ ಪ್ರಕಟನೆಯ ಬಾಕಿಕೊಡುವದಿದೆ (೮೦) ಜನರು ಚಂದಾದಾರರಾಗುವೆವೆಂದು ವಚನ ವಿತ್ತರೂ ರೂ. ಕಳಿಸದೆ V.P. ಸಹಿತ ಪರತ ಮಾಡಿದ್ದಾರೆ. ಇದರಿಂದ ಸುಮಾರು ೭೦ ರೂ. ಮಂಡಲಕ್ಕೆ ಹಾನಿ. ಮತ್ತು ಕಪಾಟಿನಲ್ಲಿಟ್ಟ(೧೦೦)ರೂ. ಪುಸ್ತಕಗಳನ್ನು ಇಲಿಗಳು ಕಡಿದು ಹಾಳುಮಾಡಿಬಿಟ್ಟಿವೆ. ೮೭೫ ರೂ. ಸುಮಾರು ಬಿಡಿಪುಸ್ತಕಗಳ ರೂಪಾಯಿ. ವಸೂಲಾಗದೆ. ಬಹಳ ತ್ರಾಸಾಗಿದೆ. ಬಾಕಿ ಇದ್ದವರು ತ್ವರಾ ಕಳಿಸುವಿರೆಂದು ವಿನಂತಿ.

**ಸಂಚಾಲಕ ಮಂಡಲ.**